

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೪, ಸಂಚಿಕೆ : ೦೨

ಜುಲೈ – ಡಿಸೆಂಬರ್ ೨೦೨೦

ಸಂಪಾದಕ

ಪ್ರೊ. ಬಿ.ಪಿ. ವೀರೇಂದ್ರಕುಮಾರ್

ಬಿ.ಎಂ.ಶ್ರೀ ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಕಲಾಭವನ (ರಿ)

೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು – ೫೬೦೦೧೯.

ದೂರವಾಣಿ : ೨೬೬೧೫೮೭೭, ೨೬೬೭೬೭೭೩

ವಿ–ಅಂಚೆ : bmsritrust@gmail.com bmsrilochana@gmail.com

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಬಿ.ಎಂ.ಶ್ರೀ ಪ್ರತಿಷ್ಠಾನದ ಪದಾಧಿಕಾರಿಗಳು

ಸಂಪುಟ : ೩೪, ಸಂಚಿಕೆ : ೦೨
ಜುಲೈ – ಡಿಸೆಂಬರ್ ೨೦೨೦

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೪, ಸಂಚಿಕೆ : ೦೨

ಜುಲೈ – ಡಿಸೆಂಬರ್ ೨೦೨೦

ಸಂಪಾದಕ

ಪ್ರೊ. ಬಿ.ಪಿ. ವೀರೇಂದ್ರಕುಮಾರ್

ಬಿ.ಎಂ.ಶ್ರೀ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಕಲಾಭವನ (ರಿ)
೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು – ೫೬೦೦೧೯.
ದೂರವಾಣಿ : 26615877, 26676773
ವಿ-ಅಂಚೆ : bmsritrust@gmail.com
bmsrilochana@gmail.com

KARNATAKA LOCHANA
Half yearly Research Journal
Edited by Prof. B.P. Veerendra Kumar and
Published by B.M.Sri. Prathistana
M.V.Si. P.G. Research Centre
B.M.Sri. Kalabhavan(R), 3rd Main Road
Narasimharaja Colony, Bangalore 560 019.
Ph.No. 080-26615877, 26676773
e-mail : bmsritrust@gmail.com | bmsrilochana@gmail.com

July - December 2020 (Vol. 34, No. 2)
Pages : viii + 136

Subscription Details :
Annual : Rs. 100/-
Life : Rs. 1500/-

ಚಂದಾ ವಿವರ:
ವಾರ್ಷಿಕ : ರೂ. ೧೦೦/-
ಆಜೀವ : ರೂ. ೧೫೦೦/-

ಮುದ್ರಣ
ಸ್ಪ್ಯಾನ್ ಪ್ರಿಂಟ್
ಬೆಂಗಳೂರು
ದೂರವಾಣಿ : 90369 03496
ಇ-ಅಂಚೆ : spanprint@gmail.com

ಸಂಪಾದಕರ ನುಡಿ

ಪ್ರಸ್ತುತ ವಿಚಿತ್ರ ಸಾಮಾಜಿಕ ಪರಿಸರದಲ್ಲಿ "ಲೋಚನ" ನಿಗದಿತ ಸಮಯಕ್ಕೆ ಹೊರಬರುತ್ತಿರುವುದು ಸಂತಸ ತಂದಿದೆ. ವಿದ್ವಾಂಸರು ಸರಿಯಾದ ಸಮಯಕ್ಕೆ ಲೇಖನಗಳನ್ನು ಒದಗಿಸಿರುವುದು ಆಶಾದಾಯಕ ಸಂಗತಿಯಾಗಿದೆ.

ಪಂಪಕವಿ ತನ್ನ ಕೃತಿಗಳಲ್ಲಿ ನೆಯ್ದು ಹೇಳಿರುವ ಚಾರಿತ್ರಿಕ ಅಂಶಗಳ ಮೇಲೆ ಡಾ. ಬಿ. ರಾಜಶೇಖರಪ್ಪ ಅವರು ತಮ್ಮ ಸಂಶೋಧನಾ ಲೇಖನದಲ್ಲಿ ಬೆಳಕು ಚೆಲ್ಲಿದ್ದಾರೆ. ಆದರೆ ಈಗಾಗಲೇ ಇದರ ಬಗೆಗೆ ಶ್ರೀಮುಳಿಯತಿಮ್ಮಪ್ಪಯ್ಯಅವರು ತಮ್ಮ 'ನಾಡೋಜ ಪಂಪ' ಕೃತಿಯಲ್ಲಿ ವಿವರವಾಗಿ ಐತಿಹಾಸಿಕ ಅಂಶಗಳನ್ನು ಪ್ರಸ್ತಾಪಿಸಿರುವುದನ್ನು ಗಮನಿಸಬಹುದಿತ್ತು ಎನಿಸುತ್ತದೆ.

ಕಟ್ಟೀಮನಿಯವರ ಕಾದಂಬರಿಯನ್ನು ಹಳೆಮನೆ ರಾಜಶೇಖರ್‌ರವರು ಶ್ರದ್ಧೆಯಿಂದ ವಿಶ್ಲೇಷಿಸಿದ್ದಾರೆ. ಕುಸುಮಾ ಎಂ. ರವರು ಕನ್ನಡ ಬ್ಲಾಗ್‌ಗಳ ಬಗೆಗೆ ಬರೆದಿರುವ ದೀರ್ಘ ಪ್ರಬಂಧ ಸಾಕಷ್ಟು ಮಾಹಿತಿಯನ್ನು ಒಳಗೊಂಡಿದೆ. ಅಧ್ಯಯನ ಯೋಗ್ಯವಾಗಿದೆ. 'ಹರಿಹರನ ರಗಳೆ'ಯಲ್ಲಿ 'ಮುದಿಯಪ್ಪನಾಯಕ' ಎಂಬ ಐತಿಹಾಸಿಕ ವ್ಯಕ್ತಿಯ ಉಲ್ಲೇಖ ಕಂಡು ಬಂದಿರುವುದನ್ನು ಡಾ. ಬಿ. ನಂಜುಂಡಸ್ವಾಮಿ ಪ್ರಸ್ತಾಪಿಸಿರುವುದು ಕುತೂಹಲಕರವಾಗಿದೆ.

ನಾಗವರ್ಮನ ಕರ್ನಾಟಕ ಭಾಷಾಭೂಷಣ ಬಗ್ಗೆ ಪರಿಚಯಿಸಿದ ಮುಂದಿನ ಭಾಗವಾಗಿ ಡಾ. ಎಚ್.ಎಸ್. ಅನಂತನಾರಾಯಣರವರ ಲೇಖನ ಅಭ್ಯಾಸ ಯೋಗ್ಯವಾಗಿದೆ. ಇತ್ತೀಚಿನ ಸಂಶೋಧನೆಗಳನ್ನು ಕುರಿತ ಡಾ. ಎನ್. ಆರ್. ಲಲಿತಾಂಬರವರ ಉಪಯುಕ್ತ ಲೇಖನ ಯುವ ಸಂಶೋಧಕರಿಗೆ ಮಾರ್ಗದರ್ಶನ ನೀಡುವಂತಿದೆ. ಡಾ. ಎನ್. ಎಸ್. ತಾರಾನಾಥ್‌ರವರು ಜೀವ ದಯಾಷ್ಟಮಿ, ಅನಂತನೋಂಪಿಗಳು ವೈದಿಕ ಮೂಲದ ಆದರೆ ಪರಿಷ್ಕೃತಗೊಂಡ ಜೈನ ಆಚರಣೆ ಎಂಬುದನ್ನು ವಿಶ್ಲೇಪಿಸಿರುವುದು, ಜೈನ ಸಾಹಿತ್ಯ ಅಧ್ಯಯನಕ್ಕೆ ಹೊಸ ಆಯಾಮ ನೀಡಲಿದೆ.

ಡಾ. ವಿಜಯಾ ಸುಬ್ಬರಾಜ್‌ರವರು ಅಲಕ್ಷ್ಯಕ್ಕೆ ಗುರಿಯಾಗಿರುವ ದೇವಪ್ಪ ಕವಿಯ 'ರಾಮವಿಜಯ' ಕಾವ್ಯವನ್ನು ಪರಿಚಯಿಸಿರುವುದು ಹಾಗೂ ವಿಶ್ಲೇಷಿಸಿರುವುದು ಮಹತ್ವದ ಅಂಶವಾಗಿದೆ.

ಡಾ.ಕೆ.ಆರ್. ಗಣೇಶ್‌ರವರ 'ಶಾಸನೋಕ್ತಬಿರುದಾವಳಿಗಳು' ಪ್ರಬಂಧದ 'ವಿಶ್ಲೇಷಣೆ'ಯಲ್ಲಿ ಬೆಳಕು ಚೆಲ್ಲಿರುವ ಸಂಗತಿಗಳು ವಿಶೇಷವಾಗಿವೆ. ಎಚ್.ಆರ್. ಪಾಂಡುರಂಗ ಹಾಗೂ ಡಾ. ಮುತ್ತುರಾಜ್‌ರವರ 'ಲೇಖನಗಳು ಮಹತ್ವದ ಮಾಹಿತಿಗಳಿಂದ ಕೂಡಿದ್ದು ಸಾಂಸ್ಕೃತಿಕ ವಿಶ್ಲೇಷಣೆ ಮಾಡುವವರಿಗೆ ಆಕರಗಳಾಗಿವೆ.

ಸಂಪಾದನಾ ಕಾರ್ಯಕ್ಕೆ ಎಲ್ಲ ರೀತಿಯಿಂದಲೂ ಸಹಕರಿಸುತ್ತಿರುವ ಗೆಳೆಯರೂ, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷರೂ ಆದ ಡಾ. ಆರ್. ಲಕ್ಷ್ಮೀನಾರಾಯಣ ಅವರಿಗೂ, ಬೆಂಬಲವಾಗಿರುವ ಡಾ.ಹೆಚ್.ಎಸ್.ಎಂ.ಪ್ರಕಾಶ್, ಡಾ. ವಿಜಯಾಸುಬ್ಬರಾಜ್‌ರವರುಗಳಿಗೂ ಕೋಶಾಧಿಕಾರಿಗಳಾದ ಡಾ. ಎಸ್. ಅನಿಲ್‌ಕುಮಾರ್‌ರವರಿಗೂ ಹಾಗೂ ನಿಗಿದಿತ ವೇಳೆಯಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿರುವ ಸ್ವ್ಯಾನ್ ಪ್ರಿಂಟರ್ಸ್‌ರವರಿಗೂ ವಿಶ್ವಾಸ ಪೂರ್ವಕ ವಂದನೆಗಳು.

ಲೇಖಕರಿಗೆ ಸೂಚನೆಗಳು...

೧. ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಶೋಧನೆ ವಿಮರ್ಶೆಗಳ ಅಪ್ರಕಟಿತ ಬರಹಗಳನ್ನು 'ಕರ್ನಾಟಕ ಲೋಚನ' ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಸ್ವೀಕರಿಸಲಾಗುವುದು.

೨. ಲೇಖನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಬೆರಳಚ್ಚು ಮಾಡಿದವಾಗಿರಬೇಕು ಅಥವಾ ಸ್ಫುಟವಾದ ಕೈಬರಹದಲ್ಲಿರಬೇಕು.

೩. ಲೇಖನಗಳು ಒಪ್ಪಿತವಾದ ಮಾದರಿಯಲ್ಲಿ ಸೂಕ್ತ ಉಲ್ಲೇಖಗಳು ಮತ್ತು ಟಿಪ್ಪಣಿಗಳಿಂದ ಕೂಡಿರಬೇಕು.

೪. ಚಿತ್ರಗಳು, ನಕ್ಷೆಗಳು ಮೊದಲಾದುವನ್ನು ಸ್ಕ್ಯಾನ್ ಮಾಡಿದ ತಂತ್ರಾಂಶದಲ್ಲಿ ನೀಡಬೇಕು.

೫. ಲೇಖಕರು ತಮ್ಮ ವಿಳಾಸ, ದೂರವಾಣಿ ಸಂಖ್ಯೆ ಮತ್ತು ವಿ-ಅಂಚೆಗಳನ್ನು ತಪ್ಪದೆ ನೀಡಬೇಕು.

೬. ಅಸ್ವೀಕೃತ ಬರಹಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಈ ಬಗೆಗೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

೭. ಲೇಖನಗಳನ್ನು ಪ್ರತಿಷ್ಠಾನದ ವಿಳಾಸಕ್ಕೆ ಅಥವಾ bmsrilochana@gmail.com ಈ ವಿ-ಅಂಚೆಗೆ ಕಳುಹಿಸಬಹುದು.

೮. ಪ್ರಕಟವಾದ ಬರಹಗಳಿಗೆ ಪ್ರತಿಷ್ಠಾನವು ಸಾಂಕೇತಿಕ ಗೌರವ ಸಂಭಾವನೆಯನ್ನು ನೀಡುತ್ತದೆ.

೯. ಲೇಖನದಲ್ಲಿನ ಅಭಿಪ್ರಾಯಗಳು ಲೇಖಕರದೇ ಅಗಿದ್ದು ಪ್ರತಿಷ್ಠಾನದ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ.

ಈ ಸಂಚಿಕೆಯಲ್ಲಿ

ಜನ್ನಕವಿ : ಬಸದಿ ನಿರ್ಮಾಣ, ಪುರಾಣಸಮಾಪನ, ಅನಂತನೋಂಪಿ ಮತ್ತು ಶೈವ ಕಾವ್ಯದ ಯಶೋಧರನ ಕಥೆ

◈

ಡಾ. ಎನ್.ಎಸ್. ತಾರಾನಾಥ

ಬಸದಿ ನಿರ್ಮಾಣ

ಕೆಲವು ಕನ್ನಡ ಜೈನಕವಿಗಳು ಜೈನಕೃತಿಕರ್ತರು ಮಾತ್ರವಲ್ಲದೆ, ಬಸದಿ ನಿರ್ಮಾತೃಗಳೂ ಆಗಿದ್ದಾರೆ. ಚಾಮುಂಡರಾಯ ಪುರಾಣದ ಕರ್ತೃ ಚಾಮುಂಡರಾಯನು, ಚಾಮುಂಡರಾಯ ಬಸದಿಯನ್ನು ಶ್ರವಣಬೆಳಗೊಳದಲ್ಲೂ (ಎ.ಕ. ೨, ೧೯೭೩, ಶ್ರ.ಬೆ. ೧೫೧), ಮಲ್ಲಿನಾಥ ಪುರಾಣವನ್ನು ಬರೆದ ನಾಗಚಂದ್ರನು, ಮಲ್ಲಿಜಿನೇಂದ್ರ ಬಸದಿಯನ್ನು ವಿಜಯಪುರದಲ್ಲೂ (ನಿಜವಿಭವೋದಯಂ ಸಫಳಮಾಯ್ತು ಎನೆ, ಮಲ್ಲಿಜಿನೇಂದ್ರಗೇಹಮಂ ವಿಜಯಪುರಕ್ಕಲಂಕರಣಮಾಗಿರೆ ಮಾಡಿಸಿ : ಮಲ್ಲಿನಾಥ ಪುರಾಣ ೧೪-೨೧೧) ಮಾಡಿಸಿದ್ದಾರೆ. ಪಂಪಕವಿ ಪ್ರಾಯಃ ತಾನೇ ನಿರ್ಮಿಸಬೇಕೆಂದುಕೊಂಡಿದ್ದ ಆದಿನಾಥ ಬಸದಿಯನ್ನು ವೃಷಭಗಿರಿಯಲ್ಲಿ ಕಟ್ಟಲು ಆತನ ತಮ್ಮ ಜಿನವಲ್ಲಭನೂ, ತನ್ನ ಆಶ್ರಯದಾತ ಬನವಸೆಯ ಪ್ರಭು ಲಕ್ಷ್ಮನೃಪ ಬಳ್ಳಿಗಾವೆಯ ಶಾಂತಿನಾಥ ಬಸದಿಯನ್ನು ಶಿಲಾಮಯವಾಗಿಸಲು ಸುಕುಮಾರ ಚರಿತೆಯ ಕರ್ತೃ ಕವಿಶಾಂತಿನಾಥನೂ ಕಾರಣರಾಗಿದ್ದಾರೆ. ಜನ್ನಕವಿಯಾದರೂ ಇಂಥದಕ್ಕೆ ಹೊರತಲ್ಲ.

ಶಾಸನ, ಕಾವ್ಯಗಳನ್ನು ಮಾತ್ರ ಜನ್ನಕವಿ ಬರೆದಿಲ್ಲ. ಬಸದಿಗಳ ನಿರ್ಮಾಣ, ಜೀರ್ಣೋದ್ಧಾರ ಕಾರ್ಯಗಳಲ್ಲೂ ತನ್ನನ್ನು ತೊಡಗಿಸಿಕೊಂಡಿದ್ದಾನೆ. ತನ್ನನ್ನು ಜಿನನ ಪಾದಪಲ್ಲವಗಳ ಪುಷ್ಪವೆಂದೂ, ತಾನು ಜೈನಮಂದಿರ ನಿರ್ಮಾಣಧನಂ ಎಂದೂ ಅನಂತನಾಥ ಪುರಾಣದ ಆರಂಭದಲ್ಲಿಯೇ ಹೇಳಿಕೊಂಡಿದ್ದಾನೆ (ಅನಂಪು. ೧-

೫೨). ಮುಂದೆ ಪ್ರಕಾರಾಂತವಾಗಿ ಒಂದೆಡೆ ಸಾಹಿತ್ಯರತ್ನಾಕರನಾದ ತಾನು ಹೊಸ ಜಿನಮಂದಿರಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರ (ನೂತ್ನರತ್ನಮಯ ಶ್ರೀ ಜಿನರಾಜಮಂದಿರ ಶತೋದ್ಧಾರಂಗಳಂ... ಶ್ಲಾಘನೀಯಮನ್ ಏಂ ಮಾಡಿದನೋ... ಸಾಹಿತ್ಯರತ್ನಾಕರಂ ಅನಂಪು., ೧೬-೯೫) ಮಾಡಿದೆ ಎನ್ನುತ್ತಾನೆ. ಬಸದಿಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರ ಕಾರ್ಯಗಳಲ್ಲಿ ಆತ ತೊಡಗಿಕೊಂಡುದನ್ನು ಈ ಉಲ್ಲೇಖಗಳು ವ್ಯಕ್ತಗೊಳಿಸುತ್ತವೆ. ಇವುಗಳೊಂದಿಗೆ ಅನಂತನಾಥಪುರಾಣದ ಕೊನೆಯಲ್ಲಿ ತಾನು ಮಾಡಿಸಿದ ಅನಂತನಾಥ ಹಾಗೂ ಶಾಂತಿನಾಥ ತೀರ್ಥಂಕರ ಬಸದಿಗಳ ಬಗ್ಗೆ ಆ ಕವಿಯು ಹೇಳಿಕೊಳ್ಳುವುದು ಹೀಗೆ (ಅನಂಪು. ೧೪-೮೨, ೮೩):

ಪೊಸಚೈತ್ಯಂ ಗಂಡರಾದಿತ್ಯನ ಪೊಟಿಲೊಳ್ ಅನಂತಂಗೆ ಚೆಲ್ವಪ್ಪಿನಂ ಮಾ
ಡಿಸಿ ನಾಂದೀಪದ್ಯಮಂ ಪಠ್ಠಿಸಿ ಚರಿತಪುರಾಣಕ್ಕೆ ಅದಂ ವರ್ಷದೊಳ್ ದೋ
ರಸಮುದ್ರಂ ಮೆಚ್ಚೆ ತಾಂ ಮಾಡಿಸಿದ ಸೊಬಗ ಶಾಂತೀಶ್ವರಾವಾಸದೊಳ್ ಸ್ಥಾ
ಪಿಸಿದಂ ಜನ್ನಂಗೆ ಸಲ್ಗುಂ ಕೃತಿವಸತಿಯ ನಿರ್ಮಾಣ ಪುಣ್ಯ ಪ್ರಭಾವಂ ॥
ದೋರಸಮುದ್ರದೊಳ್ ವಿಜಯಪಾರ್ಶ್ವಜಿನೇಶ್ವರ ದಿವ್ಯಮಂದಿರ
ದ್ವಾರದ ಮುಂತೆ ಮಾಡಿಸಿದ ಶಾಂತಿಜಿನಾಲಯದೊಳ್ ನಮೇರು ಮಂ
ದಾರದ ಕೊಂಬನ್ ಅರ್ಥಿಯಿನೆ ಅಲುಂಬಿದವೋಲ್ ಕವಿಭಾಳಲೋಚನಂ
ಧಾರಿಣೆಗಿಂತು ಮಾಡಿಸಿದನ್ ಅನಂತಪುರಾಣದ ಸುಪ್ರತಿಷ್ಠೆಯಂ ॥

ಈ ಎರಡು ಪದ್ಯಗಳ ಭಾವ ಹೀಗೆ : ಗಂಡರಾದಿತ್ಯನ ಪೊಳಲಿನಲ್ಲಿ ಅನಂತನಾಥ ತೀರ್ಥಂಕರನಿಗೆ ಹೊಸದಾದ ಸುಂದರವಾದ ಬಸದಿಯನ್ನು ನಾನು ನಿರ್ಮಿಸಿದೆ. ಅಲ್ಲಿ ಅನಂತನಾಥ ಪುರಾಣದ ನಾಂದೀಪದ್ಯವನ್ನು ಪಠಿಸಿದೆ. ಅಂದಿನಿಂದ ಒಂದು ವರ್ಷದೊಳಗೆ ಆ ಕಾವ್ಯವನ್ನು ಪೂರೈಸಿದೆ. ದ್ವಾರಸಮುದ್ರವೇ ಮೆಚ್ಚುವಂತೆ ನಾನೇ ಮಾಡಿಸಿದ ಶಾಂತೀಶ್ವರ ಜಿನಾಲಯದಲ್ಲಿ ಅನಂತನಾಥ ಪುರಾಣವನ್ನು ಪೂರೈಸಿ ಸ್ಥಾಪಿಸಿದೆ (ಪ್ರಕಟಿಸಿದೆ). ದೋರಸಮುದ್ರದ ವಿಜಯಪಾರ್ಶ್ವ ಜಿನಾಲಯದ ದ್ವಾರದ ಮುಂದೆ ಈ ಶಾಂತಿಜಿನಾಲಯವನ್ನು ಮಾಡಿಸಿದೆ. ಅಲ್ಲಿ ಅನಂತನಾಥ ಪುರಾಣದ ಸಮಾಪನ, ಸುಪ್ರತಿಷ್ಠೆಯ ಕಾರ್ಯಗಳಾದುವು. ಇದು ನಮೇರು ವೃಕ್ಷ, ಮಂದಾರವೃಕ್ಷದ ಕೊಂಬನ್ನು ಅಲುಗಾಡಿಸಿದಂತಿತ್ತು.

ಈ ವಿವರಗಳಿಂದ ಗಂಡರಾದಿತ್ಯನ ಪೊಳಲಿನಲ್ಲಿ ಅನಂತನಾಥ ಬಸದಿಯನ್ನು, ದೋರಸಮುದ್ರದಲ್ಲಿ ಶಾಂತಿನಾಥ ಬಸದಿಯನ್ನು ಜನ್ನನು ಕಟ್ಟಿಸಿದ್ದು ಸ್ಪಷ್ಟವಾಗುತ್ತದೆ. ಅನಂತನಾಥ ಪುರಾಣದ ಆರಂಭವು ಗಂಡರಾದಿತ್ಯನ ಪೊಳಲಿನ ಅನಂತನಾಥ ಬಸದಿಯಲ್ಲಿ ಆಯಿತು ; ದೋರಸಮುದ್ರದ ಶಾಂತಿನಾಥ ಬಸದಿಯಲ್ಲಿ ಅದರ ಸಮಾಪನವಾಯಿತು. ಇದರ ರಚನೆಗೆ ಕವಿ ತೆಗೆದುಕೊಂಡ ಅವಧಿ ಒಂದು ವರ್ಷ.

ಈ ಗಂಡರಾದಿತ್ಯನ ಪೊಳಲು ಯಾವುದು ? ಕ್ರಿ.ಶ. ೧೧೧೦ ರಿಂದ ೧೧೪೫ ರವರೆಗೆ ಆಳಿದ ಜೀಮೂತವಾಹನ ವಿದ್ಯಾಧರ ಚಕ್ರವಂಶದ ಶಿಲಾಹಾರರಲ್ಲಿ ಗಂಡರಾದಿತ್ಯ ಎಂಬ ಅರಸನಿದ್ದಾನೆ. ಆತನ ಆಳ್ವಿಕೆಯ ಪಟ್ಟಣ ಕಿಳಕಿಳ ದುರ್ಗ ; ಅದು ಈಗಿನ ಮಹಾರಾಷ್ಟ್ರದ ಕೊಲ್ಲಾಪುರದ ಹೊರವಲಯದಲ್ಲಿರುವ ಪನ್ನಾಳು ನಗರ. ಇದೇ ಗಂಡರಾದಿತ್ಯನ ಪೊಳಲಿರಬೇಕು ಎಂದು ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಭಾವಿಸಿದ್ದಾರೆ (ಜನ್ನನ ಅನಂತನಾಥ ಪುರಾಣ, ಸಾಹಿತ್ಯಶೋಧ, ಬೆಂಗಳೂರು, ೨೦೦೫, ಪು. ೨೯೭). ಆದರೆ ಈ ಗಂಡರಾದಿತ್ಯನಿಗೂ, ಜನ್ನನಿಗೂ ಕಾಲದ, ಸ್ಥಳದ ಅಂತರವಿದೆ. ಅಲ್ಲದೆ ಜನ್ನಕವಿ ಮೇಲಿನ ಪದ್ಯಗಳಲ್ಲಿ ಇಂಗಿತಗೊಳಿಸಿರುವುದ ಗಂಡರಾದಿತ್ಯನ ಆಳ್ವಿಕೆಯ ರಾಜ್ಯ, ಪಟ್ಟಣ ಎಂದು ಅಲ್ಲ ; ಗಂಡರಾದಿತ್ಯನ ಪೊಳಲು ಎಂಬ ಹೆಸರಿರುವ ಸ್ಥಳವನ್ನು. ಈ ಶಿಲಾಹಾರರ ಗಂಡರಾದಿತ್ಯನಿಗಿಂತ ಮೊದಲೇ ಎಂದರೆ ಸು. ೧೧ನೆಯ ಶತಮಾನದ ಹೊತ್ತಿಗೆ ಗಂಡರಾದಿತ್ಯ ಚತುರ್ವೇದಿಮಂಗಲಂ, ಗಂಡರಾದಿತ್ಯನ ಪೊಳಲು ಎಂಬ ಹೆಸರಿನ ಸ್ಥಳವೊಂದು ಪ್ರಸಿದ್ಧವಾಗಿತ್ತು. ಅದರ ವಿವರ ಈ ಮುಂದಿನಂತಿದೆ.

ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನಲ್ಲಿ ಹೊಳಲು ಎಂಬ ಗ್ರಾಮವಿದೆ. ಕಲ್ಯಾಣಚಾಲುಕ್ಯರ ಜಗದೇಕಮಲ್ಲ ಜಯಸಿಂಹ, ಆರನೆಯ ವಿಕ್ರಮಾದಿತ್ಯರ ಉಲ್ಲೇಖದ ಶಾಸನಗಳು ಇಲ್ಲಿ ದೊರೆತಿವೆ (ಎಸ್‌ಐಐ IX – i, ೨೩೮ ; ಎಸ್‌ಐಐ ix – i, ೨೮೫, ೨೮೬). ಈ ಶಾಸನಗಳಲ್ಲೇ ಗಂಡರಾದಿತ್ಯನ ಪೊಳಲು ಎಂದು ಹೊಳಲನ್ನು ಉಲ್ಲೇಖಿಸಿದೆ. ಈ ಗಂಡರಾದಿತ್ಯನ ಪೊಳಲು ೧೨೦ ಮಹಾಜನರಿದ್ದ ಒಂದು ಅಗ್ರಹಾರ ; ಅಲ್ಲದೆ ಚತುರ್ವೇದಿ ಮಂಗಲ ಕೂಡ. ಇಲ್ಲಿಯ ಮಹಾಜನರು ಚತುರ್ಭಾಷಾವಿಷಯಕರು, ಸಕಳಕಳಾಪಂಡಿತರು. ಅದಕ್ಕಿಂತ ಹೆಚ್ಚಾಗಿ ಅಭಿನವ ಭರತರು, ಮನಸಿಜರೂಪರು, ಶಾಸ್ತ್ರವಿಶಾರದರು, ವಿದಗ್ಧ ವಿದ್ವಜ್ಜನರು, ನಿಖಿಳಾಗಮ ಶಾಸ್ತ್ರತತ್ತ್ವವಿಶಾರದರು, ಪ್ರಭಾಕರ ವ್ಯಾಖ್ಯಾತೃಗಳು. ಇವರಿಂದ ಈ ಊರು ಲಸತ್ ಶ್ರೀವಿಲಾಸ ಪ್ರವಿಭಾಗವಾಗಿತ್ತು (ನೋಡಿ : ಕವಿವಿ ಶಾಸನ ಸಂಪುಟ ೧, ಬಳ್ಳಾರಿ ಜಿಲ್ಲೆ, ೧೯೯೮, ಹಡಗಲಿ – ೪). ಈ ಊರಿನಲ್ಲಿ ಒಂದು ಗವರೇಶ್ವರ ದೇವಾಲಯವಿದೆ; ಇದಲ್ಲದೆ ಸುಂದರವಾದ ಅನಂತಶಯನ ಮೂರ್ತಿ ವಿಗ್ರಹವಿರುವ ಒಂದು ಅನಂತಶಯನ ಗುಡಿಯಿದೆ. ಇಲ್ಲೊಂದು ಅಮೃತೇಶ್ವರ ದೇವಾಲಯವೂ ಇದೆ. ಅಮೃತೇಶ್ವರ ದೇವಾಲಯವು ಅಮೃತೇಶ್ವರ ಸ್ತುತಿಯಿರುವ ಜನ್ನನ ಅಮೃತಾಪುರದ ಶಾಸನವನ್ನು, ಅನಂತಶಯನ ಗುಡಿಯು ಜನ್ನ ಸಂಬಂಧಿತ ಅನಂತನಾಥ ತೀರ್ಥಂಕರನನ್ನು, ಮಹಾಜನರ ಚತುರ್ವಿಷಯಕ ಪರಿಣತಿ ಜನ್ನನ ಚತುರ್ವಿಧ ಕಳಾಪಾಂಡಿತ್ಯವನ್ನು ಮನಸ್ಸಿನಲ್ಲಿ ಸುಳಿಸುತ್ತದೆ. ಜನ್ನನ ಆಶ್ರಯದಾತ ಹೊಯ್ಸಳ ವೀರಬಲ್ಲಾಳನ ಹಾಗೂ ಆತನ ಕೆಲವು ದಂಡನಾಯಕರ ಶಾಸನಗಳು ಈ

ಹೊಳಲಿನ ಸಮೀಪದ ಕುರುವತ್ತಿ, ಹಡಗಲಿ, ಬಾಗಳಿ ಮುಂತಾದೆಡೆ ದೊರೆಯುತ್ತವೆ. ೧೧೯೭ ರ ಕುರುವತ್ತಿಯ ವೀರಬಲ್ಲಾಳನ ಒಂದು ಶಾಸನದಲ್ಲಿ ಹೆಗ್ಗಡೆ ಜನ್ನಯ್ಯನ ಉಲ್ಲೇಖವಿದೆ (ಶ್ರೀಮನ್ ಮಹಾಪ್ರಧಾನಂ ಉತ್ತರಾಕ್ಕ ಹೆಗ್ಗಡೆಯುಂ ಶ್ರೀಮನ್‌ಮಹಾಪ್ರಧಾನಂ ಅರಸಿಯಕೆರೆಯ ಮಹದೇವದಣ್ಣಾಯಕರುಂ ಹೆಗ್ಗಡೆ ಜನ್ನಯ್ಯನುಂ ಧಾರಾಪೂರ್ವಕಂ ಮಾಡಿಬಿಟ್ಟ ಧರ್ಮ : ಕವಿವಿ ಶಾಸನ ಸಂಪುಟ ೧, ಬಳ್ಳಾರಿ ಜಿಲ್ಲೆ, ೧೯೯೮, ಹಡಗಲಿ ೪). ಮುಂದೆ ಇಮ್ಮಡಿ ನರಸಿಂಹನಲ್ಲಿ ದಂಡಾಧೀಶನಾದ ಜನ್ನ ಈ ಉಲ್ಲೇಖದಂತೆ ಆರಂಭದಲ್ಲಿ ಹೆಗ್ಗಡೆಯಾಗಿರಬಹುದಾದ್ದು ಸಂಭಾವ್ಯ. ಇಲ್ಲಿ ದೋರಸಮುದ್ರಕ್ಕೆ ಸಮೀಪವಿರುವ ಅರಸೀಕೆರೆಯ ಉಲ್ಲೇಖವಿರುವುದೂ ಗಮನಾರ್ಹ. ಇದಲ್ಲದೆ ಜನ್ನನ ಪೋಷಕ ತರೀಕೆರೆಯ ಅಮೃತಾಪುರ ಶಾಸನದ ಅಮಿತಯ್ಯ, ದಂಡನಾಯಕ ಹುಟ್ಟಿದ್ದು ಲೊಕ್ಕಿಗುಂಡಿಯಲ್ಲಿ ; ಕೆರೆ ಕಟ್ಟಿಸಿದ್ದು ಗದಗಿನಲ್ಲಿ ; ಜನ್ನನ ಅಮೃತಾಪುರದ ಶಾಸನವನ್ನು ಲಿಖಿತಗೊಳಿಸಿದವನೂ ಲೊಕ್ಕಿಗುಂಡಿಯ ಮಹದೇವಯ್ಯನ ಶಿಷ್ಯ ಕರ್ಣನೇ. ಹೊಳಲು ಮತ್ತು ಗದಗುಗಳು ೭೦-೮೦ ಕಿ.ಮೀ. ದೂರದ ಅಂತರವಿರುವ ಆ ಕಾಲದ ಹೊಯ್ಸಳನಾಡಿನ ಪ್ರಾಂತಗಳೇ. ಈ ಎಲ್ಲ ಕಾರಣಗಳಿಂದ ಜನ್ನಕವಿ ತನ್ನ ಅನಂತ ತೀರ್ಥಂಕರ ಜಿನಾಲಯವನ್ನು ಗಂಡರಾದಿತ್ಯನ ಪೊಳಲೆಂದು ಕರೆಯಲ್ಪಡುತ್ತಿದ್ದ. ಹಡಗಲಿ ತಾಲ್ಲೂಕಿನ ಈಗಿನ ಹೊಳಲಿನಲ್ಲಿ ನಿರ್ಮಿಸಿರುವ ಸಾಧ್ಯತೆಯೇ ಹೆಚ್ಚು. ಈಗ ಹಡಗಲಿಗೆ ಸ್ಥಳಾಂತರವಾಗಿರುವ ಆದಿರಾಜಪ್ಪ ಜಿನ್ನಪ್ಪ ವಸುಪಾಲಯ್ಯ, ಧರ್ಮಣಗೌಡ ಪದ್ಮಣಗೌಡ ಅವರ ಜೈನಮನೆತನಗಳು ಈ ಹಿಂದೆ ಹೊಳಲಿನಲ್ಲಿದ್ದವು ಎಂದು ಬಳ್ಳಾರಿಯನ್ನು ಚೆನ್ನಾಗಿ ಬಲ್ಲ ಲೇಖಕರಾದ ಗುರುಮೂರ್ತಿ ಪೆಂಡಕೂರು ಹೇಳುತ್ತಾರೆ. ಆದರೆ ಇಂದು ಜನ್ನನು ನಿರ್ಮಿಸಿದ ಬಸದಿಯಾಗಲಿ, ಜೈನಧರ್ಮದ ಇತರ ಕುರುಹುಗಳಾಗಲಿ ಹೊಳಲಿನಲ್ಲಿ ಕಾಣುತ್ತಿಲ್ಲ.

ಈಗ ಜನ್ನಕವಿ ದೋರಸಮುದ್ರದಲ್ಲಿ ಕಟ್ಟಿಸಿದ ಶಾಂತಿನಾಥ ಬಸದಿಯ ವಿಚಾರ. ಹೊಯ್ಸಳ ವಿಷ್ಣುವರ್ಧನನ ಕಾಲದ ವಿಜಯಪಾರ್ಶ್ವ ಜಿನಾಲಯದ ಮುಂದೆ ಈ ಬಸದಿಯನ್ನು ದೋರಸಮುದ್ರದಲ್ಲಿ ಕಟ್ಟಿಸಿದೆ ಎಂಬುದು ಜನ್ನನ ಹೇಳಿಕೆ. ಹೊಯ್ಸಳೇಶ್ವರ ದೇವಸ್ಥಾನಕ್ಕೆ ಎರಡು ಫರ್ಲಾಂಗ್ ದೂರದಲ್ಲಿರುವ ಬಸ್ತಿಹಳ್ಳಿಯಲ್ಲಿ ಈ ವಿಜಯಪಾರ್ಶ್ವ ಬಸದಿಯಿದೆ. ಇದರ ಪೂರ್ವಕ್ಕೆ ಒಂದು ಶಾಂತಿನಾಥ ಬಸದಿಯಿದೆ. ಇಲ್ಲಿ ಜೈನಧರ್ಮದ ಗುರು-ಶಿಷ್ಯ ಪರಂಪರೆಗೆ ಸೇರಿದ ಬಾಳಚಂದ್ರ - ಅಭಯಚಂದ್ರ-ಬಾಳಚಂದ್ರ-ರಾಮಚಂದ್ರರ ಪ್ರಸ್ತಾಪ, ಸಮಾಧಿ ಮರಣ ಸಂಗತಿ, ಮುನಿಗಳ ಪ್ರತಿಕೃತಿಗಳ ನಿಸಿಧಿ ಶಾಸನಗಳಿವೆ. ೧೨೫೬ರ ಶಾಸನೋಕ್ತ ಈ ಶಾಂತಿನಾಥ ಬಸದಿಯನ್ನು ಶ್ರೀಕರಣದ ಮದುಕಣ್ಣ, ವಿಜಯಣ್ಣ ಹಾಗೂ ದೋರಸಮುದ್ರದ ಭವ್ಯಜನಂಗಳು ಮಾಡಿಸಿದ್ದಾರೆ. ಈ ಶಾಂತಿನಾಥನ ಅಷ್ಟವಿಧಾರ್ಚನೆಗೆ, ಆಹಾರದಾನಕ್ಕೆ ಹೊಯ್ಸಳ ದೊರೆ ಮುಮ್ಮಡಿ ನರಸಿಂಹನಿಂದ

ದಾನ ಪಡೆಯಲಾಗಿದೆ (ಎ.ಕ. ೯, ೧೯೯೦, ಬೇಲೂರು, ೪೦೭). ಇದನ್ನು ಜನ್ನಕವಿ ನಿರ್ಮಾಪಿತವೆಂಬದು ಹೇಳುವಂತಿಲ್ಲ. ಹಳೇಬೀಡಿನಲ್ಲಿಯೇ ಹೀಗೆಯೇ ಇನ್ನೊಂದು ತ್ರಿಕೂಟರತ್ನ ಶಾಂತಿನಾಥ ಜಿನಾಲಯವಿದೆ. ಇದಕ್ಕೆ ಅರಸಿಕೆರೆ ಕೊಟ್ಟೂರು ನಲ್ಲೂರು ಕೊಪ್ಪಳ ಬೀರೂರು ಮುಂತಾದ ಪ್ರಾಂತಗಳ ಆ ಕಾಲದ ಹಲವಾರು ಸೆಟ್ಟಿಗಳು ವಿವಿಧ ಬಗೆಯ ದತ್ತಿಗಳನ್ನು ಬಿಟ್ಟಿದ್ದಾರೆ. ಜನ್ನನ ಆಶ್ರಯದಾತ ಇಮ್ಮಡಿ ನರಸಿಂಹನ ಕಾಲದ ಇದನ್ನು ತ್ರಿಕೂಟರತ್ನತ್ರಯ ನರಸಿಂಹ ಜಿನಾಲಯವೆಂದು ಕರೆದಿದೆ. ಬಲಾತ್ಕಾರ ಗಣದ ಮುನಿಪರಂಪರೆಗೆ ಸೇರಿದ ಇದು ಕೂಡ ಜನ್ನನೊಂದಿಗೆ ನೇರ ಸಂಬಂಧ ಹೊಂದಿಲ್ಲ (ಎ.ಕ. ೯, ೧೯೯೦, ಬೇಲೂರು, ೩೨೧, ೩೨೨). ಜನ್ನನದು ಕಾಣೂರ್‌ಗಣದ ಮುನಿಪರಂಪರೆ ಎಂಬುದನ್ನು ನೆನಪಿಡಬೇಕು. ಇದನ್ನೂ ಜನ್ನಕವಿ ನಿರ್ಮಾಪಿತವೆಂಬುದು ಹೇಳುವಂತಿಲ್ಲ. ಹೀಗಾಗಿ ಈ ಎರಡೂ ಬಸದಿಗಳು ಜನ್ನ ನಿರ್ಮಾಪಿತವಲ್ಲ.

ಹಾಗಾದರೆ ದೋರಸಮುದ್ರದಲ್ಲಿ ಜನ್ನಕವಿ ಮಾಡಿಸಿದ ಶಾಂತಿನಾಥ ಬಸದಿ ಯಾವುದು. ಅದು ಏನಾಯಿತು? ಹೇಳುವುದು ಕಷ್ಟ. ಆದರೆ ವಿಜಯ ಪಾರ್ಶ್ವನಾಥ ಬಸದಿಯ ಹೊರಗಣ ಗೋಡೆಯ ಕಂಬದ ಮೇಲೆ ಒಂದು ಕುತೂಹಲದ ಸಂಗತಿಯನ್ನು ಕೆತ್ತಿದೆ. ವಿಜಯಪಾರ್ಶ್ವ ಬಸದಿಯ ಈಶಾನ್ಯ ದಿಕ್ಕಿನಲ್ಲಿ ಹದಿನೈದು ಕೈಯ ಅಂತರದಲ್ಲಿ ಆರು ಕೈಯ ಭೇದದಲ್ಲಿ ಶಾಂತಿನಾಥದೇವರು ಭೂಮಿಸ್ತವಾಗಿದ್ದಾರೆ. ಪುಣ್ಯಪುರುಷ ಅದನ್ನು ತೆಗೆದು ಪುಣ್ಯಸಂಪಾದಿಸಲಿ ಎಂದು ಹೇಳಿದೆ (ಎ.ಕ. ೯, ೧೯೯೦, ಬೇಲೂರು, ೩೯೨). ಇದು ಜನ್ನಕವಿ ಪ್ರತಿಷ್ಠಿಪಿಸಿದ ಶಾಂತಿನಾಥನಿಗೆ ಸಂಬಂಧಿಸಿರಬಹುದೇ ಎಂಬ ಸಂದೇಹ ಸುಳಿಯುತ್ತದೆ. ಯಾವುದೋ ಕಾರಣಕ್ಕಾಗಿ ಜನ್ನ ನಿರ್ಮಾಪಿತ ಶಾಂತಿನಾಥ ಬಸದಿಯು ಅಳಿದು ಹೋಗಿ, ಆ ವಿಗ್ರಹ ಹೀಗೆ ಭೂಮಿಸ್ತವಾಗಿರಬಹುದು. ವಿಜಯಪಾರ್ಶ್ವಬಸದಿಯಲ್ಲಿ ಭಗ್ನಗೊಂಡು ಪೂಜೆಗೊಳ್ಳದ ಆದಿನಾಥ ತೀರ್ಥಂಕರನ ವಿಗ್ರಹ ಇಂದಿಗೂ ಇರುವುದು ಈ ಊಹೆಗೆ ಪ್ರೇರಕವಾಗಿದೆ. ಹಲವು ಬಸದಿಗಳ ಜೀರ್ಣೋದ್ಧಾರ ಮಾಡಿದ, ಜನ್ನ ಕವಿಯಿಂದ ನಿರ್ಮಾಪಿತವಾದ ಎರಡೂ ಬಸದಿಗಳು ಇಂದು ಉಳಿದು ಬರೆದಿರುವುದು ದುರದೃಷ್ಟದ ಸಂಗತಿ.

ಅನಂತನಾಥ ಪುರಾಣದ ಸಮಾಪನ

ಜೈನಬಸದಿಗಳು ಪೂಜಾಕೇಂದ್ರಗಳು ಮಾತ್ರವಲ್ಲದೆ, ಸಾಹಿತ್ಯಕ ಚಟುವಟಿಕೆಯ ತಾಣಗಳು ಆಗಿದ್ದವು. ಅಲ್ಲಿ ಸಂಸ್ಕೃತ – ಪ್ರಾಕೃತ ಕೃತಿಗಳಿಗೆ ಟೀಕೆಯ ರಚನೆ, ಜೈನಕೃತಿಗಳ ಪ್ರತಿ ಮಾಡುವಿಕೆ, ಜೈನ ಹಸ್ತಪ್ರತಿಗಳ ಸಂರಕ್ಷಣೆ ಜರುಗುತ್ತಿತ್ತು. ಚಾಮರಾಜನಗರದ ಮಲೆಯೂರಿನ ಆದೀಶ್ವರ ಬಸದಿಯಲ್ಲಿ ರಾಜಾದಿತ್ಯನ ವ್ಯವಹಾರಗಣಿತ, ಶ್ರುತಕೀರ್ತಿಯ ವಿಜಯಕುಮಾರಿ ಚರಿತೆಗಳು ಪ್ರತಿಯಾಗಿವೆ.

ಇಷ್ಟೇ ಅಲ್ಲದೆ ಭಾಸ್ಕರಕವಿ ತನ್ನ ಜೀವಂಧರ ಚರಿತೆಯನ್ನು ಪೆನುಗೊಂಡೆಯ ಶಾಂತೀಶ್ವರ ಬಸದಿಯಲ್ಲಿ ಪೂರೈಸಿದ್ದಾನೆ (ಜೀವಂಚ., ೧೮-೧೯). ಪ್ರಸ್ತುತ ಜನ್ನಕವಿಯಾದರೂ ತನ್ನ ಅನಂತನಾಥ ಪುರಾಣವನ್ನು ಗಂಡರಾದಿತ್ಯನ ಪೊಳಲ ಅನಂತನಾಥ ಬಸದಿಯಲ್ಲಿ ಆರಂಭಿಸಿ, ದೋರಸಮುದ್ರದ ಶಾಂತಿನಾಥ ಬಸದಿಯಲ್ಲಿ ಪೂರೈಸಿದನೆಂದು ಈಗಾಗಲೇ ಹೇಳಿದೆ.

ಅನಂತನಾಥ ಪುರಾಣದ ಕೊನೆಯ ಆಶ್ವಾಸದ ಅಂತ್ಯ ಪದ್ಯಗಳಲ್ಲಿ ಅದರ ರಚನಾ ವಿಧಿ ಹಾಗೂ ಸಮಾಪನಗಳ ಬಗ್ಗೆ ಜನ್ನನು ಹೇಳಿದ್ದಾನೆ (೧೪-೭೪, ೭೯, ೮೦). ಅನಂತಜಿನನ ಕಾವ್ಯೋಕ್ತ ಪಂಚಕಲ್ಯಾಣದ ವಿವಿಧ ಘಟ್ಟಗಳಲ್ಲಿ ಜನ್ನಕವಿ ಪೂಜಾವಿಧಿ ಜರುಗಿಸಿದ್ದಾನೆ; ವಾಕ್ಪೂಜೆಯಿಂದ ಮತ್ತೆ ಬಿತ್ತರಿಸಿದ್ದಾನೆ (ಸುರವೃಂದಾರಕವೃಂದನಂತಜಿನಪ ಶ್ರೀಪಂಚಕಲ್ಯಾಣ ಭಾಸ್ವರ ಪೂಜಾವಿಧಿಯಂ ನೆಗಟ್ಟಿ ಬಟಿಯಂ ವಾಕ್ಪೂಜೆಯಿಂ ಮತ್ತೆ ಬಿತ್ತರಿಸಲ್). ತನ್ನ ಈ ಪುರಾಣವನ್ನು ಪರಾಮರ್ಶಿಸಿ ಲೋಕ ಒಪ್ಪುವಂತೆ ತಾನೇ ಪರಿಷ್ಕರಿಸಿ ಬರೆದೆ ಎಂದಿದ್ದಾನೆ (ತಾನ್ ಕವಿಭಾಳಲೋಚನನ್ ಅಶೇಷ ಆಖ್ಯಾನದಿಂ ತಿರ್ದಿ ಇದಂ ಬರೆದಂ ... ಲೋಕಂ ಗುಣಂಗೊಳ್ವಿನಂ). ಅನಂತರ ಇದು ಕೇಳುಗರನ್ನು ಸಮ್ಮೋಹನಗೊಳಿಸಿ, ಭಾವಕರ ಕಿವಿಯನ್ನು ತಾಗುವಂತೆ ಇನಿದಾಯಿತು (ಸೋಲಿಸಲ್ ಆರ್ಪುವೆ ಭಾಳಲೋಚನಂ ಮಾಡಿದ ಕಾವ್ಯರೀತಿ ಕಿವಿದಾಗಿದ ಭಾವಕರ ಅಂತರಂಗಮಂ ೧೪-೭೮). ಆ ತರುವಾಯವೇ ಪ್ರಸಿದ್ಧನಾದ ರಾಜ ಇಮ್ಮಡಿ ನರಸಿಂಹನೇ ಆಸೀನನಾಗಿದ್ದ, ಸರ್ವಜ್ಞ ಸಭಾಸ್ಥಳದಲ್ಲಿ, ಜಾಣರಲ್ಲಿ ಜಾಣರಿದ್ದ ಆ ವಿದ್ವದ್‌ಗೋಷ್ಠಿಯಲ್ಲಿ ತನ್ನ ಕಾವ್ಯವನ್ನು ಓದಿ ತಾನೇ ವ್ಯಾಖ್ಯಾನಿಸಿದ್ದಾನೆ (ಪೆಸರ್ಗೊಂಡ ಇಳಾಧಿಪತಿಯೇ ರಾಯಂ ಅಲಂಪಿಂದಂ ಇರ್ದುದೆ ಸರ್ವಜ್ಞ ಸಭಾಸ್ಥಲಂ ; ಗಡಣಂಗೊಂಡ ಜಾಣರೊಳ್ ಜಾಣರ್ ಇರ್ದುದೆ ದೇವವ್ರಜದೊಳ್ ಸುದೇಶ ; ಮುದದಿಂ ವ್ಯಾಖ್ಯಾನಮಂ ಮಾಡಿ ಕೇಳಿದಪಂ ವಾಗ್ಮಿಗಣಾಗ್ರಗಣ್ಯನ್ ಎನೆ ಜನ್ನಂಗ). ಈ ವಿವರಗಳಿಂದ ತನ್ನ ಕಾವ್ಯವನ್ನು ಇತರ ವಿದ್ವಾಂಸರ ನೆರವು ಪಡೆಯದೆ ಜನ್ನನು ತಾನೇ ಪರಿಷ್ಕರಿಸಿ, ರಾಜನೆದುರು ಸಭಾವಾಚನೆ ಮಾಡಿ ಪುರಾಣವನ್ನು ಸಮಾಪನಗೊಳಿಸಿದ ಸಂಗತಿ ಖಚಿತವಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ಕವಿ ತನ್ನನ್ನು ಜನ್ನಿಗನ್ ಅಸಹಾಯ ಸುಕವಿ ಕವಿಚಕ್ರವರ್ತಿಗಳೊಳ್ ಎಂದು (ಅನಂಪು. ೧೪-೭೭) ಘೋಷಿಸಿಕೊಂಡಿರುವುದು. ಕಾವ್ಯರಚನಾ ಸಮಾಪ್ತಿಯ ನಂತರ, ಖುದ್ದು ರಾಜನ ಸಮಕ್ಷದಲ್ಲಿ ಕವಿಯೇ ರಾಜಾಸ್ಥಾನದಲ್ಲಿ ತನ್ನ ಕಾವ್ಯವಾಚನ ಮಾಡುತ್ತಿದ್ದ ಆ ಕಾಲದ ಪದ್ಧತಿಗೆ ಇದು ಅನುಗುಣವಾಗಿದೆ. ಸಂಸ್ಕೃತದ ಆಲಂಕಾರಿಕ ರುಯ್ಯಕನ ಶಿಷ್ಯ ಮಂಕುಕ. ಈತನ ಕಾಲ ಸು. ೧೨ನೆಯ ಶತಮಾನ, ಕೃತಿ ಶ್ರೀಕಂಠಚರಿತ. ಈ ಕೃತಿಯನ್ನು ಸಮಾಪನಗೊಳಿಸಿದ ಮೇಲೆ ಹೀಗೆಯೇ ರಾಜಸಭೆಯಲ್ಲಿ ಮಂಕುಕ ವಾಚಿಸಿದ. ಆಗ ರುಯ್ಯಕನೆ ಸಹಿತ ಎಲ್ಲರೂ ಹಾಜರಿದ್ದರು. ಈ ಎಲ್ಲವನ್ನೂ ತನ್ನ

ಪೂರ್ವೋಕ್ತ ಕಾವ್ಯಾಂತಸರ್ಗದಲ್ಲಿ ಕವಿ ಮಂಕುಕನೇ ಹೇಳಿಕೊಂಡಿರುವುದರೆಡೆ ವಿದ್ವಾನ್ ಎಚ್.ವಿ. ನಾಗರಾಜರಾಯರು ನನ್ನ ಗಮನವನ್ನು ಸೆಳೆದಿದ್ದಾರೆ.

ಅನಂತನೋಂಪಿ

ತನ್ನ ಅನಂತನಾಥಪುರಾಣದಲ್ಲಿ ಅನಂತನೋಂಪಿಯನ್ನು ನಿರೂಪಿಸಿರುವುದು ಜನ್ನಕವಿಯ ಒಂದು ವಿಶೇಷ. ಇದನ್ನು ಅನಂತನಾಥನ ಪರಿಷ್ಕ್ರಮಣಾನಂತರ ಕಾವ್ಯದಲ್ಲಿ ನಿರೂಪಿಸಿದೆ. ರಾಜ್ಯ ತೊರೆದು ಅನಂತಜಿನನ ಹುಡುಕಾಟದಲ್ಲಿದ್ದ ಅಯ್ಯೋಧ್ಯೆಯ ರಾಜನಾದ ವಿಜಯಕುಮಾರನಿಗೆ ಇದನ್ನು ಶಾಂತಿಶುಭಾಚಾರ್ಯ ಮುನೀಂದ್ರರು ಹೇಳುತ್ತಾರೆ (ಅನಂಪು.; ೧೦–೭೨~೯೨). ಪುರುದೇವನಿಂದ ವೃಷಭಸೇನಗಣಧರನಿಗೆ, ಆತನಿಂದ ಭರತನಿಗೆ ತಿಳಿಸಲ್ಪಟ್ಟ, ಇದು ಉತ್ತಮಪುರಾಣಪ್ರೋಕ್ತವಾದ ಆಚರಣಾಭಾಗವಾಗಿದೆ. ಭಾದ್ರಪದ ಶುಕ್ಲ ಚತುರ್ದಶಿ ಈ ನೋಂಪಿಯ ಆಚರಣೆಯ ದಿನ. ಆಗ ಮಾಡುವ ಉಪವಾಸ, ಏಕಭುಕ್ತಿ, ಜಾಗರ, ಆ ಸಂದರ್ಭದ ದಾರದ ಪೂಜೆ, ಅದಕ್ಕೆ ಹಾಕುವ ಹದಿನಾಲ್ಕು ಗಂಟುಗಳು, ಜಿನಾಭಿಷೇಕ ಮಾಡಿ ಚಂದನ ಗೋರೋಚನ ಕುಂಕುಮಗಳಿಂದ ಮಾಡುವ ಆ ದಾರದ ಪೂಜೆ, ಆಗ ಉಚ್ಚರಿಸಬೇಕಾದ ಅನಂತಮಂತ್ರ. ಆಲಿಸಬೇಕಾದ ಕಥೆ, ಮಂತ್ರೋಚ್ಚಾರದಿಂದ ಬಲಗೈಗೆ ದಾರ ಕಟ್ಟುವಿಕೆಗಳನ್ನು ಜನ್ನ ಮೊದಲು ನಿರೂಪಿಸಿದ್ದಾನೆ. ಭಕ್ಷ್ಯಸಾಮಗ್ರಿಗಳ ಬಾಗಿನ, ಸದಾಚಾರಶೀಲಮುನಿಗೆ ನೀಡಬೇಕಾದ ಇತರ ದಾನಸಾಮಗ್ರಿ, ಹದಿನಾಲ್ಕು ವರ್ಷ ಕೈಗೊಳ್ಳಬೇಕಾದ ಈ ವ್ರತಪಾಲನೆ, ಶಿಲೆ ಅಥವಾ ಲೋಹದಲ್ಲಿ ಅನಂತಜಿನನ ನಿರ್ಮಾಣ, ಮುನಿಗಳಿಗೆ ನೀಡಬೇಕಾದ ತಟ್ಟು - ಕುಂಚ ಇತ್ಯಾದಿ ಅನಂತಜಿನಪುರಾಣದ ನಕಲೆತ್ತಿಸಿ ಮಾಡುವ ಗ್ರಂಥದಾನ, ಶ್ರೋತೃವಿಗೆ ಚಿತ್ರಭರಿತ ಕಂಬಿಕಪ್ಪಡದಾನ, ಈ ವ್ರತಾಚರಣೆಯ ಫಲಪ್ರಾಪ್ತಿ ಈ ಎಲ್ಲವನ್ನು ಜನ್ನಕವಿ ವಿವರದಲ್ಲಿ ಬಳಿಕ ನಿರೂಪಿಸಿದ್ದಾನೆ.

ಜನ್ನ ತನ್ನ ಯಶೋಧರ ಚರಿತೆಯಲ್ಲಿ ಜೀವದಯಾಷ್ಟಮಿ ನೋಂಪಿಯ ಕೆಲವು ವಿವರ ಹಾಗೂ ಉದ್ದೇಶಗಳನ್ನು ಅಂತರ್ಗತಗೊಳಿಸಿದ್ದಾನೆ. ಅನಂತನೋಂಪಿಯ ಆಚರಣಾ ವಿಧಾನವನ್ನು ಅನಂತನಾಥಪುರಾಣದಲ್ಲಿ ನಿರೂಪಿಸಿದ್ದಾನೆ. ಈ ಎರಡೂ ನೋಂಪಿಗಳು ವೈದಿಕ ಮೂಲದ, ಆದರೆ ಪರಿಷ್ಕೃತಗೊಂಡ ಜೈನ ಆಚರಣೆಗಳೇ. ವೈದಿಕ ಅನಂತ ಪದ್ಮನಾಭ ವ್ರತದಲ್ಲಿಯೂ ಉಪವಾಸ, ಕಲಶ ಸ್ಥಾಪನೆ, ದಾರದ ಪೂಜೆ, ದಾನ, ಹದಿನಾಲ್ಕು ವರ್ಷಗಳ ಬಳಿಕ ಉದ್ಯಾಪನೆ ಮುಂತಾದವು ಇವೆ. ವೈದಿಕ ಪರಂಪರೆಯಲ್ಲಿ ಅರಣ್ಯವಾಸದಲ್ಲಿದ್ದ ಧರ್ಮರಾಯನಿಗೆ ಶ್ರೀಕೃಷ್ಣನು ವ್ರತಮಹಿಮೆ ನಿರೂಪಿಸಿದರೆ, ಇಲ್ಲಿ ಶಾಂತಿ ಶುಭಾಚಾರ್ಯರು ಅನಂತಜಿನನ ಪುತ್ರ ವಿಜಯಕುಮಾರನಿಗೆ ನೋಂಪಿಯ ವಿಧಾನವನ್ನು ವಿವರಿಸುತ್ತಾರೆ. ಅಲ್ಲಿ ಭಾಗ್ಯಭ್ರಷ್ಟನಾದ ಕೌಂಡಿನ್ಯಮುನಿಯು ಅನಂತಪದ್ಮನಾಭನನ್ನು ಅರಣ್ಯದಲ್ಲಿ

ಅರಸಿದರೆ, ಇಲ್ಲಿ ರಾಜ್ಯಸುಖಪರಾಙ್ಮುಖನಾದ ವಿಜಯಕುಮಾರನು ಅನಂತಜಿನನಿಗಾಗಿ ಹುಡುಕಾಡುತ್ತಾನೆ. ಅಲ್ಲಿ ಬ್ರಾಹ್ಮಣಶ್ರೇಷ್ಠರ ಪ್ರಾಮುಖ್ಯ ಮತ್ತು ಸಮಾರಾಧನೆ ಕಂಡರೆ, ಇಲ್ಲಿ ಜೈನಮುನಿಗಳಿಗೆ ಮಹತ್ವ ಹಾಗೂ ಬಾಗಿನ ದಾನಗಳ ಸಮರ್ಪಣೆಯಿದೆ. ಸಂಪದಭಿವೃದ್ಧಿ, ರೋಗ ಪರಿಹಾರ, ಪಾಪನಾಶನ, ಪತ್ನಿ, ಪುತ್ರ, ಪೌತ್ರ ಸುಖ, ಅಮರಲೋಕ ಪ್ರಾಪ್ತಿಯ - ವ್ರತಾಚಾರಣೆಯ ಈ ಫಲಗಳನ್ನು ವೈದಿಕಮೂಲವನ್ನು ಅವಲಂಬಿಸಿಯೇ ಈ ಜಿನಪುರಾಣದಲ್ಲಿ ಹೇಳಿದಂತಿದೆ. (ಅನಂಪು. ೧೦-೮೭-೯೦). ಒಂದರ್ಥದಲ್ಲಿ ಇದು ವೈದಿಕ ಆಚರಣೆಯ ಜೈನೀಕರಣವೇ. ಆದರೆ ಜೀವಬಲಿಗೆ ಬದಲಾಗಿ ಜೀವದಯೆಯ ವೈದಿಕ ವಿರೋಧವಾದ ಗಟ್ಟಿದನಿಯೊಂದು ಯಶೋಧರ ಚರಿತೆಯಲ್ಲಿ ಕೇಳುವಂತೆ, ಇಲ್ಲಿ ಈ ನೋಂಪಿಯ ಆಚರಣೆಯಲ್ಲಿ ಭಿನ್ನಸ್ವರವೊಂದು ಹೊಮ್ಮಿಲ್ಲ.

ಈ ನಿರೂಪಣೆಯು ಉದ್ದಕ್ಕೂ ಕಂದಪದ್ಯಗಳಲ್ಲಿದೆ. ತೀರ್ಥಂಕರ ಪುರಾಣದಲ್ಲಿ ಹೀಗೆ ನೋಂಪಿಯ ವ್ರತಾಚರಣೆಯ ವಿವರವಿರುವುದು ಅಪರೂಪ. ಇದು ಕಾವ್ಯದ ಅಂಗವಾದ ಕಥಾಭಾಗದ ನಿರೂಪಣೆಯು ಮಾತ್ರವಲ್ಲ, ಆ ಕಾಲದ ಅನಂತನೋಂಪಿಯ ಆಚರಣೆಯ, ಪ್ರಸಾರದ ಕಾವ್ಯಸಾಕ್ಷ್ಯ. ಇದಕ್ಕೆ ಜನ್ನಕವಿಯಿದ್ದ ಹಳೆಯಬೀಡಿನಿಂದಲೇ ಒಂದು ನಿದರ್ಶನ ಕೊಡಬಹುದು.

ಹಳೆಯಬೀಡಿನ ಬೆಣ್ಣೆಗುಡ್ಡದ ಬಳಿ ದೊರೆತಿರುವ ಒಂದು ಶಾಸನವು ಸು. ೧೩ನೆಯ ಶತಮಾನದ ಜನ್ನನ ಕಾಲದ್ದಾಗಿದೆ (ಎ.ಕ. ೯, ೧೯೯೦, ಬೇಲೂರು, ೩೨೨). ಇಲ್ಲಿರುವುದು ಬಲಾತ್ಕಾರ ಗಣದ ತ್ರಿಕೂಟ ರತ್ನತ್ರಯ ಬಸದಿಯ ಶಾಂತಿನಾಥ ತೀರ್ಥಂಕರನ ಪ್ರತಿಷ್ಠಾಪನೆಯ ಸಂದರ್ಭದ ವಿಷಯ. ಆಗ ಶ್ರೀಮತ್ ದೋರಸಮುದ್ರದ ಭವ್ಯಜನಂಗಳು ಶ್ರೀ ಶಾಂತಿನಾಥ ದೇವರಿಗೆ ಪ್ರತಿಷ್ಠಾಕಾಲದಲ್ಲಿ ತಮ್ಮ ತಮ್ಮ ಅನಂತನನೋಂಪಿಯ ಉದ್ಯಾಪನಕ್ಕೆ ಸಲುವಾಗಿ ಆಚಂದ್ರಾರ್ಕ ಸ್ಥಾಯಿಯಾಗಿ ಅಭಿಷೇಕ ಅಷ್ಟವಿಧಾರ್ಚನ ನಡೆವಂತಾಗಿ ಕಪಿಲೆಗೆ ಮಾಡಿದ ಅಕ್ಷಯಭಂಡಾರದ ಗೋಷ್ಠಿ ಆಗಿದೆ. ಇದೇ ಹೊತ್ತಿನಲ್ಲಿ ಮೇಲಿನ ಪ್ರತಿಷ್ಠಾಪನೆಗಲ್ಲದೆ ಅನಂತಾರಾಧನೆಗೆ ಎಂದು ತ್ರಿಭುವನ ಕೀರ್ತಿ ರಾವುಳರಿಗೆ, ಶ್ರುತಗುರು ಪದ್ಮಸೇನ ಭಟ್ಟಾರಕರಿಗೆ ದತ್ತಿಗಳನ್ನು ನೀಡಲಾಗಿದೆ. ಅಧಿಕ ಸಂಖ್ಯೆಯಲ್ಲಿ ಸೆಟ್ಟಿಗಳು ಇದರಲ್ಲಿ ಪಾಲ್ಗೊಂಡಿದ್ದಾರೆ. ಕರಣಾಧಿಪತಿ - ಸೇನಬೋವ - ಸಾಹಣಿಗಳು ; ಅಕ್ಕಿ, ಮೆಣಸು, ನೂಲು, ಹತ್ತಿ ವ್ಯಾಪಾರದ ಸೆಟ್ಟಿಗಳು ; ಅರಸಿಯಕೆರೆ, ಕೊಟ್ಟೂರು, ಕೊಪ್ಪಳ, ಬೀರೂರು, ನಲ್ಲೂರು, ಮರವೂರು, ಬೆಳುಗುಳದ ಸೆಟ್ಟಿಯರು ; ಜೈನಮುನಿಗಳ ಗುಡ್ಡುಗಳು; ಸೆಟ್ಟಿಗಳ ಹೆಂಡತಿಯರು, ಮಕ್ಕಳು, ತಮ್ಮಂದಿರು; ಪ್ರಾಯಃ ಉದ್ಯಾಪನೆಗೈದು ದಾನವಿತ್ತಿದ್ದಾರೆ. ಈ ಪಟ್ಟಿಯ ದಾನಿಗಳ ಸಾಮಾಜಿಕ, ಭೌಗೋಳಿಕ ವ್ಯಾಪ್ತಿ ಹಿರಿದಾಗಿದೆ. ಇಲ್ಲಿ ಬರುವ ಪದ್ಮಸೇನ ಭಟ್ಟಾರಕದೇವರು ಬಿಜಾಪುರ ಜಿಲ್ಲೆಯ

ಸಿಂದಗಿ ತಾಲ್ಲೂಕಿನ ಕಲಕೇರಿಯ ಅನಂತಜಿನಾಲಯ ನಿರ್ಮಾಣದ ಪ್ರೇರಕರೂ ಹಾಗೂ ಉಪದೇಶಕರೂ ಆದ ಕಮಲಸೇನ ಭಟ್ಟಾರಕರೇ (ಎಸ್.ಐ.ಐ., XX, ೭೦೭). ಈ ಅನಂತನ ಉದ್ಯಾಪನೆಯು ಆ ಕಾಲದ ಜೈನಸಮಾಜದ ಒಂದು ಜನಬಯಕೆಯ ಚಟುವಟಿಕೆಯಾಗಿತ್ತೆನಿಸುತ್ತದೆ. ಏಕೆಂದರೆ ಕೊಪ್ಪಳಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಅಂಬೂರುತಾಣ ಊರಿನ ಒಂದು ಶಾಸನದಲ್ಲಿ ಕೂಡ ಇಂಥದೇ ವಿಷಯವಿದೆ. ಅಲ್ಲಿ ಮಹಾಪ್ರಧಾನಿ ಸರ್ವಾಧಿಕಾರಿ ಇಂಗಳೇಶ್ವರದ ಬಳಿಯ ತಿಪ್ಪರಸನ ಪತ್ನಿ ಗೋಣಿಮದೇವಿಯ ಸೋದರಳಿಯ ಮಾರಸೆಟ್ಟಿಯು, ಅನಂತನ ಉದ್ಯಾಪನೆ ಮಾಡಿ, ಒಂದು ಬಸದಿ ನಿರ್ಮಿಸಿ ಚೌವೀಸ ತೀರ್ಥಂಕರರ ಪ್ರತಿಮೆಗಳನ್ನು ಮಾಡಿಸಿದ್ದಾನೆ (ಕವಿವಿ ಶಾಸನ ಸಂಪುಟ : ೨, ಕೊಪ್ಪಳ ಜಿಲ್ಲೆ, ೧೯೯, ಕುಷ್ಟಗಿ ೨೬). ಸಾಮಾನ್ಯರೂ, ಅಧಿಕಾರಿಗಳೂ ಈ ನೋಂಪಿಯನ್ನು ಆಚರಿಸುತ್ತಿದ್ದರು ಎಂಬುದಕ್ಕೆ ಇವು ನಿದರ್ಶನಗಳು. ಇಂಥ ಬೇರೆ ನಿದರ್ಶನಗಳು ಹುಡುಕಿದರೆ ಇನ್ನೂ ಕೆಲವು ದೊರೆಯಬಹುದು.

ಪ್ರಸ್ತುತ ಬೆಣ್ಣೆಗುಡ್ಡದ ಶಾಸನದಲ್ಲಿ ಉಕ್ತನಾದ ಶಾಂತಿನಾಥ ಬಲಾತ್ಕಾರಗಣದ ತ್ರಿಕೂಟಬಸದಿಯ ಶಾಂತಿಜಿನನೆಂಬುದು ಸ್ಪಷ್ಟ. ಈತನ ಪ್ರತಿಷ್ಠೆಯ ಕಾಲದಲ್ಲಿ ಭವ್ಯಜನಗಳು ಅನಂತನ ಉದ್ಯಾಪನೆ ಮಾಡಿದ್ದಾರೆ. ಮೇಲೆ ನೋಡಿದಂತೆ ಜನ್ನನ ಅನಂತನಾಥ ಪುರಾಣವು ಕೂಡ ಸಮಾಪನೆಗೊಂಡಿದ್ದು, ಶಾಂತಿನಾಥನ ಬಸದಿಯಲ್ಲಿಯೇ ! ಅನಂತನಾಥ ತೀರ್ಥಂಕರನಿಗೂ, ಶಾಂತಿಜಿನನಿಗೂ ಈ ಸಂದರ್ಭದಲ್ಲಿ ಏನು ಸಂಬಂಧವೋ ಗೊತ್ತಾಗುತ್ತಿಲ್ಲ. ಸತ್ಯಭಾಮ, ತ್ರಿಪೃಷ್ಟಕೇಶವ, ಅನಂತವೀರ್ಯ, ಅಚ್ಯುತೇಂದ್ರ, ಚಕ್ರಾಯುಧ ಮುಂತಾದ ವೈಷ್ಣವಪರವಾದ ಪಾತ್ರ – ಪ್ರಸಂಗಗಳು ಶಾಂತಿನಾಥ ತೀರ್ಥಂಕರನ ವೃತ್ತಾಂತದಲ್ಲಿದೆ. ಈ ಸಂಗತಿಗಳೇ ಈ ಇಬ್ಬರು ತೀರ್ಥಂಕರರನ್ನು ಕುರಿತ ಏಕಕಾಲದ ಪ್ರತಿಮಾ ಪ್ರತಿಷ್ಠೆ – ನೋಂಪಿಯ ಆಚರಣೆಗಳ ಅನುಬಂಧಿತ್ವಕ್ಕೆ ಕಾರಣವಾಗಿರಬಹುದು.

ಶೈವಕಾವ್ಯಗಳಲ್ಲಿ ಯಶೋಧರನ ಕಥೆ

ಸಂಸ್ಕೃತ, ಅಪಭ್ರಂಶ, ಕನ್ನಡಗಳಲ್ಲಿ ಯಶೋಧರನ ಕಥೆ ಜನಪ್ರಿಯಕಾವ್ಯವಾಗಿದೆ. ಜನ್ನಕವಿ ಇದನ್ನು ರಚಿಸಿದ ನಂತರ ಇದು ಕನ್ನಡದಲ್ಲಿ ಹೆಚ್ಚು ಜನಜನಿತವಾಯಿತು. ಮೂಲತಃ ಇದು ಜೈನಧರ್ಮೀಯ ಆವರಣದ ಕತೆ. ಈ ಕತೆಯನ್ನು ಶೈವಕವಿಗಳೂ ಗಮನಿಸಿದ್ದಾರೆ ; ತಮಗೆ ಒಗ್ಗುವಂತೆ ಇದನ್ನು ಬಳಸಿದ್ದಾರೆ. ಕನ್ನಡದಲ್ಲಿ ನನ್ನಯ್ಯಗಳ ಚಾರಿತ್ರವನ್ನು ಪರ್ವತದೇವ (ಕ್ರಿ.ಶ. ೧೫೭೮), ಕವಿ ಮಾದಣ್ಣ (ಸು. ೧೬೫೦) ಬರೆದಿದ್ದಾರೆ. ಈ ಇಬ್ಬರ ಕೃತಿಗಳಲ್ಲೂ (೩–೪೪–೬೨; ೨–೧೯೨–೨೧೩) ಸಂಕ್ಷಿಪ್ತವಾಗಿ ಈ ಕಥೆಯ ಒಂದು ಪ್ರಸಂಗ ಬಂದಿದೆ.

ಸುಜ್ಞಾನಮುನಿಯು ಮಾತಂಗತಮನೆಂಬ ಬೇಡನಿಗೆ ಶಿವಪಾರಮ್ಯವನ್ನು ಹೇಳಲು ಹಲವಾರು ಕತೆಗಳನ್ನು ಈ ಕಾವ್ಯದಲ್ಲಿ ಹೇಳುತ್ತಾನೆ. ಅಂಥ ಸಂದರ್ಭದಲ್ಲಿ ಈ ಯಶೋಧರರಾಯನ ಕಥೆ ಬಂದಿದೆ. ಇಲ್ಲಿ ಯಶೋಧರ - ಅಮೃತಮತಿ - ಅಷ್ಟಾವಂಕರ ಪ್ರಸಂಗವು ಮಾತ್ರ ಕಾಣುತ್ತದೆ. ಯಶೋಧರಾದಿಗಳ ವಿವಿಧ ಭವಗಳ, ಅಭಯರುಚಿ - ಅಭಯಮತಿಯರ ಕಥಾಭಾಗದ ವೃತ್ತಾಂತಗಳಿಲ್ಲ. ಅಷ್ಟಾವಂಕನನ್ನು ಕುಷ್ಠಗೋವ ಎಂದಿದೆ. ಯಶೋಧರನ ನನ್ನಿ, ಯಶೋಧರ - ಅಮೃತಮತಿಯರ ಒಲವಿನ ದಾಂಪತ್ಯ, ಕುಷ್ಠಗೋವನ ಆಗಮನ, ನಿದ್ದೆ ಬರದಿದ್ದಾಗ ಆತ ಹಾಡಿದ್ದು, ಅದರಿಂದ ಕಲಕಿದ ಅಮೃತಮತಿಯ ಮನಸ್ಸು, ಅಮೃತಮತಿ - ಕುಷ್ಠಗೋವರ ಕೂಟ, ಅಪಕೀರ್ತಿಗೆ ಅಂಜಿ ಯಶೋಧರ ಅವರನ್ನು ಕೊಲ್ಲದೆ ಹೋದದ್ದು, ಪತ್ನಿಯ ದುರ್ವರ್ತನೆಗೆ ಹೇಸಿದ ಯಶೋಧರನ ಅಂತಿಮವಾದ ವೈರಾಗ್ಯ - ಇಲ್ಲಿ ಕಾಣುವ ಕಥೆಯ ಮುಖ್ಯಾಂಶಗಳು. ಅಮೃತಮತಿ - ದೂತಿಯರ ಸಂವಾದ, ಅಮೃತಮತಿಯನ್ನು ಅಷ್ಟಾವಂಕ ಥಳಿಸುವುದು, ಯಶೋಧರನಲ್ಲಿ ಅಮೃತಮತಿಯ ಪ್ರೇಮಕ್ಷೀಣತೆ ಮುಂತಾದವು ಈ ಶೈವಕಾವ್ಯಗಳಲ್ಲಿಲ್ಲ. ಪರ್ವತದೇವನಿಗಿಂತ ಕವಿಮಾದಣ್ಣನ ನಿರೂಪಣೆ ಉತ್ತಮವಾಗಿದೆ. ತುರಗಗೋವರು ಉಂಡು ಉಟ್ಟುದನ್ನು ಕುಷ್ಠಗೋವನು ಉಂಡು ಉಟ್ಟ, ದುಃಖಿತರಿಗೆ ದುಃಖ ಮರೆಯಲು ಸಂಗೀತವೇ ಸಾಧನ, ದುಃಖಜೀವಿಯಾದ ಕುಷ್ಠಗೋವ ತನ್ನ ದುಃಖಪರಿಹಾರಕ್ಕೆ ಗಾಯನ ಮಾಡುತ್ತಿದ್ದ ಎಂಬವು ಇಲ್ಲಿಯ ಹೆಚ್ಚಿನ ಸಂಗತಿಗಳು. ದೇಶವನ್ನೆಲ್ಲ ಸುತ್ತಿ, ಒಡಲಿಗೆ ಅನ್ನ ಕಾಣದ ಯಶೋಧರನ ತುರಗಶಾಲೆಯಲ್ಲಿ ಕುಷ್ಠಗೋವ ಊಟ, ವಸತಿ ಪಡೆದನೆಂಬ ವಿವರವೂ ಇಲ್ಲಿದೆ. ಎರಡರಲ್ಲೂ ಯಶೋಧರ ಅಂತಿಮವಾಗಿ ವೈರಾಗ್ಯಪರನಾದನೆಂದಿದೆ. ಅಮೃತಮತಿಯ ಪರಪುರುಷ ಸಂಗಕ್ಕೆ, ಅದರಿಂದ ಯಶೋಧರನಲ್ಲಾದ ಹೇವರಿಕೆಗೆ ಇಲ್ಲಿ ಒತ್ತು ಹೆಚ್ಚಿದೆ. ಜನ್ನನ ಸಹಾನುಭೂತಿಗೆ ಪಾತ್ರಳಾಗಿರುವ ಅಮೃತಮತಿಯು ಶೈವಕವಿಗಳಿಗೆ ಜಾರವರ್ತನೆಯ ಸ್ತ್ರೀ. ಅವಳನ್ನು ಕೊಲ್ಲದೆ ವೈರಾಗ್ಯಪರನಾದ ಯಶೋಧರನೆಡೆ ಈ ಪ್ರಸಂಗದಲ್ಲಿ ಶೈವಕವಿಗಳು ವಾಲಿದ್ದಾರೆ. ಇದನ್ನು ದೃಷ್ಟಾಂತವಾಗಿಸಿದ್ದಾರೆ. ಜೈನೇತರ ವಲಯದಲ್ಲೂ ಯಶೋಧರನ ಕತೆ ಹರಡಿದುದನ್ನು ಈ ಕಾವ್ಯಗಳು ಸೂಚಿಸುತ್ತವೆ. ಈ ಕವಿಗಳ ಹಾಗೂ ಜನ್ನನ ಈ ಸಂಬಂಧದ ಕಥಾಭಾಗಗಳ ನಡುವೆ ಮಹತ್ವದ ವ್ಯತ್ಯಾಸಗಳಿಲ್ಲ.

◈◈◈◈◈

ನಾಗವರ್ಮನ ಕರ್ಣಾಟಕ ಭಾಷಾಭೂಷಣ –3

◈

ಡಾ. ಎನ್. ಎಸ್. ಅನಂತನಾರಾಯಣ

ಪೀಠಿಕೆ

ನಮಗೆ ಲಭ್ಯವಾಗಿರುವ ಕನ್ನಡ ಭಾಷೆಯ ಅತಿ ಪ್ರಾಚೀನ ವ್ಯಾಕರಣವೆಂದರೆ, "ಕರ್ಣಾಟಕ ಭಾಷಾಭೂಷಣ" ಎನ್ನಬಹುದು. ಇದರಲ್ಲಿ ವರ್ಣಿಸಿರುವ ಭಾಷೆ ಹಳೆಗನ್ನಡ. ಇದರ ರಚಯಿತ ನಾಗವರ್ಮ. ನಾಗವರ್ಮನು ೧೧ನೆಯ ಶತಮಾನದ ಕಡೆಯ ಭಾಗ ಮತ್ತು ೧೨ನೆಯ ಶತಮಾನದ ಮೊದಲ ಭಾಗದಲ್ಲಿ ಇದ್ದನೆಂದು ನಿಶ್ಚಯವಾಗಿ ಹೇಳಬಹುದು. ಇದು ಸಂಸ್ಕೃತಭಾಷೆಯಲ್ಲಿ ಇರುವ ಕಾರಣ ಕನ್ನಡಲೇಖಕರ ಗಮನಕ್ಕೆ ಬಂದಂತಿಲ್ಲ. ಅದ್ದರಿಂದ ಇದರಬಗ್ಗೆ ತಿಳುವಳಿಕೆಯನ್ನು ನೀಡುವುದೇ ಈ ಲೇಖನದ ಉದ್ದೇಶ. ಇದರಲ್ಲಿ ನಾಗವರ್ಮ ಕನ್ನಡಭಾಷೆಯನ್ನು ಸಂಸ್ಕೃತದ ಸೂತ್ರ ಶೈಲಿಯಲ್ಲಿ ಬರೆದಿರುವುದು ಒಂದು ವಿಶೇಷ. ಇವನಬಗ್ಗೆ, ಇವನ ಕೃತಿಗಳಬಗ್ಗೆ, ಈಗಾಗಲೇ ಮುದ್ರಿತವಾಗಿರುವ ಲೇಖನದಲ್ಲಿ ತಿಳಿಸಲಾಗಿದೆ (ಲೋಚನ ೩೩.೧.೨೦೧೯).

ನಾಗವರ್ಮನ ಕನ್ನಡ ವ್ಯಾಕರಣವು ೨೮೦ ಸೂತ್ರಗಳಿಂದ ಕೂಡಿದ್ದು, ಹತ್ತು ವಿಧಾನಗಳಲ್ಲಿ ವಿಂಗಡಿಸಲ್ಪಟ್ಟಿದೆ. ಅವುಗಳಲ್ಲಿ ಮೊದಲಿನ ನಾಲ್ಕು ವಿಧಾನಗಳನ್ನು ಕುರಿತು (ಅಂದರೆ, ಸಂಜ್ಞಾ, ಸಂಧಿ, ವಿಭಕ್ತಿ, ಕಾರಕ) ಮೊದಲ ಲೇಖನದಲ್ಲಿ ಚರ್ಚಿಸಿದ್ದೆವು. ಎರಡನೆಯ ಲೇಖನದಲ್ಲಿ ನಂತರದ ಮೂರು ವಿಧಾನಗಳ ಬಗ್ಗೆ ಚರ್ಚಿಸಿದೆ (ಶಬ್ದರೀತಿ, ಸಮಾಸ, ತದ್ಧಿತ). ಪ್ರಸ್ತುತ ಲೇಖನದಲ್ಲಿ ಮುಂದಿನ ಹಾಗೂ ಕಡೆಯ ಮೂರು ವಿಧಾನಗಳನ್ನು (ಅಂದರೆ, ಆಖ್ಯಾತ, ಅವ್ಯಯ, ನಿಪಾತ) ಕುರಿತು ವಿವರಿಸುವ ಪ್ರಯತ್ನ ಮಾಡಿದೆ.

೮. ಆಖ್ಯಾತ

ಆಖ್ಯಾತನಿಯಮವೆಂಬ ಹೆಸರಿನ ಈವಿಧಾನದಲ್ಲಿ ೫೦ ಸೂತ್ರಗಳಿವೆ. ಆದರೆ, ಕಡೆಯ ಎರಡು ಸೂತ್ರಗಳು ಆಖ್ಯಾತದಬಗ್ಗೆ ಏನನ್ನೂ ತಿಳಿಸುವುದಿಲ್ಲ. ಈವಿಧಾನದಲ್ಲಿ ನಾಗವರ್ಮನು ಹಳೆಗನ್ನಡದ ಕ್ರಿಯಾಪದವನ್ನು ವಿವರಿಸಿದ್ದಾನೆ. ಮೊದಲಿಗೆ, ನಿರ್ದೇಶಾರ್ಥಕ ಸಾಮಾನ್ಯ ಕ್ರಿಯಾರೂಪಗಳಿಗೆ ಸಂಬಂಧಿಸಿದಂತೆ ಧಾತುಗಳಿಗೆ ಸೇರುವ ಪ್ರತ್ಯಯಗಳನ್ನು ನೀಡಿ, ನಂತರ ವಿಧಿರೂಪ ಅಥವಾ ಆಜ್ಞಾರ್ಥಕ ಮತ್ತು ಆಶೀರರ್ಥಕ ಕ್ರಿಯಾರೂಪಗಳಲ್ಲಿ ಕಂಡುಬರುವ ವಿವಿಧ ಆದೇಶಗಳನ್ನು ಹಾಗೂ ಆಗಮಗಳನ್ನು ತಿಳಿಸುತ್ತಾನೆ. ಕಡೆಯಲ್ಲಿ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ, ಧಾತುಗಳಲ್ಲಿನ ವ್ಯಂಜನಗಳಲ್ಲಿ ಕಂಡುಬರುವ ವಿವಿಧ ಬದಲಾವಣೆಗಳನ್ನು ಗುರುತಿಸಿದ್ದಾನೆ.

ಕೇವಲ 'ಕ್ರಿಯೆ'ಯೇ ಯಾವ ಪದದ ಅರ್ಥವೋ ಅದಕ್ಕೆ ನಾಗವರ್ಮನು 'ಧಾತು' ಎಂಬ ಸಂಜ್ಞೆಯನ್ನು ನೀಡಿದ್ದಾನೆ (೮.೧ ಕ್ರಿಯಾರ್ಥೋ ಧಾತುಃ; ಹೋಲಿಸಿ ಕಾತಂತ್ರ ೩.೧.೯ ಕ್ರಿಯಾಭಾರಃ ಧಾತುಃ). ಧಾತುವಿಗೆ ಸೇರುವ ಪ್ರತ್ಯಯಗಳು 'ವಿಭಕ್ತಿ' ಎನಿಸಿಕೊಳ್ಳುತ್ತವೆ. ಅವು ಯಾವುವೆಂದರೆ, ಅಮ್, ಅರ್, ಅಯ್, ಇರ್, ಎನ್, ಎವ್ ಎಂಬ ಆರು ಪ್ರತ್ಯಯಗಳು (೮.೨ ತಸ್ಮಾದ್ ಅಮರಯಿರೆನವೋ ವಿಭಕ್ತಯಃ). ನಾಮಪದ ಹಾಗೂ ಕ್ರಿಯಾಪದದ ಅಂತ್ಯಪ್ರತ್ಯಯಗಳನ್ನು 'ವಿಭಕ್ತಿ' ಎಂಬ ಒಂದೇಶಬ್ದದಿಂದ ಹೇಳಲಾಗಿದೆ. ವಿಭಕ್ತಿಯು ಸೇರುವುದರಿಂದ ಪೂರ್ಣರೂಪದ ಪದವು ಏರ್ಪಡುತ್ತದೆ. ನಾಮಗಳ ಸಂದರ್ಭದಲ್ಲಿ ವಿಭಕ್ತಿಪ್ರತ್ಯಯಗಳಿಗೂ ಮೊದಲು ಕೃತ್ ಪ್ರತ್ಯಯ, ಲಿಂಗಸೂಚಕ ಪ್ರತ್ಯಯ ಮೊದಲಾದವುಗಳು, ಆಖ್ಯಾತಗಳ ಸಂದರ್ಭದಲ್ಲಿ ವಿಭಕ್ತಿ ಪ್ರತ್ಯಯಗಳಿಗೂ ಮೊದಲು ನಿಷೇಧಾರ್ಥ ಪ್ರತ್ಯಯ ಹಾಗೂ ಕಾಲಸೂಚಕ ಪ್ರತ್ಯಯಗಳು ಸೇರುತ್ತವೆ. ಪಾಣಿನಿ ತನ್ನ ಸಂಸ್ಕೃತ ವ್ಯಾಕರಣದಲ್ಲಿ ಧಾತು ಸಂಜ್ಞೆಯನ್ನು ನಿರ್ವಚಿಸಿಲ್ಲ. ಧಾತು ಎಂಬ ಶಬ್ದವನ್ನು ಒಂದು ವಿಭಾಗದ ಅಧಿಕಾರಸೂತ್ರ ಅಥವಾ ಮೊದಲ ಸೂತ್ರವಾಗಿ ಹೇಳಿದ್ದಾನೆ (೩.೧.೯೧ ಧಾತೋಃ). ಕಾತಂತ್ರಕಾರನು ಇಲ್ಲಿಯಂತೆಯೇ ನಿರ್ವಚಿಸಿದ್ದಾನೆ. ಈ ಆರು ವಿಭಕ್ತಿಗಳ ಪೂರ್ವದಲ್ಲಿ ದ, ದಪ ಮತ್ತು ವ-ಕಾರಗಳು ಸೇರಿ ಕ್ರಮವಾಗಿ ಭೂತ, ವರ್ತಮಾನ ಹಾಗೂ ಭವಿಷ್ಯತ್ ಕಾಲಗಳನ್ನು ಸೂಚಿಸುತ್ತವೆ. ಅಂದರೆ, ಕಾಲಸೂಚಕ ಪ್ರತ್ಯಯವು ಧಾತು ಮತ್ತು ವಿಭಕ್ತಿ ಪ್ರತ್ಯಯದ ಮಧ್ಯೆ ಸೇರಿಸಲ್ಪಡುತ್ತದೆ (೮.೩ ದದಪವಕಾರಾದ್ಯಾ ಭೂತವರ್ತಮಾನಭವಿಷ್ಯಂತಾಃ). ಆಗ ಕ್ರಮವಾಗಿ, ಭೂತದಲ್ಲಿ ದಮ್, ದರ್; ದಯ್, ದಿರ್; ದೆನ್ ದೆವ್ ಎಂಬ ರೂಪಗಳನ್ನು; ವರ್ತಮಾನದಲ್ಲಿ ದಪಮ್, ದಪರ್; ದಪಯ್, ದಪಿರ್; ದಪೆನ್, ದಪೆವ್ ಎಂಬ ರೂಪಗಳನ್ನೂ, ಭವಿಷ್ಯತ್ಕಾಲದಲ್ಲಿ ವಮ್, ವರ್; ವಯ್, ವಿರ್; ವೆನ್, ವೆವ್ ಎಂಬ ರೂಪಗಳನ್ನೂ ಪಡೆಯುತ್ತವೆ (ದ + ಅಮ್ = ದಮ್, ಇತ್ಯಾದಿ). ಕಾಲಸೂಚಕ ಪ್ರತ್ಯಯದ ಸ್ವರವು,

ಸ್ವರೇ ಸ್ವರಸ್ಯ ಲೋಪಃ (೨.೨) ಎಂಬ ಸೂತ್ರದಂತೆ ಲೋಪಿಸುತ್ತದೆ. ಆದರೆ, ಪ್ರತಿಷೇಧಾರ್ಥದಲ್ಲಿ ದದಪವಕಾರಗಳು ವಿಭಕ್ತಿಪ್ರತ್ಯಯದ ಮೊದಲಿಗೆ ಸೇರುವುದಿಲ್ಲ (೮.೪ ನೈವ ನಞರ್ಥೇ), ಉದಾ. ಮಾಡಮ್, ಮಾಡರ್; ಮಾಡಯ್, ಮಾಡಿರ್; ಮಾಡೆನ್, ಮಾಡೆವ್. ಅಂದರೆ, ನಿಷೇಧಾರ್ಥ ರೂಪಗಳಲ್ಲಿ ಕಾಲಸೂಚಕ ಪ್ರತ್ಯಯವು ಇರುವುದಿಲ್ಲ. ಆ ಆರುವಿಭಕ್ತಿಗಳಲ್ಲಿ ಎರಡೆರಡು ಪ್ರತ್ಯಯಗಳು ಕ್ರಮವಾಗಿ ಪ್ರಥಮಪುರುಷ, ಮಧ್ಯಮಪುರುಷ, ಉತ್ತಮಪುರುಷಗಳ ಏಕವಚನ ಹಾಗೂ ಬಹುವಚನ ರೂಪಗಳು (೮.೫ ತಾಸ್ತು ದ್ವೇ ದ್ವೇ ಪ್ರಥಮ ಮಧ್ಯಮೋತ್ತಮ ಪುರುಷಾಃ; ಹೋ. ಕಾ. ೩.೧.೩ ತ್ರೀಣಿ ತ್ರೀಣಿ ಪ್ರಥಮ ಮಧ್ಯಮ ಉತ್ತಮಾಃ). ಅಂದರೆ, ಅಮ್ ಮತ್ತು ಅರ್ ಪ್ರಥಮಪುರುಷ ಏಕವಚನ ಮತ್ತು ಬಹುವಚನಗಳು; ಎನ್ ಮತ್ತು ಎವ್ ಉತ್ತಮಪುರುಷದ ರೂಪಗಳು; ಅಯ್ ಮತ್ತು ಇರ್ ಮಧ್ಯಮಪುರುಷ ರೂಪಗಳು. ಇವುಗಳ ಪೂರ್ವದಲ್ಲಿ ಕಾಲಸೂಚಕ ರೂಪಗಳನ್ನು ಸೇರಿಸಿಕೊಳ್ಳಬೇಕು.

ತಾನ್ ಎನ್ನುವುದು ನೀನು ಮತ್ತು ನಾನು ಅಲ್ಲದ ಬೇರೊಬ್ಬ, ಅಂದರೆ, 'ಪ್ರಥಮ ಪುರುಷ' ಅಥವಾ 'ಅನ್ಯ ಪುರುಷ' (೮.೬ ಅನ್ಯಾರ್ಥೇ ಪ್ರಥಮಃ), ಉದಾ. ತಾಮ್ ಮಾಡಿದಮ್ 'ಅವನು ಮಾಡಿದನು', ತಾವ್ ಮಾಡಿದರ್ 'ಅವರು ಮಾಡಿದರು'. ನೀಮ್ ಎನ್ನುವುದು 'ಮಧ್ಯಮ ಪುರುಷ' ಮತ್ತು ಆಮ್ ಎಂದರೆ 'ಉತ್ತಮ ಪುರುಷ' (೮.೭ ಯುಷ್ಮದಸ್ಮದೋರ್ ಮಧ್ಯಮೋತ್ತಮೌ; ಹೋ.ಕಾ. ೩.೧.೬ ಯುಷ್ಮದಿ ಮಧ್ಯಮಃ, ೩.೧.೭ ಅಸ್ಮದಿ ಉತ್ತಮಃ; ಅಷ್ಟಾ. ೧.೪.೧೦೭ ಅಸ್ಮದಿ ಉತ್ತಮಃ), ಉದಾ. ನೀಮ್ ಮಾಡಿದಯ್ 'ನೀನು ಮಾಡಿದೆ', ನೀವ್ ಮಾಡಿದಿರ್ 'ನೀವು ಮಾಡಿದಿರಿ'; ಆಮ್ ಮಾಡಿದೆನ್ 'ನಾನು ಮಾಡಿದೆ', ಆವ್ ಮಾಡಿದೆವ್ 'ನಾವು ಮಾಡಿದೆವು'. ಕರ್ತೃ ಸ್ಥಾನದಲ್ಲಿ ಒಂದಕ್ಕಿಂತಲೂ ಹೆಚ್ಚಿನ ಪುರುಷವಾಚಿ ಪದಗಳನ್ನು ಉಪಯೋಗಿಸಿದ ಸಂದರ್ಭದಲ್ಲಿ, ಕ್ರಿಯೆಯು ತನ್ನ ಹತ್ತಿರವಿರುವ ಪುರುಷವಾಚಿ ಪದದೊಡನೆ ಹೊಂದಾವಣೆ ಪಡೆಯುತ್ತದೆ (೮.೮ ಯುಗಪತ್ ಪ್ರಯೋಗೇ ಪರಸ್ತೇಷಾಂ; ಹೋ. ಕಾ. ೩.೧.೪ ಯುಗಪದ್ ವಚನೇ ಪರಃ ಪುರುಷಾಣಾಂ), ಉದಾ. ಆತನುಂ ನೀನುಂ ಮಾಡಿದಿರ್ 'ಅವನು ಮತ್ತು ನೀನು ಸೇರಿ (ಆ ಕೆಲಸ) ಮಾಡಿದಿರಿ', ಆತನುಂ ಆನುಂ ಮಾಡಿದೆವ್ 'ಅವನು ಮತ್ತು ನಾನು ಸೇರಿ (ಆ ಕೆಲಸ) ಮಾಡಿದೆವು'. ಇಲ್ಲಿ ಮೊದಲ ವಾಕ್ಯದಲ್ಲಿ ನೀನುಂ, ಎರಡನೆಯ ವಾಕ್ಯದಲ್ಲಿ ಆನುಂ ಕರ್ತೃವಾಗಿ ಪರಿಗಣಿಸಲ್ಪಟ್ಟಿವೆ; ಹಾಗಾಗಿ, ಕ್ರಿಯಾಪದವು ಕ್ರಮವಾಗಿ ಮಧ್ಯಮ ಪುರುಷವಾಚಿ ಹಾಗೂ ಉತ್ತಮ ಪುರುಷವಾಚಿ ಕರ್ತೃವಿನೊಡನೆ ಒಪ್ಪುವ ರೂಪದ ಬಹುವಚನದಲ್ಲಿ ಇರುತ್ತದೆ. ಸಂಸ್ಕೃತದಲ್ಲಾದರೋ ಒಂದಕ್ಕಿಂತ ಹೆಚ್ಚಿನ ಪುರುಷವಾಚಿ ಶಬ್ದಗಳು ಕರ್ತೃ ಸ್ಥಾನದಲ್ಲಿದ್ದಾಗ, 'ಮತ್ತು' ಎಂಬರ್ಥದ ಚ-ಇಂದ ಬೆಸೆಯಲ್ಪಟ್ಟಿದ್ದರೆ, ಕ್ರಿಯಾಪದವು ಅವುಗಳ ಒಟ್ಟು ಸಂಖ್ಯೆಯನ್ನು ಸೂಚಿಸುವ

ದ್ವಿವಚನ ಅಥವಾ ಬಹುವಚನದಲ್ಲಿ ಇರುತ್ತದೆ, ಉದಾ. ತ್ವಂ ಚ ಅಹಂ ಚ ತತ್ರ ಗಚ್ಛಾವಃ 'ನೀನು ಮತ್ತು ನಾನು ಕೂಡಿ ಅಲ್ಲಿಗೆ ಹೋಗೋಣ'.

ಮೇಲೆ ಹೇಳಿದ ಆರು ಪ್ರತ್ಯಯಗಳು ಮೂರೂ ಕಾಲಗಳಲ್ಲಿ ಉಪಯೋಗಿಸಲ್ಪಡುತ್ತವೆ (ಲ.೯ ಸ್ವಾರ್ಥೇ ಕಾಲೇ). ಆದ್ದರಿಂದ 'ಅತೀತ' ಸಮಯದಲ್ಲಿ ಅವು ಭೂತಕಾಲವನ್ನು ಸೂಚಿಸುತ್ತವೆ, ಉದಾ. ಪ್ರಥಮ ಪುರುಷ: ಮಾಡಿದಂ 'ಅವನು ಮಾಡಿದನು', ಮಾಡಿದರ್ 'ಅವರು ಮಾಡಿದರು'; ಮಧ್ಯಮ ಪುರುಷ: ಮಾಡಿದಯ್ 'ನೀನು ಮಾಡಿದೆ', ಮಾಡಿದಿರ್ 'ನೀವು ಮಾಡಿದಿರಿ'; ಉತ್ತಮ ಪುರುಷ: ಮಾಡಿದೆನ್ 'ನಾನು ಮಾಡಿದೆ', ಮಾಡಿದೆವ್ 'ನಾವು ಮಾಡಿದೆವು'. 'ಅದ್ಯತನ' ಅಥವಾ ಪ್ರಸ್ತುತ ನಡೆಯುತ್ತಿರುವ ಕಾಲದಲ್ಲಿ ಈ ಪ್ರತ್ಯಯಗಳು ವರ್ತಮಾನ ಎನಿಸುತ್ತವೆ, ಉದಾ. ಪ್ರಥಮ ಪುರುಷ: ಮಾಡಿದಪಂ 'ಅವನು ಮಾಡುತ್ತಾನೆ', ಮಾಡಿದಪರ್ 'ಅವರು ಮಾಡುತ್ತಾರೆ'; ಮಧ್ಯಮ ಪುರುಷ: ಮಾಡಿದಪಯ್ 'ನೀನು ಮಾಡುತ್ತೀಯೆ', ಮಾಡಿದಪಿರ್ 'ನೀವು ಮಾಡುತ್ತೀರಿ'; ಉತ್ತಮ ಪುರುಷ: ಮಾಡಿದಪೆನ್ 'ನಾನು ಮಾಡುತ್ತೇನೆ', ಮಾಡಿದಪೆವ್ 'ನಾವು ಮಾಡುತ್ತೇವೆ'. 'ಏಷ್ಯ' ಅಥವಾ ಮುಂದೆಬರುವ ಕಾಲದಲ್ಲಿ ಅವು ಭವಿಷ್ಯಂತಿ ಎನಿಸುತ್ತವೆ, ಉದಾ. ಪ್ರಥಮ ಪುರುಷ: ಮಾಡುವಂ 'ಅವನು ಮಾಡುವನು', ಮಾಡುವರ್ 'ಅವರು ಮಾಡುವರು'; ಮಧ್ಯಮ ಪುರುಷ: ಮಾಡುವಯ್ 'ನೀನು ಮಾಡುವೆ', ಮಾಡುವಿರ್ 'ನೀವು ಮಾಡುವಿರಿ'; ಉತ್ತಮ ಪುರುಷ: ಮಾಡುವೆನ್ 'ನಾನು ಮಾಡುವೆನು', ಮಾಡುವೆವ್ 'ನಾವು ಮಾಡುವೆವು'.

ವ್ಯಕ್ತಿಯೊಬ್ಬನನ್ನು ಅಥವಾ ವಸ್ತುವೊಂದನ್ನು ಸೂಚಿಸುವ ಪದ 'ಏಕವಚನ' ಎನಿಸುತ್ತದೆ (ಲ.೧೦ ಏಕಸ್ಮಿನ್ನೇಕವಚನಂ), ಉದಾ. ಅತನೋರ್ವನೇ ಮಾಡಿದಮ್ 'ಅವನೊಬ್ಬನೇ ಮಾಡಿದನು', ಮಾಡಿದಪಂ, ಮಾಡುವಂ; ನೀನೋರ್ವನೇ ಮಾಡಿದಯ್ 'ನೀನೊಬ್ಬನೇ (ಅದನ್ನು) ಮಾಡಿದೆ', ಮಾಡಿದಪಯ್, ಮಾಡುವಯ್; ಆನೋರ್ವನೇ ಮಾಡಿದೆನ್ 'ನಾನೊಬ್ಬನೇ ಮಾಡಿದೆ', ಮಾಡಿದಪೆನ್, ಮಾಡುವೆನ್ 'ನಾನೊಬ್ಬನೇ ಮಾಡುವೆನು'. ಇಬ್ಬರು ಅಥವಾ ಹೆಚ್ಚುಮಂದಿ ಹಾಗೆ ಹೆಚ್ಚು ವಸ್ತುಗಳು ಎಂದು ಸೂಚಿಸುವ ಪದವು 'ಬಹುವಚನ' ಎನಿಸುತ್ತದೆ (ಲ.೧೧ ದ್ವಿತ್ವಬಹುತ್ವಯೋರ್ ಅನ್ಯತ್), ಉದಾ. ಅವರ್ ಮಾಡಿದರ್ 'ಅವರು ಮಾಡಿದರು', ಮಾಡಿದಪರ್, ಮಾಡುವರ್; ನೀವು ಮಾಡಿದಿರ್ 'ನೀವು ಮಾಡಿದಿರಿ', ಮಾಡಿದಪಿರ್, ಮಾಡುವಿರ್; ಆವು ಮಾಡಿದೆವ್ 'ನಾವು ಮಾಡಿದೆವು', ಮಾಡಿದಪೆವ್, ಮಾಡುವೆವ್. ಕರ್ತೃಪದವು ನಪುಂಸಕವಾದರೆ, ಪ್ರಥಮ ಪುರುಷದ ಏಕ ಹಾಗೂ ಬಹುವಚನಗಳಲ್ಲಿ, ಅವಕ್ಕೆ ಉದು ಹಾಗೂ ಉವು ಎಂಬುವು ಕ್ರಮವಾಗಿ ಆದೇಶವಾಗುತ್ತವೆ (ಲ.೧೨ ಉದು ಉವು ನಪುಂಸಕ ಪ್ರಥಮಸ್ಯ), ಉದಾ. ಆದುದು

'ಅದು ಆಯಿತು', ಆದುವು '(ಆಕೆಲಸಗಳು) ಆದುವು'; ಆದುಪುದು, ಆದುಪುವು; ಅಪ್ಪುದು, ಅಪ್ಪುವು. ಅದೇರೀತಿ, ಭಾವೇಪ್ರಯೋಗದಲ್ಲಿ ಅನ್ಯ ಪುರುಷದ ಏಕ ಮತ್ತು ಬಹುವಚನರೂಪಗಳಿಗೆ ಉದು ಮತ್ತು ಉವು ಆದೇಶವಾಗುತ್ತವೆ (ಲ.೧೩ ಭಾವೇ ಚ), ಉದಾ. ಮಾಳ್ಪುದು 'ಬಿಡಲ್ಪಡುತ್ತದೆ', ಮಾಳ್ಪುವು; ಕೂರ್ಪುದು 'ಹರಿತಮಾಡಲ್ಪಡುತ್ತದೆ', ಕೂರ್ಪುವು. ಆದರೆ, ಕೆಲವರ ಮತದಲ್ಲಿ, ಅನ್ಯಪುರುಷದ ಏಕವಚನಕ್ಕೆ ತು ಮತ್ತು ತ್ತು ಆದೇಶವಾಗುತ್ತವೆ (ಲ.೧೪ ತದ್ ಏಕವಚನಸ್ಯ ತು ತ್ತೂ ವಾನ್ಯೇಷಾಂ), ಉದಾ. ಪುಟ್ಟಿತು/ಪುಟ್ಟಿತ್ತು 'ಹುಟ್ಟಿತು'; ಕೆಟ್ಟಿತು/ಕೆಟ್ಟಿತ್ತು 'ಹಾಳಾಯಿತು'.

ಪ್ರಥಮ ಪುರುಷದ ಸ್ತ್ರೀಲಿಂಗ ಏಕವಚನದಲ್ಲಿ ಅಳ್ ಎಂಬ ಪ್ರತ್ಯಯವು ಅಂತ್ಯದಲ್ಲಿ ಸೇರಿಸಲ್ಪಡುತ್ತದೆ (ಲ.೧೫ ಸ್ತ್ರಿಯಾಂ ಅಳ್ ತದಂತೇ), ಉದಾ. ಆಡಿದಳ್ 'ಅವಳು ಆಟವಾಡಿದಳು' (ಆಡ್ + ಇ + ದ + ಅಳ್), ಆಡಿದಪಳ್ 'ಅವಳು ಆಡುತ್ತಿದ್ದಾಳೆ', ಆಡುವಳ್ 'ಅವಳು ಆಡುವಳು'. ಭವಿಷ್ಯತ್ಕಾಲದಲ್ಲಿ ಪ್ರಥಮ ಪುರುಷದ ಎಲ್ಲಾ ಲಿಂಗದಲ್ಲೂ ಗುಮ್ ಮತ್ತು ಕುಮ್ ಎಂಬುವು ಆದೇಶವಾಗುತ್ತವೆ (ಲ.೧೬ ಗುಂ ಕುಂ ಸರ್ವತ್ರ ಭವಿಷ್ಯಂತ್ಯಾಃ), ಉದಾ. ಮಾತಂ ಮೀಗುಮಾತಂ 'ಮಾತಿನಂತೆ ನಡೆಯದವನು', ಮಾತಂ ಮೀಗುಮಾಕೆ 'ಮಾತಿನಂತೆ ನಡೆಯದವಳು', ಅದರಿಂ ಮೀರುಗುಮಿದು 'ಮಾತಿನಂತೆ ನಡೆಯದಿರುವುದು'; ಆತಂ ಬರ್ಕುಂ 'ಅವನು ಬರುವನು', ಆಕೆ ಬರ್ಕುಮ್ 'ಅವಳು ಬರುವಳು', ಅದು ಬರ್ಕುಂ 'ಅದು ಬರುವುದು'. ಎಲ್ಲ ಪುರುಷಗಳ ಏಕವಚನ ಮತ್ತು ಬಹುವಚನ ರೂಪಗಳಲ್ಲಿ, ದ ಮೊದಲಾದ ಪ್ರತ್ಯಯಗಳ ಹಿಂದೆ [ಇ] ಎಂಬುದು ಐಚ್ಛಿಕವಾಗಿ ಸೇರಿಸಲ್ಪಡುತ್ತದೆ (ಲ.೧೭ ದದಾವಿಡಾಗಮೋ ಬಹುಳಂ), ಉದಾ. ಮೆಚ್ಚಿದಂ 'ಅವನು ಮೆಚ್ಚಿದನು', ಮೆಚ್ಚಿದಪಂ 'ಮೆಚ್ಚುತ್ತಾನೆ'; ಮೆಚ್ಚಿದರ್ 'ಅವರು ಮೆಚ್ಚುತ್ತಾರೆ', ಮೆಚ್ಚಿದಪರ್ 'ಮೆಚ್ಚುತ್ತಾರೆ'. ತು ಮತ್ತು ತ್ತು ಪ್ರತ್ಯಯಗಳ ಹಿಂದೆ ಸಹ [ಇ] ಸೇರಿಸಲ್ಪಡುತ್ತದೆ, ಉದಾ. ಮೆಟ್ಟಿತ್ತು 'ಅವುಕಲ್ಪಟ್ಟಿತು', ಕೆಟ್ಟಿತ್ತು 'ಹಾಳಾಯಿತು'; ಹಿಡಿದಂ 'ಅವನು ಹಿಡಿದನು', ಪಡೆದಂ 'ಅವನು ಪಡೆದನು'. ವ-ಕಾರಾದಿ ಪ್ರತ್ಯಯದ ಹಿಂದೆ [ಇ] ಮತ್ತು [ಉ] ಆಗಮವಾಗಿ ಬರುತ್ತವೆ (ಲ.೧೮ ಯುಶ್ಚ ವೇ), ಉದಾ. ನುಡಿವಂ 'ಅವನು ಮಾತನಾಡುವನು', ಮಾಡುವಂ 'ಅವನು ಮಾಡುವನು'. ಆದರೆ,

[ರ] ಹಾಗೂ [ಳ] ಅಂತ್ಯದಲ್ಲಿರುವ ಧಾತುಗಳ ಮುಂದೆ ವ-ಕಾರಾದಿ ಪ್ರತ್ಯಯ ಬಂದರೆ, ವ-ಕಾರದ ಸ್ಥಾನದಲ್ಲಿ ಪ-ಕಾರವಾಗುತ್ತದೆ (ಲ.೧೯ ರಳಾಭ್ಯಾಂ ವಸ್ಯ ಪಃ), ಉದಾ. ಬರ್ಪರ್ 'ಅವರು ಬರುವರು', ಇರ್ಪರ್ 'ಅವರು ಉಳಿಯುವರು'; ಬರ್ಪಂ 'ಅವನು ಬರುವನು', ಇರ್ಪಂ 'ಅವನು ಉಳಿಯುವನು'. ಹಾಗೆಯೇ ಧಾತುವಿನ ಅಂತ್ಯ ಓ-ಕಾರದ ಮುಂದೆಬರುವ ವ-ಕಾರಾದಿ ಪ್ರತ್ಯಯದ ವ-ಕಾರವು

ಪ-ಕಾರವಾಗುತ್ತದೆ (ಲ.೨೦ ಓಕಾರಾದಪಿ ವಕ್ತವ್ಯಃ), ಉದಾ. ಪೋಪಂ 'ಅವನು ಹೋಗುವನು, ಪೋಪರ್ 'ಅವರು ಹೋಗುವರು'.

ಒಂದಕ್ಕಿಂತಲೂ ಹೆಚ್ಚಿನ ಅಕ್ಷರಗಳುಳ್ಳ ಧಾತುಗಳಿಗೆ ವಿಭಕ್ತಿ ಪ್ರತ್ಯಯವು ಪರವಾದಾಗ, ಅವೆರಡರ ಮಧ್ಯೆ ಇಸು ಎಂಬ ಪ್ರತ್ಯಯ ಸೇರುತ್ತದೆ (ಲ.೨೧ ಧಾತೋರ್ ಅನೇಕಾಕ್ಷರಾದ್ ಇಸುಃ), ಉದಾ. ಪೊಗಯಿಸುಗುಂ 'ಅದನ್ನು ಪ್ರವೇಶ ಮಾಡಿಸುವುದಕ್ಕೆ', ಸೊಗಯಿಸಿದಂ 'ಅವನು ಅದನ್ನು ಸುಖಕರವನ್ನಾಗಿಸಿದನು'. ಧಾತುವಿಗೆ ಪ್ರಯೋಜಕಾರ್ಥದಲ್ಲೂ ಇಸು ಎಂಬುದು ಸೇರಿಸಲ್ಪಡುತ್ತದೆ (ಲ.೨೨ ಪ್ರಯೋಜಕೇ ಚ), ಉದಾ. ಆಡಿಸಿದಂ 'ಅವನು (ಮಗುವನ್ನು) ಆಡಿಸಿದನು', ಸಾರಿಸಿದಂ 'ಅವನು ಆಜಾಗವನ್ನು ಸಾರಿಸಿದನು'. ಆಶೀರರ್ಥಕ ಮತ್ತು ಆಜ್ಞಾರ್ಥಕ ಪ್ರಥಮಪುರುಷದ ವಿಭಕ್ತಿ ಪ್ರತ್ಯಯಗಳಿಗೆ ಗೆ ಮತ್ತು ಕೆ ಎಂಬುವು ಆದೇಶವಾಗುತ್ತವೆ (ಲ.೨೩ ಗೆ ಕೆ ವಾ ಪ್ರಥಮಸ್ಯಾಶಿಷಿ ವಿಧ್ಯಾದಿಷು), ಉದಾ. ಮಾಡುಗೆ/ಮಾಳ್ಕೆ 'ಅವನು ಮಾಡಬಹುದು'.

ವಿಧಿರೂಪದ ಮಧ್ಯಮ ಪುರುಷ ಏಕವಚನದಲ್ಲಿ ವಿಭಕ್ತಿ ಪ್ರತ್ಯಯಗಳಿಗೆ ಇ, ಉ, ಏ ಎಂಬುವು ಆದೇಶವಾಗುತ್ತವೆ (ಲ.೨೪ ಮಧ್ಯಮೈಕವಚನಸ್ಯ ಇದುದೇತಃ), ಉದಾ. ಉಡಿ 'ಕತ್ತರಿಸು', ಕಡಿ, ಕೂಡು 'ಸೇರಿಸು', ಮಾಡು, ನೋಡು. ಆದರೆ, ಈ ಆದೇಶಗಳು ಪ್ರಾಯಃ ಲೋಪಿಸುತ್ತವೆ (ಲ.೨೫ ಪ್ರಾಯೋ ಲೋಪಶ್ಚ), ಉದಾ. ನಿಲ್ 'ನಿಲ್ಲು', ಪೇಳ್ 'ಹೇಳು', ಬೈಯ್, ಕೇಳ್ 'ಕೇಳು'. ಇ, ಉ, ಏ ಆದೇಶಗಳು ಕ್ರಿಯೆಯು ಆವೃತ್ತಿಯಾದಾಗ ಸಹ ಆಗುತ್ತವೆ (ಲ.೨೬ ಕ್ರಿಯಾಸಮಭಿಹಾರೇ ಚ), ಉದಾ. ಕುಡಿ ಕುಡಿಯೆಂದು ಕುಡಿಸಿದರ್, ಕೊಡು ಕೊಡು ಎಂದು ಕೊಡಿಸಿದರ್. ಕೆಲವೊಮ್ಮೆ ಈ ಆವೃತ್ತಿಯು ಲೋಪಿಸುತ್ತದೆ, ಉದಾ. ನಿಲ್, ಕೇಳ್. ಮಧ್ಯಮ ಪುರುಷ ದ್ವಿವಚನ ಮತ್ತು ಬಹುವಚನದಲ್ಲಿ, ಆದೇಶವು ಇಮ್ (ಲ.೨೭ ದ್ವಿತ್ವ ಬಹುತ್ವಯೋರ್ ಇಮ್), ಉದಾ. ನುಡಿಂ 'ಹೇಳು', ನೋಡಿಂ 'ನೋಡು', ಇರಿಸಿಮ್ 'ಇಡು'.

ಆಶೀರರ್ಥಕ ಹಾಗೂ ವಿಧ್ಯರ್ಥಕ ಮಧ್ಯಮ ಮತ್ತು ಪ್ರಥಮ ಪುರುಷದ ದ್ವಿವಚನ ಬಹುವಚನಗಳಲ್ಲಿ ಅಮ್ ಎನ್ನುವುದು ಆದೇಶವಾಗುತ್ತದೆ (ಲ.೨೮ ಅಮ್ ಉತ್ತಮಸ್ಯೈಕವಚನಾದ್ ಅನ್ಯತ್ರ), ಉದಾ. ಮಾಳ್ಪಂ, ಮಾಡುವಂ, ಪೋಪಂ, ಬಪ್ಪಂ. ಈ ಸೂತ್ರದ ವೃತ್ತಿಯಲ್ಲಿ ಆದಿ ಎಂಬ ಶಬ್ದವನ್ನು ಉಪಯೋಗಿಸಿರುವುದರಿಂದ ನಿಮಂತ್ರಣ 'ಆವಾಹಿಸುವುದು', ಆಮಂತ್ರಣ 'ಕರೆಯುವುದು', ಅನ್ವೇಷಣ 'ಹುಡುಕುವುದು', ಸಂಪ್ರಶ್ನ, ಪ್ರಾರ್ಥನಾ ಎಂಬುವುಗಳನ್ನೂ ಸೇರಿಸಿಕೊಳ್ಳಬೇಕೆಂದು ಅರ್ಥವಾಗುತ್ತದೆ. ಹೇತುವಿನ ಸಂದರ್ಭದಲ್ಲಿ ಇಸು ಎಂಬ ಆದೇಶವು ಧಾತುವಿನ ನಂತರ ಸೇರಿಸಲ್ಪಡುತ್ತದೆ (ಲ.೨೯ ಹೇತಾವಿಸುಃ), ಉದಾ. ಮಾಡಿಸಿದಂ

'ಮಾಡಿಸಿದನು', ಪಾಡಿಸಿದಂ 'ಹಾಡಿಸಿದನು', ಬಡಿಸಿದಂ. ವ್ಯಾಪಾರ ಮೊದಲಾದ ಅರ್ಥದ ಧಾತುವಿನ ನಂತರ ಅಲ್ ಎಂಬ ಆದೇಶ ಬರುತ್ತದೆ (ಲ.೩೦ ಕ್ರಿಯಾಯಾಂ ಕ್ರಿಯಾರ್ಥಾಯಾಂ ಅಲ್), ಉದಾ. ಮಾಡಲ್ ಬಗೆದಂ 'ಮಾಡಬೇಕೆಂದು ಬಗೆದನು', ಪಾಡಲ್ ತೊಡಗಿದಂ 'ಹಾಡಲು ಆರಂಭಿಸಿದನು'. ನಞ್ ಅರ್ಥದ ಧಾತುಗಳ ಮುಂದೆ ಸಹ ಅಲ್ ಉಪಯೋಗವಾಗುತ್ತದೆ (ಲ.೩೧ ಪ್ರತಿಷೇಧೇ ಚ), ಉದಾ. ಪೊಗಳ್ಬಾರದು 'ಹೊಗಳಬಾರದು', ನೋಡಲಾಗದು. ಕೆಲವೊಮ್ಮೆ, ಅಲ್ ಲೋಪಿಸುತ್ತದೆ (ಲ.೩೨ ಸಂಗತಾಂತರೇ ಬಹುಳಂ ಅಲ್ ಲೋಪಃ), ಉದಾ. ಸಂದಿಪುದಲ್ಲಂ. ಪ್ರತಿಷೇಧದಲ್ಲಿ ಮಾತ್ರ ನುಡಿಯಲ್ ಬಾರದು ಅಥವಾ ನುಡಿಯಬಾರದು ಎಂಬ ರೂಪಭೇದಗಳಿವೆ.

ವರ್ತಮಾನದಲ್ಲಿ ಉತ್ತಮ್ ಅಥವಾ ಉತಮ್ ಎಂಬ ಆದೇಶಗಳು ಅಂತ್ಯದಲ್ಲಿ ಸೇರುತ್ತವೆ (ಲ.೩೩ ಉತ್ತಂ ಉತಂ ತದಂತೇ), ಉದಾ. ಕೆದರುತ್ತಂ/ಕೆದರುತಂ 'ಹರಡುತ್ತಾ', ಮಾಡುತ್ತಂ/ಮಾಡುತಂ 'ಮಾಡುತ್ತಾ'. ಧಾತುವಿಗೆ ವ್ಯಂಜನಾದಿ ಶಬ್ದಗಳು ಪರವಾದರೆ, ಭೂತಕಾಲದಲ್ಲಿ ಇತ್ ಮತ್ತು ಉತ್ ಎಂದು ಆದೇಶಗಳು ಆಗುತ್ತವೆ (ಲ.೩೪ ಪೂರ್ವಕಾಲಕ್ರಿಯಾಯಾಂ ಇದುತೌ ಯಥಾಲಕ್ಷ್ಯಂ), ಉದಾ. ನೋಡಿ ಪೋದಂ 'ನೋಡಿ ಹೋದನು', ಕಂಡು ನಿಂದಂ 'ನೋಡಿ ನಿಂತನು'.

ಧಾತುಗಳ ಉಪಾಂತ್ಯ ಇ ಮತ್ತು ಉ ಪ್ರಾಯಃ ಏ ಮತ್ತು ಓ ಎಂದಾಗುತ್ತವೆ (ಲ.೩೫ ಧಾತೋರ್ ಇದುತೋರ್ ಉಪಾಂತ್ಯಯೋರ್ ಏದೋತೌ ಪ್ರಾಯಃ), ಉದಾ. ಕಿಡ್ -> ಕೆಟ್ಟಂ 'ನಶಿಸಿದನು', ಕುಡು -> ಕೊಟ್ಟಂ 'ಕೊಟ್ಟನು'. ಸೂತ್ರದಲ್ಲಿ ಪ್ರಾಯಃ ಎಂದಿರುವುದರಿಂದ ಕೆಲವು ಸಂದರ್ಭಗಳಲ್ಲಿ ಏ/ಓ ಎಂಬ ಮಾರ್ಪು ಆಗದಿರಬಹುದೆಂದು ಸೂಚಿಸಿದಂತಾಯಿತು, ಉದಾ. ಬಿಡು -> ಬಿಟ್ಟಂ, ಸುಡು -> ಸುಟ್ಟಂ. ಆಗಮರಹಿತ ವಿಭಕ್ತಿ ಪ್ರತ್ಯಯಗಳು ಪರವಾದರೆ, ಧಾತುಗಳಲ್ಲಿನ ಹ್ರಸ್ವ ಅ-ಕಾರವು ದೀರ್ಘವಾಗುತ್ತದೆ (ಲ.೩೬ ಅತೋ ದೀರ್ಘೋ'ನಾಗಮೇಷು), ಉದಾ. ಬರ್ -> ಬಾರಮ್ 'ಬರುವುದಿಲ್ಲ', ಬಾರಳ್; ತರ್ -> ತಾರಮ್ 'ತರುವುದಿಲ್ಲ', ತಾರಳ್. ವ್ಯಂಜನಾದಿ ಧಾತುಗಳಲ್ಲಿನ ವರ್ಗ ತೃತೀಯ ವ್ಯಂಜನವು ವರ್ಗ ಪ್ರಥಮ ವ್ಯಂಜನವಾಗಿ ಮಾರ್ಪಡುತ್ತದೆ (ಲ.೩೭ ತೃತೀಯಾನಾಂ ವ್ಯಂಜನಾದೌ ಪ್ರಥಮತ್ವಂ), ಉದಾ. ಪೊಗು 'ಪ್ರವೇಶಿಸು' -> ಪೊಕ್ಕಂ, ನೆಡು -> ನೆಟ್ಟಂ. ಅದೇ ಸಂದರ್ಭಗಳಲ್ಲಿ ವ್ಯಂಜನಾದಿ ಧಾತುಗಳ [ರ್] ಮತ್ತು [ಡ್} ಗಳ ಸ್ಥಾನದಲ್ಲಿ [ತ್] ಮತ್ತು [ಳ್] ಬರುತ್ತವೆ (ಲ.೩೮ ರಡಯೋಸ್ ತಳೌ), ಉದಾ. ಪೆರು 'ಜನ್ಮ ಕೊಡು' -> ಪೆತ್ತಂ, ತೆರು 'ಸಲ್ಲಿಸು' -> ತೆತ್ತಂ, ಮಾಡು -> ಮಾಳ್ಕು 'ಅವನು ಮಾಡಬಹುದು'. ಅದೇ ಪರಿಸರದಲ್ಲಿ ಧಾತುವಿನಲ್ಲಿನ [ವ್]-ಕಾರವು [ಪ್]-ಕಾರವಾಗುತ್ತದೆ (ಲ.೩೯ ವಕಾರಸ್ಯ ಪಃ), ಉದಾ. ತರ್ಪಂ 'ಅವನು ತರುತ್ತಾನೆ',

ಬರ್ಪಂ 'ಅವನು ಬರುತ್ತಾನೆ'. ಆ-ಕಾರಾದಿಯ ಹಾಗೂ ಪೋ ಎಂಬ ಧಾತುವಿನ ಅಂತ್ಯ [ದ್]–ಕಾರವು [ತ್]–ಕಾರ ಪರವಾದಲ್ಲಿ [ಯ್] ಆಗಿ ಮಾರ್ಪಡುತ್ತದೆ (೮.೪೦ ಆಪೋಭ್ಯಾಂ ದಸ್ಯ ತೆ ಯಃ), ಉದಾ. ಆಯ್ತು (ಆದ್ + ತು), ಪೋಯ್ತು. ಹಿಂಸಾ ಮತ್ತು ಗತ್ಯರ್ಥ ಧಾತುಗಳಲ್ಲಿನ [ಲ್]–ಕಾರವು ವ್ಯಂಜನವೊಂದು ಪರವಾದಲ್ಲಿ, [ನ್]–ಕಾರವಾಗಿ ಬದಲಾಯಿಸುತ್ತದೆ (೮.೪೧ ಹಿಂಸಾ ಗತ್ಯರ್ಥಾತ್ ಲೋ ನಃ), ಉದಾ. ಕೊಂದಂ 'ಕೊಂದನು' (ಕೊಲ್ + ದಮ್), ಸಂದಂ 'ತಲಪಿದನು'. ಆದರೆ, ನಿಲ್ಲು ಎಂಬರ್ಥದ ಧಾತುವಿನ [ಲ್]–ಕಾರವು ಐಚ್ಛಿಕವಾಗಿ [ನ್]–ಕಾರವಾಗುತ್ತದೆ (೮.೪೨ ವಾ ಸ್ಥಿತ್ಯರ್ಥಕಸ್ಯ), ಉದಾ. ನಿಂದಂ/ನಿಲ್ಲಂ 'ನಿಂತನು'.

'ತರುವುದು' ಮತ್ತು 'ಬರುವುದು' ಎಂಬರ್ಥದ ಧಾತುಗಳ [ರ್]–ಕಾರವು [ನ್]–ಕಾರವಾಗುತ್ತದೆ (೮.೪೩ ಆನಯನಾಗಮಾರ್ಥೇ ವರ್ತಿನೋ ರೇಫಸ್ಯ), ಉದಾ. ತಂದಂ 'ಅವನು ತಂದನು'. ಎನ್ 'ಹೇಳು' ಎಂಬ ಧಾತುವಿನ [ನ್]–ಕಾರ [ಚ್]–ಕಾರವಾಗುತ್ತದೆ (೮.೪೪ ನಸ್ಯ ಚಃ), ಉದಾ. ಎಚ್ಚಂ 'ಅವನು ಹೇಳಿದನು', ಎಚ್ಚರ್ 'ಅವರು ಹೇಳಿದರು'. ಮೃತಿ 'ಸಾವು' ಮತ್ತು ದಾನ 'ಕೊಡುವುದು' ಎಂಬರ್ಥದ ಧಾತುಗಳ ಅಂತ್ಯಾಕ್ಷರವು [ತ್]–ಕಾರವಾಗುತ್ತದೆ, ಹಾಗೂ ಅದರ ಹಿಂದಿನ ಸ್ವರವು ಹ್ರಸ್ವವಾಗುತ್ತದೆ (೮.೪೫ ಮೃತಿದಾನಾರ್ಥಯೋರ್ ಅಂತೇ ತೋ ಹ್ರಸ್ವಶ್ಚ), ಉದಾ. ಸತ್ತಂ 'ಅವನು ಮರಣಿಸಿದನು', ಪೆತ್ತಂ 'ಜನ್ಮ ಕೊಟ್ಟನು'. ಉಳಿದ ಧಾತುಗಳಲ್ಲಿನ ತ್–ಕಾರವು ಬದಲಾಗುವುದೂ ಇಲ್ಲ ಮತ್ತು ಅದರ ಹಿಂದಿನ ಸ್ವರವೂ ಬದಲಾಗುವುದಿಲ್ಲ, ಉದಾ. ಆಳ್ದಂ 'ಶಾಸನಮಾಡಿದನು', ಬಾಳ್ದಂ 'ಬದುಕಿದನು'.

ಮೂರ್ಧನ್ಯ ವ್ಯಂಜನದೊಂದಿಗೆ ಸಹಯೋಗ ಹೊಂದಿದ ದಂತ್ಯ ವ್ಯಂಜನವು ಮೂರ್ಧನ್ಯ ವ್ಯಂಜನವಾಗುತ್ತದೆ (೮.೪೬ ತೋಷ್ಟುನಾ ಟುಃ; ಹೋ. ಅಷ್ಟಾ. ೮.೪.೪೧ ಷ್ಟುನಾ ಷ್ಟುಃ, ೪೦ ಸ್ತೋಃ..), ಉದಾ. ಉಣ್ಡಂ 'ಅವನು ತಿಂದನು'. ಇಲ್ಲಿ ಅನುನಾಸಿಕವನ್ನಾಗಲಿ (ಉಣ್ಡಂ), ಅನುಸ್ವಾರವನ್ನಾಗಲಿ (ಉಂಡಂ) ಉಪಯೋಗಿಸಬಹುದು. ವರ್ಗ ಪ್ರಥಮ ವ್ಯಂಜನದ (ಕ್, ಚ್, ಟ್, ತ್, ಪ್) ಮುಂದೆ ಬರುವ ದಂತ್ಯ [ದ್]–ಕಾರವು ಪೂರ್ವವ್ಯಂಜನದ ರೂಪವನ್ನು ಪಡೆಯುತ್ತದೆ (೮.೪೭ ಕಚಟತಪೇಭ್ಯೋ ದಸ್ಯ ಪೂರ್ವರೂಪಂ), ಉದಾ. ಪೊಕ್ಕಂ 'ಪ್ರವೇಶಿಸಿದನು', ಪೆಚ್ಚಮ್ 'ಜನ್ಮ ಕೊಟ್ಟನು', ಬಿಟ್ಟಂ 'ಹೊರಟನು', ತೋರ್ಪಂ 'ತೋರಿಸುತ್ತಾನೆ', ಬರ್ಪಂ 'ಬರುತ್ತಾನೆ'. [ಲ್] ಮತ್ತು [ಳ್] ಮುಂದಿನ [ದ್]–ಕಾರವು ಐಚ್ಛಿಕವಾಗಿ [ತ್]–ಕಾರವಾಗುತ್ತದೆ (೮.೪೮ ಲಳಕಾರಾಭ್ಯಾಂ ದಸ್ಯ ತೋ ವಾ), ಉದಾ. ಸೋಲ್ತಂ 'ಸೋತನು', ಕಲ್ತಂ 'ಕಲಿತನು'. ಕೆಲವೊಮ್ಮೆ, ಈ ಮಾರ್ಪು ಆಗುವುದಿಲ್ಲ, ಉದಾ. ಪೋಲ್ದಂ (ಅವನಂತೆ) ಕಂಡನು', ಬಳಲ್ದಂ 'ಆಯಾಸಗೊಂಡನು'.

ಕಡೆಯ ಎರಡು ಸೂತ್ರಗಳು ಆಖ್ಯಾತಕ್ಕೆ ಸಂಬಂಧಿಸಿದ ಯಾವುದೇ ವಿಷಯವನ್ನು ತಿಳಿಸುವುದಿಲ್ಲ (೮.೪೯ ಅಭಿಧಾನತೋ ವ್ಯವಸ್ಥಿತಾ ಸಿದ್ಧಿಃ 'ವಿವರಿಸಿದ್ದರಿಂದ ಸಿದ್ಧಿಯು ದೃಢವಾಯಿತು'), (೮.೫೦ ತತಶ್ಚೋದಾಹೃತಂ 'ಆದ್ದರಿಂದ ಸರಿಯಾದ ಉದಾಹರಣೆಗಳನ್ನು ನೀಡಲಾಯಿತು'.

ಪಾಣಿನಿ ಹಾಗೂ ಶರ್ವವರ್ಮನು ತಮ್ಮತಮ್ಮ ವ್ಯಾಕರಣಗಳಲ್ಲಿ ಧಾತುಪಾಠ 'ಧಾತುಗಳ ಪಟ್ಟಿ'ವನ್ನು ಪ್ರತ್ಯೇಕವಾಗಿ ಸೇರಿಸಿರುವಂತೆ ನಾಗವರ್ಮನು ಕನ್ನಡಕ್ಕೆ ಒಂದು ಧಾತುಪಾಠವನ್ನು ಕೊಟ್ಟಿಲ್ಲ. ಹಾಗಾಗಿ ಕನ್ನಡದಲ್ಲಿ ಇರುವ ಧಾತುಗಳ ಒಟ್ಟು ಸಂಖ್ಯೆ ತಿಳಿಯುವುದಿಲ್ಲ. ಅದರಂತೆಯೇ, ಗಣಪಾಠ 'ನಾಮಗಳ ಪಟ್ಟಿ' ಯನ್ನು ಸಹ ನಾಗವರ್ಮನು ಹೇಳಿಲ್ಲ. ಧಾತುಗಳಲ್ಲಿನ ಕೆಲವು ವರ್ಣಗಳಲ್ಲಾಗುವ ಹಾಗೂ ಕೆಲವರ್ಥದ ಧಾತುಗಳಲ್ಲಾಗುವ ಬದಲಾವಣೆಗಳನ್ನು ಹೇಳಿದ್ದಾನೆ. ಪ್ರತಿಸೂತ್ರದ ಕೆಳಗೆ ನೀಡಿರುವ ಉದಾಹರಣೆಗಳಿಂದ ಪಾಕ್ಷಿಕ ಧಾತುಗಳ ಪಟ್ಟಿಯನ್ನು ಮಾತ್ರ ಮಾಡಲು ಸಾಧ್ಯ. ಉದಾಹರಣೆಗಳು ಪ್ರಾಯಃ ಪ್ರಥಮ ಪುರುಷ ಏಕವಚನದಲ್ಲಿವೆ.

೯. ಅವ್ಯಯ

ಈವಿಧಾನದಲ್ಲಿ ಅವ್ಯಯವನ್ನು ೧೮ ಸೂತ್ರಗಳಲ್ಲಿ ವಿವರಿಸಿದ್ದಾನೆ. ವಚನ ಮತ್ತು ವಿಭಕ್ತಿಭೇದವನ್ನು ತೋರಿಸದ ಪದವನ್ನು ಅವ್ಯಯ ಎಂದಿದ್ದಾನೆ (೯.೧ ಅಸಂಖ್ಯಂ ಅವ್ಯಯಂ ಎಂಬ ಸೂತ್ರದ ವೃತ್ತಿಯಲ್ಲಿ). ಅತಿಯಾಗಿ ಎನ್ನುವುದನ್ನು ಸೂಚಿಸಲು ಆದಮ್ (೯.೨.ಆದಂ ಅತ್ಯರ್ಥೇ), ಉದಾ. ಆದಂ ಅಪ್ಪಿದಂ 'ಬಿಗಿಯಾಗಿ ತಬ್ಬಿದನು'. ಏಗಂ ನಿಶ್ಚಯವನ್ನು ಸೂಚಿಸುತ್ತದೆ (೯.೩ ಏಗಂ ವಿನಿಶ್ಚಯಾರ್ಥೇ), ಉದಾ. ಅಂತೇ ಏಗಂ 'ಅದು ನಿಶ್ಚಿತ'. ಪೃಚ್ಛಾ 'ಕೇಳುವುದು', ವಿತರ್ಕ, ಅವಧಾರಣ, ಮತ್ತು ನಿವಾರಣ ಎಂಬರ್ಥಗಳನ್ನು ಹುಂ ಎಂಬ ಅವ್ಯಯ ಸೂಚಿಸುತ್ತದೆ (೯.೪ ಹುಂ ಪೃಚ್ಛಾ ವಿತರ್ಕಾವಧಾರಣ ನಿವಾರಣೇಷು), ಉದಾ. ಹುಂ ಅದೆಂತೆಂದು ಸಾಲ್ಗುಂ 'ಅದು ಹೇಗೆಂದು ಯೋಚಿಸಿದ್ದು ಸಾಕು', ಹುಂ ಆತನೇ. ತಿರಸ್ಕಾರಾರ್ಥಕ್ಕೆ ಚಿಃ (೯.೫ ಚಿಃ ಕುತ್ಸನೇ), ಉದಾ. ಚಿಃ ಪೊಲ್ಲ ಕೆಯ್ದಂ 'ಎಂಥ ದುಷ್ಕೃತ್ಯ ಮಾಡಿದನು?', ಚಿಃ ಕಷ್ಟಂ. ಕಂಠವನ್ನು ಸರಿಪಡಿಸಿಕೊಳ್ಳುವಾಗಿನ ಒಂದು ಕ್ಷಣದ ತಡೆಯನ್ನು ಮತ್ತೆ ಎಂಬ ಅವ್ಯಯ ಸೂಚಿಸುತ್ತದೆ (೯.೬ ಮತ್ತೆ ಶಬ್ದಃ ಕಂಠ ಸಮೀಕೃತೌ), ಉದಾ. ಮತ್ತದೆಂತು 'ಅದು ಹೇಗೆ?', ಮತ್ತೆ ಮಗುಳ್ದು 'ಇನ್ನೊಮ್ಮೆ'. ಅತಿ ಹೆಚ್ಚು ಎಂದು ಸೂಚಿಸಲು ಅಮಮ ಎಂಬ ಅವ್ಯಯ (೯.೭ ಅಮಮಾತ್ಯರ್ಥೇ), ಉದಾ. ಅಮಮ. ಸರಿ ಎಂಬರ್ಥದಲ್ಲಿ ಕೆನ್ನಂ (೯.೮ ಕೆನ್ನಂ ತತ್ಸಾಖ್ಯಾನೇ), ಉದಾ. ಕೆನ್ನಂ ಎನಗೆ 'ನಿಜವಾಗಿ ನನಗೆ'. ಓಲ್ ಎಂಬುದು ಸಾದೃಶ್ಯವನ್ನು ಸೂಚಿಸುತ್ತದೆ (೯.೯ ಓಲ್ ಇವಾರ್ಥೇ), ಉದಾ. ಗಿರಿವೋಲ್ 'ಬೆಟ್ಟದಂತೆ', ಅವಂಬೋಲ್ 'ಅವನಂತೆ'. ಕೆಲವೊಮ್ಮೆ ಓಲ್ ಹ್ರಸ್ವರೂಪದಲ್ಲಿ ಕೂಡ ಕಂಡುಬರುತ್ತದೆ (೯.೧೦ ಹ್ರಸ್ವೋ'ಪಿ), ಉದಾ. ಹರಿವೊಲ್, ಗುರುವೊಲ್. ಐಚ್ಛಿಕ ಎಂಬುದನ್ನು ಸೂಚಿಸುವ ಅವ್ಯಯ ಮೇಣ್ (೯.೧೧ ಮೇಣ್ ವಿಕಲ್ಪೇ), ಉದಾ.

ಅದು ಮೇಣ್ 'ಅದಾದರೂ ಸರಿ', ಅವಂ ಮೇಣ್. ವೇರಮ್ ಮತ್ತು ವಲಮ್ ಎಂಬ ಅವ್ಯಯಗಳು ಸ್ಪಷ್ಟತೆಯನ್ನು ಸೂಚಿಸುತ್ತವೆ (೯.೧೨ ವೇರಂ ವಲಂ ವಿಸ್ಪಷ್ಟಾರ್ಥೇ) ಉದಾ. ಅದು ವೇರಂ, ಇದು ವಲಂ. ವಾರ್ತೆ ಮತ್ತು ಸಂಭಾಷಣೆ ಎನ್ನುವ ಅರ್ಥವನ್ನು ಗಡ ಮತ್ತು ಗಳ ಎಂಬ ಎರಡು ಅವ್ಯಯ ಸೂಚಿಸುತ್ತವೆ (೯.೧೩ ಗಡ ಗಳ ವಾರ್ತಾ ಸಂಭಾಷಣಯೋಃ), ಉದಾ. ಎಂತು ಗಡ 'ಅದು ಹೇಗೆ?', ಎಂತು ಗಳ. ಅಮ್ ಮತ್ತು ಉಮ್ ಎಂಬ ಅವ್ಯಯ ಒಟ್ಟು ಎಂಬರ್ಥವನ್ನು ಸೂಚಿಸುತ್ತವೆ (೯.೧೪ ಅಮ್ ಉಮ್ ಸಮುಚ್ಚಯೇ), ಉದಾ. ತನ್ನೊಳಂ 'ತನ್ನಲ್ಲಿಯೇ', ಆಕೆಗಂ 'ಅವಳೂ ಸಹ', ಅತನುಂ 'ಅವನೂ ಕೂಡ'. ವಿಷಾದವನ್ನು ಸೂಚಿಸಲು ಅಕಟ ಎಂಬ ಅವ್ಯಯ (೯.೧೫ ಅಕಟ ಶಬ್ದೋ ವಿಷಾದಾರ್ಥೇ ವರ್ತತೇ), ಉದಾ. ಅಯ್ಯೋ ಅಕಟ 'ಎಂಥ ದುರದೃಷ್ಟ!'. ಈ ಸೂತ್ರದಲ್ಲಿ ಸೇರಿಸಿರುವ ವರ್ತತೇ ಎಂಬ ಕ್ರಿಯಾರೂಪ ಅನಿವಾರ್ಯವಲ್ಲ, ಕಾರಣ, ಕ್ರಿಯಾಪದ ಇಲ್ಲದಿರುವುದೇ ಸೂತ್ರದ ಲಕ್ಷಣ. ಹಾಗಾಗಿ, ಇದೊಂದು ಅಪವಾದ.

ತೊಟ್ಟನೇ ಎಂಬ ಅವ್ಯಯದ ಅರ್ಥ ಆಕಸ್ಮಿಕ (೯.೧೬ ತೊಟ್ಟನೇ ಆಕಸ್ಮಿಕೇ), ಉದಾ. ತೊಟ್ಟನೇ ಬಂದಂ 'ಅಕಸ್ಮಾತ್ತಾಗಿ ಬಂದನು'. ಸ್ಪಷ್ಟವಾಗಿ ಎಂಬರ್ಥ ಸೂಚಿಸಲು ನೆಟ್ಟನೇ ಎಂಬ ಅವ್ಯಯ (೯.೧೭ ನೆಟ್ಟನೇ ಪರಿಸ್ಫುಟಾರ್ಥೇ), ಉದಾ. ನೆಟ್ಟನೇ ಆದಂ 'ಅವನಿಗೆ ಸರಿಯಾಯಿತು'. ಕಾವ್ಯದಲ್ಲಿ ಅಲಂಕಾರವೊಂದನ್ನು ಸೂಚಿಸಲು ಅಥವಾ ಕೆಲವೊಮ್ಮೆ ಪಂಕ್ತಿಪೂರ್ತಿಗಾಗಿ ವಲ್ ಎಂಬ ಅವ್ಯಯದ ಉಪಯೋಗವಾಗುತ್ತದೆ (೯.೧೮ ವಲ್ ವಾಕ್ಯಾಲಂಕಾರ ಪಾದಪೂರಣಾದ್ ಉಪರಿ), ಉದಾ. ಇದುವಲ್ ಮನುಷ್ಯನಿದ್ದ ಮರವಲ್ತು 'ಇವನೊಬ್ಬ ಮನುಷ್ಯ, ಮರವಲ್ಲ', ತಾಮ್ವಲ್ ವೇಳ್ಗುಂ 'ಅವರು ಮಾಡಿದಂತೆ ಮಾಡಬೇಕು', ಅದುವಲ್ ನಿಶ್ಚಯಂ 'ಅದು ನಿಶ್ಚಯ', ಕರಮ್ವಲ್ ಚೋದ್ಯಂ 'ಅದು ಆಶ್ಚರ್ಯಕರ'.

ನಾಗವರ್ಮನು ತನ್ನ ಕಾಲದ ಕನ್ನಡದಲ್ಲಿ ೧೭ ಅವ್ಯಯಗಳನ್ನು ಲೆಕ್ಕಿಸಿದ್ದಾನೆ. ಕೆಲವು ಒಂದು ಇನ್ನೊಂದರ ರೂಪಾಂತರ ಎನಿಸುತ್ತದೆ. ಒಲ್ ಎಂಬುದು ಓಲ್ ಎಂಬುದರ ರೂಪಾಂತರವಿರಬಹುದು; ಹಾಗೆಯೇ, ಗಳ ಮತ್ತು ಗಡ, ಉಮ್ ಮತ್ತು ಅಮ್ ಪರಸ್ಪರ ರೂಪಾಂತರ ಎನ್ನಬಹುದು. ನಾಗವರ್ಮನಾದರೋ ಅವುಗಳನ್ನು ಬೇರೆಯೆಂದೇ ಗಣಿಸಿದ್ದಾನೆ. ಸಂಸ್ಕೃತದಲ್ಲಾದರೋ ಸ್ವರಾದಯಃ ಎಂಬ ಗಣದಲ್ಲಿ ೮೦ ಅವ್ಯಯಗಳನ್ನು ಹೇಳಿ ಅದೊಂದು ಆಕೃತಿಗಣ ಎಂದು ಹೇಳಿದೆ. ಕನ್ನಡದಲ್ಲಿ ಕೇವಲ ೧೭ ಅವ್ಯಯಗಳಿವೆ.

೧೦. ನಿಪಾತ

ನಾಗವರ್ಮನು ೧೪ ಸೂತ್ರಗಳಲ್ಲಿ ನಿಪಾತಗಳನ್ನು ಚರ್ಚಿಸಿದ್ದಾನೆ. ಅವ್ಯಯದಂತೆಯೇ ನಿಪಾತವನ್ನೂ ವ್ಯಾಖ್ಯಾನಿಸಿಲ್ಲ. ಮೊದಲನೆಯ ಸೂತ್ರದಲ್ಲಿ 'ಇಲ್ಲಿಂದ ಮುಂದೆ ನಿಪಾತವನ್ನು ಕುರಿತು ಹೇಳಲಾಗುತ್ತದೆ' (೧೦.೧ ಅತ ಊರ್ಧ್ವಂ ನಿಪಾತಃ ಪ್ರವಕ್ಷ್ಯತೇ) ಎಂದು ಪ್ರಾರಂಭಿಸಿದ್ದಾನೆ. ಪಾಣಿನಿಯಂತೆ ಇವನೂ

ನಿಪಾತವನ್ನು ಅವ್ಯಯದಲ್ಲಿಯೇ ಸೇರಿಸಬಹುದಿತ್ತು. ಇವೆರಡೂ ಒಂದೇ ರೀತಿಯವು, ಅಂದರೆ ನಾಮದಂತೆ ಇವು ಲಿಂಗ, ವಚನ, ವಿಭಕ್ತಿ ಭೇದಗಳನ್ನು ತೋರಿಸದೆ ಒಂದೇ ರೂಪದಲ್ಲಿರುತ್ತವೆ.

ಒಪ್ಪಿಗೆಯನ್ನು ಸೂಚಿಸಲು ಏ ಎಂಬ ನಿಪಾತ ವಾಕ್ಯದಲ್ಲಿ ಉಪಯೋಗವಾಗುತ್ತದೆ (೧೦.೨ ಏ ಇತ್ಯಭ್ಯುಪಗಮೇ), ಉದಾ. ಏ ಅದೆಂತುಟೇ 'ಅದು ಹೇಗೆ?'. ಹ್ರಸ್ವ ಎ-ಕಾರವಾದರೆ ದೃಢೀಕರಣ (೧೦.೩ ಎ ಲಘುಶ್ಚೇದ್ ಅವಧಾರಣೇ). ಈಸೂತ್ರದಲ್ಲಿ ನಾಗವರ್ಮನು ಹ್ರಸ್ವ ಎನ್ನದೇ ಲಘು ಎಂದು ಹೇಳಿದ್ದಾನೆ. ಎಲೇ ಎನ್ನುವುದು ಸಂದೇಹ, ಭಾವನೆ, ಆಮಂತ್ರಣ ಎಂಬರ್ಥಗಳನ್ನು ಸೂಚಿಸುತ್ತದೆ (೧೦.೪ ಎಲೇ ವಿತರ್ಕ ನಾಮ ಭಾವನಾಮಂತ್ರಣೇಷು), ಉದಾ. ಎಲೇ ಇದಾವುದು, ಎಲೇ ಅದಕ್ಕು, ಎಲೇ ಅಣ್ಣಾ. ಇದು ಹ್ರಸ್ವರೂಪದಲ್ಲೂ ಕಂಡುಬರುತ್ತದೆ (೧೦.೫ ಹ್ರಸ್ವಾಂತೋ'ಪಿ ಚ), ಉದಾ. ಎಲೆ ಅಣ್ಣಾ. ಅಹ ಎಂಬ ನಿಪಾತ ಹರ್ಷ ಮತ್ತು ಶೋಭನ ಎಂಬರ್ಥವನ್ನು ಸೂಚಿಸುತ್ತದೆ (೧೦.೬ ಅಹ ಸಂಪ್ರಹರ್ಷೆ ಶೋಭನೇ ಚ), ಉದಾ. ಅಹ ಒಳ್ಳಿತಾಯಿತು, ಅಹ ಮಲ್ಲದಾಯಿತು.

ಅಃ ಎನ್ನುವುದು ದುಃಖಸೂಚಕ (೧೦.೭ ಅಃ ದುಃಖಸೂಚಕೇ), ಉದಾ. ಅಃ ಅಃ ವಿಧಾತ್ರೀ 'ಅಯ್ಯೋ ದೈವವೇ'. ವಿವಾದ ಮತ್ತು ಆಶ್ಚರ್ಯ ಸೂಚಿಸಲು ಅಮ್ ಉಪಯೋಗವಾಗುತ್ತದೆ (೧೦.೮ ಅಮ್ ಭೇದವಿಸ್ಮಯಯೋರ್ ದೃಶ್ಯತೇ), ಉದಾ. ಅಮ್ ಪಾತಕವಿಧಿಯೆ ಅಮ್ 'ಎಂಥ ದುರದೃಷ್ಟ'. ಅಃ ಎಂಬುದು ತಿರಸ್ಕಾರವನ್ನು ಸೂಚಿಸುತ್ತದೆ (೧೦.೯ ಅಃ ಅವಜ್ಞಾಯಾಂ), ಉದಾ. ಅಃ ಅದಕ್ಕೆ. ಏಕರೂಪದ ಅಃ ಎರಡು ಶಬ್ದಗಳಿವೆ; ಒಂದು ದುಃಖಸೂಚಕ, ಇನ್ನೊಂದು ತಿರಸ್ಕಾರಸೂಚಕ. ಅಯ್ಯೋ ಎಂಬ ನಿಪಾತ ವಿಷಾದ ಮತ್ತು ಅಪಹಾಸ ಎಂಬರ್ಥಗಳನ್ನು ಸೂಚಿಸುತ್ತದೆ (೧೦.೧೦ ಅಯ್ಯೋ ವಿಷಾದಾಪಹಾಸಯೋಃ), ಉದಾ. ಅಯ್ಯೋ ಅನ್ಯಾಯಂ. ಅನುಕಂಪಾರ್ಥದಲ್ಲೂ ಅಯ್ಯೋ ಕಂಡುಬರುತ್ತದೆ (೧೦.೧೧ ಸ ಏವಾನುಕಂಪಾಯಾಂ ಚ), ಉದಾ. ಅಯ್ಯೋ ಪ್ರಾಣಿ ಬೀಳ್ದಂ 'ಬಡಪ್ರಾಣಿ ಬಿದ್ದುಬಿಟ್ಟ'. ನಿವಾರಿಸು ಎಂಬರ್ಥದಲ್ಲಿ ಓಹೋ ಉಪಯೋಗವಾಗುತ್ತದೆ (೧೦.೧೨ ಓಹೋ ನಿವಾರಣಾರ್ಥೇ), ಉದಾ. ಓಹೋ ಸಾಲ್ಗುಂ 'ಇಷ್ಟು ಸಾಕು', ಓಹೋ ಮಾಣು 'ಅದನ್ನು ಬಿಟ್ಟುಬಿಡು'.

ಕೆಲವು ಸಲ ಮತ್ತು ಕೆಲವೊಮ್ಮೆ ಎಂಬರ್ಥಗಳನ್ನು ಅರೇ ಮತ್ತು ಅರಮೇ ಎಂಬ ನಿಪಾತಗಳು ಸೂಚಿಸುತ್ತವೆ (೧೦.೧೩ ಅರೇ ಅರಮೇ ಕ್ವಚಿತ್ ಕದಾಚಿತ್ ಅರ್ಥಯೋಃ), ಉದಾ. ಅರೆಯುಳಿದಂ, ಅರಮೇ ಯತ್ತಾನುಮೋರ್ಮೆ. ಅಲ್ತೇ ಎಂಬ ನಿಪಾತ ಅನುಮಾನ ಹಾಗೂ ಊಹೆ ಎಂಬರ್ಥಗಳನ್ನು ಸೂಚಿಸುತ್ತದೆ (೧೦.೧೪ ಅಲ್ತೇ ಸಂಪ್ರಶ್ನಾನುಮಾನಯೋಃ), ಉದಾ. ನೀನದಂ ಪೇಳ್ದೆಯಲ್ತೇ 'ನೀನದನ್ನು ಹೇಳಿದೆಯಂತೇ'.

ಏ ಮತ್ತು ಎಲೇ ಎಂಬ ನಿಪಾತಗಳ ಹ್ರಸ್ವರೂಪಗಳೂ ಇವೆ, – ಎ ಮತ್ತು ಎಲೆ. ಅಃ ಎಂಬುದು ಎರಡು ಬೇರೆಬೇರೆ ಅರ್ಥದ ಏಕರೂಪಶಬ್ದ. ಆದ್ದರಿಂದ ಕೇವಲ ೧೧ ನಿಪಾತಗಳನ್ನು ಲೆಕ್ಕಿಸಬಹುದು. ಸೂತ್ರ ೧೦ ಮತ್ತು ೧೧ನ್ನು ಒಂದೇಸೂತ್ರದಲ್ಲಿ ಹೇಳಬಹುದಿತ್ತು. ಇಲ್ಲಿ ನಾಗವರ್ಮ ಕೆಲವು ಸೂತ್ರಗಳಿಗೆ ವೃತ್ತಿಯನ್ನು ಕೊಟ್ಟಿಲ್ಲ. ಅದಕ್ಕಾಗಿ ಅವನು ನೀಡಿರುವ ಸಮಾಧಾನವೆಂದರೆ, ಅವು ಸ್ಪಷ್ಟವೆಂದು; ಆದರೆ, ಅಂತಹದೇ ಇನ್ನು ಕೆಲವು ಸೂತ್ರಗಳಿಗೆ ವೃತ್ತಿಯನ್ನು ಕೊಟ್ಟಿದ್ದಾನೆ.

ನಾಗವರ್ಮನೂ ಕನ್ನಡಕ್ಕೆ ವ್ಯಾಕರಣವನ್ನು ಸಂಸ್ಕೃತದಲ್ಲಿಯೇ ರಚಿಸಿದ್ದಾನೆ ಮತ್ತು ಸೂತ್ರಶೈಲಿಯನ್ನು ಅಳವಡಿಸಿಕೊಂಡಿದ್ದಾನೆ. ಕಾತಂತ್ರಕಾರನು ಅವ್ಯಯದ ಬಗ್ಗೆ ಏನೂ ಹೇಳಿಲ್ಲವಾಗಿ, ನಾಗವರ್ಮನು ಪಾಣಿನಿಯನ್ನು ಇಲ್ಲಿ ಅನುಸರಿಸಿದ್ದಾನೆ ಎನ್ನಬಹುದು. ಪಾಣಿನಿಯಂತೆ ನಾಗವರ್ಮನೂ ಸೂತ್ರಗಳಿಗೆ ತನ್ನದೇ ಆದ ವೃತ್ತಿಯೊಂದನ್ನು ಸೇರಿಸಿದ್ದಾನೆ. ಕನ್ನಡ ದ್ರಾವಿಡ ಪರಿವಾರಕ್ಕೆ ಸೇರಿದ ಭಾಷೆಯಾದ್ದರಿಂದ ಇದರಲ್ಲಿ ಕಂಡುಬರುವ ಅವ್ಯಯಗಳು ಹೆಚ್ಚಾಗಿ ಕನ್ನಡಮೂಲದವೇ ಆಗಿವೆ. ಆದರೂ ಕೆಲವು ಸಂಸ್ಕೃತಮೂಲದ್ದಿರಬಹುದು. ಅವುಗಳಲ್ಲಿ ಮುಖ್ಯವಾದವು ಹುಂ, ಅಮಮ, ಕೆನ್ನಂ, ವೇರಂ ಮತ್ತು ಅಮ್ ಎಂಬ ಅವ್ಯಯಗಳು; ಅಹ, ಅಃ, ಅಯ್ಯೋ, ಅರಮೇ ಎಂಬ ನಿಪಾತಗಳು. ಒಟ್ಟಿನಲ್ಲಿ ಕನ್ನಡದಲ್ಲಿ ಅವ್ಯಯ ಮತ್ತು ನಿಪಾತ ಸೇರಿದರೂ ಪ್ರಾಕೃತದ ಹಾಗೂ ಸಂಸ್ಕೃತದ ಸಂಖ್ಯೆಗಿಂತ ಅತಿ ಕಡಿಮೆ.

ನಾಗವರ್ಮನಂತೆ ನಂತರದ ಕಾಲದಲ್ಲಿ ಭಟ್ಟಾಕಲಂಕನೆಂಬ ವಿದ್ವಾಂಸನು ಕರ್ಣಾಟಕ ಶಬ್ದಾನುಶಾಸನ ಎಂಬ ಇನ್ನೊಂದು ವ್ಯಾಕರಣವನ್ನು ಸಂಸ್ಕೃತದಲ್ಲಿ ಸೂತ್ರಶೈಲಿಯಲ್ಲಿ ರಚಿಸಿದ್ದಾನೆ. ಹಾಗೆಯೇ, ಸೂತ್ರಗಳಿಗೆ ಭಾಷಾ ಮಂಜರಿ ಎಂಬ ಭಾಷ್ಯವನ್ನು ಮತ್ತು ಅದರಮೇಲೆ ವಿಸ್ತೃತವಾದ ಮಂಜರಿ ಮಕರಂದ ಎಂಬ ಇನ್ನೊಂದು ಮಹಾಭಾಷ್ಯವನ್ನೂ ರಚಿಸಿದ್ದಾನೆ. ಅದು ನಾಲ್ಕು ಪಾದಗಳಲ್ಲಿದೆ. ಅವನೂ ನಾಗವರ್ಮನಂತೆ ಜೈನ ಮತದವನು ಮತ್ತು ೧೬ನೆಯ ಶತಮಾನದಲ್ಲಿದ್ದವನು ಎಂದು ತಿಳಿದುಬಂದಿದೆ.

ಆಕರಗ್ರಂಥಗಳು

೧. ನಾಗವರ್ಮನ ಕರ್ಣಾಟಕ ಭಾಷಾಭೂಷಣ, ಎಲ್. ರೈಸ್ (ಸಂ). ಮೈಸೂರು ಸರ್ಕಾರದ ಮುದ್ರಣಾಲಯ. ಬೆಂಗಳೂರು. ೧೮೮೪.

೨. ಶರ್ವವರ್ಮನ ಕಾತಂತ್ರ ಸೂತ್ರಪಾಠ

೩. ಕಾಶಿಕಾ, ವಾಮನ ಮತ್ತು ಜಯಾದಿತ್ಯ (ಸಂ). ಚವ್ಖಂಬಾ ಸಂಸ್ಕೃತ ಸೀರೀಸ್. ಬನಾರಸ್ ಸಿಟಿ. ೧೦೮೭.

◈◈◈◈◈

ದೇವಪ್ಪ ಕವಿಯ ರಾಮ ವಿಜಯ ಕಾವ್ಯ

◈

ಡಾ. ವಿಜಯಾಸುಬ್ಬರಾಜ್

ಪ್ರಪಂಚದಲ್ಲಿ ಶತಕೋಟಿ ರಾಮಾಯಣಗಳು ಇವೆ ಎಂಬುದು ಸಂಶೋಧಕರ ಅಭಿಪ್ರಾಯ. ಒಂದೊಂದು ರಾಮಾಯಣವೂ ಜಾತಿ. ಜನಾಂಗ, ಪ್ರದೇಶ, ಧರ್ಮ, ಸಂಸ್ಕೃತಿಗಳನ್ನು ಆಧರಿಸಿ ರಾಮಾಯಣಗಳು ಒಂದಕ್ಕಿಂತ ಒಂದು ಭಿನ್ನವಾಗಿವೆ. ರಾಮಾಯಣದ ಮೂಲಕತೆ ಒಂದೇ ಆದರೂ, ರಾಮಸೀತೆ, ಲಕ್ಷ್ಮಣರು ಒಂದೇ ಆದರೂ, ಆ ಪಾತ್ರಗಳು, ಸಂಬಂಧಗಳು, ಸಾಹಸಗಳು, ಕರ್ತವ್ಯಗಳು, ರಾಮಾಯಣ ಕವಿಗಳ ಮತೀಯದೃಷ್ಟಿ ದರ್ಶನ ಪ್ರಾದೇಶಿಕತೆ, ಸಂಸ್ಕೃತಿ ಇತ್ಯಾದಿಗಳಿಂದಾಗಿ ಒಂದಕ್ಕಿಂತ ಒಂದು ಭಿನ್ನವಾಗಿವೆ. ದೇಶದ ಭಿನ್ನ ಭಿನ್ನ ಭಾಷೆಗಳಲ್ಲಿಯೇ ವೈವಿಧ್ಯಮಯವಾದ ರಾಮಾಯಣಗಳಿವೆ. ಮುಖ್ಯವಾಗಿ ಭಾರತದಲ್ಲಿಯೇ ವೈದಿಕ ರಾಮಾಯಣಗಳು, ಜೈನರಾಮಾಯಣಗಳು ಮತ್ತು ಬೌದ್ಧರಾಮಾಯಣಗಳು, ಇದ್ದು, ತೌಲನಿಕ ಅಧ್ಯಯನಕ್ಕೆ ಮೌಲಿಕ ಆಕರಗಳಾಗಿ ಲಭ್ಯವಿವೆ.

ಕನ್ನಡ ಸಾಹಿತ್ಯ ಚರಿತ್ರೆಯ ಸಂದರ್ಭಕ್ಕೆ ಬಂದಾಗ, ಈ ಮೊದಲೇ ಹೇಳಿದಂತೆ, ಲಭ್ಯ ಆಧಾರಗಳ ಮೇಲೆ, ಮೂರು ಮೂಲಧಾರೆಗಳು ನಮ್ಮ ಗಮನಕ್ಕೆ ಬರುತ್ತದೆ. ಮುಖ್ಯವಾಗಿ ಸಂಸ್ಕೃತ , ಪ್ರಾಕೃತ ಮತ್ತು ದೇಶೀಭಾಷೆಗಳಲ್ಲಿ 'ರಾಮ ಕಥೆ' ಹಲವು ರೂಪಾಂತರಗಳೊಂದಿಗೆ ಕಾಣಿಸಿಕೊಂಡಿದೆ. ಏನೇ ವೈವಿಧ್ಯತೆ ಮತ್ತು ಭಿನ್ನತೆಗಳು ಇದ್ದರೂ 'ರಾಮ' ಪಾತ್ರವನ್ನು ವಾಲ್ಮೀಕಿ ಮೊದಲ್ಗೊಂಡು, ಎಲ್ಲ ಕವಿಗಳ ಕಾವ್ಯಗಳಲ್ಲಿ ಆದರ್ಶಮಾನವನಾಗಿಯೇ ಚಿತ್ರಿತನಾಗಿದ್ದಾನೆ. ಬೇರೆಲ್ಲ ವಿವರಗಳಲ್ಲಿ ಕವಿಯ ಮನೋಧರ್ಮ. ದೃಷ್ಟಿ, ದರ್ಶನ, ಉದ್ದೇಶಗಳಿಗೆ ಪೂರಕವಾಗಿ, ವಿಶಿಷ್ಟವೂ,

ವಿಚಿತ್ರವೂ ಆದ ರೀತಿಯಲ್ಲಿ ರೂಪಾಂತರಿಸಿ ಕೊಳ್ಳಲಾಗಿದೆ. ಯಾವ ಕವಿಯೇ ಆಗಲಿ ವ್ಯಕ್ತಿಗತ ದೃಷ್ಟಿ, ಧೋರಣೆ ಉದ್ದೇಶಕ್ಕೆ ಅನುಗುಣವಾಗಿ ವಸ್ತು, ಪಾತ್ರ, ಸನ್ನಿವೇಶ, ಸಂದರ್ಭಗಳನ್ನು ಬದಲಾಯಿಸಿ ಕೊಂಡರೂ ಮೂಲ ವಾಲ್ಮೀಕಿ ರಾಮಾಯಣದಿಂದಲೇ ಪ್ರೇರಣೆ. ಪ್ರಚೋದನೆಗಳಿಗೆ ಒಳಗಾಗಿಯೇ. ರಾಮಕಥಾ ಕಾವ್ಯ ರಚನೆಗೆ ಮುಂದಾಗಿರುವುದಂತೂ ಸ್ಪಷ್ಟವಾಗಿದೆ.

ಇಂತಹ ಒಂದು ಹಿನ್ನೆಲೆಯಲ್ಲಿ, ಕನ್ನಡ ಸಾಹಿತ್ಯದಲ್ಲಿ ನಾಗಚಂದ್ರನ ರಾಮಚಂದ್ರ ಚರಿತ ಪುರಾಣವೇ ಮೊಟ್ಟ ಮೊದಲ ರಾಮಾಯಣ ಕೃತಿ ಆಗಿರುವುದೇ ಅಲ್ಲದೆ ಅತ್ಯಂತ ಪರಿಪಕ್ವವೂ ಆಗಿದೆ. ಇವನೇ ಅಲ್ಲದೆ, ಎರಡು ಜೈನರಾಮಾಯಣ ಸಂಪ್ರದಾಯಗಳಲ್ಲಿ, ಕೆಲವರು ವಿಮಲ ಸೂರಿಯ ಸಂಪ್ರದಾಯದಲ್ಲಿ, ಅವನ 'ಪಉಮ ಚರಿಯ' ಹೆಸರಿನ ಪ್ರಾಕೃತದಲ್ಲಿನ ರಾಮಾಯಣದ ಪ್ರಭಾವಕ್ಕೆ ಒಳಗಾಗಿ ಬರೆದರೆ ಮತ್ತೆ ಕೆಲವರು ಗುಣ ಭದ್ರಾಚಾರ್ಯರ ರಾಮಾಯಣ ಸಂಪ್ರದಾಯವನ್ನು ಅನುಸರಿಸಿ ಬರೆದರು. ಸಂಶೋಧನೆಯಿಂದ ತಿಳಿದು ಬಂದಂತೆ ವಿಮಲಸೂರಿ ಕ್ರಿ.ಶ. ೩ನೇ ಶ.ದವನಾದರೆ ಗುಣ ಭದ್ರಾಚಾರ್ಯರು ಕ್ರಿ.ಶ. ೯ ನೇ ಶತಮಾನಕ್ಕೆ ಸೇರಿದವರಾದ್ದರಿಂದ, ವಿಮಲ ಸೂರಿಗಿಂತ ಅವರ ಕೃತಿ ನವೀನವೆನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ವಿಮಲಸೂರಿಗಿಂತ ಮುಂದಿನ ಪೀಳಿಗೆಗೆ ಸೇರಿದ್ದರೂ, ಕಥಾವಸ್ತುವಿನಲ್ಲಿ ಯಾವುದೇ ವಿನೂತನತೆಯಾಗಲೀ, ವೈಶಿಷ್ಟ್ಯವಾಗಲಿ ಇಲ್ಲವಾಗಿದೆ.

ವಿಮಲಸೂರಿಯ ಸಂಪ್ರದಾಯದಲ್ಲಿ, ರವಿಷೇಣ ಸಂಸ್ಕೃತದಲ್ಲಿ ಪದ್ಮ ಪುರಾಣ (ಕ್ರಿ.ಶ. ೬೭೮)ವನ್ನೂ ಹೇಮಚಂದ್ರ, ತ್ರಿ ಷಷ್ಠಿ ಶಲಾಕಾ ಪುರುಷ'ದ ೭ನೇ ಪರ್ವದಲ್ಲಿ ದೇವಗಣಿ ಎಂಬ ಕವಿ 'ರಾಮಚರಿತ' (೧೫೯೬) ಗದ್ಯರೂಪದಲ್ಲಿಯೂ, ನಾಗಚಂದ್ರ (ಕ್ರಿ.ಶ. ೧೨ನೇ ಶ) ರಾಮಚಂದ್ರ ಪುರಾಣವನ್ನೂ, ಕುಮುದೇಂದು(೧೩ನೇ ಶ) ಕವಿಯು 'ರಾಮಾಯಣ' ಎಂಬ ಕೃತಿಯನ್ನೂ, ದೇವಚಂದ್ರ (೧೩ ನೇ ಶ) ರಾಮಕಥಾವತಾರ, ಚಂದ್ರ ಸಾಗರವರ್ಣಿ (೧೯ನೇ.ಶ) ಜಿನರಾಮಾಯಣ ಎಂಬ ಕೃತಿಯನ್ನೂ, ವಿಮಲ ಸೂರಿ ಸಂಪ್ರದಾಯ ಅಥವಾ ಪರಂಪರೆಗೆ ಸೇರಿದೆಯೆಂದು ತೀರ್ಮಾನಿಸಿದ್ದಾರೆ. ಹಾಗೆಯೇ ೧೬ಶತಮಾನದ ದೇವಪ್ಪ ಕವಿಯ 'ರಾಮ ವಿಜಯಕಾವ್ಯ'ವನ್ನೂ ಇದೇ ಪರಂಪರೆಗೆ ಸೇರಿಸುವ ಪ್ರಯತ್ನ ನಡೆದಿದೆಯಾದರೂ, ಕೃತಿಯ ವಸ್ತು, ಶೈಲಿ ಆಶಯ, ಮಾಡಿಕೊಂಡಿರುವ ಬದಲಾವಣೆಗಳ ಆಧಾರದ ಮೇಲೆ, ಗುಣ ಭದ್ರಾಚಾರ್ಯರ ಪರಂಪರೆಯಲ್ಲಿ ರಚಿತವಾದ, ಪುಷ್ಪದಂತನು(ಕ್ರಿ.ಶ. ೯೬೫) ಅಪಭ್ರಂಶದಲ್ಲಿ ಬರೆದ 'ತಿಸಟ್ಟಿ ಮಹಾ ಪುರಿಸ ಗುಣಾಲಂಕಾರ, ಕ್ರಿ.ಶ. ೧೪ನೇ ಶತಮಾನದಲ್ಲಿ ರಾಮಚಂದ್ರ ಮುಮುಕ್ಷು ಸಂಸ್ಕೃತದಲ್ಲಿ ಬರೆದ "ಪುಣ್ಯಾಸ್ರವ ಕಥಾಕೋಶ" ೧೬ನೇ ಶತಮಾನದ ಕೃಷ್ಣ ಕವಿ ಬರೆದ 'ಪುಣ್ಯ ಚಂದ್ರೋದಯ'- ಹೀಗೆ ಇವರೆಲ್ಲರೂ ಬರೆದ ಕೃತಿಗಳು, ವಿಮಲ ಸೂರಿ ಸಂಪ್ರದಾಯಕ್ಕಿಂತ

ಭಿನ್ನವಾಗಿವೆ ಎಂಬುದನ್ನು ಸಾಬೀತು ಪಡಿಸುತ್ತದೆ. ಹಾಗಾಗಿ ದೇವಪ್ಪ ಕವಿಯ ರಾಮವಿಜಯ ಕಾವ್ಯವೂ ತೌಲನಿಕವಾಗಿ ಗಮನಿಸಿದಾಗ ಗುಣಭದ್ರಾಚಾರ್ಯರ ಸಂಪ್ರದಾಯಕ್ಕೆ ಸೇರುತ್ತದೆಯೆಂಬುದನ್ನು ಖಚಿತ ಪಡಿಸಲಾಗಿದೆ. ಎರಡೂ ರಾಮಾಯಣ ಸಂಪ್ರದಾಯಗಳಲ್ಲಿ ಕಾಣುವ ಸಾಮ್ಯತೆಯೆಂದರೆ ೧) ರಾಮಲಕ್ಷ್ಮಣರು ಬಲಚ್ಯುತರು ವಾಲಿಯನ್ನೂ ರಾವಣನನ್ನೂ ವಧೆ ಮಾಡುವವನು ಲಕ್ಷಣ. ಈ ಕೊಲೆಯ ಪಾಪದಿಂದಾಗಿ ಮುಂದೆ ಪಂಕ ಪ್ರಭೆ ಎಂಬ ನರಕವನ್ನು ಸೇರುತ್ತಾನೆ.

೨. ರಾಮ ಶ್ರುತ ಕೇವಲಿಯಾಗುತ್ತಾನೆ."

ಈ ಸಾಮ್ಯತೆಯ ಕೆಲವು ಅಂಶಗಳನ್ನು ಹೊರತುಪಡಿಸಿದರೆ ವ್ಯತ್ಯಾಸಗಳು ಬಹಳಷ್ಟಿವೆ.

ದೇವಪ್ಪ ಕವಿ ತನ್ನ ರಾಮ ವಿಜಯ ಕಾವ್ಯದಲ್ಲಿನ ಕಥಾವಸ್ತುವಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಅವುಗಳನ್ನು ಅನುಕ್ರಮದಲ್ಲಿ ಕೆಳಕಂಡಂತೆ ಪಟ್ಟಿಮಾಡಬಹುದು.

೧. ದಶರಥನಿಗೆ ಹತ್ತು ಸಾವಿರ ಹೆಂಡತಿಯರು. ಅವರಲ್ಲಿ ಪಟ್ಟದರಸಿಯಾಗಿ ಪ್ರಾಮುಖ್ಯತೆ ಪಡೆದಿದ್ದ ಸಬಳಾದೇವಿಯೇ ರಾಮನ ತಾಯಿ. ಆದರೆ ಆಕಸ್ಮಿಕ ದೋಷವೆಂಬಂತೆ, ಒಂದು ಕಡೆಯಲ್ಲಿ, ಲಕ್ಷ್ಮಣನನ್ನು ಸುಮಿತ್ರೆಯ ಮಗನೆಂದು ಪ್ರಸ್ತಾಪಿಸಲಾಗಿದೆ.

೨. ಭರತ ಶತೃಘ್ನರಿಗೆ ಯಾವುದೇ ಪ್ರಾಮುಖ್ಯತೆಯಲ್ಲ.

೩. ದಶರಥ ಭರತನ ತಾಯಿಗೆ ವರಕೊಟ್ಟದ್ದಾಗಲೀ, ಭರತನಿಗೆ ರಾಜ್ಯಾಭಿಷೇಕ ಬೇಕೆಂಬ ಬೇಡಿಕೆಯಾಗಲೀ ವನವಾಸ ಪ್ರಸಂಗವಾಗಲೀ, ಈ ಕಾವ್ಯದಲ್ಲಿ ಇಲ್ಲ.

೪. ರಾವಣ ಸ್ತ್ರೀ ಲಂಪಟ, ಮಾಯಾವಿ: ವಾಲ್ಮೀಕಿ ರಾಮಾಯಣದಲ್ಲಿ ಬರುವ 'ವೇದವತಿ' ಪ್ರಸಂಗ. ರಾವಣ ಅವಳ ತಪಸ್ಸು ಕೆಡಿಸುವ ಪ್ರಯತ್ನ. ಮತ್ತೆ ಅವನಿಗೆ ಮಗಳಾಗಿ ಹುಟ್ಟಿ ಅವನ ವಂಶವನ್ನು ನಾಶಮಾಡುತ್ತೇವೆಂಬ ಪ್ರತಿಜ್ಞೆ ಎಲ್ಲವೂ ಇದೆಯಾದರೂ, ಹೆಸರು ಮಾತ್ರ 'ವೇದವತಿ'ಗೆ ಬದಲಾಗಿ 'ಮಣಿಮತಿ' ಎಂದಿದೆ. ಪ್ರತಿಜ್ಞೆಯಂತೆ, ಈ ಮಣಿಮತಿ, ಮಂಡೋದರಿಗೆ ಮಗಳಾಗಿ ಜನಿಸುವಳಾದರೂ, ಅವಳ ಪ್ರತಿಜ್ಞೆ ನೆನಪಾಗಿ, ಆ ಮಗುವನ್ನು ಮಾರೀಚನು ಒಂದು ಪೆಟ್ಟಿಗೆಯಲ್ಲಿಟ್ಟು, ರಾವಣನ ಆದೇಶದ ಮೇರೆಗೆ, ಮಿಥಿಲೆಯ ಸಮೀಪದ ತೋಟದಲ್ಲಿ ಹೂಳಿಟ್ಟು ಬರುತ್ತಾನೆ. ಇದೇ ಮಗು ಜನಕನಿಗೆ ದೊರೆತು ಸೀತೆ ಹೆಸರಿನಲ್ಲಿ, ಅವಳ ಲಾಲನೆ ಪಾಲನೆಯಾಗುತ್ತದೆ.

೫. ಯಾವ ರಾಮಾಯಣ ಆವೃತ್ತಿಯಲ್ಲಿಯೂ ಕಾಣದಿದ್ದ ಒಂದು ವಿಚಾರವೆಂದರೆ, ರಾಮ-ಲಕ್ಷ್ಮಣರು ಅಯೋಧ್ಯೆಯಲ್ಲಿ ಉಳಿಯದೆ, ತಮ್ಮ ವಂಶದವರು, ಹಿರಿಯರು ಆಳುತ್ತಿದ್ದು, ವಾರಣಾಸಿಯನ್ನು ಕಳೆದು ಕೊಂಡಿದ್ದ ವಿಷಯವನ್ನು ತಿಳಿದು, ಮತ್ತೆ ದಂಡೆತ್ತಿ ಹೋಗಿ, ವಾರಣಾಸಿಯನ್ನು ಗೆದ್ದುಕೊಂಡು ಅಲ್ಲಿಯೇ ಅವರಿಬ್ಬರೂ ಆಳುತ್ತಾ ಉಳಿಯುತ್ತಾರೆ.

೬. ವನವಾಸದ ಪ್ರಶ್ನೆಯೇ ಇಲ್ಲವಾದ್ದರಿಂದ, ಸೀತಾಪಹರಣ ಪ್ರಸಂಗ ಬೇರೆಯಾಗಿಯೇ ಚಿತ್ರಿತವಾಗಿದೆ. ಸೀತಾರಾಮರು ಉದ್ಯಾನದಲ್ಲಿ ವಿಹರಿಸುತ್ತಿದ್ದಾಗ, ಸೀತಾಪಹರಣವಾಗುತ್ತದೆ. ನಾರದರಿಂದ ಬಹಳ ಮೊದಲೆ ಸೀತಾಸೌಂದರ್ಯ ವರ್ಣನೆಯನ್ನು ಕೇಳಿಯೇ, ರಾವಣನು ಸೀತಾಮೋಹಿತನಾಗಿದ್ದವನು. ಅವಕಾಶಕ್ಕಾಗಿ ಕಾಯುತ್ತಿದ್ದು, ಶೂರ್ಪನಖಿಯನ್ನು ಕಳಿಸಿ, ಒಲಿಸಲು ಪ್ರಯತ್ನಿಸುತ್ತಾನೆ. ಆದರೆ ಅದು ವಿಫಲವಾದಾಗ, ಮಾರೀಚನ ಮೂಲಕ 'ಮಣಿಹರಿಣದ' ಆಕರ್ಷಣೆಗೆ ಸೆಳೆಯಲು ಪ್ರಯತ್ನಿಸುತ್ತಾನೆ. ನಿರೀಕ್ಷೆಯಂತೆ, ಆ ಹರಿಣಕ್ಕೆ ಮೋಹಿತಳಾದ ಸೀತೆ, ರಾಮನನ್ನು ಅದರ ಬೆನ್ನಟ್ಟಿ ಹೋಗಿ ತರುವಂತೆ ಕೇಳಿಕೊಂಡಾಗ, ರಾಮ ಸೀತೆಯಿಂದ, ಹರಿಣದ ಬೆನ್ನು ಹತ್ತಿ ದೂರವಾಗುತ್ತಾನೆ. ಈ ಅವಕಾಶವನ್ನು ಉಪಯೋಗಿಸಿಕೊಂಡಾಗ ರಾವಣ. ರಾಮನ ವೇಷದಲ್ಲಿ ಬಂದು ವಂಚಿಸಿ ಅಪಹರಿಸಿಕೊಂಡು ಹೋಗುತ್ತಾನೆ.

೭. ವಾಲಿ ಹನುಮ ಸುಗ್ರೀವಾದಿಗಳು ವಿದ್ಯಾಧರರು, ವಾಲಿ ಸುಗ್ರೀವರು ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯ ಒತ್ತಿನಲ್ಲಿರುವ 'ಕಿಳ ಕಿಳ' ಪಟ್ಟಣದ ಅರಸನಾದ ಬಲೀಂದ್ರ ಮತ್ತು ಸೌಂದರಿ ದಂಪತಿಗಳಿಗೆ ಜನಿಸಿದವರು. ಹನುಮಂತ ಉದ್ಯತ್ಕಾಂತ ನಗರದ ರಾಜನಾದ ಪ್ರಭಂಜನ ಮತ್ತು ಅಂಜನಾದೇವಿ ದಂಪತಿಗಳಿಗೆ ಜನಿಸಿದವನು. ಇವನು ಖೇಚರ ಶಿರೋಮಣಿ, ವಿದ್ಯಾ ಪ್ರದರ್ಶನದಲ್ಲಿ ತನ್ನ ದೇಹವನ್ನು 'ಅಣು' ಮಾತ್ರ ಗಾತ್ರಕ್ಕೆ ಇಳಿಸಿದ್ದರಿಂದ ಅವನಿಗೆ 'ಅಣುವ' ಎಂಬ ಹೆಸರೂ ರೂಢಿಗೆ ಬಂತು. ಶ್ರೀರಾಮನಿಗೆ ಸೇನಾಪತಿಯಾಗಿದ್ದ. ರಾವಣನಲ್ಲಿಗೆ ಸೀತಾ ಶೋಧದ ನೆಪದಲ್ಲಿ ಮೂರು ಬಾರಿ ಭೇಟಿ ಕೊಡುತ್ತಾನೆ. ಮೊದಲು ಸೀತಾನ್ವೇಷಣಕ್ಕೆಂದು, ಎರಡನೆ ಬಾರಿ ಸಂಧಿ ಪ್ರಸ್ತಾಪಕ್ಕೆಂದು ಮತ್ತು ಅಂತಿಮವಾಗಿ ಮೂರನೇ ಬಾರಿ ವನ-ಭಂಗ ಮತ್ತು ಲಂಕಾದಹನ ಮಾಡುತ್ತಾನೆ.

೮. ಅಂಗದ' ನಿಗೆ 'ಅಂಗಜ' ಎಂದೂ, 'ವಾಲಿ'ಯನ್ನು 'ಬಾಲಿ'ಎಂದೂ ಕರೆಯಲಾಗಿದೆ.

೯. ಇಂದಗಿ ಅಥವಾ ಇಂದ್ರಜಿತುವನ್ನು ರಾಮನು ಕೊಲ್ಲುತ್ತಾನೆ.

೧೦. ರಾಮನಿಗೆ ಎಂಟು ಸಾವಿರ ಹೆಂಡಿರಾದರೆ– ಲಕ್ಷ್ಮಣನಿಗೆ ಹೆಂಡಿರು ಹದಿನಾರು ಸಾವಿರ. ರಾಮನಿಗಿಂತ ಲಕ್ಷ್ಮಣನ ಆಯುಸ್ಸು ಕಡಿಮೆ.

೧೧. ಅಣುವ ಅಥವಾ ಹನುಮ ಶ್ರುತಕೇವಲಿಯಾಗುತ್ತಾನೆ. ಈ ವಿವರಗಳನ್ನು ನೋಡಿದರೆ, ಗುಣಭದ್ರಾಚಾರ್ಯ ಪರಂಪರೆಗೆ ಸೇರಿದವನೆಂದು ಗುರುತಿಸಬಹುದಾಗಿದೆ. ಮುಖ್ಯವಾದ ಬದಲಾವಣೆಗಳಿಗೆ ಗುಣಭದ್ರಾಚಾರ್ಯರನ್ನು ಅನುಸರಿಸಿದ್ದರೆ, ಕೆಲವು ಸನ್ನಿವೇಶ ಸಂದರ್ಭ, ಪ್ರಸಂಗಗಳಲ್ಲಿ ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಮಾಡಿರುವುದನ್ನು ವಿದ್ವಾಂಸರು ಗಮನಿಸಿದ್ದಾರೆ. ಇಂತಹ ವ್ಯತ್ಯಾಸಗಳಿಂದಾಗಿ ಕಾವ್ಯದ ಕಥಾ ಹಂದರದಲ್ಲಾಗಲಿ, ಅವನ ಆಶಯಗಳಲ್ಲಾಗಲಿ ಯಾವುದೇ ಮಹತ್ವದ ಏರುಪೇರುಗಳನ್ನು ಮಾಡಿಕೊಂಡಿದ್ದಾನೆಸಿಸುವುದಿಲ್ಲ. ಮಾಡಿಕೊಂಡ ವ್ಯತ್ಯಾಸಗಳೆಂದರೆ, ರಾಮ ಲಕ್ಷ್ಮಣರು ಇವರ (ಅಯೋಧ್ಯಾಪತಿ ದಶರಥನ) ಪೂರ್ವಿಕರು, ರಾಜ್ಯವಾಳಿದ್ದು ವಾರಣಾಸಿಯಲ್ಲಿ (ಉತ್ತರ ಪುರಾಣದಲ್ಲಿ ದಶರಥ ವಾರಣಾಸಿ ಪುರಾಧೀಶ ಎಂದು ವಿವರಿಸಲಾಗಿದೆ.

ಮತ್ತೊಂದು ಬದಲಾವಣೆಯೆಂದರೆ, ಅಣುವ ಸೀತೆಯನ್ನು ಕಂಡು ಹೊಸ ಹೊನ್ನ ಮುದ್ರಿಕೆ ಮತ್ತು ರಾಮಚಂದ್ರನ ಹೆಸರಿನಲ್ಲಿ, ಲೇಖನವನ್ನು ನೀಡುವನು.

ರಾಮ ರಾವಣನ ಮೇಲೆ ದಿಗ್ವಿಜಯವನ್ನು, ಸಾಧಿಸಿ, ಹಿಂತಿರುಗುವಾಗ, 'ಪೀವರ ಗಿರಿ'ಯಲ್ಲಿ 'ಸೀತೆಗೆ' ಅಭಿಷೇಕ ಮಾಡಿಸಿದನೆಂದು ಹೇಳಿದ್ದಾನೆ.

ಜೈನ ಪುರಾಣಗಳಲ್ಲಿ ಸಹಜವಾಗಿ ಮತ್ತು ಪಂಚಕಲ್ಯಾಣಗಳ ವಿವರಣೆ, ಇಲ್ಲಿ ಇವನ ರಾಮ ವಿಜಯ ಕಾವ್ಯದಲ್ಲಿ ಕಾಣಿಸುವುದಿಲ್ಲ. ಕೆಲ ಪಾತ್ರ ಸ್ವಭಾವಗಳಲ್ಲಿಯೂ ಬದಲಾವಣೆ ಮಾಡಿಕೊಂಡಿದ್ದಾನೆ. ರಾಮವಿಜಯದ ರಾವಣ, ನಾಗಚಂದ್ರನ ರಾವಣನಿಗಿಂತ ಭಿನ್ನ. ಅವನಲ್ಲಿನ ರಾವಣ, ವಿಮಲ ಸೂರಿ ಪರಂಪರೆಯಲ್ಲಿ ಬಂದನಾದರೂ, ವಿಮಲಸೂರಿ ಚಿತ್ರಿಸಿದಂತೆ, ಸದ್ಗುಣಿ ಶುಚಿ. ಪ್ರವರ ಪುರುಷ, ಮಹಾ ಪರಾಕ್ರಮಿ, ಕೀರ್ತಿವಂತ, ದಿಗ್ವಿಜಯಗಳಲ್ಲಿಯೂ ಅಹಿಂಸಾವ್ರತ ಪ್ರಭಾವದಿಂದಾಗಿ ಯಾರನ್ನೂ ಕೊಲ್ಲುವುದಿಲ್ಲ. ಅವರು ಪಾದಾಕ್ರಾಂತರಾಗಿ, ಶರಣಾಗತಿ ಬೇಡಿದಾಗ, ಅವರನ್ನು ಕ್ಷಮಿಸಿ ಬಿಡುಗಡೆ ಮಾಡುತ್ತಾನೆ. ಆದರೆ ಮುಂದೆ ಬೇರೆ ಬೇರೆ ಕಾರಣಗಳಿಂದ, ಸೀತೆ ತನ್ನ ವಿನಾಶಕ್ಕೆ ಕಾರಣವೆಂದು ತಿಳಿಯುತ್ತಲೇ ಅವನ ಧೋರಣೆ ಬದಲಾಗುತ್ತದೆ. ಲಕ್ಷ್ಮಣನಿಂದ ಅಳಿಯನ ಸಾವು, ಸೀತೆಯ ಸೌಂದರ್ಯಾರ್ಕರ್ಷಣೆ, ಅವನಲ್ಲಿನ ನೈತಿಕನ್ನು ಕೊಲ್ಲುವುದರಿಂದ, ಅಂತಿಮವಾಗಿ ದುರಂತಸಾವನ್ನು ಅಪ್ಪಿಕೊಂಡಂತಾಗುತ್ತಾನೆ.

ನಾಗಚಂದ್ರನಲ್ಲಿ ರಾವಣನ ಚಿತ್ರ ವಾಲ್ಮೀಕಿ ರಾಮಾಯಣದ ಪ್ರಭಾವದಿಂದ ರೂಪುಗೊಂಡಿದೆ. ಇಲ್ಲಿಯೂ ರಾವಣನು ಒಳ್ಳೆಯವನೇ ಆದರೂ ಸೀತೆಯ ವ್ಯಾಮೋಹಕ್ಕೆ ಒಳಗಾದುದು ಮಹಾ ದೌರ್ಬಲ್ಯವೆನಿಸುತ್ತದೆ. ಆದರೆ ಇದಕ್ಕೆ ಕಾರಣವನ್ನು ನಾಗಚಂದ್ರ 'ವಿಧಿ' ಗೆ ಅಂಟಿಸುತ್ತಾನೆ. ಈ ದುರ್ವಿಧಿ ಅವನನ್ನು ಪಾಪಕ್ಕೂ, ನಿಂದೆಗೂ ಹೇಸದಂತೆ ಮಾಡಿ, ದುರಂತಕೂಪಕ್ಕೆ ತಳ್ಳುತ್ತದೆ. ಇದು ನಾಗಚಂದ್ರನ ದೃಷ್ಟಿ ! ರಾಮವಿಜಯ ಕಾವ್ಯದಲ್ಲಿ ದೇವಪ್ಪ. ರಾವಣನ ಗುಣ, ಪರಾಕ್ರಮಗಳನ್ನು ಹೊಗಳುತ್ತಲೇ, ಅವನ ಸ್ತ್ರೀಲಂಪಟತನದ ದೌರ್ಬಲ್ಯವನ್ನೂ ಕಾಣಿಸುತ್ತಾನೆ. ಸೀತೆಗೆ ಮೊದಲು 'ಮಣಿಮತಿ'ಯನ್ನು ಕಾಮಿಸಿ, ಅವಳ ಧಿಃಕ್ಕೃತಿಗೆ ಒಳಗಾಗಿ, ಕಡೆಗೇ ಅವಳಿಂದಲೇ ಅವನ ದುರಂತದ ವಿಧಿಬರಹಕ್ಕೆ ಕಾರಣನಾಗುತ್ತಾನೆ.

ಸಮಾನವಾದ ಕಾವ್ಯ ವಸ್ತುವನ್ನು ತೆಗೆದುಕೊಂಡೇ, ಅದನ್ನು ಪ್ರತಿಯೊಬ್ಬ ಕವಿಯೂ ತನ್ನ ದೃಷ್ಟಿ ಧೋರಣೆ ಉದ್ದೇಶಾನುಗುಣವಾಗಿ, ವಸ್ತು. ಪಾತ್ರ ಶೈಲಿಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾನೆ. ಅಂತೆಯೇ ದೇವಪ್ಪ ಕವಿಯೂ, ಜೈನರಾಮಾಯಣ ಸಂಪ್ರದಾಯಗಳಲ್ಲಿ ಒಂದಾದ ಗುಣಭದ್ರಾಚಾರ್ಯ ಸಂಪ್ರದಾಯವನ್ನು ಅನುಸರಿಸಿದರೂ ಅಕ್ಷರಕ್ಷರದ ಅನುಕರಣೆಯಾಗದೆ, ತನ್ನ ಪ್ರತಿಭೆ, ಕಲ್ಪನೆಗಳ ಮೂಲಕ, ತನಗೆ ಸರಿ ತೋರಿದ್ದನ್ನು, ಕಾವ್ಯದಲ್ಲಿ ಅಳವಡಿಸಿಕೊಳ್ಳುತ್ತಾನೆ. ಆದರೆ ದುರಾದೃಷ್ಟವೆಂದರೆ, ಅನ್ಯರಾಮಾಯಣಗಳ ಕಡೆ ವಿದ್ವಾಂಸರ ದೃಷ್ಟಿ ಹೋದಂತೆ, ರಾಮ ವಿಜಯದ ಕಡೆ ಯಾಕೆ ಹೊರಳಲಿಲ್ಲ ಎನ್ನುವುದೇ ಪ್ರಶ್ನೆಯೆನಿಸುತ್ತದೆ. ಅಮೋಘವಾದ, ಅತ್ಯುತ್ತಮವಾದ ಮಹತ್ತರವಾದ ಕಾವ್ಯ-ಎಂದೆನಿಸಿದಿದ್ದರೂ, ಅಧ್ಯಯನಕ್ಕೆ ಒಳಗಾಗಲೇ ಬೇಕಾದ ಕಾವ್ಯ ಎನ್ನುವುದರಲ್ಲಿ, ಎರಡು ಮಾತಿಲ್ಲ. ಅನೇಕ ವಿಷಯಗಳಲ್ಲಿ ಅವನು ಓದುಗರ ಗಮನಸೆಳೆಯುತ್ತಾನೆ. ಮೂಲತಃ ಅತ್ಯಂತ ಜಿನ ಭಕ್ತಿಯನ್ನು ಮೈಗೂಡಿಸಿಕೊಂಡಿದ್ದವನು. ಜಿನತತ್ವ, ಸಿದ್ಧಾಂತಗಳನ್ನು, ಸರಳವಾಗಿ, ತನ್ನ ಕಾವ್ಯದ ಮೂಲಕ ಪ್ರಸಾರವಾಗಬೇಕೆಂಬ ಉದ್ದೇಶದಿಂದಲೂ ಮತ್ತು ಭವ್ಯರೆಲ್ಲರೂ ಅಂತಹ ಒಂದು ಕಾವ್ಯವನ್ನು ಬರೆಯಲು ಒತ್ತಾಯಿಸಿದ್ದರಿಂದಲೂ ತಾನು ರಾಮವಿಜಯ ಕಾವ್ಯ ಬರೆದೆನೊಂದು ಸ್ವತಃ ಹೇಳಿಕೊಂಡಿದ್ದಾನೆ. ಕಾವ್ಯದ ಪ್ರಾರಂಭದಲ್ಲಿಯೇ ತನ್ನ ಇತಿಮಿತಿಗಳನ್ನು ಹೇಳಿಕೊಂಡು ವಿನಯ ತೋರಿದ್ದಾನೆ. ಕಾವ್ಯ ರಚನೆಯ ಉದ್ದೇಶವನ್ನು ಹೀಗೆ ಸ್ಪಷ್ಟಪಡಿಸಿದ್ದಾನೆ. "ನಡೆನುಡಿಯಿಂದ ಸಕಲರ ಮೆಚ್ಚಿಸಿ ಹಾ। ಲೊಡಲ ಹೊರೆವುದೋಸುಗರ। ತೊಡಗಿದುದಲ್ಲವೀ ಕೃತಿಯು ಸದ್ಗತಿಯನು। ಪಡೆಯಬೇಕೆಂದಾನೊರೆದೆ॥ ಶಕ್ತಿಯಿಂದವೆ ಪೇಳಿದುದಿಲ್ಲ ಕವಿತೆಯ। ಯುಕ್ತಿಯೆಳ್ಳನಿತೆನಗಿಲ್ಲ॥ ಮುಕ್ತಿವಡೆದ ಪುರುಷರ ಚರಿತವ ಮನೋಭಕ್ತಿಯಿಂದಾನು ಪೇಳುದೆನು॥ ಇದರಂತೆ ಮುಕ್ತಿ ಮತ್ತು ಮುಕ್ತಿ ಸಾಧನಗಳು ಕೇವಲ ವಿದ್ವಾಂಸರಿಗೆ

ಮಾತ್ರವೇ ಅಲ್ಲದೆ ಜನಸಾಮಾನ್ಯರಿಗೂ ಸಿಗಬೇಕೆನ್ನುವ ಕವಿಯ ಆಶಯ ಸ್ಪಷ್ಟವಾಗುತ್ತದೆ. ಆದ್ದರಿಂದಲೇ ತನ್ನ ಕಾವ್ಯವನ್ನು ಸುಲಭಗ್ರಾಹ್ಯವಾದ ಸಾಂಗತ್ಯ ಛಂದಸ್ಸಿನಲ್ಲಿ, ತಿಳಿಗನ್ನಡದಲ್ಲಿ, ಸರಳವಾಗಿ, ಅಲ್ಲಲ್ಲಿ ಸರಸ ಸಂಭಾಷಣೆಗಳನ್ನು, ಸುಂದರವಾದ ವರ್ಣನೆಗಳನ್ನು ಸೇರಿಸಿ, ಹೃದ್ಯವಾಗುವ ರೀತಿಯಲ್ಲಿ, ಕಾವ್ಯಲಕ್ಷಣಗಳ ಭಾಗವಾದ ಅಷ್ಟಾದಶವರ್ಣನೆಗಳನ್ನು ನವರಸ ನಿರೂಪಣೆಗಳನ್ನೂ ಒಳಗೊಂಡಂತೆ ತನ್ನ ಕಾವ್ಯ ರಚನೆಯನ್ನು ಮಾಡಿದ್ದಾನೆ.

ಕಾವ್ಯ ನಿರೂಪಣೆಯ ತಂತ್ರದ ಭಾಗವಾಗಿ, ಈ ಕಥೆಯನ್ನು ಮಗಧ ದೇಶದ ರಾಜಗೃಹದ ಅರಸ ಶ್ರೇಣಿಕ ಮತ್ತು ಮಡದಿ ಚೇಳಿನಿ ಪಾತ್ರಗಳನ್ನು ಸೃಷ್ಟಿಸಿದ್ದಾನೆ. ಹೇಳುತ್ತಿರುವುದು ಜೈನಕಾವ್ಯ. ಇದೊಂದು ಪುಣ್ಯಕಥೆ ಜಿನಭಕ್ತನಾದ ಅವನು ಜಿನ ಸ್ತುತಿ, ಜಿನ ಮುನಿಸ್ತುತಿ, ಜೈನ ಕವಿಗಳ ಸ್ತುತಿ ಮುಂತಾದವನ್ನು ನಿಷ್ಠೆಯಿಂದ ಕಾವ್ಯದ ಆರಂಭದಲ್ಲಿ ತಂದಿದ್ದಾನೆ.

ಕಾವ್ಯನಿಯಮಗಳ ಬದ್ಧತೆಯ ಜೊತೆಗೆ, ರಾಮ ವಿಜಯಕಾವ್ಯದ ಕಥೆ ಹೇಳುವಾಗ, ಅವನು ತರುವ ವರ್ಣನೆಗಳೋ ಅದ್ಭುತವೆನಿಸುತ್ತವೆ. ಕಥೆಯ ಅಂಶ ಕಡಿಮೆಯಾದರೂ, ಅವನ ವರ್ಣನೆಗಳು ಅಪಾರ ಸಂಖ್ಯೆಯಲ್ಲಿವೆ. ಅವನ ವರ್ಣನಾ ಸಾಮರ್ಥ್ಯ ನಿಜಕ್ಕೂ ದಿಗ್ಭ್ರಮೆಗೊಳಿಸುತ್ತದೆ. ಕಡೆಗೆ ಶ್ರೇಣಿಕ ಮತ್ತು ಚೇಳಿನೀ ದೇವಿಯರ ನಡುವೆ, ಕಥೆ ಹೇಳುವಾಗ ಪ್ರಶ್ನೋತ್ತರಗಳ ಸಂದರ್ಭದಲ್ಲಿ, ಆ ಇಬ್ಬರು ದಂಪತಿಗಳ ನಡುವೆ ನಡೆಯುವ ಸಂಭಾಷಣೆಗಳು, ಮುದ್ದಣ, ಮನೋರಮೆಯರನ್ನು ನೆನಪಿಸುತ್ತದೆ. ಶ್ರೋತೃವಾದ ಚೇಳಿನಿಯ ಸೌಂದರ್ಯ ವರ್ಣನೆಯನ್ನೂ ತಪ್ಪದೆ ಮಾಡುತ್ತಾನೆ. ಪ್ರತಿಸಲವೂ ಕಥೆಯನ್ನು ಮುಂದುವರೆಸಿದಾಗಲೆಲ್ಲ, ಅವಳ ಸೌಂದರ್ಯ ವರ್ಣನೆ ಮುಂದುವರೆಯುತ್ತದೆ.

ಅವನ ವರ್ಣನಾ ಕೌಶಲ, ವರ್ಣಿಸುವ ವಿಷಯಗಳು, ಸಂದರ್ಭ, ಸನ್ನಿವೇಶಗಳು, ಊಹಾತೀತ ವಿವರಗಳನ್ನು ಒಳಗೊಂಡಿರುತ್ತವೆ. ಈ ವರ್ಣನೆಗಳೇ ಅವನ ವಿಷಯಜ್ಞಾನ, ವಿವರಿಸುವ ಚಮತ್ಕಾರ ಬಳಸುವ ಹೋಲಿಕೆಗಳು. ಚಿತ್ರವತ್ತಾಗಿ ವರ್ಣಿಸುತ್ತಿರುವ ವಿಷಯ ಎಲ್ಲವನ್ನೂ ಕಣ್ಣಮುಂದೆ ಅಚ್ಚೊತ್ತಿದಂತೆ ನಿಲ್ಲಿಸುತ್ತಾನೆ. ಪ್ರತಿಯೊಂದು ಸಣ್ಣ ವಿಷಯವನ್ನೂ ಮುಖ್ಯ, ಅಮುಖ್ಯ, ಅಗತ್ಯ, ಅನಗತ್ಯ ಎನ್ನುವ ಪರಿವೆಯಿಲ್ಲದೆ ಮೈಮರೆತು ವರ್ಣಿಸುವ ಭರದಲ್ಲಿ, ಕಥೆಯ ಎಳೆ ತಪ್ಪಿ ಹೋಗುತ್ತದೆ. ವರ್ಣನೆಗಳ ನಡುವೆ, ಕಥೆಗಾಗಿ ಮತ್ತು ಪಾತ್ರಗಳಿಗಾಗಿ, ದಟ್ಟಡವಿಯ ನಡುವೆ ಸೂಜಿಗಾಗಿ ಹುಡುಕಾಡುವಂತಾಗುತ್ತದೆ, ಓದುಗರಿಗೆ! ಕವಿಯದೃಷ್ಟಿ ಜಿನಬೋಧೆ, ಜೈನ ಮತ ಸಿದ್ಧಾಂತ ಪ್ರಸರಣವೇ ಮುಖ್ಯ ಉದ್ದೇಶವಾಗಿದ್ದರೂ, ಕಾವ್ಯ ನಿರೂಪಣೆಯಲ್ಲಿ ಕಲಾತ್ಮಕತೆ, ಧನ್ಯತೆಗಳೂ ಇರಬೇಕಾಗುತ್ತದೆ. ಅವನ ವರ್ಣನೆಯ ವ್ಯಾಪ್ತಿಯೊಳಗೆ ಬರುವ ವಿಷಯಗಳು ವಸ್ತುಗಳು ಅಪಾರ. ಹಿಂದಿನ ಕವಿಗಳ

ಕಾವ್ಯದಲ್ಲಿಯೂ ಅಷ್ಟಾದಶ ವರ್ಣನೆಗಳೆಂದು, ದೇಶ, ಪುರ, ನಗರ, ಕಾಡು, ಮೇಡು, ಗಿರಿ, ವನ, ನದಿ, ಸಮುದ್ರ, ಬೀದಿಗಳು, ಸೂಳೆಗೇರಿಗಳು, ಅರಮನೆಗಳು, ಸ್ತ್ರೀಪುರುಷರ ಸೌಂದರ್ಯ ಇತ್ಯಾದಿ ಇತ್ಯಾದಿಗಳು ಬರುತ್ತಿದ್ದುವಾದರೂ ಹಿತಮಿತದ ಅಳತೆಯಲ್ಲಿ! ಆದ್ದರಿಂದ ಕಥೆಯ ನಡೆಗಾಗಲಿ, ರೋಚಕತೆಗಾಗಲಿ, ಧಕ್ಕೆಯಾಗುತ್ತಿರಲಿಲ್ಲ. ಆದರೆ ದೇವಪ್ಪ ಕವಿಯ ವರ್ಣನೆಗಳ ದಟ್ಟ ಕಾಡಿನಲ್ಲಿ, ಓದುಗರು ಕಥೆಯ ಜಾಡನ್ನು ಕಳೆದುಕೊಳ್ಳುವ ಸಾಧ್ಯತೆಗಳೇ ಹೆಚ್ಚು. ಪ್ರತಿ ಸಂದರ್ಭದಲ್ಲಿಯೂ, ಅಗತ್ಯವೋ ಅನಗತ್ಯವೋ ಸ್ತ್ರೀಯರ ನಖಶಿಖಾಂತ ವರ್ಣನೆಯನ್ನು ಓದಿದರೆ ಕವಿಯ ರಸಿಕತೆ ಮತ್ತು ತನ್ಮಯತೆಗಳ ಪ್ರಮಾಣ ಏನೆಂದು ತಿಳಿಯುತ್ತದೆ.

ಕವಿಯ ಹಿರಿಮೆ ಗರಿಮೆ ಮೌಲಿಕತೆಗಳು ಏನೇ ಇದ್ದರೂ, ಜೈನ ಸಂಪ್ರದಾಯದಲ್ಲಿ ಬಂದ ಕನ್ನಡ ರಾಮಾಯಣಗಳು ಮಾತ್ರ ತೀರಾ ಕಡಿಮೆ. ಹಾಗಿರುವಾಗ, ನಾಗಚಂದ್ರನ ರಾಮಾಯಣದ ಜೊತೆ ತೌಲನಿಕವಾಗಿಯಾದರೂ ನೋಡಬೇಕೆಂದು ಕೊಂಡಾಗ ರಾಮ ವಿಜಯ ಕಾವ್ಯವನ್ನು ನಿರ್ಲಕ್ಷಿಸಲಾಗುವುದಿಲ್ಲ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದ ಮುಗುಳಿಯವರ ದೃಷ್ಟಿಗೂ ಬೀಳದೆ ಹೋದದ್ದು ಆಶ್ಚರ್ಯದ ಸಂಗತಿಯಾಗಿ ಆರ್. ನರಸಿಂಹಾಚಾರ್ಯರು ಮಾತ್ರ ತಮ್ಮ ಕವಿ ಚರಿತ್ರೆಯಲ್ಲಿ, ದೇವಪ್ಪ ಕವಿಯ ಬಗ್ಗೆ ತೀರಾ ಸಂಕ್ಷೇಪವಾಗಿ ಪ್ರಸ್ತಾಪಿಸಿದ್ದಾರೆ.

'ರಾಮವಿಜಯ ಕಾವ್ಯದ ಬಗ್ಗೆ ಯಾರಿಗೂ ಸ್ಪಷ್ಟವಾಗಿ ತಿಳಿದಿಲ್ಲವಾದರೂ ಭಾರತೀಯ ಜ್ಞಾನಪೀಠ ಪ್ರಕಾಶನದವತಿಯಿಂದ, ಜ್ಞಾನಪೀಠ ಮೂರ್ತಿದೇವಿ ಜೈನಗ್ರಂಥ ಮಾಲಾದ ಭಾಗವಾಗಿ, ಕನ್ನಡದ ಈ ಕೃತಿಯನ್ನು ಪ್ರೊ.ಟಿ. ಕೇಶವ ಭಟ್ಟರು. ಸಂಶೋಧನಾತ್ಮಕ ರೀತಿಯಿಂದ ಪಾಠಾಂತರ ಮತ್ತು ಕನ್ನಡ ಗದ್ಯಾನುವಾದ ಸಹಿತ ಸಂಪಾದಿಸಿ ಕೊಟ್ಟಿದ್ದಾರೆ. ಇದು ೧೯೭೯ರಲ್ಲಿ ಪ್ರಕಟವಾಗಿದೆ. ಆಕಸ್ಮಿಕವಾಗಿ ಈ ಕೃತಿ ಲಭ್ಯವಾದುದರಿಂದ, ಅದರ ಬಗ್ಗೆ ಒಂದಿಷ್ಟು ಬೆಳಕು ಚೆಲ್ಲುವ ಪ್ರಯತ್ನವನ್ನಷ್ಟೇ ಮಾಡುತ್ತಿದ್ದೇನೆ.

ಈ ಲೇಖನದ ಆರಂಭದಲ್ಲಿಯೇ ಎರಡು ಜೈನ ಸಂಪ್ರದಾಯಗಳಾದ ವಿಮಲ ಸೂರಿ ಮತ್ತು ಗುಣಭದ್ರಾಚಾರ್ಯ ಸಂಪ್ರದಾಯದಲ್ಲಿ ಬಂದಿರುವ ನಾಗಚಂದ್ರನ ರಾಮಚಂದ್ರಚರಿತ ಪುರಾಣ ಮತ್ತು ದೇವಪ್ಪ ಕವಿಯ ಕಾವ್ಯವಾದ 'ರಾಮ ವಿಜಯ ಕಾವ್ಯ' ಈ ಎರಡರಲ್ಲಿನ ಸಾಮ್ಯ ವ್ಯತ್ಯಾಸಗಳ ಬಗ್ಗೆ ಪ್ರಸ್ತಾಪ ಮಾಡಿದೆಯಾದರೂ ದೇವಪ್ಪ ಕವಿ ಕಥಾವಸ್ತುವಿನಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಮಾಡಿಕೊಂಡಿದ್ದಾನೆ. ಮಾಡಿಕೊಂಡ ವ್ಯತ್ಯಾಸಗಳಿಂದಾಗಿ, ಕಡೆಗೆ ಯಾವುದೇ ಅಡಚಣೆಯಾಗಿಲ್ಲ. ಕೆಲವಡೆ ಪಾತ್ರಗಳ ಹೆಸರುಗಳಲ್ಲಿ ಸ್ಥಳಗಳ ಹೆಸರುಗಳಲ್ಲಿ, ಘಟನಾ ಸ್ಥಳಗಳಲ್ಲಿ, ಸ್ವರೂಪದಲ್ಲಿ ಬದಲಾವಣೆಯಾಗಿದೆ. ಎಲ್ಲ ರಾಮಾಯಣಗಳಲ್ಲಿಯೂ ಕಾಣುವಂತೆ, 'ರಾಮ ವಿಜಯ' ಮತ್ತು ರಾವಣ ವಿನಾಶವೇ ಅಂತಿಮ ಪರಿಣಾಮ.

ಈ ವ್ಯತ್ಯಾಸಗಳನ್ನು ಗಮನದಲ್ಲಿ ಇರಿಸಿಕೊಂಡು 'ರಾಮ ವಿಜಯ' 'ಕಾವ್ಯ'ದಲ್ಲಿನ ವರ್ಣನೆಗಳನ್ನು ಅವಲೋಕಿಸಬಹುದಾಗಿದೆ.

ದಶರಥನೊಬ್ಬ ಅರಸ, ಗುಣ, ಸ್ವಭಾವ, ಪರಾಕ್ರಮಗಳಲ್ಲಿ ಅವನಿಗೆ ಸಾಟಿ ಇಲ್ಲದಂತಿರುವವನು ಅಯ್ಯೋಧ್ಯೆ ಅಥವಾ ಕೌಶಲದೇಶವನ್ನು ಆಳುತ್ತಿದ್ದ. ಅವನಿಗೆ ಹಲವರು ಹೆಂಡತಿಯರಿದ್ದು, 'ಸುಬಳಾದೇವಿ' ಎಂಬುವಳು ಅವನ ಪಟ್ಟದರಸಿಯ ಗೌರವಕ್ಕೆ ಪಾತ್ರಳಾಗಿದ್ದಳು. ದಶರಥ ದಂಪತಿಗಳು ಸಕಲ ಸುಖಭೋಗಗಳನ್ನು ಅನುಭವಿಸುತ್ತಿದ್ದರೂ, ಚಿತ್ರಗಾರನೊಬ್ಬನು ತಂದ ಚಿತ್ರಪಟದಲ್ಲಿದ್ದ, ಮರಿಗಳಿಗೆ ಗುಟುಕು ನೀಡುತ್ತಿದ್ದ ರಾಜ ಹಂಸೆ, ಆನೆ ತನ್ನ ಮರಿಗೆ ತಿನಿಸುತ್ತಿದ್ದುದನ್ನು ನೋಡಿ, ತನಗೆ ಮಕ್ಕಳಿಲ್ಲದ ಚಿಂತೆ ಮರುಕಳಿಸುತ್ತದೆ. ಆದರೆ, ಒಮ್ಮೆ ಆಕಸ್ಮಿಕವಾಗಿ ಜಿನಮುನಿಗಳ ದರ್ಶನ ಭಾಗ್ಯದಿಂದ ಮತ್ತವರ ಭವಿಷ್ಯದಿಂದ, ಮಗನನ್ನು ಪಡೆಯುವ ಅವಕಾಶ ದೊರೆಯುತ್ತದೆ. ಅವಳಿಗೆ ಒಬ್ಬ ಮಗನು ಮತ್ತು ಕೈಕೇಯಿಗೂ ಒಬ್ಬ ಮಗನು–ಹೀಗೆ ಇಬ್ಬರಿಗೂ ಪುತ್ರ ಜನನವಾಗುತ್ತದೆ. ರಾಜಕುಮಾರರಿಬ್ಬರೂ, ಸಂಸ್ಕಾರಿಗಳಾಗಿ, ಸಕಲ ಗುಣ ಸಂಪನ್ನರಾಗಿ ಬೆಳೆದು, ತಂದೆಗೆ ತಕ್ಕ ಮಕ್ಕಳೆನಿಸಿಕೊಳ್ಳುತ್ತಾರೆ. ಪ್ರಾಪ್ತವಯಸ್ಸಿಗೆ ಬರುತ್ತಿದ್ದಂತೆ, ಮಿಥಿಲೆಯ ಅರಸ ಜನಕ ರಾಜನಿಂದ, ದತ್ತು ಪುತ್ರಿಯಾದ ಸೀತೆಯ ಸ್ವಯಂವರಕ್ಕೆ ಬರಬೇಕೆಂಬ ಆಮಂತ್ರಣ ದಶರಥನಿಗೆ ಬರಲು ಅವನು ತನ್ನಿಬ್ಬರು ಕುಮಾರರನ್ನು, ಮಂತ್ರಿ, ಸೇನಾಧಿಪತಿ ಮತ್ತು ಅಪಾರ ಸೈನ್ಯದೊಂದಿಗೆ, ಉಡುಗೊರೆಗಳೊಂದಿಗೆ, ಸ್ವಯಂವರಕ್ಕೆ ಕಳಿಸಿಕೊಡುತ್ತಾನೆ. ಹಲವು ದಿನಗಳು ಪ್ರಯಾಣಿಸಿ, ಕಡೆಗೆ ಮಿಥಿಲೆಯನ್ನು ತಲುಪುತ್ತಾರೆ.

ಲಾಟ, ಗುರ್ಜರ, ಗೌಳ, ಹಮ್ಮೀರ, ಕರ್ಣಾಟ, ತಮಿಳ, ಕಾಂಬೋಜ ಮೊದಲಾಗಿ ಹಲವಾರು ರಾಜ್ಯಗಳಿಂದ ಬಂದ ರಾಜರುಗಳನ್ನು ಸ್ವಯಂವರ ಮಂಟಪದಲ್ಲಿದ್ದವರನ್ನು ಪರಿಚಯಿಸುತ್ತಾ ಸೀತೆಯ ಜೊತೆಯಲ್ಲಿ ಬಂದ ಸಖಿ, ಥಟ್ಟನೆ, ರಾಮನು ಕುಳಿತಿದ್ದೆಡೆಗೆ ಕರೆತಂದು, ಅವನ ಪರಿಚಯವನ್ನು, ಅವನ ಪರಾಕ್ರಮವನ್ನೂ ವಿವರಿಸಿ ತಿಳಿಸುತ್ತಾಳೆ. ರಾಮನನ್ನು ನೋಡುತ್ತಿದ್ದಂತೆ ಅವಳಿಗೆ ಪೂರ್ವ ಜನ್ಮ ಸ್ಮರಣೆಯುಂಟಾಗುತ್ತದೆ. ತನ್ನ ಮನದಲ್ಲಿರಿಸಿ ಕೊಂಡಿದ್ದ ರೂಪವೇ ಅದಾಗಿರಲು, ಅವಳು ಹಿಂದು ಮುಂದು ನೋಡದೆ ವರಮಾಲೆಯನ್ನು ಹಾಕಿ ಬಿಡುತ್ತಾಳೆ. ಇದರಿಂದ ಜನಕರಾಜನು ಅತೀತ ಸಂತೋಷಗೊಂಡು ಅದ್ದೂರಿಯಿಂದ ಮದುವೆ ಮಾಡಿ ಕೊಡುತ್ತಾನೆ. ನಂತರ ರಾಮ ಸೀತಾ ಸಮೇತನಾಗಿ ಬೀಳ್ಕೊಂಡು ತನ್ನ ಅಯೋಧ್ಯೆಗೆ ಬರುತ್ತಾನೆ. ಒಂದು ದಿನ ಲೋಕಾಭಿರಾಮವಾಗಿ ಮಾತಾಡುತ್ತಿರುವಾಗ ಕುಲವೃದ್ಧನೊಬ್ಬನು ರಾಮನಿಗೆ, ಅವನ ಪೂರ್ವಜರ ವಿಷಯವನ್ನು ತಿಳಿಸುತ್ತಾನೆ. ಮೂಲತಃ ಅವರೆಲ್ಲ ವಾರಣಾಸಿಯಲ್ಲಿದ್ದು ಆಳಿದವರು. ಕಾರಣಾಂತರಗಳಿಂದ, ಅದನ್ನು ದಾಯಾದಿಗಳ ವಶಕ್ಕೆ ಬಿಟ್ಟು ಅಯೋಧ್ಯೆಗೆ ಬಂದ

ವಿಷಯ ತಿಳಿದಿದ್ದೇ, ರಾಮನಿಗೆ ದುಃಖವೆನಿಸಿ, ತಂದೆಯೊಂದಿಗೆ ಮಾತಾಡಿ, ಮೂಲಸ್ಥಾನವನ್ನು ಬಿಟ್ಟು ಬಂದದ್ದು, ಸರಿಯಾದ ನಿರ್ಣಯವಲ್ಲ. ಅದು ಹೇಗೆಂದರೆ ಜಿನೇಶ್ವರನನ್ನು, ಹೆತ್ತತಾಯಿಯನ್ನು, ತಂದೆಯನ್ನು, ಜನ್ಮಭೂಮಿಯನ್ನು ಬಿಟ್ಟು ಬರುವುದೆಂದರೆ, ಅಪಕಾರ ಮಾಡಿದಂತೆ! ಪೂರ್ವಜರಿಂದ ಬರಬೇಕಾದ್ದನ್ನು ದಾಯಾದಿಗಳಾದವರಿಗೆ ಬಿಟ್ಟು ಬರುವುದೆಂದರೆ ಹೇಡಿತನವನ್ನು ತೋರಿದಂತೆ, ಕುಲಕ್ಕೆ ಕಳಂಕ ಉಂಟುಮಾಡಿದಂತೆ, ಅಪಕೀರ್ತಿಗೆ ಗುರಿಯಾದಂತೆ ಎಂದು ಬುದ್ಧಿ ಹೇಳಿ, ಹೊರಟು ದಾಯಾದಿಗಳ ಗರ್ವಭಂಗಮಾಡಿ ವಾರಣಾಸಿಯನ್ನು ವಶಪಡಿಸಿಕೊಂಡು; ತಂದೆ ತಾಯಿಯರ ಅಪ್ಪಣೆ ಪಡೆದು, ಸಾಕೇತವನ್ನು ತೊರೆದು, ವಾರಣಾಸಿಯಲ್ಲಿ ನೆಲೆಸುತ್ತಾನೆ. ಆದರ್ಶರಾಜ ನೆನಿಸಿಕೊಳ್ಳುತ್ತಾನೆ.-----

ಸುಖಭೋಗಗಳಿಂದ, ವೈಭವದಿಂದ ವಾರಣಾಸಿಯಲ್ಲಿನ ಪ್ರಜೆಗಳ ಹಿತರಕ್ಷಣೆ ಮಾಡುತ್ತಿದ್ದು, ಒಂದು ದಿನ ವನವಿಹಾರ, ಮಾಡುತ್ತಿರುವಾಗ, ಮಾರೀಚನ ಸಹಾಯದಿಂದ, ಅವನು ಜಿಂಕೆಯ ರೂಪದಲ್ಲಿ ಸುಳಿದಾಡಿ ಅವಳು ಆಕರ್ಷಿತಳಾಗುವಂತೆ ಮಾಡಲು ಆದೇಶಿಸುತ್ತಾನೆ. ಇದಕ್ಕೆ ಮೊದಲೇ ರಾವಣನಿಗೆ ನಾರದರಿಂದ ಸೀತೆಯ ಅನುಪಮ ಸೌಂದರ್ಯದ ಬಗ್ಗೆ ತಿಳಿದಿದ್ದರಿಂದ, ಶೂರ್ಪನಖಿಯನ್ನು ಕಳಿಸಿ ಪ್ರಯತ್ನಿಸಿ ಸೋತದ್ದರಿಂದ, ಈಗ ಈ ಉಪಾಯ ಮಾಡುತ್ತಾನೆ. ರಾಮನು ಸೀತೆಗಾಗಿ ಜಿಂಕೆಯ ಬೆನ್ನಟ್ಟಿ ಹೋದಾಗ, ರಾವಣ ರಾಮನ ವೇಷದಲ್ಲಿ ಬಂದು ಅವಳನ್ನು ನಂಬಿಸಿ ಅಪಹರಿಸಿಕೊಂಡು ಹೋಗುತ್ತಾನೆ. ಹಿಂತಿರುಗಿ ಬಂದ ರಾಮನಿಗೆ ಸೀತಾಪಹರಣ ವಿಷಯ ತಿಳಿದು ದುಃಖಿತನಾಗಿ, ಅವಳ ಅನ್ವೇಷಣೆಗೆ ತೊಡಗುತ್ತಾನೆ. ದಶರಥನಿಗೆ ಕನಸಿನಲ್ಲಿ ರಾಮನಿಗೆ ಒದಗಿರುವ ಸಂಕಟಗಳಿಂದ ತತ್ತರಿಸಿ, ಅವನ ಸಹಾಯಕ್ಕೆ ದೊಡ್ಡ ಸೈನ್ಯವನ್ನು ಕಳಿಸುತ್ತಾನೆ. ರಾಮನು ಸೈನ್ಯವನ್ನು ಬೆನ್ನಿಗಿರಿಸಿಕೊಂಡು, ದಣಿವರಿಯದೆ ಹಗಲಿರುಳೂ, ನಡೆದು ನಡೆದು ದುರ್ಗಮ ದಾರಿಗಳನ್ನೂ ದಾಟುತ್ತಾ ಸಾಗುತ್ತಿರುವಾಗ ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯ ಸಮೀಪದಲ್ಲಿನ ಪ್ರದೇಶದಲ್ಲಿ ಇಬ್ಬರು ವಿದ್ಯಾಧರರು ಕಾಣಿಸಿ ಕೊಳ್ಳುತ್ತಾರೆ. ಪರಸ್ಪರ ಪರಿಚಯದ ನಂತರ, ವಾಲಿ, ಸುಗ್ರೀವರ ಮತ್ತು ಅಣುವಿನ ವಿಷಯ ತಿಳಿಯುತ್ತದೆ. ಸುಗ್ರೀವ ಅಣ್ಣವಾಲಿಯಿಂದಾದ ಅನ್ಯಾಯವನ್ನು ತಿಳಿಸಿದಾಗ ಲಕ್ಷ್ಮಣನು ವಾಲಿಯನ್ನು ಸಂಹರಿಸಿ, ಸುಗ್ರೀವನಿಗೆ ರಾಜ್ಯವನ್ನು ಕೊಡಿಸುತ್ತಾನೆ. ಸುಗ್ರೀವ ಅಣುವನ ಪರಿಚಯವನ್ನು ಮಾಡಿಸಿ, ಅಣುವ ಹೆಸರು ಬರುವುದರ ಹಿನ್ನೆಲೆ ವಿವರಿಸುತ್ತಾನೆ. ತನ್ನ ಪರಾಕ್ರಮದ ಪ್ರದರ್ಶನದಲ್ಲಿ. ಅಣುವಿನಷ್ಟು ಚಿಕ್ಕದಾಗಿ ತನ್ನ ದೇಹವನ್ನು ಮಾಡಿದ್ದರಿಂದ ಅಣುವಾದನೆಂದು ಹೇಳಿದ್ದೇ ಅಲ್ಲದೆ, ಅವನ ಶೌರ್ಯಪರಾಕ್ರಮಗಳನ್ನು ವಿವರಿಸಿ, ಸೀತೆಯ ಅನ್ವೇಷಣೆಯ ಜವಬ್ದಾರಿಯನ್ನು ವಹಿಸಲಾಗುತ್ತದೆ. ಅಣುವ ಮೂರು ಬಾರಿ ಲಂಕೆಗೆ ರಾಮಕಾರ್ಯಕ್ಕಾಗಿ ಹೋಗುತ್ತಾನೆ. ಮೊದಲ ಬಾರಿ ಸೀತಾಶೋಧಕ್ಕೆ ಎರಡನೆ ಬಾರಿ,

ವನಭಂಗ, ಲಂಕಾದಹನ, ಮೂರನೇ ಬಾರಿ, ಸೀತೆಗೆ ರಾಮನ ಉಂಗುರ ಮತ್ತು ಪತ್ರ ಕೊಡುವುದಕ್ಕಾಗಿ, ಹೋಗಿಬರುತ್ತಾನೆ.

ಅಂತಿಮವಾಗಿ ಯುದ್ಧವೇ ನಿಶ್ಚಯವಾಗುತ್ತದೆ. ವಿಭೀಷಣನ ಬುದ್ಧಿವಾದವೂ ಪ್ರಯೋಜನವಾಗುವುದಿಲ್ಲ. ಏನೇ ಆದರೂ ಸೀತೆಯನ್ನು ಬಿಟ್ಟುಕೊಡುವುದಿಲ್ಲ. ತನಗೆ ತಿಳಿಸದೇ ಸ್ವಯಂ ವರವನ್ನು ಏರ್ಪಡಿಸಿದ್ದಕ್ಕಾಗಿ, ಜನಕನ ಮೇಲಿನ ಕೋಪವನ್ನು ಈ ರೀತಿ ತೀರಿಸಿಕೊಳ್ಳಲು ಮುಂದಾಗುತ್ತಾನೆ. ಯಾರು ಎಷ್ಟೇ ಹೇಳಿದರೂ ಬುದ್ಧಿವಾದದ ಮಾತುಗಳಿಗೆ ಕಿವಿಗೊಡುವುದೇ ಇಲ್ಲ. ಸ್ವತಃ ಮಂಡೋದರಿಯೇ ಗಂಡನಿಗೆ, ಪರಸ್ತ್ರೀ ವ್ಯಾಮೋಹದಿಂದ ಆಕಾಶ ಗಮನದ ವಿದ್ಯೆಗಳೆಲ್ಲವೂ ನಾಶವಾಗುತ್ತವೆ. ಅಲ್ಲದೆ ಸೀತೆ ಬೇರೆ ಯಾರೂ ಅಲ್ಲ. ಅವಳು ತಮ್ಮಿಬ್ಬರಿಗೆ ಹುಟ್ಟಿದವಳು. ಲಂಕೆಯ ವಿನಾಶಕ್ಕೆ ಕಾರಣವಾಗುತ್ತಾಳೆ ಎಂದೆಲ್ಲ ವಿವರಿಸಿ, ಯುದ್ಧವನ್ನು ಕೈಬಿಡಲು, ಸೀತೆಯನ್ನು ರಾಮನಿಗೆ ಒಪ್ಪಿಸಲು, ಪರಿಪರಿಯಾಗಿ ಕೇಳಿಕೊಳ್ಳುತ್ತಾಳೆ. ಆದರೂ ಹಠವಾದಿ ರಾವಣ ಯುದ್ಧವನ್ನೇ ನಿರ್ಧರಿಸುತ್ತಾನೆ.

ವಾಲ್ಮೀಕಿ ರಾಮಾಯಣದಲ್ಲಿನ ವಾಲಿಯ ಪ್ರಸಂಗಕ್ಕಿಂತ ಭಿನ್ನವಾಗಿ ಚಿತ್ರಿತವಾಗಿದೆ. ವಾಲಿರಾಮನಿಗೆ ದೂತನ ಮೂಲಕ ಸಂದೇಶವೊಂದನ್ನು ಕಳಿಸುತ್ತಾನೆ. 'ಸುಗ್ರೀವ, ಅಣುವರಿಂದ ರಾಮನಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಬದಲಾಗಿ ತನ್ನ ಪಕ್ಷ ಸೇರಿಕೊಂಡರೆ, ತಾವು ಸೈನ್ಯ ಸಹಿತ ಲಂಕೆಗೆ ಹೋಗಿ, ರಾವಣನನ್ನು ಸೋಲಿಸಿ, ರಾಮನ ಮಡದಿಯನ್ನು ತಂದು ಕೊಡುವೆವು ಎನ್ನುವುದನ್ನು ಸಂದೇಶದಲ್ಲಿ ವಿವರಿಸಿ ಹೇಳುತ್ತಾನೆ. ರಾಮನು ತನ್ನ ಮಂತ್ರಿವರ್ಗದವರ ಜೊತೆ, ಈ ಸಂದೇಶದಲ್ಲಿನ ವಿವರಗಳನ್ನು ತಿಳಿಸಿದಾಗ ಅವರು ಅದರ ಬಗ್ಗೆ ಗಂಭೀರವಾಗಿ ಯೋಚಿಸಿ, ಸಂದೇಶದಲ್ಲಿ ಹೇಳಿರುವುದು ವಂಚನೆಯ ಮಾತುಗಳಾಗಿವೆ. ಯಾಕೆಂದರೆ ವಾಲಿ ಮತ್ತು ರಾವಣರು ಆಪ್ತ ಗೆಳೆಯರು ಆದ್ದರಿಂದ ವಾಲಿಯ ಜೊತೆ ಕೈ ಜೋಡಿಸುವುದು ಸರಿಯಲ್ಲ. ನಮ್ಮ ಕಾರ್ಯ ಕೆಡುತ್ತದೆ. ಆದ್ದರಿಂದ, ನಾವು ಸುರಕ್ಷಿತವಾಗಿ ಇರಬೇಕಾದರೆ, ಲಂಕೆಗೆ ಹೋಗುವ ಮೊದಲೇ ವಾಲಿಯನ್ನು ಮುಗಿಸಿ, ನಂತರ ರಾವಣನಲ್ಲಿಗೆ ಹೋದರೆ ನಮಗೆ ಅನುಕೂಲವಾಗುವುದೆಂದು ಹೇಳಿದಾಗ, ರಾಮ ತಮ್ಮ ಕಡೆಯಿಂದ ದೂತನೊಬ್ಬನನ್ನು ಕರೆದು, ವಾಲಿಗೆ, ಅವನ ಬಳಿ ಇರುವ ಮಹಾಮೇಘ ಎಂಬ ಆನೆಯನ್ನು, ತನಗೆ ಒಪ್ಪಿಸುವುದಾದರೆ ಮುಂದಿನ ಮಾತು. ಎಂಬ ಸಂದೇಶವನ್ನು ಕಳಿಸಿಕೊಡುತ್ತಾನೆ. ಇದರಿಂದ ಕೋಪೋದ್ರಿಕ್ತವಾಲಿ, ರಾಮನಿಗೆ, ಉತ್ತರವಾಗಿ, "ರಾವಣನಿಂದ ಸೀತೆಯನ್ನು ಬಿಡಿಸಿಕೊಂಡು ಬಂದಲ್ಲಿ ಆ ಆನೆಯನ್ನು ಕೊಡುವೆನು" ಎಂದು ಹೇಳುವಂತೆ ಸಂದೇಶ ಕಳಿಸುತ್ತಾನೆ. ಪರಸ್ಪರರ ನಡುವೆ ಸವಾಲುಗಳಾಗುತ್ತವೆ. ವಾಲಿಯ ಸಂಹಾರ ಅನಿವಾರ್ಯವಾಗಿ, ಲಕ್ಷ್ಮಣನನ್ನು ವಾಲಿಯ ಸಂಹಾರಕ್ಕೆ ಕಳಿಸುತ್ತಾನೆ.

ಕಡೆಗೆ ರಾಮ ರಾವಣರ ಯುದ್ಧ ಅನಿವಾರ್ಯವಾಗುತ್ತದೆ. ಎರಡೂ ಸೈನ್ಯಗಳ ನಡುವೆ ಭಯಂಕರ ಯುದ್ಧ ಸಂಭವಿಸುತ್ತದೆ. ಯಾರಿಗೆ ಯಾರೂ ಕಡಿಮೆಯಿಲ್ಲದಂತೆ ಯುದ್ಧ ಸಾಗುತ್ತದೆ. ಇಂದಗಿ ಮತ್ತು ಲಕ್ಷ್ಮಣರು ಮುಖಾಮುಖಿ ಹೋರಾಟಕ್ಕೆ ಇಳಿದು, ಲಕ್ಷ್ಮಣನಿಂದ ಇಂದಗಿಯ ಸಂಹಾರವಾಗುತ್ತದೆ. ರಾಮ–ರಾವಣರ ನಡುವೆ ಯುದ್ಧ ನಡೆದರೂ, ರಾವಣನನ್ನು ಲಕ್ಷ್ಮಣನೇ ಕೊಲ್ಲುತ್ತಾನೆ. ಲಕ್ಷ್ಮಣನನ್ನು ಕೊಲ್ಲಲು, ರಾವಣನು ಬಿಟ್ಟ ಚಕ್ರವನ್ನೇ, ತನ್ನ ಅನುಕೂಲ ಶಸ್ತ್ರವನ್ನಾಗಿ ಮಾಡಿಕೊಂಡು ಲಕ್ಷ್ಮಣ, ರಾವಣನ ಶಿರಗಳನ್ನು ಕತ್ತರಿಸಿ ಎಸೆಯುತ್ತಾನೆ.

ಹೋರಾಟ ಮುಗಿದು, ದಿಗ್ವಿಜಯಿಗಳಾದ ರಾಮ, ಲಕ್ಷ್ಮಣರು ಸೀತಾ ಸಮೇತ ಲಂಕೆಯಿಂದ ಹೊರಟು ಅಯ್ಯೋಧೆಗೆ ಬರುವಾಗ, ಪೀವರಗಿರಿಯಲ್ಲಿ, ಸ್ಥಿರ ಲಗ್ನದಲ್ಲಿ ಸಾವಿರದ ಎಂಟು ಚಿನ್ನದ ಕಲಶಗಳಿಂದ ಸೀತೆಗೆ ಅಭಿಷೇಕ ಮಾಡಿಸುತ್ತಾನೆ.

ಬರುವಾಗ ಶ್ರೀರಾಮನು ನಲವತ್ತೆರಡು ವರ್ಷಕಾಲ ದಿಗ್ವಿಜಯಗಳನ್ನು ಸಾಧಿಸುತ್ತಾ, ಮಹಾಬಲಶಾಲಿ ರಾಜರುಗಳನ್ನೆಲ್ಲ ಅಧೀನವಾಗಿಸಿ ಕೊಳ್ಳುತ್ತಾ, ಅಯೋಧ್ಯೆ ಅಥವಾ ಸಾಕೇತ ಪಟ್ಟಣವನ್ನು ತಲುಪುತ್ತಾರೆ. ಆದರೆ, ಭರತ, ಶತೃಘ್ನರಿಗೆ ಅದನ್ನು ಬಿಟ್ಟು ಕೊಟ್ಟು, ರಾಮ, ಲಕ್ಷಣರು ವಾರಣಾಸಿಗೆ ಹೋಗಿ, ಅಲ್ಲಿ ಕೆಲಕಾಲ ರಾಜ್ಯಭಾರ ಮಾಡುತ್ತಾರೆ. ಮೊದಲೇ ಅಲ್ಪಾಯುಷಿಯಾದ ಲಕ್ಷ್ಮಣ, ರೋಗಬಾಧೆಯಿಂದ ಸಾವನ್ನಪ್ಪುತ್ತಾನೆ. ಲಕ್ಷ್ಮಣನ ಮಗನಿಗೆ ಪಟ್ಟ ಕಟ್ಟಿ. ರಾಮ ತನ್ನ ಮಗನಾದ ಅಜಿತಂಜಯನಿಗೆ ಮನವೊಲಿಸಿ ಮಿಥಿಲೆಯ ಯುವರಾಜ ಪಟ್ಟವನ್ನುವಹಿಸಿ ಕೊಡುತ್ತಾನೆ.

ಲಕ್ಷ್ಮಣ 'ಪಂಕಪ್ರಭೆ' ಯೆಂಬ ನರಕವನ್ನು ಅನುಭವಿಸಿ ನಂತರ ಮೋಕ್ಷ ಪಡೆಯುತ್ತಾನೆ.

ರಾಮ, ಅಣುವರು ಕೇವಲ ಜ್ಞಾನದಿಂದ ಆರುನೂರು ವರ್ಷಗಳ ನಂತರ ಮೋಕ್ಷ ಪಡೆಯುತ್ತಾರೆ.

ಹೀಗೆ ವಾಲ್ಮೀಕಿಯನ್ನೂ ಬಿಟ್ಟುಕೊಡದೆ ತನ್ನ ಧ್ಯೇಯೋದ್ದೇಶಗಳ ಜೊತೆ ರಾಜಿ ಮಾಡಿಕೊಳ್ಳದೆ ಸುಂದರ. ಸರಳ, ಸುಲಭ ಗ್ರಾಹ್ಯವಾದ ರಾಮಕಾವ್ಯವನ್ನು ದೇವಪ್ಪ ಕವಿ, ಕನ್ನಡ ಕಾವ್ಯ ಪರಂಪರೆಗೆ ಕೊಟ್ಟಿದ್ದಾನೆ. ಇವನ ಕಾವ್ಯದ ಪರಿಶೀಲನೆ. ಚರ್ಚೆ ಮುಂದೆಯಾದರೂ ನಡೆಯ ಬೇಕೆನಿಸುತ್ತದೆ.

◈◈◈◈◈

ನಾಯಕನಹಳ್ಳಿ ಅರಸ ಮುದಿಯಪ್ಪನಾಯಕನ ಕಾಲದಲ್ಲಿ ಲಿಖಿತವಾದ "ಹರಿಹರದೇವರ ರಗಳೆಗಳು" ಹಸ್ತಪ್ರತಿ ಒಂದು ಟಿಪ್ಪಣಿ

◈

ಡಾ. ಬಿ. ನಂಜುಂಡಸ್ವಾಮಿ

ನಾಡು ನುಡಿಯ ಸೇವೆಯನ್ನು ನಾನು ಸಮ್ಮುಖದಲ್ಲಿ ಸಲ್ಲಿಸಿದ ಹಿರಿಯ ವಿದ್ವಾಂಸರ ಕೃತಿಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಬೇಕಾದ ಸಂದರ್ಭ, ಯುವ ವಿದ್ವಾಂಸರು ಹಿರಿಯರ ಸಂಶೋಧನೆಯ ಫಲವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡುತ್ತಾ ಬಂದರೆ ಉಳಿದಿರುವ ಅಲ್ಪ ಸ್ವಲ್ಪ ಗೊಂದಲಗಳು ಪರಿಹಾರವಾಗುತ್ತವೆ. ಹಿರಿಯ ವಿದ್ವಾಂಸರು ಜೀವಿಸಿದ್ದಾಗಲೇ ಅವರ ಜೊತೆ ಚರ್ಚೆ ಸಾಧ್ಯವಾದರೆ ಇನ್ನೂ ಹೆಚ್ಚಿನ ಅಧಿಕೃತತೆ ಬರುತ್ತದೆ. ಆ ನಿಟ್ಟಿನಲ್ಲಿ ಪ್ರಯತ್ನಗಳು ಮೇಲಿಂದ ಮೇಲೆ ನಡೆದರೆ ಸಂಶೋಧನಾ ಫಲ ಹೆಚ್ಚು ಸತ್ತ್ವಭರಿತವಾಗುತ್ತದೆ.

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಅರಸು ಮನೆತನದ ಬಗ್ಗೆ ಸುಮಾರು ೧೯೯೦ರಿಂದ ಅಧ್ಯಯನ ಮಾಡುತ್ತಾ ಬಂದಿದ್ದೇನೆ. ಹರಿಹರದೇವರ ರಗಳೆಗಳ ಸಂಪಾದನೆಯಲ್ಲಿ ವಿಶೇಷವಾಗಿ ಉಲ್ಲೇಖಗೊಂಡ ನೂರಿಪ್ಪತ್ತು ರಗಳೆಗಳು ಇರುವ ಈ ಹಸ್ತಪ್ರತಿಯ ಬಗ್ಗೆ ಲೇಖನ ಬರೆಯಲು ಸಿದ್ಧತೆ ಮಾಡಿಕೊಂಡು ಲೇಖನ ಪ್ರಾರಂಭ ಮಾಡಿದ್ದು ೧೯೯೫ರಲ್ಲಿ. ಹಸ್ತಪ್ರತಿಯ ಮಾಹಿತಿ ಸಂಗ್ರಹಣೆಗೆ ಬಹಳಷ್ಟು ಸಮಯ ಬೇಕಾದ್ದರಿಂದ ಆ ಬಗ್ಗೆ ವಿವರ ಆಕಾಶಗಮ್ಯವಾದ್ದರಿಂದ ಬಹಳ ಸಾವಕಾಶವಾಯಿತು.

ಲಿಂ॥ ಎಚ್. ದೇವೀರಪ್ಪನವರು ಹಂಪೆಯ ಹರಿಹರದೇವನ ಇಪ್ಪತ್ತುನಾಲ್ಕು ರಗಳೆಗಳನ್ನು ಗ್ರಂಥ ಸಂಪಾದನಾ ಶಾಸ್ತ್ರದಂತೆ ಸಂಪಾದಿಸಿದ್ದಾರೆ. "ಶರಣ ಚರಿತ ಮಾನಸಂ" ಹೆಸರಿನಲ್ಲಿ ಸಿರಿಗೆರೆ 'ಅಣ್ಣನ ಬಳಗದ' ಪರವಾಗಿ ಮೈಸೂರಿನ ಶ್ರೀ ಗೌರೀಶಂಕರ ಬುಕ್ ಡಿಪೋ, ದೇವರಾಜ ಮಾರ್ಕೆಟ್ ಇವರು ೧೯೬೭ರಲ್ಲಿ

ಪ್ರಕಟಿಸಿದರು. ಕೃತಿಯನ್ನು ಲಿಂ॥ ಡಾ. ಫ.ಗು. ಹಳಕಟ್ಟಿಯವರಿಗೆ ಅರ್ಪಿಸಲಾಗಿದೆ. ಕನ್ನಡ ನಾಡಿನ ಹಿರಿಯ ವಿದ್ವಾಂಸರಾದ ದಿ॥ ಡಾ॥ ಡಿ.ಎಲ್. ನರಸಿಂಹಾಚಾರ್‌ರವರು ಮುನ್ನುಡಿ ಬರೆದಿದ್ದಾರೆ. ಕವಿ-ಕಾವ್ಯ ವಿಚಾರವನ್ನು ಕುರಿತು ವಿಶೇಷವಾದ ಪೀಠಿಕೆಯನ್ನು ದೇವೀರಪ್ಪನವರು ಬರೆದಿದ್ದಾರೆ. ೫೬೦ ಪುಟದ ಈ ಹೆಬ್ಬೊತ್ತಿಗೆ ಹರಿಹರನ ಕೃತಿಗಳನ್ನು ಅಧ್ಯಯನ ಮಾಡುವವರಿಗೆ ಒಂದು ಕೈಗನ್ನಡಿ. ಈ ಪುಸ್ತಕಕ್ಕೆ ಬಳಸಿದ ಹಸ್ತಪ್ರತಿಗಳ ವಿವರ ಕೊಡುತ್ತಾ "೨ಇ" ಹಸ್ತಪ್ರತಿ ಬಗ್ಗೆ ಈ ಮಾತುಗಳನ್ನು ಬರೆದಿದ್ದಾರೆ.೧

೨ ಇ-ಇದನ್ನು ಚಿತ್ರದುರ್ಗದ ಪ್ರತಿ ಎಂದು ಕರೆದಿದೆ. ಇದು ಚಿಕ್ಕನಾಯಕನಹಳ್ಳಿಯ ಪ್ರತಿ. ೨೮೫ ಪತ್ರಗಳಿವೆ. "ಕ್ರೋಧನ ಸಂವತ್ಸರದ ಭಾದ್ರಪದ ಶು ೧೨ರಲ್ಲಿ ಮುದಿಯಪ್ಪನಾಯಕರ ಬಂಟನಾದಂಥ ಗಡೆಯ ಪಾಫಯ್ಯನ ಸುಪುತ್ರ ಕೃಷ್ಣಯ್ಯನು ಬರೆದು ಮುಗಿಸಿದುದು. ಈ ಲಿಪಿಕಾರನು "ಬರಹ ಕಲಿಸಿದ ಮಲ್ಲಪ್ಪಯ್ಯನ ಪಾದಕೆ ಶರಣು ಶರಣು" ಎಂದು ಗ್ರಂಥಾಂತ್ಯದಲ್ಲಿ ತನ್ನ ಗುರುವನ್ನು ಭಕ್ತಿಯಿಂದ ಸ್ಮರಿಸಿರುವನು. ಅಲ್ಲಲ್ಲಿ ಸುಂದರವಾದ ಚಿತ್ರಗಳನ್ನು ಬಿಡಿಸಿರುವನು ಶಕಟರೇಫವನ್ನು ಬಳಸಿರುವನು ಅಕ್ಷರಗಳು ತುಂಬ ಚೆಲುವಾಗಿವೆ ಎಂದಿದ್ದಾರೆ.

ಡಾ॥ ಹಿರೇಮಲ್ಲೂರ ಈಶ್ವರನ್ ಅವರು ರಚಿಸಿದ ಮಹಾಪ್ರಬಂಧ "ಹರಿಹರನ ಕೃತಿಗಳು ಒಂದು ಸಂಖ್ಯಾ ನಿರ್ಣಯ" ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ೧೯೭೧ರಲ್ಲಿ ಪ್ರಕಟವಾಗಿದೆ. ಈ ಮಹಾಪ್ರಬಂಧದ ಮಾರ್ಗದರ್ಶಕರು ಪ್ರೊ॥ ಸ.ಸ. ಮಾಳವಾಡರವರು ಡಾ. ಹಿರೇಮಲ್ಲೂರ ಈಶ್ವರನ್ ತಮ್ಮ ಮಹಾಪ್ರಬಂಧದಲ್ಲಿ ತಾವು ಅವಲೋಕಿಸಿದ ಹರಿಹರ ರಗಳೆಗಳ ಹಸ್ತಪ್ರತಿ ಬಗ್ಗೆ ವಿಸ್ತೃತವಾದ ವಿವರವನ್ನು ನೀಡಿದ್ದಾರೆ.೨

ii. 'ಇ' ಪ್ರತಿ

ಈ ಓಲೆಗ್ರಂಥವು ಚಿತ್ರಕಲ್‌ದುರ್ಗ ಮಠದ ಶಾರದಾ ಭಂಡಾರಕ್ಕೆ ಸೇರಿದ್ದು. ಇದರಲ್ಲಿ ಒಟ್ಟು ೨೮೫ ಗರಿಗಳಿರುವವು. ಗ್ರಂಥದ ಉದ್ದ ಥ ಅಗಲ ೨೦" ಥ ೨" ಇರುವುದು. ಒಂದು ಪುಟಕ್ಕೆ ೧೨ ಪಂಕ್ತಿಗಳಿರುವವು. ಗ್ರಂಥಕ್ಕೆ ರಕ್ಷಾಕವಚವಾಗಿರುವ ಕಟ್ಟಿಗೆಯ ಪಟ್ಟಿಯ ಮೇಲೆ "ಹಂಪೆಯ ಹರೀಶ್ವರ ದೇವರು ನಿರೂಪ್ಸಿದ ೧೨೨ ರಗಳೆ" ಎಂದು ಬರೆದು ೧೨೨ ಅಂಕಿಯನ್ನು ತಿದ್ದಿ "೧೨೦" ಎಂದು ಮಾಡಲಾಗಿದೆ. ಅದೇ ಪಟ್ಟಿಯ ಮೇಲೆ "ನೂಜೊಂದು ರಗಳೆ" ಎಂದು ಬರೆಯಲಾಗಿದೆ.

ಲಿಪಿಗಾರರು "ಶ್ರೀ ವಿರೂಪಾಕ್ಷಲಿಂಗಾಯ ನಮಃ" "ಶ್ರೀ ತೀರ್ಥರಾಮೇಶ್ವರ ಲಿಂಗಾಯ ನಮಃ" "ಶ್ರೀ ಹಂಪೆಯ ಹರೀಶ್ವರ ದೇವರು ಪೇಳಿದ ನೂಜಿಪ್ಪತ್ತು ರಗಳೆಯ ಪುಸ್ತಕಕ್ಕೆ ಶುಭಮಸ್ತು ಶೋಭನಮಸ್ತು" ಎಂದು ಪೀಠಿಕೆಯಲ್ಲಿ ಹೇಳಿ ಪ್ರತಿಮಾಡುವುದಕ್ಕೆ ಪ್ರಾರಂಭಿಸಿದ್ದಾರೆ. ಕೊನೆಯಲ್ಲಿ "ಅಂತು ರಗಳೆ-ಕ್ಕಂ ರಗಳೆ

ಸಂಪೂರ್ಣಂ" ಎಂದು ಬರೆದು ರಗಳೆಯ ಸಂಖ್ಯೆಯನ್ನು ಉಲ್ಲೇಖಿಸಲಾರದೆ ಹೋಗಿರುವನು. ಪ್ರತಿ ಮುಗಿಸುವಲ್ಲಿ ಹೀಗೆ ಬರೆದಿದ್ದಾನೆ.

"ಸ್ವಸ್ತಿ ಶ್ರೀ ಓಂ ನಮಃಶಿವಾಯ ನಮಃ"
ಕೃತಿಯೆಂತು ಚೆಂಬುದಜೆಯೆಂ
ಪ್ರತಿಯಂ ತಿರ್ದುವೊಡೆ ವರ್ಮಕರ್ಮವನಜೆಯೆಂ।
ಮತಿವಂತರ್ಬಯ್ಯದಿರಾಂ
ಪ್ರತಿಯೊಳಗೆಂತಿರ್ದುದಿರ್ದ ಪರಿಯೊಳೆ ಬರದೆಂ॥

ಶ್ರೀ ವಿರೂಪಾಕ್ಷಾಯ ನಮಃ ಶ್ರೀ ತೀರ್ಥರಾಮೇಶ್ವರಲಿಂಗಾಯ ನಮಃ ಶ್ರೀ ಗುರುವಿನ ಪಾದಪದ್ಮಂಗಳಿಗೆ ಶರಣು ಶರಣು ಶರಣು

ಪರಮಪವಿತ್ರನಾಗುಮಿಗೆ ಪೆರ್ಚಲಿ ನಿನ್ನೊಳಗಾಯ ಶ್ರೀಯು ಮ
ತ್ತುರತರ ಪುತ್ರಪೌತ್ರರುಜೆ ಬಾಂಧವ ಸಂಕುಳವೆಲ್ಲ ಸಂತತಂ
ವರಗುರು ತೀರ್ಥರಾಮೆನೊಲವಿಂ ಸಲೆ ಸಂತಸದಿಂದೆಯೆನ್ನಯೀ
ಪರತೆಯೊಳೆಯ್ದೆ ಬಾಳೆ ಮುದಿಯೇಂದ್ರ ಮಹೀಪತಿ ಭಕ್ತಬಾಂಧವಾ

ಸ್ವಸ್ತಿಶ್ರೀ ವಿಜಯಾಭ್ಯುದಯ ಸಾಲಿವಾಹನ ಶಕ ವರುಷಂಗಳು ________ ನೆಯ ಕ್ರೋಧನ ಸಂವತ್ಸರದ ಭಾದ್ರಪದ ಹನ್ನೆರಡಲು ಮುದಿಯಪ್ಪ ನಾಯಕ್ಕರ ಬಂಟನಾದಂಥ ಗಡೆಯ ಪಾಪಯ್ಯನ ಸುಪುತ್ರ ಕೃಷ್ಣಯ್ಯನು ಬರದ ಸಮರ್ಪಿಸಿದ ಪುಣ್ಯಪುರಾತನರ ಶಾಸ್ತ್ರದ ಪುಸ್ತಕ ಹಂಪಿಯ ಹರೀಶ್ವನ ದೇವರು ವಿರಚಿಸಿದ ನೊಜೆಪ್ಪತ್ತು ಪುಣ್ಯ ಗರಳೆಯು ಸಂಪೂರ್ಣಂ ಮಂಗಳಮಹಾ ಶ್ರೀ ಶ್ರೀ ಶ್ರೀ ಶೋಭನಮಸ್ತು ನಿರ್ವಿಘ್ನಮಸ್ತು ಆಯುರಾರೋಗ್ಯ ಐಶ್ವರ್ಯಮಸ್ತು ಬರಹವ ಕಲಿಸಿದ ಮಲ್ಲಪ್ಪಯ್ಯನ ಪಾದಕ್ಕೆ ಶರಣು ಶರಣು.

ಗ್ರಂಥದ ಆರಂಭದ ಮೊದಲಲ್ಲಿ ಮೂರು ಗರಿಗಳು. ಕೊನೆಯಲ್ಲಿ ನಾಲ್ಕು ಗರಿಗಳು ಖಾಲಿ ಇದೆ. ಆದಿಯಿಂದ ಅಂತ್ಯದವರೆಗಿನ ಎಲ್ಲ ರಗಳೆಗಳ ಹೆಸರುಗಳನ್ನು ಬರೆದು ಎಣಿಸಿದರೆ ಅವುಗಳ ಸಂಖ್ಯೆ ೧೨೫ ಆಗುವುದು. ಇದರಲ್ಲಿ ನಾಲ್ಕು ರಗಳೆಗಳು ಪುನರಾವೃತ್ತಿಯಾಗಿರುವವು. ಅಲ್ಲದೆ ತಿರುಜ್ಞಾನ ಸಂಬಂಧದ ರಗಳೆಯ ಹೆಸರನ್ನು ಮಾತ್ರ ಉಲ್ಲೇಖಿಸಿ ಈ ಹೆಸರಿನ ರಗಳೆಯನ್ನೇ ಬರೆದಿರುವುದಿಲ್ಲ. ಈ ಗ್ರಂಥದಲ್ಲಿಯೂ ಅ.ಕ.ಗ. ಇರುವುದು. ಶಕಟ ರೇಫವನ್ನು ಬಳಸಲಾಗಿದೆ. ಪ್ರತಿ ರಗಳೆಯ ಪ್ರಾರಂಭದ ಗರಿಯ ಎರಡೂ ಅಂಚಿನಲ್ಲಿ ನಯನ ಮನೋಹರವಾದ ಚಿತ್ರಗಳನ್ನು ಕೊರೆದು ಅತಿ ಶ್ರದ್ಧೆಯಿಂದ ಮಸಿತುಂಬಿ ಗ್ರಂಥವನ್ನು ಪ್ರತಿಕಾರನು ಅಂದಗೊಳಿಸಿರುವನು. ಗ್ರಂಥವು ಅಚ್ಚುಕಟ್ಟಾಗಿಯೂ, ಶುದ್ಧವಾಗಿಯೂ ಇದೆ ಎಂದಿದ್ದಾರೆ.

ಇದೇ ಹಸ್ತಪ್ರತಿಯ ಉಲ್ಲೇಖ ಶ್ರೀ ಎಚ್. ದೇವೀರಪ್ಪನವರಿಂದ ಸಂಪಾದಿತರಾಗಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಪ್ರಕಟಗೊಂಡ "ಹರಿಹರೇತರಕೃತ ವಿರೂಪಾಕ್ಷಾಂಕಿತ ಶಿವಶರಣ ಸಂಪುಟ"೩ ಪುಟ ೧೨೮ರಲ್ಲಿ "ಪಾಠಶೋಧನೆ" ಎಂಬ ಉಪಶೀರ್ಷಿಕೆಯ ಅಡಿಯಲ್ಲಿ ಈ ಮೇಲಿನ ಹಸ್ತಪ್ರತಿ ಬಗ್ಗೆ ಈ ರೀತಿ ಬರೆದಿದ್ದಾರೆ.

"ಡಾ॥ ಹಿರೇಮಲ್ಲೂರು ಈಶ್ವರನ್ ಅವರಲ್ಲಿದ್ದ ತಾಳೆಯೋಲೆಯ ಪ್ರತಿ, ಪತ್ರ ಸಂಖ್ಯೆ ೨೮೫ ಬರವಣಿಗೆ ಲಕ್ಷಣವಾಗಿದೆ. ಶಕಟರೇಫದ ಬಳಕೆಯೂ ಇದೆ. ಇದನ್ನು ಪ್ರತಿ ಮಾಡಿ ಮುಗಿಸಿದ್ದು ಕ್ರಿ.ಶ. ೧೭೪೫ರಲ್ಲಿ. ಗಡೆಯ ಪಾಪಯ್ಯನ ಸುಪುತ್ರನಾದ ಕೃಷ್ಣಯ್ಯನು ತನ್ನ ಸ್ವಾಮಿಯಾದ ಮುದಿಯಪ್ಪವಾಯರಿಗಾಗಿ ಬರೆದುದು ಪ್ರತಿ ತುಂಬ ಚೆಲುವಾಗಿದೆ. ಸಮಗ್ರವಾಗಿದೆ ಎಂದಿದ್ದಾರೆ.

ಶ್ರೀ ಎಚ್. ದೇವೀರಪ್ಪನವರು ಬರೆದ "ಕನ್ನಡ ಹಸ್ತಪ್ರತಿಗಳ ಇತಿಹಾಸ"೪ ಕಿರುಪುಸ್ತಕ ೧೯೭೭ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿದೆ. ಮೇಲಿನ ಪುಸ್ತಕದ ಪುಟ ೫೭ರಲ್ಲಿ ಈ ಮೇಲಿನ ಹಸ್ತಪ್ರತಿಯ ಪುಷ್ಟಿಕೆಯನ್ನು ಪ್ರಕಟಿಸಿ "ಲಿಪಿಗಾರಿಕೆಯನ್ನು ಕಲಿಸಿದ ಗುರು ಮಲ್ಲಪ್ಪಯ್ಯನನ್ನು ಈ ಪ್ರತಿಕಾರನು ಭಕ್ತ್ಯಭಿಮಾನಗಳಿಂದ ಸ್ಮರಿಸಿದ್ದಾನೆ. ಇಂತಹ ಶಿಷ್ಯ ಯಾವ ಕಾಲಕ್ಕೂ ಅಪರೂಪ" ಎಂದಿದ್ದಾರೆ.

ಈ ಮೇಲಿನ ಪುಷ್ಟಿಕೆಯಲ್ಲಿ ಶಕವರ್ಷ ಮತ್ತು ವಾರ ಲಿಖಿತವಾಗದೆ ಇರುವುದರಿಂದ ಕಾಲದ ಬಗ್ಗೆ ನಿರ್ಧರಿಸಿವುದು ಕಷ್ಟವಾಗುತ್ತದೆ. ಇದೇ ಹಸ್ತಪ್ರತಿಯ ಪುಸ್ತಿಕೆಂಯುನ್ನು ವಿದ್ವಾನ್ ಎಂ.ಎಸ್. ಬಸವರಾಜಂಯ್ಯನವರು ಚಿಕ್ಕನಾಯಕನಹಳ್ಳಿಯಿಂದ ಪ್ರಕಟವಾದ ಶ್ರೀ ಜಿ.ವಿ. ನಾರಾಯಣಮೂರ್ತಿಯವರ ಸಂಭಾವನಾ ಗ್ರಂಥ ಸರ್ವೋದಯ ಪಥ೫ "ಚಿಕ್ಕನಾಯಕನಹಳ್ಳಿ ರಾಜರ್ಷಿ ಧರ್ಮಪ್ರಭು ಮುದಿಯಪ್ಪನಾಯಕ" ಲೇಖನದಲ್ಲಿ ಈ ಪುಷ್ಟಿಕೆಯನ್ನು ಯಥಾವತ್ತಾಗಿ ಮುದ್ರಿಸಿದ್ದಾರೆ. ಇಲ್ಲಿ ಒಂದು ವಿಷಯ ಸ್ಪಷ್ಟ ಮಾಡಬೇಕು. ಈ ಲೇಖನದಲ್ಲಿ ವಿಷದವಾಗಿ ಚರ್ಚೆಯಾಗಿರುವ ನಾಯಕ ಇಮ್ಮಡಿ ಮುದಿಯಪ್ಪ ನಾಯಕ ಆತನ ರಾಜಧಾನಿ ಹಾಗಲವಾಡಿ ಆ ಸಮಯಕ್ಕೆ ಹಾಗಲವಾಡಿ ದೊರೆಗಳೆಂದು ಪ್ರಖ್ಯಾತಿ ಹೊಂದಿದ್ದರು ಎಂದಿದ್ದಾರೆ. ಶೀರ್ಷಿಕೆಯಲ್ಲಿ "ಚಿಕ್ಕನಾಯಕನಹಳ್ಳಿ ಹಾಗಲವಾಡಿ" ಎಂದು ಪ್ರಸ್ತಾಪವಾಗಬೇಕಾಗಿತ್ತು. ಇಮ್ಮಡಿ ಮುದಿಯಪ್ಪನಾಯಕನ ಕಾಲಕ್ಕೆ ಚಿಕ್ಕನಾಯಕನಹಳ್ಳಿ ವಶದಲ್ಲಿ ಇರಲಿಲ್ಲ. ಈ ಲೇಖನದಲ್ಲಿ ವಿದ್ವಾನ್ ಎಂ.ಎಸ್. ಬಸವರಾಜಯ್ಯನವರು ಸೋಸಲೆಯ ರೇವಣಾರಾಧ್ಯರಿಂದ ಪುಷ್ಪದಂತ ವಿರಚಿತವಾದ ಪ್ರಾಚೀನತಮವಾದ "ಶಿವಮಹಿಮಾಸ್ತೋತ್ರಕ್ಕೆ" "ಮಹಿಮ್ನಃಪ್ರದೀಪಿಕಾ" ಎಂಬ ಕನ್ನಡ ಟೀಕೆಯೊಂದನ್ನು ಈ ದೊರೆಯೇ

ಬರೆಯಿಸಿರುವನು. ಈ ಅಂಶವು ಆ ಕನ್ನಡ ಟೀಕೆಯ ಅಂತ್ಯದಲ್ಲಿ ಸಂಸ್ಕೃತದಲ್ಲಿ ಬರೆದಿರುವ ಶ್ಲೋಕ

ಚಿಕನಾಯಕಪೂಷ್ಕರ್ತುಃ। ಮುದಿನಾಯಕಭೂಭುಜಃ।

ಮುದೇ ಟೀಕಾ ಕಾರಿತೇಯಂ। ಸೋಮಶೇಖರಯೋಗಿನಾ॥

ಎಂಬ ಶ್ಲೋಕದಿಂದ ಚಿಕ್ಕನಾಯಕಪಟ್ಟಣ (ಚಿಕ್ಕನಾಯಕನಹಳ್ಳಿ) ದೊರೆಯಾದ ಮುದಿಯಪ್ಪನಾಯಕ ಮಹಾರಾಜನಿಗಾಗಿ ಆತನ ಗುರುಗಳಾದ ಸೋಮಶೇಖರಶಿವಯೋಗಿಗಳ ಪ್ರೇರಣೆಯಿಂದ ಈ ಟೀಕೆಯು ತನ್ನಿಂದ ರಚಿಸಲ್ಪಟ್ಟಿರುವುದಾಗಿದೆ ಎಂದು ಸೋಸಲೆಯ ರೇವಣಾರಾಧ್ಯರೇ ಸ್ವತಃ ತಿಳಿಸಿರುವರು ಎಂದಿದ್ದಾರೆ. ಸೋಸಲೆ ರೇವಣಾರಾಧ್ಯರ ಕಾಲ ವಿದ್ವಾಂಸರು ಒಪ್ಪಿರುವಂತೆ ಸುಮಾರು ಕ್ರಿ.ಶ. ೧೬೭೩. ಆ ಸಮಯದಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ರಾಜ್ಯವಾಳುತ್ತಾ ಇದ್ದವನು ಹಿರಿಯ ಮುದಿಯಪ್ಪನಾಯಕ. ಈತ ಸ್ವತಃ ಕವಿ ಅಲ್ಲದೇ ಇದ್ದರೂ ಶಿವಾನುಭವಿಯಾಗಿದ್ದ. ಇವನ ಕಾಲ ಕ್ರಿ.ಶ. ೧೫೯೧–೧೬೨೬. ಈತ ಹಾಗಲದಹಳ್ಳಿಗೆ ಹೊಸಕೋಟೆಯನ್ನು ಕಟ್ಟಿಸಿದ ನಂತರ ಆ ಊರಿಗೆ ಹೊಸ ವೈಭವ ಬಂದು ಹಾಗಲದಳ್ಳಿ ಅಂದಿನಿಂದ ಹಾಗಲವಾಡಿ ಎನಿಸಿಕೊಂಡಿತು. ಆದಾಗ್ಯೂ ಮುದಿಯಪ್ಪನಾಯಕನು ಚಿಕ್ಕನಾಗನಹಳ್ಳಿಯಲ್ಲೇ ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡು ಆಡಳಿತವನ್ನು ಮುಂದುವರಿಸಿ ಹಲವು ವೀರಶೈವ ಮಠಗಳಿಗೆ ಸಹಾಯ ಮಾಡಿ ಸೋಸಲೆ ರೇವಣಾಚಾರ್ಯ ಎಂಬ ವೀರಶೈವ ಕವಿಗೆ ಆಶ್ರಯನೀಡಿ ಅವನಿಂದ ಹಲವಾರು ಕೃತಿಗಳನ್ನು ಬರೆಯಿಸಿ ಸುಮಾರು ನಲವತ್ತು ವರ್ಷಗಳು ಬಿಗಿಯಾದ ಆಡಳಿತವನ್ನು ನಡೆಸಿ ಕ್ರಿ.ಶ. ೧೬೨೬ ರಲ್ಲಿ ಮರಣ ಹೊಂದಿದನು.೬

ಹಸ್ತಪ್ರತಿಯ ಪುಷ್ಪಿಕೆಯಲ್ಲಿ ಲಿಪಿಗಾರ ಬರೆದರುವ ಪುಷ್ಪಿಕೆಯಲ್ಲಿ "ಮುದಿಯೇಂದ್ರ ಮಹೀಪತಿ" ಎಂದು ಮಾತ್ರ ಉಲ್ಲೇಖವಿದೆ. ಚಿಕ್ಕನಾಯಕನಹಳ್ಳಿಗೆ ಬಹಳ ಸಮೀಪ ಇರುವ ತೀರ್ಥಪುರದಲ್ಲಿ ತೀರ್ಥರಾಮೇಶ್ವರ ದೇವಾಲಯವಿದೆ. ಚಿಕ್ಕನಾಯಕನಹಳ್ಳಿ–ಹಾಗಲವಾಡಿ ಅರಸು ಮನೆತನದ ಕುಲದೈವ. ಈ ಮೇಲಿನ ಅಧ್ಯಯನದಿಂದ ಹರಿಹರನ ರಗಳೆಯಲ್ಲಿ ಉಲ್ಲೇಖಗೊಂಡಿರುವ ಮುದಿಯಪ್ಪನಾಯಕ ಮೊದಲೇ ಮುದಿಯಪ್ಪನಾಯಕನೇ ಇರಬೇಕು. ಡಾ॥ ಡಿ.ಎನ್. ಯೋಗೀಶ್ವರಪ್ಪ ತಮ್ಮ ಮಹಾಪ್ರಬಂಧದ ೭ನೇ ಅಧ್ಯಾಯ "ಸಾಹಿತ್ಯ ವಾಸ್ತು ಮತ್ತು ಶಿಲ್ಪ"ದ ಅಧ್ಯಾಯ ಪುಟ ೧೮೭ರಲ್ಲಿ "ಇಮ್ಮಡಿ ಮುದಿಯಪ್ಪನಾಯಕನು ಕೃಷ್ಣಯ್ಯ ಎಂಬ ಹಸ್ತಪ್ರತಿ ಲಿಪಿಗಾರನಿಗೆ ಆಶ್ರಯವನ್ನು ನೀಡಿ ಪುರಾತನಶಾಸ್ತ್ರ ಎಂಬ ಕೃತಿಯನ್ನು ಪ್ರತಿಮಾಡಲು ಆದೇಶವನ್ನು ನೀಡಿದನು. ಕೃಷ್ಣಯ್ಯ ಬರೆದ ಹಸ್ತಪ್ರತಿ ಪ್ರಶಸ್ತಿ ಹೀಗಿದೆ ಎಂದು ಲಿ॥ ಹೆಚ್. ದೇವೀರಪ್ಪನವರು "ಕನ್ನಡ ಹಸ್ತಪ್ರತಿಗಳ ಇತಿಹಾಸ"ದಲ್ಲಿ ಕೊಟ್ಟ ಪುಷ್ಪಿಕೆ ಅಥವಾ ಪ್ರಶಸ್ತಿಯನ್ನು ಯಥಾವತ್ತಾಗಿ ಕೊಟ್ಟಿದ್ದಾರೆ.

ತಮ್ಮ ಮಹಾಪ್ರಬಂಧದಲ್ಲಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಲು ಕಾರಣ ವಿದ್ವಾನ್ ಎಂ.ಎನ್.ಬಸವರಾಜಯ್ಯನವರ "ಸರ್ವೋದಯ ಪಥ"ದಲ್ಲಿ ಪ್ರಕಟವಾದ ಲೇಖನ ತಮ್ಮ ಡಾ. ಡಿ.ಎನ್. ಯೋಗೀಶ್ವರಪ್ಪ ತಮ್ಮ ಮಹಾಪ್ರಬಂಧದ ಮರುಮುದ್ರಣದಲ್ಲಿ ಈ ಬಗ್ಗೆ ಮತ್ತೆ ವಿಸ್ತೃತವಾಗಿ ಚರ್ಚೆ ಮಾಡಿ ತಿದ್ದುಪಡಿಯನ್ನು ಮಾಡಬಹುದು. ಪ್ರಕಟಿತ ಹಸ್ತಪ್ರತಿ ಪುಷ್ಪಿಕೆಯಲ್ಲಿ ಇಮ್ಮಡಿ ಎಂಬ ಶಬ್ದವೆ ಇಲ್ಲ.

ಹರಿಹರನ ರಗಳೆ ಹಸ್ತಪ್ರತಿ ಈಗ ಯಾರಲ್ಲಿ ಇದೆ ಅನ್ನುವ ಕುತೂಹಲ ಬಹಳ ವರ್ಷದಿಂದ ಅದರ ಬೆನ್ನಹತ್ತಿ ವಿವರವನ್ನು ಸಂಗ್ರಹಿಸುವಾಗ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಹಸ್ತಪ್ರತಿಗಳ "ಮೈಕ್ರೋಫೀಲಂ ಸೂಚಿ"೭ ಪುಟ ೩೧೨ ರಲ್ಲಿ "ಹರಿಹರನ ರಗಳೆಗಳು" ಶೀರ್ಷಿಕೆಯ ಅಡಿಯಲ್ಲಿ ಈ ಹಸ್ತಪ್ರತಿ ವಿವರ ನೀಡಿದ್ದಾರೆ. ಹಸ್ತಪ್ರತಿ ಪುಷ್ಪಿಕೆಯನ್ನು ಮುದ್ರಿಸಿದ್ದಾರೆ. ಮೈಕ್ರೂಫಿಲಂ ಮಾಡಲು ಶ್ರೀ ಎಸ್. ಬಸಪ್ಪನವರು ಈ ಹಸ್ತಪ್ರತಿ ತಂದ ಪ್ರತಿ ಎನ್ನುವ ಮಾಹಿತಿ ಲಭ್ಯವಿದೆ. ಈಗ ಮೂಲಹಸ್ತಪ್ರತಿಯಾರ ಸಂಗ್ರಹದಲ್ಲಿ ಇದೆಯೋ ಗೊತ್ತಿಲ್ಲ. ಬಹಳ ಬೆಲೆಬಾಳುವ ಅಪರೂಪದ ಹಸ್ತಪ್ರತಿಯು ಮೈಕ್ರೊಫಿಲಂ ರೂಪದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಭಂಡಾರದಲ್ಲಿ ರಕ್ಷಿಸಲ್ಪಟ್ಟಿದೆ.

ಆಕರಗಳು :

೧) ಹಂಪೆಯ ಹರಿಹರದೇವರ ಶರಣ ಚರಿತ ಮಾನಸಂ ಸಂಪಾದಕ : ಎಚ್. ದೇವೀರಪ್ಪ ಎಂ.ಎ., ಪ್ರಕಾಶಕರು ಅಣ್ಣನ ಬಳಗದ ಪರವಾಗಿ ಶ್ರೀ ಗೌರೀಶಂಕರ ಬುಕ್ ಡಿಪೋ ದೇವರಾಜ ಮಾರ್ಕೆಟ್, ಮೈಸೂರು ೧೯೬೮, ಪುಟ ಪೀಠಿಕೆ ccxiv

೨) ಹರಿಹರನ ಕೃತಿಗಳು [ಒಂದು ಸಂಖ್ಯೆ ನಿರ್ಣಯ] ಲೇಖಕ ಹಿರೇಮಲ್ಲೂರ ಈಶ್ವರನ್ ಎಂ.ಎ., ಪಿ.ಎಚ್.ಡಿ (ಕ.ಯು.ಧಾ) ಬಿ.ಲಿಟ್ (ಅಕ್ಸನ್) ಡಿ.ಲಿಟ್., (ಲಾಯಿಡನ್) ಸಮಾಜ ವಿಜ್ಞಾನ ಪ್ರಾಧ್ಯಾಪಕರು, ಯಾರ್ಕ್ ವಿಶ್ವವಿದ್ಯಾನಿಲಯ, ಟೊರಾಂಟೊ, ಕ್ಯಾನಡ ಪ್ರಕಾಶಕರು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ೧೯೭೧ ಮೈಸೂರು ಪುಟ ೪೬

೩) ಹರಿಹರೇತರಕೃತ ವಿರೂಪಾಕ್ಷಾಂಕಿತ "ಶಿವಶರಣ ಸಂಪುಟ" ಸಂಪಾದಕ ಎಚ್. ದೇವೀರಪ್ಪ ಪ್ರಕಾಶಕರು ಪ್ರಕಟಣಾ ಮತ್ತು ಪ್ರಚಾರೋಪನ್ಯಾಸ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ೧೯೭೩ ಪುಟ ೧೨೮

೪) ಕನ್ನಡ ಹಸ್ತಪ್ರತಿಗಳ ಇತಿಹಾಸ ಲೇಖಕ ಎಚ್. ದೇವೀರಪ್ಪ ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೧೯೭೭ ಪುಟ ೫೬

೫) ಸರ್ವೋದಯ ಪಥ ಸಂಪಾದಕ ಜವರೇಗೌಡ ಜಿ. ಪ್ರಕಾಶಕರು ಜಿ.ವಿ.ನಾ ಅಭಿನಂದನಾ ಸಮಿತಿ ಚಿಕ್ಕನಾಯಕನಹಳ್ಳಿ ೧೯೮೨ ಪುಟ ೩೨೦

೬) ಹಾಗಲವಾಡಿ ನಾಯಕರು ಡಾ. ಡಿ.ಎನ್. ಯೋಗೀಶ್ವರಪ್ಪ ಕನ್ನಡ ವಿಶ್ವವಿದ್ಯಾಲಯ ಹಂಪಿ. ಹೊಸಪೇಟೆ ೧೯೯೯ ಪುಟ ೩೬

೭) ಕನ್ನಡ ಹಸ್ತಪ್ರತಿಗಳ "ಮೈಕ್ರೋಫಿಲಂ ಸೂಚಿ" ಸಂಪಾದಕ ಬಿ.ಎಸ್. ಸಣ್ಣಯ್ಯ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೮೮ ಪು೧ ೩೧೨

◈◈◈◈◈

ಕನ್ನಡ ಸಂಶೋಧನೆಯ ಇತ್ತೀಚಿನ ಒಲವುಗಳು

◈

ಡಾ. ಎನ್. ಆರ್. ಲಲಿತಾಂಬ

ಕನ್ನಡದಲ್ಲಿ ಸಂಶೋಧನೆಯ ಪರಿಕಲ್ಪನೆಯು ವಸಾಹತುಶಾಹಿಯ ಭಾರತದ ರಾಜಕೀಯ ಆಳ್ವಿಕೆಗೆ ಪೂರಕವಾಗಿ ಇತಿಹಾಸ ರಚನೆ ಮತ್ತು ಜ್ಞಾನ ಸೃಷ್ಟಿಯ ಕಾರ್ಯಗಳನ್ನು ಮಾಡುವುದರ ಒಂದು ಭಾಗವಾಗಿ ರೂಪುಗೊಂಡಿತು. ಈ ಕಾರ್ಯದಲ್ಲಿ ಬ್ರಿಟಿಷರು ಆರಂಭಿಸಿದ ಆಧುನಿಕ ಶಿಕ್ಷಣ ಹಾಗೂ ಮುದ್ರಣ ಸಂಸ್ಕೃತಿಯು ಪೂರಕವಾಗಿ ಕನ್ನಡ ಸಂಶೋಧನೆಗೆ ಪ್ರೇರಣೆಯನ್ನು ನೀಡಿತು. ಈ ಕಾಲದ ಸಂಶೋಧಕರು ಪೂರ್ವದ ದೇಶಗಳ ಸಮಾಜ ಸಂಸ್ಕೃತಿ ಭಾಷೆ ಚರಿತ್ರೆಗಳನ್ನು ಅರಿಯಲು ತಮ್ಮದೇಆದ ದೃಷ್ಟಿಕೋನಗಳನ್ನು ಹೊಂದಿದ್ದರು. ಪಾಶ್ಚಾತ್ಯ ಅಧಿಕಾರಿಗಳು ಸಂಶೋಧಕರಾಗಿ ದೇಸಿ ವಿದ್ವಾಂಸರು ಅವರ ಸಂಶೋಧನಾ ಸಹಾಯಕರುಗಳಾಗಿ ಈ ಕಾಲಘಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ವಸಾಹತುಶಾಹಿ ಪ್ರಭುತ್ವಕ್ಕೆ ಯಾವುದು ಮುಖ್ಯವೆನಿಸಿತೋ, ದಾಖಲಿಸಬೇಕೆನಿಸಿತೋ, ಜ್ಞಾನ ಸೃಷ್ಟಿಗೆ ಅಗತ್ಯವೆನಿಸಿತೋ ಅಂತಹವುಗಳ ಸಂಶೋಧನೆ, ಸಂಗ್ರಹ ಸಂಪಾದನೆ ಪ್ರಕಟಣಾ ಕಾರ್ಯಕ್ಕೆ ಪ್ರಾಧಾನ್ಯತೆ ನೀಡಿತು.

ಕನ್ನಡ ಸಂಶೋಧನಾ ಚರಿತ್ರೆಯನ್ನು ಗಮನಿಸುವಾಗ ಹಲವು ಘಟ್ಟಗಳನ್ನು ಗುರುತಿಸಬಹುದು. ಮೊದಲನೆಯ ಘಟ್ಟ ಆಕರ ಶೋಧ ಮತ್ತು ಪ್ರಕಟಣೆ. ಪರಂಪರೆಯ ಪ್ರಜ್ಞೆಯನ್ನು ಜಾಗೃತಮಾಡಿದ ಕಾಲಘಟ್ಟವಿದು. ಈ ಕಾಲಘಟ್ಟದ ಕೆಲವು ಮುಖ್ಯ ಸಂಸ್ಥೆಗಳಾದ ಮದ್ರಾಸ್ ಓರಿಯಂಟಲ್ ಮ್ಯಾನಸ್ಕ್ರಿಪ್ಟ್ಸ್ ಲೈಬ್ರರಿ, ಮೈಸೂರು ಓರಿಯೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ರಾಜ್ಯ ಮತ್ತು ಕೇಂದ್ರ ಪುರಾತತ್ವ

ಇಲಾಖೆ ರಾಯಲ್ ಏಶಿಯಾಟಿಕ್ ಸೊಸೈಟಿ ಜರ್ನಲ್‌ಗಳು ಇಂಡಿಯನ್ ಆಂಟಿಕ್ವೆರಿ, ಎಪಿಗ್ರಾಫಿಯಾ ಇಂಡಿಕಾ ಮುಂತಾದವುಗಳಲ್ಲಿ ಆಕರ ಪ್ರಕಟಣೆ, ಸಂಶೋಧನಾ ಲೇಖನ ಪ್ರಕಟಣೆ ಆರಂಭವಾಯಿತು.

ಒಂದು ಸಂಸ್ಕೃತಿಯನ್ನು ಅರಿಯಲು, ಅದನ್ನು ಪುನಾರಚಿಸಲು ಅತ್ಯಂತ ಅವಶ್ಯಕವಾಗಿ ಸಂಶೋಧಕರು ಗಮನಿಸಲೇಬೇಕಾದ ಆಕರ ಸಾಮಗ್ರಿಗಳಾದ, ಆ ಸಂಸ್ಕೃತಿಯಲ್ಲಿ ರಚಿತವಾಗಿರುವ ಶಾಸನಗಳು, ಹಸ್ತಪ್ರತಿಗಳು, ದಾಖಲೆಗಳು, ವಾಸ್ತು, ನಾಣ್ಯ, ವಿಗ್ರಹ, ವದಂತಿ, ಜನಪದ ಹಾಡು, ಐತಿಹ್ಯ, ಸ್ಥಳಪುರಾಣ, ಆಚರಣೆಗಳು ಮುಂತಾದವು ಸಂಶೋಧನೆಗೆ ಮುಖ್ಯವೆಂಬ ಗ್ರಹಿಕೆಯನ್ನು ಈ ಕಾಲಪ್ರಚುರ ಪಡಿಸಿತು.

ಪಾಶ್ಚಾತ್ಯ ಅಧಿಕಾರಿಗಳು ಸಂಶೋಧಕರಾಗಿ ದೇಸಿ ವಿದ್ವಾಂಸರು ಸಂಶೋಧನಾ ಸಹಾಯಕರಾಗಿ ಸಂಶೋಧನೆಯ ಚರಿತ್ರೆಗೆ ಈ ಕಾಲಘಟ್ಟದಲ್ಲಿ ಕಾಯಕಲ್ಪವನ್ನು ನೀಡಿದರು. ಈ ಆರಂಭಕಾಲದ ಸಂಶೋಧನೆಯ ಕೆಲವು ಮುಖ್ಯ ಲಕ್ಷಣಗಳನ್ನು ಹೀಗೆ ಗುರುತಿಸಬಹುದು.

ಕವಿ–ಕಾವ್ಯ, ಕಾಲನಿರ್ಣಯ ಕೇಂದ್ರಿತವಾದ ವಾಗ್ವಾದಗಳು ಹೆಚ್ಚು ನಡೆದು, ಶೋಧನೆಗಳು ಹೆಚ್ಚಾಗಿ ಚಾರಿತ್ರಿಕ ಅಂಶಗಳಿಗೆ ಕೇಂದ್ರೀಕೃತವಾಗಿದ್ದವು. ಕವಿಯ ಪ್ರದೇಶ, ವಂಶ. ಜಾತಿ–ಧರ್ಮ ಆಶ್ರಯದಾತರು ಇತ್ಯಾದಿ ವಿಚಾರಗಳು ಸಂಶೋಧಕರನ್ನು ಸೆಳೆಯುತ್ತಿದ್ದವು. ಈ ಸಂದರ್ಭದಲ್ಲಿ ಕವಿಕಾವ್ಯ ಚರಿತೆಗಳು ಮತ್ತು ಇತರ ಗ್ರಂಥಗಳ ಮುನ್ನುಡಿಗಳಲ್ಲಿ ಇಂತಹ ಸಂಶೋಧನಾ ಚರ್ಚೆಗಳು ನಡೆದಿರುವುದನ್ನು ಕಾಣಬಹುದು. ಉದಾಹರಣೆಗೆ ವೆಂಕಟಸುಬ್ಬಯ್ಯನವರ 'ಕೆಲವು ಕನ್ನಡ ಕವಿಗಳ ಕಾಲ ವಿಚಾರ' ಗೋವಿಂದಪೈ ಅವರ 'ಕನ್ನಡನಾಡಿನ ರಾಜವಂಶಗಳು ಅವರ ಕಾಲಕ್ರಮಣಿಕೆ' ಇತ್ಯಾದಿ, ಲೇಖನಗಳನ್ನು ಕಾಣಬಹುದು

ಈ ಕಾಲಘಟ್ಟದಲ್ಲಿ ಹಸ್ತಪ್ರತಿಗಳ ಸಂಗ್ರಹಣಾ ಪರಿಶೋಧನೆ, ಶುದ್ಧ ಪಾಠ ಪರಿಷ್ಕರಣ ಪ್ರಕ್ಷಿಪ್ತಗಳಪತ್ತೆ, ಸ್ಖಾಲಿತ್ಯಗಳನ್ನು ಗುರುತಿಸುವುದು ಪಾಠಕ್ಲೇಶ ಬಿಡಿಸುವುದು ಇತ್ಯಾದಿ ಕಾರ್ಯಗಳು ಮುಖ್ಯವಾಗಿದ್ದವು. ಈ ಕಾಲ ಘಟ್ಟದಲ್ಲಿ ಗ್ರಂಥಸಂಪಾದನೆ, ಕಾವ್ಯ ಸಂಗ್ರಹ ಪ್ರಕಟಣೆ ಮುಂತಾದವು ಹೆಚ್ಚಾಗಿ ನಡೆದು ಅನೇಕ ಸಂಕಲನಗಳನ್ನು ತರಲಾಯಿತು. ಹಳಗನ್ನಡ ಕಾವ್ಯಗಳ ಗದ್ಯಾನುವಾದಗಳು ನಡೆದವು. ಅನೇಕ ಕೃತಿಗಳಿಗೆ ದೀಪಿಕೆಗಳ ರಚನೆಯಾಯಿತು. ಸಂಭಾವನಾ ಗ್ರಂಥಗಳು ಪ್ರಕಟಗೊಂಡವು. ಕವಿಪ್ರಶಸ್ತಿ ರೂಪದ ಗ್ರಂಥಗಳು ರಚನೆಗೊಂಡವು. ಇವೆಲ್ಲವೂ ಮೊದಲಘಟ್ಟದ ಕನ್ನಡ ಅಧ್ಯಯನದ ಮುಖ್ಯ ಆಧ್ಯತೆಗಳಾಗಿದ್ದವು.

ಕನ್ನಡ ಸಂಶೋಧನೆಯ ಎರಡನೆಯ ಘಟ್ಟದಲ್ಲಿ ವಿಶೇಷವಾಗಿ ವಿಶ್ಲೇಷಣಾಮುಖಿ, ರೂಪನಿಷ್ಠ ಸಂಶೋಧನೆಗಳು ನಡೆದವು. ಹಲವು ಕ್ಷೇತ್ರಗಳ

ಚರಿತ್ರೆಗಳ ನಿರ್ಮಾಣಗಳ ಕಡೆಗೆ ವಿದ್ವಾಂಸರ ಗಮನ ಹರಿಯಿತು. 'ರಾಜಕೀಯ ಚರಿತ್ರೆ' ಹಯವದನರಾವ್ ಮತ್ತು ನರಸಿಂಹಾಚಾರ್, 'ಸಾಹಿತ್ಯ ಚರಿತ್ರೆ' ಆರ್ ನರಸಿಂಹಾಚಾರ್ 'ಧಾರ್ಮಿಕ ಚರಿತ್ರೆ' ಡಾಕ್ಟರ್ ಎಸ್.ಸಿ. ನಂದಿಮಠ, ಶಾಂತರಾಜ ಶಾಸ್ತ್ರಿ, ಫ.ಗು ಹಳಕಟ್ಟಿ, 'ಸಾಂಸ್ಕೃತಿ ಚರಿತ್ರೆ' ಶಂಭಾಜೋಶಿ, 'ಭಾಷಾ ಚರಿತ್ರೆ' ಎನ್ ನರಸಿಂಹಯ್ಯ ಜಿ.ಎಸ್ 'ಕಲೆಗಳ ಚರಿತ್ರೆ' ಆರ್ ನರಸಿಂಹಾಚಾರ್ ಇವರುಗಳಿಂದ ರಚನೆಗೊಂಡವು.ಈ ಕಾರ್ಯದಲ್ಲಿ ಲಭ್ಯ ಆಕರಗಳನ್ನು ಅಧ್ಯಯನಕ್ಕೆ ಮೂಲವಾಗಿ ಬಳಸಿಕೊಳ್ಳಲಾಯಿತು.

ಮೊದಲ ಘಟ್ಟದಲ್ಲಿ ಆಕರ ಶೋಧ ಪ್ರಕಟಣೆಯೊಂದಿಗೆ ವಸ್ತು, ಭಾಷೆ, ಕ್ರಿಯೆ, ಜ್ಞಾನ ಈ ವಿಷಯಗಳನ್ನು ಬಿಡಿಯಾಗಿ ಇಡಿಯಾಗಿ ಚರ್ಚಿಸುವ ಪಠ್ಯಕ್ರಮವನ್ನು ಆರಂಭಿಸಲಾಗಿತ್ತು. ಅದು ಎರಡನೆಯ ಘಟ್ಟದಲ್ಲಿ ಸಂಶೋಧನಾ ಮನಸ್ಥಿತಿಯನ್ನು ಬೆಳೆಸಿಕೊಂಡಿದ್ದ ದೇಸಿ ವಿದ್ವಾಂಸರು ರೂಢಿಸಿಕೊಂಡ ಸಂಶೋಧನಾ ಕಾರ್ಯವನ್ನು ಮತ್ತೊಂದು ನೆಲೆಗೆ ತೆಗೆದುಕೊಂಡು ಹೋಗುವ ಕಾರ್ಯಕ್ಕೆ ನೆರವಾಯಿತು. ಈ ಘಟ್ಟದಲ್ಲಿ ಸಂಗ್ರಹಿಸಲ್ಪಟ್ಟ ಆಕರ ಸಾಮಗ್ರಿಗಳು ಅಭಿವ್ಯಕ್ತಿಸುವ ನಮ್ಮ ಪರಂಪರೆಯ ಹೆಜ್ಜೆಗುರುತುಗಳನ್ನು ಚರಿತ್ರೆಯನ್ನು ಪ್ರತ್ಯಕ್ಷ ಶಬ್ದ, ಅನುಮಾನ, ಪ್ರಮಾಣಗಳಿಂದ ಬಿಡಿಯಾಗಿ ಕಟ್ಟುವ ಮತ್ತು ಕಟ್ಟಿದ ಆ ಚರಿತ್ರೆಯನ್ನು ಇತಿಹಾಸ ಕ್ರಮದಲ್ಲಿ ಇಡಿಯಾಗಿ ಜೋಡಿಸುವ ಕಾರ್ಯ ಚುರುಕಾಗಿ ನಡೆಯತೊಡಗಿತು. ಈ ಸಂದರ್ಭದಲ್ಲಿ ರೂಪನಿಷ್ಠ ಶೋಧಗಳಿಂದ ನಿಧಾನವಾಗಿ ಗುಣನಿಷ್ಠ ಸಂಶೋಧನೆಯತ್ತ ಅಧ್ಯಯನಗಳು ಹೊರಳತೊಡಗಿದ್ದನ್ನು ಕೆಲವರ ಸಂಶೋಧನೆಗಳಲ್ಲಿ ಕಾಣಬಹುದು. ಅವರ ಈ ಮಾದರಿ ಹೊಸ ಸಂಶೋಧನೆಯ ದಾರಿಯಲ್ಲಿ ಅವಕಾಶ ತೆರೆಯಿತಾದರೂ ಅದನ್ನು ತೀವ್ರವಾಗಿ ಪರಿಗಣಿಸಿದ್ದು ಕಳೆದ ದಶಕಗಳಲ್ಲಿ ಮಾತ್ರ.

ವ್ಯಾಕರಣಕ್ಕಿಂತ ಭಿನ್ನವಾಗಿ ಭಾಷಾಶಾಸ್ತ್ರದ ಅಧ್ಯಯನಗಳು ಸಹ ಈ ಕಾಲಘಟ್ಟದಲ್ಲಿ ತೀ ನಂ ಶ್ರೀಕಂಠಯ್ಯ, ಆರ್. ಸಿ. ಹಿರೇಮಠ ಇವರುಗಳಿಂದ ನಡೆಯತೊಡಗಿದವು. ಮೈಸೂರು ವಿಶ್ವವಿದ್ಯಾಲಯದ ಡಿಪ್ಲೊಮೋ ಆರಂಭ ಇವೆಲ್ಲವೂ ಈ ಕಾಲಘಟ್ಟದಲ್ಲಿ ಸಂಶೋಧನೆಗೆ ಹೆಚ್ಚಿನ ಅವಕಾಶವನ್ನು ಮಾಡಿಕೊಟ್ಟಿತು (ಕೆ.ಕುಶಾಲಪ್ಪ ಗೌಡ, ವಿಲಿಯಂ ಮಾಡ್ತಾ ಇವರ ಕೊಡುಗೆಯನ್ನು ಭಾಷಾಶಾಸ್ತ್ರದ ಕ್ಷೇತ್ರದಲ್ಲಿ ನಾವು ಗಮನಿಸಬಹುದು)

ಗ್ರಂಥಸಂಪಾದನಾ ಶಾಸ್ತ್ರ ಅಧ್ಯಯನ ಕಾರ್ಯವು ಚುರುಕುಗೊಂಡು ಅವುಗಳ ಮುನ್ನುಡಿಯಲ್ಲಿ ಮಹತ್ವದ ವಿಚಾರಗಳ ಕುರಿತು ಚರ್ಚೆಗಳು ಡಿ.ಎಲ್.ಎನ್, ಎಂ.ಎಂ. ಕಲಬುರ್ಗಿ ಇವರುಗಳಿಂದ ನಡೆಯಿತು. ಹಸ್ತಪ್ರತಿಶಾಸ್ತ್ರ ಎಂಬ ಹೊಸ ಶಾಖೆ ಅಧ್ಯಯನಕ್ಕೆ ತೆರೆದುಕೊಂಡಿತು. (ದೇವೀರಪ್ಪ, ಬಿ.ಎಂಶ್ರೀ) ಹಸ್ತಪ್ರತಿಗಳನ್ನು ಆಧರಿಸಿದ ವಿಶಿಷ್ಟ ಸಂಶೋಧನಾ ಕಾರ್ಯಗಳಿಗೆ ಇದು ಅವಕಾಶಮಾಡಿಕೊಟ್ಟಿತು. ಬಿಕೆ ಹಿರೇಮಠರ 'ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ'ಮುಂತಾದವುಗಳು

'ಹಸ್ತಪ್ರತಿಗಳ ಲಿಪೀಕರಣ' 'ಬರಹ ವೈವಿಧ್ಯ', 'ಚಿತ್ರ ವೈವಿಧ್ಯ' ಹಸ್ತಪ್ರತಿಗಳ ಪುಸ್ತಕಗಳ ಅಧ್ಯಯನ ಇತ್ಯಾದಿಗಳನ್ನು ಮುಂದೆ ಕೈಗೊಳ್ಳಲು ಇವು ನೆರವಾದವು.

ಈ ಕಾಲಘಟ್ಟದಲ್ಲಿ ಸಂಶೋಧನಾ ವಿಧಾನವು ಹೆಚ್ಚು ವಿಶ್ಲೇಷಣಾತ್ಮಕವಾಗಿದ್ದು, ಸಂಶೋಧನೆಯ ದೃಷ್ಟಿಯು ರೂಪನಿಷ್ಠ ಸಂಶೋಧನೆಯ ಮಾದರಿಯಾಗಿತ್ತು. ಈ ಘಟ್ಟದಲ್ಲಿನ ಎಂ ಚಿದಾನಂದಮೂರ್ತಿ, ಟಿವಿ ವೆಂಕಟಾಚಲ ಶಾಸ್ತ್ರಿ, ಎಂ ಎಂ ಕಲಬುರ್ಗಿಯವರ ಸಂಶೋಧನೆಗಳನ್ನು ಗಮನಿಸಬಹುದು. ಚಾರಿತ್ರಿಕ ಅಥವಾ ರಾಜಕೀಯ ಚರಿತ್ರೆಯಿಂದ ಸಾಂಸ್ಕೃತಿಕ ಚರಿತ್ರೆಯ ಕಡೆಗೆ ಅಧ್ಯಯನಗಳು ಹೊರಳತೊಡಗಿದವು. ಚರಿತ್ರೆಯ ವಿದ್ವಾಂಸರಿಗೆ ಇಂಥ ಭಿನ್ನವಾದ ಹೊಸ ದಾರಿಯನ್ನು ಕನ್ನಡ ಅಧ್ಯಾಪಕರು ತೋರಿಸಿಕೊಟ್ಟು, ಒಂದು ವಿಶಿಷ್ಟ ಶೈಕ್ಷಣಿಕ ಶಿಸ್ತು ರೂಪುಗೊಳ್ಳಲು ಕಾರಣರಾದರು

ರಾಷ್ಟ್ರೀಯವಾದಿ ಮಾದರಿಯ ಅಧ್ಯಯನಗಳು

ಬ್ರಿಟಿಷರ ಆಧುನಿಕ ಶಿಕ್ಷಣ ಮತ್ತು ಅಧ್ಯಯನಗಳ ಪ್ರೇರಣೆ ಕನ್ನಡ ವಿದ್ವಾಂಸರ ಮೇಲೆ ವಿಶೇಷವಾಗಿ ಆಗಿದೆ. ಸಂಶೋಧನೆಯನ್ನು ಕುರಿತು ಆಸಕ್ತಿ ಬೆಳೆಸಿಕೊಂಡ ವಿದ್ವಾಂಸರು, ಹಲವು ಮಾದರಿಗಳನ್ನು ಅನುಸರಿಸಿ ಅಧ್ಯಯನಗಳನ್ನು ಕೈಗೊಂಡರು. ರಾಷ್ಟ್ರೀಯವಾದಿ ಮಾದರಿ ಎಂದು ಕರೆಯಲ್ಪಡುವ ಸಂಶೋಧನಾ ಮಾದರಿಗಳಲ್ಲಿ ಮುಖ್ಯವಾಗಿ ಮೂರು ಮಾದರಿಗಳನ್ನು ಕನ್ನಡ ಸಂಶೋಧನೆಯ ಮೊದಲ ಮತ್ತು ಎರಡನೆಯ ಘಟ್ಟಗಳಲ್ಲಿ ಗುರುತಿಸಲಾಗಿದೆ.

೧. ವಸಾಹತುಶಾಹಿ ದೃಷ್ಟಿಕೋನಕ್ಕೆ ನಿಷ್ಠವಾದ ಮಾದರಿ

೨. ವಸಾಹತುಶಾಹಿ ಚೌಕಟ್ಟಿನಿಂದಲೆ ಹೊರಟು ಅಖಿಲ ಭಾರತೀಯ ಎನ್ನಬಹುದಾದ ನೆಲೆಯಲ್ಲಿ ನಡೆದ ಸಂಶೋಧನೆ ಮಾದರಿ

೩. ಅಖಿಲ ದೇಶೀಯ ಅಥವಾ ಪ್ರಾಂತೀಯ ನೆಲೆಯ ಚರಿತ್ರೆಯ ಸಾಂಸ್ಕೃತಿಕಶೋಧ ಮಾಡುವ ಸಂಶೋಧಕರು ರೂಪಿಸಿಕೊಂಡ ವಿಶಿಷ್ಟ ಮಾದರಿ ಮುಖ್ಯವಾಗಿ ಕಂಡುಬರುತ್ತವೆ. ಈ ಮಾದರಿಯಲ್ಲಿ ಆಕರ ಸಾಮಗ್ರಿಗಳು ಸಂಶೋಧನೆಗೆ ಮೂಲ ಆಧಾರ, ಅವು ನೀಡುವ ಆಧಾರಗಳನ್ನು ಪರಿಶೀಲಿಸಿ ನಮ್ಮ ಗತಕಾಲವನ್ನು ಕಟ್ಟಿಕೊಳ್ಳಬೇಕು. ಇತಿಹಾಸವೆಂದರೆ "ನಮ್ಮ ಗತಕಾಲವನ್ನು ಶಾಸನಗಳು, ಹಸ್ತಪ್ರತಿಗಳು, ದಾಖಲು ಆಕರಗಳು, ನಾಣ್ಯ, ಶಿಲ್ಪಗಳು ಮುಂತಾದವುಗಳನ್ನು ಆಧರಿಸಿ ಖಚಿತವಾಗಿ ವ್ಯಕ್ತಿ, ಸ್ಥಳ, ಕಾಲ ಘಟನೆಗಳ ನಿರ್ಣಯ ಮಾಡಿ ಕಟ್ಟಿಕೊಳ್ಳಬಹುದಾದ ಚರಿತ್ರೆ" ಎಂಬ ಧೋರಣೆ ಕಾಣುತ್ತದೆ. ಹಾಗಾಗಿ ಒಂದು ಓರಿಯಂಟಲಿಸ್ಟ್ ಚಾರಿತ್ರಿಕ ಅಧ್ಯಯನ ಮಾದರಿ ಇಂತಹ ಕನ್ನಡ ಅಧ್ಯಯನಗಳಲ್ಲಿಯೂ ಕಾಣಿಸಿಕೊಂಡಿತು.

ಎರಡನೆಯದಾಗಿ ರಾಷ್ಟ್ರೀಯತೆಯ ಚೌಕಟ್ಟಿನ ಅಧ್ಯಯನಗಳು

ಈ ಬಗೆಯ ಸಂಶೋಧಕರು ವಸಾಹತುಶಾಹಿ ಚೌಕಟ್ಟಿನಿಂದಲೇ ಅಧ್ಯಯನ ಕೈಗೊಂಡು ಭಾರತೀಯತೆ, ಕರ್ನಾಟಕತ್ವ, ಭಾರತೀಯ ವೈದಿಕ ಸನಾತನ ಸಂಸ್ಕೃತಿಯಲ್ಲಿನ ಹಿರಿಮೆಗಳನ್ನು ಎತ್ತಿ ಹಿಡಿಯುವಂತಹ ಅಖಿಲ ಭಾರತೀಯ ಎನ್ನುವ ನೆಲೆಯಲ್ಲಿ ಸಂಶೋಧನೆಯ ತಾತ್ವಿಕತೆಯನ್ನು ಕಟ್ಟಿಕೊಡತೊಡಗಿದರು. ಉದಾಹರಣೆಗೆ ಪ್ರೊ. ಎಸ್. ಶ್ರೀಕಂಠಶಾಸ್ತ್ರಿ 'ಭಾರತೀಯ ಸಂಸ್ಕೃತಿ' ಆಲೂರು ವೆಂಕಟರಾಯರ 'ಕರ್ನಾಟಕತ್ವದ ವಿಕಾಸ', ಇದೇ ಮಾದರಿಯಲ್ಲಿ ಎಂ.ಎಂ ಕಲ್ಬುರ್ಗಿಯವರು 'ಕರ್ನಾಟಕತ್ವದ ಸ್ವರೂಪ ಕನ್ನಡ ಅಸ್ಮಿತೆಯ ಆಯಾಮಗಳು 'ಸೃಜನೇತರ ಬರಹಗಳು' ಎಂಬ ಹೆಸರಿನಲ್ಲಿ ಇತ್ತಿಚೆಗೆ ಅಧ್ಯಯನಗಳನ್ನು ಕೈಗೊಂಡಿದುದನ್ನು ಗಮನಿಸಬಹುದು.

ಪ್ರಕಾರಕನಿಷ್ಠ, ಲೇಖಕನಿಷ್ಠ, ಪಠ್ಯಕೇಂದ್ರಿತ ತೌಲನಿಕ ಅಧ್ಯಯನಮಾದರಿ : ವಿಶ್ವವಿದ್ಯಾಲಯಗಳ ಆರಂಭಕಾಲದ ಸಂಶೋಧನೆಗಳು

ಮೈಸೂರು, ಧಾರವಾಡ, ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಅಧ್ಯಯನ ಕೇಂದ್ರಗಳು ಪಾಠ ಪ್ರವಚನಗಳ ಜೊತೆಗೆ ಸಂಶೋಧನೆಯ ಕಡೆಗೆ ಗಮನಹರಿಸಿದ್ದರಿಂದ ಅನೇಕ ಸಂಶೋಧನೆಯ ಮಾದರಿಗಳನ್ನು ರೂಪಿಸಿಕೊಟ್ಟವು. ಇವುಗಳಲ್ಲಿ ಪ್ರಕಾರನಿಷ್ಠ, ಪಠ್ಯಕೇಂದ್ರಿತ ತೌಲನಿಕ ಅಧ್ಯಯನ ಮಾದರಿಗಳನ್ನು ಗಮನಿಸಬಹುದು.

ಲೇಖಕ ನಿಷ್ಠ, ಲೇಖಕ ಕೇಂದ್ರಿತ ಅಧ್ಯಯನಗಳು ಪಂಪ, ನಾಗಚಂದ್ರ, ಹರಿಹರ, ಕುಮಾರವ್ಯಾಸ ಕುವೆಂಪು ಕಾರಂತ, ಬೇಂದ್ರೆ ಮುಂತಾದವರನ್ನು ಕುರಿತು ನಡೆಯತೊಡಗಿದವು. ಉದಾಹರಣೆಗೆ 'ನಾಗಚಂದ್ರ ಒಂದು ಅಧ್ಯಯನ', 'ವಡ್ಡಾರಾಧನೆ ಒಂದು ಅಧ್ಯಯನ', 'ಪಂಪಭಾರತ ಒಂದು ಅಧ್ಯಯನ', 'ಕುಮಾರವ್ಯಾಸನ ರೂಪಕಗಳು' ಇಂಥವು ನಡೆದುವು. ವ್ಯಕ್ತಿನಿಷ್ಠ ಅಧ್ಯಯನದ ಮಾದರಿಗಳಲ್ಲಿಯೂ ಅನೇಕ ಸಂಶೋಧನೆಗಳು ಕನ್ನಡದಲ್ಲಿ ನಡೆದಿವೆ ಉದಾ: 'ಕಲಬುರ್ಗಿಯವರ ಸಂಶೋಧನಾ ಕೃತಿಗಳಲ್ಲಿ ಕರ್ನಾಟಕತ್ವದಸ್ವರೂಪ'

ತೌಲನಿಕ ಅಧ್ಯಯನದ ಮಾದರಿಗಳಲ್ಲಿ ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿಯವರ 'ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ' ಡಾಕ್ಟರ್ ಸಿಪಿಕೆಯವರ 'ನಾಗವರ್ಮನ ಕರ್ನಾಟಕ ಕಾದಂಬರಿ ಒಂದು ತೌಲನಿಕ ಅಧ್ಯಯನ' ಸಂಶೋಧನೆಗಳನ್ನು ಗಮನಿಸಬಹುದು. ಆರಂಭಕಾಲದ ತೌಲನಿಕ ನೆಲೆಗಳಿಗೂ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ತೌಲನಿಕ ಮಾದರಿಯ ಸಂಶೋಧನೆಗಳಿಗೂ ವ್ಯತ್ಯಾಸಗಳಿವೆ. ಪರಂಪರೆ ಮತ್ತು ಆಧುನಿಕತೆಗಳ ಪುನರುತ್ಥಾನವು ಮಾಸ್ತಿ, ಆನಂದ

ಕೆರೂರರ ಕಥನಗಳಲ್ಲಿ ಕಂಡುಬರುವಂತೆ ಸಂಶೋಧನೆಯಲ್ಲೂ ಸಹ ಕಾಣಬಹುದು. ಅಂಥ ಅಧ್ಯಯನಗಳ ಶೀರ್ಷಿಕೆಗಳನ್ನು ಗಮನಿಸಿದಾಗ ಅಂದಿನ ಮತ್ತು ಇಂದಿನ ತೌಲನಿಕ ಅಧ್ಯಯನಗಳಲ್ಲಿನ ದೃಷ್ಟಿಕೋನಗಳ ವ್ಯತ್ಯಾಸಗಳನ್ನು ತಿಳಿಯಬಹುದು.

ಪ್ರಕಾರ ನಿಷ್ಠ ಅಧ್ಯಯನದ ಮಾದರಿಯಲ್ಲಿ ಕೆಲವು ಉದಾಹರಣೆಗಳನ್ನು ಗಮನಿಸಿದಾಗ ಅವುಗಳ ವೈವಿಧ್ಯತೆ ಅರಿವಾಗುತ್ತದೆ. ಕೆಲವು ಸಣ್ಣಕಥೆ ಪರಿಕಲ್ಪನಾತ್ಮಕ ಅಧ್ಯಯನಗಳು ಹೀಗಿವೆ. 'ಜಾಗತೀಕರಣದ ಪರಿಕಲ್ಪನೆ ಮತ್ತು ಬದಲಾಗುತ್ತಿರುವ ಸಮಾಜ ಸಣ್ಣಕತೆಗಳನ್ನು ಅನುಲಕ್ಷಿಸಿ', 'ವಸಾಹತುಶಾಹಿ ಕಾಲಘಟ್ಟದ ಕನ್ನಡ ಕಥೆಗಳಲ್ಲಿನ ದೇಸಿ ಸಂವೇದನೆ: ಗೊರೂರರ ಕಥೆಗಳಲ್ಲಿ ಗ್ರಾಮ ಜೀವನ', 'ಆರಂಭಕಾಲದ ಕಾದಂಬರಿಗಳಲ್ಲಿ ಕಂಡುಬರುವ ವಸಾಹತು ಮತ್ತು ಸಂವೇದನೆಗಳ ಸಂಬಂಧ' ಇತ್ಯಾದಿ ಶೀರ್ಷಿಕೆಗಳೇ ಬದಲಾದ ನಮ್ಮ ಸಂಶೋಧನಾ ದೃಷ್ಟಿಕೋನವನ್ನು ಹೇಳುತ್ತವೆ.

ಪ್ರಕಾರ ನಿಷ್ಠ ಅಥವಾ ಪ್ರಕಾರಕೇಂದ್ರಿತ ಅಧ್ಯಯನಗಳಲ್ಲಿ, ಕನ್ನಡ ಸಾಹಿತ್ಯದ ವಿಶಿಷ್ಟ ಛಂದೋ ಪ್ರಕಾರಗಳನ್ನು ಪ್ರತ್ಯೇಕವಾಗಿ ಅಧ್ಯಯನಕ್ಕೆ ಒಳಪಡಿಸಲಾಯಿತು. 'ಸಾಂಗತ್ಯ ಪ್ರಕಾರಗಳು ಒಂದು ಅಧ್ಯಯನ' (ವಿಜಯಲಕ್ಷ್ಮಿ ಆರ್ ಎಂ) 'ಆಧುನಿಕ ಕಾಲದ ಭಾವಗೀತೆ' ಇತ್ಯಾದಿ, ಹಾಗೂ ನಾಟಕಗಳ ಅಧ್ಯಯನ, ಸಣ್ಣ ಕಥೆಗಳು, ಕಾದಂಬರಿಗಳ ಅಧ್ಯಯನ ಇತ್ಯಾದಿ ಸಂಶೋಧನಾ ವಿಷಯಗಳು ಮುಂಚೂಣಿಗೆ ಬಂದವು

ಪ್ರಕಾರ ನಿಷ್ಠ ಅಧ್ಯಯನಗಳಲ್ಲಿ ದೇಸಿ ನೆಲೆಯನ್ನು ಕಂಡುಕೊಳ್ಳುವ ಪ್ರಯತ್ನಗಳೂ ನಡೆದಿವೆ. 'ಕನ್ನಡ ಬರಹಗಳಲ್ಲಿ ಬೌದ್ಧ ಫಿಲಾಸಫಿಯ ಆಯಾಮಗಳು', 'ಆರಂಭಕಾಲದ ಕಾದಂಬರಿಗಳಲ್ಲಿ ಕಂಡುಬರುವ ವಸಾಹತು ಮತ್ತು ಸಂವೇದನೆಗಳ ಅಂತರ ಸಂಬಂಧ', 'ವಸಾಹತುಶಾಹಿ ಕಾಲಘಟ್ಟದ ಜಾನಪದ ಸಂಗ್ರಹ ಸಂಪುಟಗಳ ತಾತ್ವಿಕ ನೆಲೆ', 'ಕನ್ನಡ ಸಣ್ಣ ಕಥೆಗಳಲ್ಲಿ ಜಾಗತೀಕರಣ ಪರಿಕಲ್ಪನೆ ಬದಲಾಗುತ್ತಿರುವ ಸಮಾಜ', 'ವಸಾಹತುಕಾಲದ ಕನ್ನಡ ಕಥೆಗಳಲ್ಲಿನ ದೇಸಿ ಸಂವೇದನೆ' ಇತ್ಯಾದಿ ಪ್ರಕಾರ ನಿಷ್ಠವಾದ ಹಾಗೂ ದೇಸಿ ನೆಲೆಯಿಂದ ಕೂಡಿದ ಅಧ್ಯಯನದ ವಿಶೇಷಮಾದರಿಗಳು ಸಹ ಕನ್ನಡದಲ್ಲಿ ಕಂಡುಬಂದಿವೆ.

ಕನ್ನಡ ಅಸ್ಮಿತೆಯನ್ನು ಕುರಿತಂತೆ ಹಲವು ಅಧ್ಯಯನಗಳು ನಡೆದಿವೆ. 'ಕನ್ನಡ ಅಸ್ಮಿತೆಯ ಆಯಾಮಗಳು', 'ಮಹಿಳಾ ಅಸ್ಮಿತೆ ಅಸ್ತಿತ್ವದ ಪ್ರಶ್ನೆಗಳು', 'ಕನ್ನಡ ಸಾಹಿತ್ಯದ ವಿಮರ್ಶೆಯಲ್ಲಿ ಸಾಹಿತ್ಯದ ಪರಿಕಲ್ಪನೆಗಳ ಚಿಂತನೆಗಳು', 'ಎಂ.ಎಂ ಕಲಬುರ್ಗಿ ಅವರ ಸಂಶೋಧನ ಕೃತಿಗಳಲ್ಲಿನ ಕರ್ನಾಟಕತ್ವ', 'ಉಡುಪಿ ಜಿಲ್ಲೆಯ ೨೦ನೇ ಶತಮಾನದ ಸಾಹಿತ್ಯ ಚಟುವಟಿಕೆಗಳು', 'ಕನ್ನಡ ಕರಾವಳಿ ಕಾದಂಬರಿಗಳಲ್ಲಿ

ಸಾಮಾಜಿಕ ಸಂರಚನೆಯಸ್ವರೂಪ' ಇತ್ಯಾದಿ ಹಲವು ಅಸ್ತಿತ್ವ ಅಸ್ಮಿತೆಗಳನ್ನು ದೇಸಿ ವೈಶಿಷ್ಟ್ಯಗಳನ್ನು ಪ್ರಾದೇಶಿಕ ವಿಭಿನ್ನತೆಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಹಲವು ಬಗೆಯ ಅಧ್ಯಯನಗಳನ್ನು ಕೈಗೊಳ್ಳಲು ವಿಶ್ವವಿದ್ಯಾಲಯಗಳು ಪ್ರೇರೇಪಿಸಿರುವುದು ಇಂದು ಕಂಡುಬಂದಿದೆ.

ಮೂರನೆಯದಾಗಿ ದೇಸೀಯತೆಯ ಮಾದರಿಯ ಅಧ್ಯಯನಗಳು

ಇವುಗಳಲ್ಲಿ ಹೆಚ್ಚಾಗಿ ಪ್ರಾದೇಶಿಕ ಪ್ರಾಂತೀಯ ನೆಲೆಯ ಚರಿತ್ರೆ, ಸಾಂಸ್ಕೃತಿಕಶೋಧ ಮಾಡುವುದರಲ್ಲಿ ಆಸಕ್ತರಾದ ಸಂಶೋಧಕರು ಕಂಡುಬರುತ್ತಾರೆ. ಉದಾಹರಣೆಗೆ ಬೆಟಗೇರಿ ಕೃಷ್ಣಶರ್ಮರು 'ಕರ್ನಾಟಕದ ಜನಜೀವನ' ಎಂಬ ಕೃತಿಯನ್ನು ರಚಿಸಿದ್ದು ಕಪಟರಾಳ ಕೃಷ್ಣರಾಯರು 'ಕರ್ನಾಟಕ ಸಂಸ್ಕೃತಿ ಸಂಶೋಧನೆ' ಶಂಬಾ ಜೋಷಿಯವರ 'ಕರ್ನಾಟಕ ಸಂಸ್ಕೃತಿ ಪೂರ್ವ ಪೀಠಿಕೆ' ,'ಎಡೆಗಳು ಹೇಳುವ ಕಂನಾಡ ಕಥೆ' ಇವುಗಳನ್ನು ಹಾಗೂ ಆಲೂರು ವೆಂಕಟರಾಯರ 'ಕರ್ನಾಟಕತ್ವ ವಿಕಾಸ' ಮುಂತಾದ ಅಧ್ಯಯನಗಳು ಕನ್ನಡ ಕನ್ನಡಿಗರು ಕರ್ನಾಟಕ ಹಿನ್ನೆಲೆಯ ಮೂಲಕ ಭಾರತವನ್ನು ನೋಡುವಂತಹ ಮಾದರಿಗಳನ್ನು ಸಂಶೋಧನೆಯಲ್ಲಿ ರೂಪಿಸಿದರು. ಈ ಮೂರೂ ಮಾದರಿಯ ಸಂಶೋಧನೆಗಳು ಸಾಕಷ್ಟು ಆರಂಭಿಕ ವಿದ್ವತ್ ವಲಯದಿಂದ ನಡೆಯಿತೆಂಬುದನ್ನು ಗಮನಿಸಬೇಕು ಅವರು ಅದಕ್ಕಾಗಿ ಅತ್ಯಂತ ಶಿಸ್ತುಬದ್ಧವಾಗಿ ಆಕರಗಳ ಶೋಧ ಸಂಪಾದನೆ ಪರಿಷ್ಕರಣೆ ಅವುಗಳ ವ್ಯಾಖ್ಯಾನಗಳನ್ನು ಮಾಡಿದರು. ಈ ಚಿಂತನೆಗಳ ಮೇಲೆ ವಸಾಹತುಶಾಹಿ ದೃಷ್ಟಿ ಓರಿಯಂಟಲಿಸ್ಟ್ ಮಾದರಿಗಳು ಹೆಚ್ಚು ಕಾಣಿಸಿಕೊಳ್ಳುತ್ತವೆ.

ಬದಲಾಗುತ್ತಿರುವ ಚಾರಿತ್ರಿಕ ಅಧ್ಯಯನದ ಮಾದರಿ

ಚರಿತ್ರಕಾರರು ತಮ್ಮ ಒಳನೋಟಗಳನ್ನು ಬದಿಗಿಟ್ಟು ಹಿಂದೆ ಏನು ನಡೆದಿದೆಯೋ ಅದನ್ನು ಯಥಾವತ್ತಾದ ರೀತಿಯಲ್ಲಿ ದಾಖಲಿಸಬೇಕೆಂದು ಭಾವಿಸಿ ಓರಿಯಂಟಲಿಸ್ಟ್ ಮಾದರಿಯನ್ನು ಆರಂಭದಲ್ಲಿ ಅನುಸರಿಸಿದರು. ಈ ಮಾದರಿಯಲ್ಲಿ ಪಶ್ಚಿಮದ ಸಮಾಜಕ್ಕಿಂತ ಭಿನ್ನವಾದ ಪೂರ್ವದ ಸಮಾಜವನ್ನು ಅಧ್ಯಯನ ಮಾಡುವುದಕ್ಕೆ ತಮ್ಮದೇ ಆದ ಒಂದು ವಿಶ್ವಾತ್ಮಕ ನಿಯಮಮಾಡಿ ಅವುಗಳು ಇವೆಯೋ ಇಲ್ಲವೋ ಎಂದು ಹುಡುಕತೊಡಗಿದರು. ಇಲ್ಲಿ ಭೂತಕಾಲದಲ್ಲಿ ನಡೆದುದೆಲ್ಲವನ್ನು ಚರಿತ್ರೆ ಎನ್ನಲಿಲ್ಲ ಆದರೆ "ಚರಿತ್ರೆಯಲ್ಲಿ ಕೆಲವು ಸಂಗತಿಗಳು ಮಾತ್ರ ದಾಖಲಾಗುತ್ತವೆ, ಮತ್ತೆ ಕೆಲವನ್ನು ಅದು ದಾಖಲಿಸುವುದಿಲ್ಲ. ಹೀಗೇಕೆ? ಯಾವುದು ಚರಿತ್ರೆ ಆಗುತ್ತದೆ? ಯಾವುದು ಆಗುವುದಿಲ್ಲ? ಎಂಬುದನ್ನು ನಿರ್ಧರಿಸುವವರು ಯಾರು ಎಂಬ ಪ್ರಶ್ನೆಯನ್ನು ಇಂದು ಚಾರಿತ್ರಿಕ ಸಂಶೋಧಕರು ಕೇಳಿಕೊಳ್ಳಬೇಕಾಗಿದೆ. ಯಾವುದೇ ತಾತ್ವಿಕತೆಯನ್ನು ಮತ್ತು ಸಿದ್ಧಾಂತವನ್ನು

ಕಟ್ಟಿಕೊಡುವ ಸಮಾಜ ಮತ್ತು ಅದರ ಅಧಿಕಾರದ ಸ್ಥಾನಮಾನವು ಅದು ಕಟ್ಟಿಕೊಡುವ ಸಿದ್ಧಾಂತಕ್ಕೆ ಸ್ಥಾನವನ್ನು ಗಳಿಸಿಕೊಡುತ್ತದೆ. ಹಾಗಾಗಿ ಆಯಾಯ ಅಧಿಕಾರದ ಸಂಬಂಧಗಳು ಯಾವುದು ಮುಖ್ಯವೆಂಬುದನ್ನು ತಮ್ಮ ಮೂಗಿನ ನೇರಕ್ಕೆ ನಿರ್ಧರಿಸಿ ಅದನ್ನು ಇತರರು ಒಪ್ಪುವಂತೆ ಮಾಡುತ್ತವೆ. ಯಾವುದು ದಾಖಲೆ ಆಗಬೇಕು ಯಾವುದು ನೇಪಥ್ಯಕ್ಕೆ ಸರಿಯಬೇಕು ಎಂಬುದನ್ನು ನಿರ್ಧರಿಸುತ್ತವೆ. ನಮ್ಮ ಚರಿತ್ರೆ ರಾಜಮಹಾರಾಜರ ಕಥೆಗಳಿಂದ ತುಂಬಿಹೋಗಿದೆ. ಕಾರಣ ಅವುಗಳನ್ನು ಬರೆಸಿದವರು ಸ್ವತಃ ಆಳುವವರಾಗಿದ್ದಾರೆ. ಅಥವಾ ಅವರನ್ನು ಓಲೈಸುತ್ತಿದ್ದವರಾಗಿದ್ದಾರೆ.

ಪ್ರಜಾಪ್ರಭುತ್ವ ಬರುವುದರೊಂದಿಗೆ ನಾನಾ ಬಗೆಯ ಚಳುವಳಿಗಳು ಹೋರಾಟಗಳು ಕೊಟ್ಟ ತಿಳುವಳಿಕೆಯ ಹಿನ್ನೆಲೆಯಲ್ಲಿ ಈಹೊತ್ತು ಅಧಿಕಾರಸಂಬಂಧಗಳು ಬದಲಾವಣೆಯಾಗಿವೆ. ಹಾಗಾಗಿ ಇಂದು ನಮ್ಮ ಚಾರಿತ್ರಿಕ ಅಧ್ಯಯನಗಳು 'ಹಲವು ಚರಿತ್ರೆ'ಗಳನ್ನು 'ಸಾಂಸ್ಕೃತಿಕ ಬಹುಳತೆ'ಯನ್ನು ಕಟ್ಟಿಕೊಡುವುದಕ್ಕೆ ಪ್ರಯತ್ನಿಸುತ್ತಿವೆ. ದಲಿತ ಚರಿತ್ರೆ, ಮಹಿಳಾ ಚರಿತ್ರೆ, ಸ್ಥಳೀಯ ಚರಿತ್ರೆಗಳು ರೂಪಿತವಾಗತೊಡಗಿವೆ. ಈ ನಿಟ್ಟಿನಲ್ಲಿ ಸಂಶೋಧಕರು ಮತ್ತಷ್ಟು ಜವಾಬ್ದಾರಿಯಿಂದ ಗಮನ ಹರಿಸಬೇಕಾಗಿದೆ.

ಅಂತರ್ ಶಿಸ್ತೀಯ, ಬಹುಶಿಸ್ತೀಯ ಅಧ್ಯಯನ ಮಾದರಿ

ಕನ್ನಡದಲ್ಲಿ ಅಂತರ್ ಶಿಸ್ತೀಯ ಅಧ್ಯಯನ ಮಾದರಿ ಶಂಭಾಜೋಶಿ ಅವರ ಕೊಡುಗೆಯಾಗಿದೆ. 'ಕಣ್ಮರೆಯಾದ ಕನ್ನಡ', 'ಕನ್ನಡ ನೆಲೆ', 'ಕನ್ನುಡಿಯ ಹುಟ್ಟು', ಎಡೆಗಳು ಹೇಳುವ ಕಂನಾಡಕಥೆ, ಇವು ಈ ಕ್ಷೇತ್ರದ ಆರಂಭಿಕ ಅಧ್ಯಯನಗಳಾಗಿವೆ. ಈಗ ವಿಪುಲವಾಗಿ ಇಂತಹ ಅಂತರ್ ಶಿಸ್ತೀಯ ಅಧ್ಯಯನಗಳು ನಡೆದಿವೆ. ಇಂಥ ಅಧ್ಯಯನದಲ್ಲಿ ಸಾಹಿತ್ಯದೊಂದಿಗೆ ಇತರ ಶಿಸ್ತುಗಳನ್ನು ಅಧ್ಯಯನಕ್ಕೆ ತೆಗೆದುಕೊಂಡಿರುವುದನ್ನು ಗಮನಿಸಬಹುದು. ವ್ಯಕ್ತಿನಾಮ ಸ್ಥಳನಾಮಗಳನ್ನು ಕುರಿತು ಅಧ್ಯಯನಗಳು ಕೂಡ ಭಾಷಾವಿಜ್ಞಾನದ ನಾಮ ವಿಜ್ಞಾನದ ಕ್ಷೇತ್ರದಲ್ಲಿ ನಡೆಯತೊಡಗಿವೆ.

ಶಾಸನಶಾಸ್ತ್ರ ಮತ್ತು ಸಾಹಿತ್ಯ, ಜಾನಪದ ಮತ್ತು ಸಾಹಿತ್ಯ, ದಾಖಲೆಗಳು ಮತ್ತು ಭಾಷೆ, ಸಾಹಿತ್ಯ, 'ಸಾಹಿತ್ಯ ಮತ್ತು ಸಂಸ್ಕೃತಿ 'ಹೀಗೆ ಅನೇಕ ಉದಾಹರಣೆಗಳನ್ನು ನೋಡಬಹುದು 'ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ' (ಪಿ.ವಿ. ನಾರಾಯಣ,) ಶಾಸನಗಳಲ್ಲಿ ಕರ್ನಾಟಕದ ವರ್ತಕರು (ಬಿ ಆರ್ ಹಿರೇಮಠ) 'ಕರ್ನಾಟಕದ ಶಾಸನಗಳಲ್ಲಿ ಸ್ತ್ರೀ ಸಮಾಜ' (ಚೆನ್ನಕ್ಕ ಎಲಿಗಾರ), 'ಶಾಸನಗಳಲ್ಲಿ ಗಿಡಮರಗಳು', 'ಶಾಸನಗಳಲ್ಲಿ ಶಿವಶರಣರು', 'ಕರ್ನಾಟಕದ ವೀರಗಲ್ಲು',

'ಕರ್ನಾಟಕದ ಸತಿ ಪದ್ಧತಿ' ಇತ್ಯಾದಿ ಬೇರೆ ಬೇರೆ ಆಯಾಮಗಳನ್ನು ಶೋಧಿಸುವ ಕಾರ್ಯ ಈ ಕಾಲಘಟ್ಟದಲ್ಲಿ ನಡೆಯಿತು

ಬಹುಶಿಸ್ತೀಯ ನೆಲೆಯಲ್ಲಿ ಸಾಹಿತ್ಯವನ್ನು, ಚರಿತ್ರೆಯನ್ನು, ಲಿಖಿತ ಆಕರಗಳು, ದಾಖಲೆಗಳು, ಜನಪದ ಮೌಖಿಕ ಸಾಹಿತ್ಯ, ಶಿಲ್ಪ, ನಾಣ್ಯ, ಇತ್ಯಾದಿ ಹಲವು ಕ್ಷೇತ್ರಗಳ ಆಕರಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿರುವ, ಮಾಡುತ್ತಿರುವ ಸಂಶೋಧಕರ ಗುಂಪು ಹೆಚ್ಚುತ್ತಿದೆ. ಕೆಳದಿ ಗುಂಡಾಜೋಯಿಸ್, ಹುಲ್ಲೂರು ಶ್ರೀನಿವಾಸಯ್ಯ, ಷ ಷಟ್ಟರ್, ಕೆವಿ ರಮೇಶ್ ದೇವರಕೊಂಡಾರೆಡ್ಡಿ, ಎಂ.ಜಿ ನಾಗರಾಜ, ಲಕ್ಷ್ಮಣ ತೆಲಗಾವಿ, ರಾಜಾರಾಮ ಹೆಗಡೆ, ಶೇಷಶಾಸ್ತ್ರಿ, ಪರಮಶಿವಮೂರ್ತಿ ನಾಗಭೂಷಣ.ಸಿ, ಎನ್. ಆರ್. ಲಲಿತಾಂಬ ಮುಂತಾದ ಅನೇಕ ವಿದ್ವಾಂಸರು ಬಹುಶಿಸ್ತೀಯ ನೆಲೆಯಲ್ಲಿ ಅಧ್ಯಯನಗಳನ್ನು ಕೈಗೊಂಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಅಂತರಶಿಸ್ತೀಯ ಅಧ್ಯಯನ ಹೆಚ್ಚಾಗಿ ಸಂಶೋಧಕರ ಗಮನಸೆಳೆಯುತ್ತಿದೆ ಉದಾಹರಣೆಗಳನ್ನು ನೋಡುವುದಾದರೆ 'ಸಾಹಿತ್ಯದ ಆಯ್ದ ಕೆಲವು ಪಾತ್ರಗಳ ಮನೋವಿಶ್ಲೇಷಣಾತ್ಮಕ ಅಧ್ಯಯನ', 'ರೇವಣಸಿದ್ಧ ಪರಂಪರೆ ಸಾಂಸ್ಕೃತಿಕ ಅಧ್ಯಯನ', 'ಬಿಜಾಪುರ ಜಿಲ್ಲೆಯ ಸ್ಥಳನಾಮಗಳು ಒಂದು ಅಧ್ಯಯನ', 'ಗದಗ ಪರಿಸರದ ಜೈನ ಪರಂಪರೆ ಒಂದು ಅಧ್ಯಯನ', 'ಪ್ರಗತಿಶೀಲ ಕಾದಂಬರಿಗಳಲ್ಲಿ ಇತಿಹಾಸದ ಪುನರ್ ಲೇಖದ ಸ್ವರೂಪ', 'ಕನ್ನಡ ಮಹಾಭಾರತ ಕುರಿತಾದ ಆಧುನಿಕ ಚಿಂತನೆಗಳು ಸಂಸ್ಕೃತಿ ಪರಿಕಲ್ಪನೆಗಳನ್ನು ಅನುಲಕ್ಷಿಸಿ', 'ಯಕ್ಷಗಾನಗಳ ಶೈಕ್ಷಣಿಕ ಆಯಾಮಗಳು', 'ಕನ್ನಡ ಕಡತಗಳ ಭಾಷಿಕ ಅಧ್ಯಯನ', 'ರಾವಳೇಶ್ವರ ಒಂದು ಅಧ್ಯಯನ', 'ಮಠ ಸಂಸ್ಕೃತಿ ಸಮಾಜೋ ರಾಜಕೀಯ ಅಧ್ಯಯನ', ಇತ್ಯಾದಿ ಹಲವು ಅಂತರಶಿಸ್ತೀಯ ಮಾದರಿಗಳನ್ನು ಸಂಶೋಧನೆಯಲ್ಲಿ ನೋಡಬಹುದಾಗಿದೆ.

ಕಳೆದ ದಶಕಗಳಿಂದ ಸಂಶೋಧನೆಗಳು ಬಹುಮುಖಿ ಆಯಾಮಗಳನ್ನು ಪಡೆಯುತ್ತಿರುವುದಕ್ಕೆ ಸಂಸ್ಕೃತಿಯನ್ನು ಕುರಿತು ನಮ್ಮ ದೃಷ್ಟಿಕೋನದಲ್ಲಾದ ಬದಲಾವಣೆಗಳು ಕಾರಣವಾಗಿವೆ. 'ಸಂಶೋಧನೆಯೊಂದು ಸಾಂಸ್ಕೃತಿಕ ಪುನಾರಚನೆ', 'ಸಂಶೋಧನೆಯೊಂದು ಪ್ರಕ್ರಿಯೆ' ಎಂಬ ವ್ಯಾಖ್ಯಾನಗಳನ್ನು ಗಮನಿಸಬಹುದು. ಉದಾಹರಣೆಗೆ ಹಂಪ ನಾಗರಾಜಯ್ಯನವರ 'ರಾಷ್ಟ್ರಕೂಟ ಆಫ್ ಮಾಲ್ಖೇಡ್ ಅಂಡ್ ಸಮ್ ಜೈನ ಎಪಿಗ್ರಾಫ್ಸ್', ಶೇಷಶಾಸ್ತ್ರಿಯವರ 'ಕರ್ನಾಟಕದ ವೀರಗಲ್ಲುಗಳು' ಎನ್.ಆರ್.ಲಲಿತಾಂಬರವರ 'ಕರ್ನಾಟಕದ ಹೆಮ್ಮೆಯ ವೀರ ಕುಡಿಗಳು', ಇಂತಹ ಅಧ್ಯಯನಗಳನ್ನು ಗಮನಿಸಬಹುದು. ಚದುರಿಹೋಗಿದ್ದ ಕರ್ನಾಟಕದ ದಾಖಲೆಗಳಲ್ಲಿ ಇದ್ದ ಮಾಹಿತಿಗಳನ್ನು ಇಟ್ಟುಕೊಂಡು ಜನಸಂಸ್ಕೃತಿ ಚಿತ್ರಣವನ್ನು ಹಂಪನಾರವರು ಮಾಡಿದರೆ, ಆರ್.ಶೇಷಶಾಸ್ತ್ರಿ ಹಾಗೂ ಎನ್.ಆರ್.ಲಲಿತಾಂಬಾರವರು ಕರ್ನಾಟಕದ ವೀರ ಪರಂಪರೆಯ ಸ್ಥಿತಿ

ಸಂಚಲನಗಳನ್ನು ಮರು ಓದಿಗೆ ಒಳಪಡಿಸಿದ್ದಾರೆ. ವೀರ ಸಂಸ್ಕೃತಿಯ ಇಕ್ಕಟ್ಟುಗಳು, ಅವುಗಳ ಮೇಲೆ ಮತಧರ್ಮಗಳ ಹಾಗೂ ಪ್ರಭುತ್ವದ ರಾಜಕಾರಣದ ಪ್ರಭಾವಗಳನ್ನು, ಮೌಲ್ಯ ಪಲ್ಲಟಗಳನ್ನು ಸಾಹಿತ್ಯ ಹಾಗೂ ಶಾಸನಗಳು, ದಾಖಲೆಗಳ ಅಧ್ಯಯನದಿಂದ ಗುರುತಿಸಿದ್ದಾರೆ.

ಕನ್ನಡಪ್ರಾಚೀನ ಕಾವ್ಯಗಳಲ್ಲಿ ಜನಪದೀಯತೆ, ಕನ್ನಡಸಾಹಿತ್ಯದಲ್ಲಿ ಮುಸ್ಲಿಂ ಜನಾಂಗದ ಪ್ರತಿನಿಧೀಕರಣ, 'ಕುಮಾರವ್ಯಾಸನಲ್ಲಿ ಜಾನಪದೀಯತೆ', 'ಕನ್ನಡ ನಾಟಕಗಳಲ್ಲಿ ಪುರಾಣ ಪ್ರಜ್ಞೆ', 'ಮೌಖಿಕ ಕಾವ್ಯಗಳಲ್ಲಿ ಮಹಿಳಾ ಸಂವೇದನೆ', 'ಕನ್ನಡ ಲಾವಣಿಗಳಲ್ಲಿ ಮಹಿಳಾ ಪ್ರತಿನಿಧೀಕರಣ' ಇತ್ಯಾದಿ ಅಧ್ಯಯನಗಳನ್ನು ಗಮನಿಸಬಹುದು. ಅನ್ಯ ಜ್ಞಾನಗಳನ್ನು ಅವುಗಳ ಮಾರ್ಗಗಳನ್ನು 'ಸಾಹಿತ್ಯ ಸಂಶೋಧನೆಯು' ಒಳಗೊಳ್ಳದಿದ್ದರೆ ಸಾಹಿತ್ಯದ ಹಲವು ನೆಲೆಗಳನ್ನು ಆಯಾಮಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ ಎಂಬ ತಿಳಿವಿನಿಂದ ಜಾನಪದೀಯ, ಜನಾಂಗೀಯ, ಸಮಾಜಶಾಸ್ತ್ರೀಯ, ಮನೋವೈಜ್ಞಾನಿಕ, ಸಾಹಿತ್ಯ ಮತ್ತು ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಇತ್ಯಾದಿ ಭಿನ್ನ ದೃಷ್ಟಿಕೋನದಿಂದ ಸಾಹಿತ್ಯದ ಅಧ್ಯಯನಗಳನ್ನು ನಡೆಸಲಾಗುತ್ತಿದೆ.

ಪರಿಕಲ್ಪನಾ ಆಧಾರಿತ ಅಧ್ಯಯನಗಳು

ವಿಶ್ವವಿದ್ಯಾಲಯಗಳಲ್ಲಿ ೭೦ ರ ದಶಕದ ನಂತರದಲ್ಲಿ ಕನ್ನಡ ಸಾಹಿತ್ಯದ ದಿಕ್ಕು-ದೆಸೆ ಪಲ್ಲಟಗೊಂಡಂತೆ ನಮ್ಮ ಸಾಹಿತ್ಯವನ್ನು ನೋಡುವ ಅರ್ಥೈಸುವ ದೃಷ್ಟಿಕೋನಗಳು ಬದಲಾಗತೊಡಗಿದವು. ಪಶ್ಚಿಮದಿಂದ ಬಂದ ಅನೇಕ ಸಿದ್ಧಾಂತಗಳು ಕೇವಲ ಸಮಾಜಶಾಸ್ತ್ರಕ್ಕೆ ಸೀಮಿತವಾಗಿ ಉಳಿಯದೆ ಅವು ಸಾಹಿತ್ಯ ಕ್ಷೇತ್ರದಲ್ಲೂ ಮಾನ್ಯತೆ ಪಡೆಯತೊಡಗಿದವು. ನಾನಾ ಬಗೆಯ ನವ ಪರಿಕಲ್ಪನೆಗಳನ್ನು ಆಧರಿಸಿ ಅಧ್ಯಯನಗಳು ಆರಂಭಗೊಂಡವು. ಅವುಗಳಲ್ಲಿ ಮುಖ್ಯವಾಗಿ ೧ ಜಾತಿ, ವರ್ಣ, ವರ್ಗ ಪರಿಕಲ್ಪನಾ ಆಧಾರಿತ ಸಂಶೋಧನೆಗಳು ೨.ಲಿಂಗ ಪರಿಕಲ್ಪನಾ ಆಧಾರಿತ ಅಧ್ಯಯನಗಳು ೩.ಪ್ರಾದೇಶಿಕ ನೆಲೆಯ ಅಧ್ಯಯನಗಳು ೪.ಸೈದಾಂತಿಕ ನೆಲೆಯ ಅಧ್ಯಯನಗಳು ಹೀಗೆ ಈ ಕಾಲಘಟ್ಟದಲ್ಲಿ ನಡೆದ ಸಂಶೋಧನೆಗಳನ್ನು ಪರಿಕಲ್ಪನೆ ಆಧಾರಿತವಾಗಿ ವಿಂಗಡಿಸಬಹುದು.

ದಲಿತ ಬಂಡಾಯ ಧೋರಣೆಗಳು ಕೇಂದ್ರ ಪ್ರಜ್ಞೆಯಾದ ನಂತರದಲ್ಲಿ ಇಡೀ ನಮ್ಮ ಸಾಹಿತ್ಯವನ್ನು ನೋಡುವ ದೃಷ್ಟಿಕೋನವೇ ಬದಲಾಯಿತು. 'ಸಂಶೋಧನೆ' ಎಂಬುದು 'ಅಧ್ಯಯನ'ವೆಂದು ಬದಲಾಗತೊಡಗಿತು. ಲೋಹಿಯಾವಾದ, ಅಂಬೇಡ್ಕರ್ವಾದ, ನವಮಾನವತಾವಾದ, ಮಾರ್ಕ್ಸ್‌ವಾದ ಇವುಗಳಿಂದ ಹುಟ್ಟಿದ ತಾತ್ವಿಕತೆಗಳ ಮೂಲಕ ಸಾಹಿತ್ಯವನ್ನು ಮರು ಓದಿಗೆ,ಅಧ್ಯಯನಕ್ಕೆ ಒಳಪಡಿಸುವುದು ಸಂಶೋಧನಾ ಕ್ಷೇತ್ರದಲ್ಲಿ ಕಾಣಿಸಿಕೊಳ್ಳತೊಡಗಿತು.

ಜಾತಿ ವರ್ಣ ವರ್ಗ ಪರಿಕಲ್ಪನಾತ್ಮಕ ಅಧ್ಯಯನಗಳಿಗೆ ಕೆಲವು ಉದಾಹರಣೆಗಳನ್ನು ನೋಡುವುದಾದರೆ, 'ವಚನ ಸಾಹಿತ್ಯದಲ್ಲಿ ದಲಿತ ಸಂವೇದನೆ' , 'ಕುವೆಂಪುರವರ ಕಾದಂಬರಿಗಳಲ್ಲಿ ದಲಿತ ಸಂವೇದನೆ,' 'ದಲಿತ ವರ್ಗದ ಶರಣರು ಒಂದು ಅಧ್ಯಯನ', 'ಕುವೆಂಪು ಕೃತಿಗಳಲ್ಲಿ ವರ್ಣ ವರ್ಗ ಸಂಘರ್ಷ', 'ದಲಿತ ಜನಪದ ಸಾಹಿತ್ಯ' ಇತ್ಯಾದಿಗಳನ್ನು ಗಮನಿಸಬಹುದು.

ಸಾಹಿತ್ಯ-ಸಂಸ್ಕೃತಿ ಸಾಧಕರನ್ನು ಜಾತಿ ಸಮುದಾಯಗಳು ತಮ್ಮ ಅಸ್ಮಿತೆಗಾಗಿ ಐಕಾನ್‌ಗಳಾಗಿ ಮಾಡಿಕೊಳ್ಳುತ್ತಿರುವ ಪ್ರಕ್ರಿಯೆ ತೀವ್ರವಾಗುತ್ತಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಗಳಲ್ಲಿ ವ್ಯಕ್ತಿಕೇಂದ್ರಿತ ಅಧ್ಯಯನ ಪೀಠಗಳನ್ನು ಸ್ಥಾಪಿಸಿ ಸಂಶೋಧನೆಗೆ ಚಾಲನೆ ನೀಡುತ್ತಿರುವುದನ್ನು ಕಾಣಬಹುದು. ಇಲ್ಲಿ ವ್ಯಕ್ತಿ ಕೇಂದ್ರಿತವಾದ ಮತ್ತು ಅವರ ಸಾಹಿತ್ಯ ಚಿಂತನೆ, ಸಾಧನೆ-ಸಿದ್ಧಿಗಳ ಅಧ್ಯಯನ ನಡೆಸಲಾಗುತ್ತದೆ. ಉದಾಹರಣೆಗೆ 'ಕನಕ ಅಧ್ಯಯನಪೀಠ', 'ಅಂಬೇಡ್ಕರ್ ಅಧ್ಯಯನಪೀಠ, ಜೈನ ಅಧ್ಯಯನಪೀಠ, ಪುತಿನ ಅಧ್ಯಯನಪೀಠ, ಬಸವ ಮೊದಲಾದವರ ಅಧ್ಯಯನ ಪೀಠಗಳು, ಕೆಂಪೆಗೌಡ ಅಧ್ಯಯನ ಪೀಠ, ಪುರಂದರ ಅಧ್ಯಯನ ಪೀಠ ಮುಂತಾದ ಹೆಸರಿನಲ್ಲಿ ಆರಂಭಗೊಂಡಿರುವುದನ್ನು ಗಮನಿಸಬಹುದು. ಜಾತಿಯ ಹಿನ್ನೆಲೆಯಲ್ಲಿ ಹೆಚ್ಚಾಗುತ್ತಿರುವ ಈ ರೀತಿಯ ಸಂಶೋಧನೆಗಳನ್ನು ಅನುಮಾನಗಳಿಂದ ನೋಡದೆ, ಭಿನ್ನತೆಯ ಒಡಕುಗಳು ಎಂದು ಪರಿಗಣಿಸದೆ, ಅವುಗಳನ್ನು ಅಲಕ್ಷಿತ ಬಹುತ್ವವನ್ನು ಗುರುತಿಸುವ ಸಾಧನವೆಂದು ಪರಿಗಣಿಸಬೇಕಾಗುತ್ತದೆ. ಈ ಹೊತ್ತಿನಲ್ಲಿ ಜಾತಿ ಜನಾಂಗದ ಅಸ್ಮಿತೆ, ಕಲೆ, ಸಂಪ್ರದಾಯಗಳ ಸಂಬಂಧಗಳನ್ನು ಕಂಡುಕೊಳ್ಳುವ ಹಲವು ಅಧ್ಯಯನಗಳು ಮುನ್ನೆಲೆಗೆ ಬಂದಿವೆ. 'ಹರದೇಶಿ-ನಾಗೇಶಿ ಒಂದು ಅಧ್ಯಯನ', 'ಗೊಂದಲಿಗರು ಒಂದು ಅಧ್ಯಯನ', ಮುಂತಾದವರ ಅಧ್ಯಯನಗಳು ಮಹತ್ವದ ಸಾಮಾಜಿಕ ಸಂಶೋಧನೆಗಳಾಗಿವೆ.

ಲಿಂಗ ಪರಿಕಲ್ಪನಾತ್ಮಕ ಅಧ್ಯಯನ ಮಾದರಿಗಳು

ಈ ಪರಿಕಲ್ಪನೆಯಾದರಿಸಿ ಸ್ತ್ರೀವಾದಿ ಸಂಶೋಧನೆಗಳು ಕನ್ನಡದಲ್ಲಿ ವಿಶೇಷವಾಗಿ ನಡೆಯುತ್ತಿವೆ. ಎಂಬತ್ತರ ದಶಕದ ನಂತರ ಕನ್ನಡ ಸಂಶೋಧನೆಯ ಪರಿಕಲ್ಪನೆಗೆ ಮತ್ತೊಂದು ತಿರುವು ಒದಗಿತು. ಸ್ತ್ರೀವಾದಿ ನೆಲೆಯಿಂದ ಕನ್ನಡ ಸಾಹಿತ್ಯವನ್ನು ನೋಡುವ ಹಲವು ಅಧ್ಯಯನಗಳು ನಡೆಯತೊಡಗಿದವು. "ಈ ಸ್ತ್ರೀವಾದಿ ಅಧ್ಯಯನಗಳು ಸಾಂಪ್ರದಾಯಿಕ ಸಂಶೋಧನೆಗಿಂತ ಭಿನ್ನವಾಗಿದ್ದು, ಇವು ಕೇವಲ ಮಹಿಳೆಯ ಬಗ್ಗೆ ಸಂಶೋಧನೆ ಅಲ್ಲದೆ ಅವರ ಲಿಂಗಾಧಾರಿತ ಸಮಾಜದ ಬದಲಾವಣೆಯ ಬಗೆಗಿನ ಸಂಶೋಧನೆಗಳೆ ಆಗಿರುತ್ತವೆ". * [ಕನ್ನಡ ಸಂಶೋಧನೆಯ ವೈಧಾನಿಕತೆ ಸಂಗ್ರಹ ಅಮರೇಶ ನುಗಡೋಣಿ ಸ್ತ್ರೀವಾದಿ

ಸಂಶೋಧನಾ ವಿಧಾನಗಳು ಸ್ವರೂಪ ಹಾಗೂ ಅಗತ್ಯತೆ ಪುಟ ೩೯ ಡಾಕ್ಟರ್ ಜಯ ದೇಗಾವ್ಕರ್೨೦೦೮]

ಸ್ತ್ರೀವಾದಿ ಅಧ್ಯಯನಗಳು ಮಹಿಳಾಪರ ವಕಾಲತ್ ಅಲ್ಲ, ಮಹಿಳೆಯರ ನಿಜವಾದ ಕಷ್ಟಗಳನ್ನು ಅರಿಯುವ ಹಾಗೂ ಅದರ ಪರಿಹಾರದ ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಒಂದು ರಚನಾತ್ಮಕ ಕಾರ್ಯ ಆಗಬೇಕಾಗುತ್ತದೆ. ಅಂತಹ ಕೆಲವು ಅಧ್ಯಯನಗಳು ಕನ್ನಡದಲ್ಲಿ ನಡೆದಿವೆ. ಉದಾಹರಣೆಗೆ 'ಜಾಹೀರಾತುಗಳಲ್ಲಿ ಮಹಿಳೆಯರ ಪ್ರತಿನಿಧೀಕರಣ', 'ಗಾರ್ಮೆಂಟ್ಸ್ ಫ್ಯಾಕ್ಟರಿಗಳ ಮಹಿಳೆಯರು ಒಂದು ಅಧ್ಯಯನ', 'ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳು ಮತ್ತು ಸವಾಲುಗಳು' 'ಕಾರಂತರ ಕಾದಂಬರಿಗಳಲ್ಲಿ ಮಹಿಳೆಯ ಪಾತ್ರ' ಇತ್ಯಾದಿ

ಕನ್ನಡ ಸಂಶೋಧನೆಗಳಲ್ಲಿ ದಲಿತ ಸಾಹಿತ್ಯದ ಅಧ್ಯಯನದಂತೆ ಅಲಕ್ಷಿತವಾದ ಮಹಿಳೆಯರು ಬುಡಕಟ್ಟುಗಳು ಜಾನಪದ ಸಾಹಿತ್ಯಗಳ ಅಧ್ಯಯನಗಳು ೯೦ರ ದಶಕಗಳಿಂದ ಮುಂಚೂಣಿಗೆ ಬಂದಿದೆ. ಸ್ಥಾಪಿತ ಪ್ರತಿಷ್ಠಿತ ಸಾಹಿತ್ಯ ಪರಂಪರೆಯಲ್ಲಿ ಅಲಕ್ಷ್ಯಕ್ಕೆ ಒಳಗಾದ ಜಾತಿ-ಲಿಂಗ-ವರ್ಗ ಇದರಿಂದಾಗಿ ನೇಪತ್ಯಕ್ಕೆ ಸರಿಸಲ್ಪಟ್ಟ ಅವರ ಚರಿತ್ರೆಯನ್ನು ಮರಳಿ ಕಟ್ಟಿಕೊಳ್ಳುವ ಅಗತ್ಯತೆಯನ್ನು ಮನಗಂಡು ಸಂಶೋಧನಾ ಅಧ್ಯಯನ ಕೇಂದ್ರಗಳು ಇತ್ತ ಗಮನ ನೀಡಿದವು. ಮಹಿಳೆಯರ ಪ್ರತಿನಿಧೀಕರಣ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಹೇಗಿದೆ, ಆ ತಪ್ಪುಗಳನ್ನು ಮತ್ತೆ ಸರಿಪಡಿಸಬೇಕು ಎಂಬ ತುಡಿತದಿಂದ ಮಹಿಳಾ ಅಧ್ಯಯನಗಳು ನಡೆಯುತ್ತಿವೆ. ಮಹಿಳಾ ಅಧ್ಯಯನಕ್ಕೆ ತಾತ್ವಿಕತೆಯನ್ನು ಕೊಡುವುದರೊಂದಿಗೆ 'ಪರಂಪರೆಯ ಮರುನಿರ್ವಚನ' ಉದ್ದೇಶಿತ ಸಂಶೋಧನೆಗಳು ನಡೆಯುತ್ತಿವೆ.

'ಸ್ತ್ರೀವಾದಿ', 'ಸ್ತ್ರೀನಿಷ್ಠ', 'ಮಹಿಳಾ ಸಂಕಥನ', 'ಹೆಣ್ಣು ನೋಟ' ಇತ್ಯಾದಿ ಹೆಸರುಗಳೊಂದಿಗೆ ನೂರಾರು ಅಧ್ಯಯನಗಳು ನಡೆಯುತ್ತಿರುವುದನ್ನು ಗಮನಿಸಬಹುದು. ಉನ್ನತ ಜಾತಿ ವರ್ಗದ ನಗರದ ಮಹಿಳೆಯರ ಸಂವೇದನೆಗಳಿಗಿಂತ ಅಲಕ್ಷಿತ ಅಸಂಘಟಿತ ಕೂಲಿ ಮಹಿಳೆಯರ, ದಲಿತಮಹಿಳೆಯರ ಬದುಕು-ಬವಣೆ ಹಕ್ಕುಬಾಧ್ಯತೆ ಪ್ರಶ್ನೆಗಳನ್ನು ಪ್ರತ್ಯೇಕವಾಗಿ ಗಮನಿಸಲಾಗುತ್ತಿದೆ.

ಭಿನ್ನಭಿನ್ನ ಕ್ಷೇತ್ರಗಳಲ್ಲಿ ಮಹಿಳೆಯರ ಸ್ಥಿತಿ, ಮಹಿಳಾಲೋಕದ ವಿನ್ಯಾಸವು ಯಾವಬಗೆಯಲ್ಲಿ ಇದೆ ಎಂಬುದನ್ನು ಕುರಿತು ಹಲವು ಅಧ್ಯಯನಗಳು ನಡೆಯುತ್ತಿವೆ. 'ಕನ್ನಡ ಜಾನಪದ ಮಹಾಕಾವ್ಯಗಳಲ್ಲಿ ಮಹಿಳಾ ಪ್ರತಿನಿಧೀಕರಣ', 'ಕನ್ನಡ ಜನಪದ ಗೀತೆಗಳಲ್ಲಿ ಮಹಿಳಾ ಲೋಕದ ವಿನ್ಯಾಸ', 'ಮುಸ್ಲಿಂ ಮಹಿಳಾ ಸಂವೇದನೆ', 'ಮಹಿಳಾ ಸಾಮಾಜಿಕತೆ', 'ಧರ್ಮ ಮಹಿಳೆ ಮತ್ತು ಸಮಾಜ', 'ಕರ್ನಾಟಕದ ಮಹಿಳಾ

ಸೂಫಿಗಳು', ದಲಿತ, ಮುಸ್ಲಿಂ, ಬುಡಕಟ್ಟು, ದೇವದಾಸಿ ಮಹಿಳೆಯರು ಮುಂತಾದ ಅಲಕ್ಷಿತ ಮಹಿಳೆಯರ ಪ್ರತಿನಿಧೀಕರಣದ ಅಧ್ಯಯನದ ನೆಲೆಗಳನ್ನು ಗುರುತಿಸಬಹುದು.

ಭಿನ್ನಭಿನ್ನ ಕಾಲಘಟ್ಟಗಳಲ್ಲಿ ನಡೆದಿರುವ ಅಧ್ಯಯನಗಳನ್ನು ಗಮನಿಸಿ, ಅವುಗಳನ್ನು ಹಲವು ವಿಭಾಗಗಳಾಗಿ ಮಾಡಬಹುದು ೧.ಪ್ರಾಚೀನ ಸಾಹಿತ್ಯದಲ್ಲಿ ಮಹಿಳೆ ೨. ಪುರಾಣಗಳಲ್ಲಿ ಮಹಿಳೆ ೩ .ಆಧುನಿಕ ಸಾಹಿತ್ಯದಲ್ಲಿ ಮಹಿಳೆ ಇತ್ಯಾದಿ. ಮತ್ತೊಂದು ಬಗೆಯಲ್ಲಿ ೧.ವಿವಾಹ ಕುಟುಂಬ ದಾಂಪತ್ಯ ಸಂಸ್ಥೆಗಳನ್ನು ಕೇಂದ್ರವಾಗಿಸಿಕೊಂಡ ಅಧ್ಯಯನಗಳು ೨. ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ. ೩ ಇತ್ತೀಚೆಗಷ್ಟೇ ಆರಂಭವಾಗಿರುವ ಹೆಣ್ಣು ಭಾಷೆ, ಸ್ತ್ರೀವಾದಿ ಭಾಷಾಶಾಸ್ತ್ರೀಯ ನೆಲೆಯ ಅಧ್ಯಯನಗಳು. ಇತ್ಯಾದಿಗಳನ್ನು ಗಮನಿಸಬಹುದು.

ಪರಿಕಲ್ಪನಾತ್ಮಕ ಅಧ್ಯಯನಗಳಲ್ಲಿ ಮತ್ತೊಂದು ಬಗೆ ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನಗಳು

ಶಿಷ್ಟ-ಪರಿಶಿಷ್ಟ ಪ್ರಧಾನ-ಅಧೀನ, ಸಂಸ್ಕೃತಿ-ಪ್ರತಿಸಂಸ್ಕೃತಿ ಇತ್ಯಾದಿ ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನಗಳು ವಿಶೇಷವಾಗಿ ನಡೆದಿವೆ. ಒಂದು ಪೂರ್ಣ ವೈಜ್ಞಾನಿಕ ಕ್ರಮದಲ್ಲಿ ನಡೆದಿರುವ ಅಧ್ಯಯನಗಳು, ಶುದ್ಧ ಸಾಹಿತ್ಯಿಕ ನೆಲೆಯಲ್ಲಿ ನಡೆದಿರುವ ಅಧ್ಯಯನಗಳು, ಆರ್ಥಿಕ ಅಭಿವೃದ್ಧಿಯ ನೆಲೆಯಿಂದ ನಡೆದಿರುವ ಅಧ್ಯಯನಗಳು ಒಂದು ಬಗೆಯವಾದರೆ ಎರಡನೆಯ ಬಗೆ, ಜನಾಂಗೀಯ ಜಾನಪದ ಅಧ್ಯಯನಗಳು. ಇವು ಹೆಚ್ಚು ಸಂಕೀರ್ಣ ಸ್ವರೂಪದವಾಗಿರುತ್ತವೆ. ಇಂತಹ ಅಧ್ಯಯನಗಳಲ್ಲಿ, ಸಂಗ್ರಹಣೆ ವಿವರಣೆ ವ್ಯಾಖ್ಯಾನಗಳು ಸ್ವಯಂಪೂರ್ಣವಾದವುಗಳು ಆಗಲು ಸಾಧ್ಯವಿಲ್ಲ. ಅವು ಕಾಲದೇಶ ಬದ್ಧವಾದ ಸಂಗತಿಗಳಾಗುತ್ತವೆ. ಸಾಹಿತ್ಯಕ್ಕೆ ಈ ಸಮಸ್ಯೆ ಅಷ್ಟು ಇರುವುದಿಲ್ಲ, ಆದರೆ ಸಂಸ್ಕೃತಿ ಸಂಬಂಧಿತ ಅಧ್ಯಯನಕ್ಕೆ ಈ ಸಮಸ್ಯೆಗಳಿರುತ್ತವೆ.

ಜನಾಂಗ ವಿವರಣ ಶಾಸ್ತ್ರ ಒಂದು ಪ್ರಮುಖ ಸಂಶೋಧನಾ ವಿಧಾನವಾಗಿದ್ದು, ಇದು ಸಾಂಸ್ಕೃತಿಕ ವರ್ತನೆಯನ್ನು ಶೋಧಿಸಲು ಮತ್ತು ವ್ಯಾಖ್ಯಾನಿಸಲು ಪ್ರಯತ್ನಿಸುತ್ತದೆ. ಇಂಥವು ಕೇವಲ ಸಂಶೋಧನಾ ಪ್ರಕ್ರಿಯೆಗಳಾಗಿರದೆ ಸಂಶೋಧನೆಯ ಉತ್ಪನ್ನವು ಆಗುವುದರಿಂದ ಇವುಗಳ ಫಲಿತಗಳು ಆಯಾ ಜನಾಂಗದ ಬದುಕಿನ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಯೋಜನೆಗಳನ್ನು ರೂಪಿಸಲು ಬಹಳ ಸಹಕಾರಿಯಾಗಿರುತ್ತದೆ. ಜಾನಪದ, ಬುಡಕಟ್ಟುಸಾಹಿತ್ಯ ಅಧ್ಯಯನಗಳು, ಜನಾಂಗೀಯ ಅಧ್ಯಯನಗಳು ನಡೆದಿವೆ, ಜನಪದ ಮಹಾಕಾವ್ಯಗಳ ಅಧ್ಯಯನ, ಜಾನಪದ ಮೌಖಿಕ ಕಥನಗಳು, ಜಾನಪದವೃತ್ತಿ ಹಾಡುಗಾರ ಸಮುದಾಯಗಳ ಅಧ್ಯಯನ ಇತ್ಯಾದಿ ಸಂಶೋಧನೆಗಳನ್ನು ಇಲ್ಲಿ ಗಮನಿಸಬಹುದು.

ಪ್ರಾದೇಶಿಕ ನೆಲೆಗಳ ಹಲವು ಬಗೆಯ ಅಧ್ಯಯನಗಳು

ಭಿನ್ನ ಭಾಷಿಕರ ಸಂಸ್ಕೃತಿ ಅಧ್ಯಯನಗಳು ಸಹ ಕನ್ನಡದಲ್ಲಿ ನಡೆದಿವೆ ತುಳುವ ಸಾಹಿತ್ಯ, ಮೌಖಿಕ ಸಾಹಿತ್ಯ, ಕೊಂಕಣಿಸಾಹಿತ್ಯ, ಹೈದರಾಬಾದ್ ಕರ್ನಾಟಕ ಸಾಹಿತ್ಯ ಇತ್ಯಾದಿ ವಿಷಯಗಳು ಸಂಶೋಧನೆಗೆ ಒಳಪಟ್ಟಿವೆ

ಭಾಷಿಕ ನೆಲೆಯಲ್ಲಿಯೂ ಸಹ ಕನ್ನಡದಲ್ಲಿ ಅಧ್ಯಯನಗಳು ನಡೆದಿವೆ.ಕೊಡವ ಭಾಷೆ, ಸೋಲಿಗರ ಭಾಷೆ, ಕೊರಮ ಭಾಷೆ, ಬುಡಕಟ್ಟುಗಳ ಆಚಾರ-ವಿಚಾರ ಬದುಕಿನ ನೆಲೆಗಳು ಅವರ ಪಾರಂಪರಿಕ ಜ್ಞಾನದ ನೆಲೆಗಳು, ಲಂಬಾಣಿಗಳು, ಸೋಲಿಗರು, ಜೇನು ಕುರುಬರು, ಸಿದ್ಧಿಗಳು ಮುಂತಾದ ಸಮುದಾಯಗಳ ವೈದ್ಯ ಪದ್ಧತಿ, ಪಶುವೈದ್ಯ, ಮಳೆ ಕುರಿತ ಜ್ಞಾನ, ಕೃಷಿ ಸಂಬಂಧಿತ ಜ್ಞಾನ ಇತ್ಯಾದಿ ದೇಸಿ ತಿಳುವಳಿಕೆಗಳ ಅಧ್ಯಯನಗಳು ನಡೆಯುತ್ತಿರುವುದು ಕಂಡುಬಂದಿವೆ. ಇಂತಹ ಅಧ್ಯಯನಗಳನ್ನು ಸಾಮಾಜಿಕ ನ್ಯಾಯ ಒದಗಿಸುವ ಜನಾಂಗೀಯ ಅಸ್ಮಿತೆಯನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಆಯಾಯ ಜನಾಂಗಗಳು ಪ್ರಾಯೋಜಿಸುತ್ತಿರುವುದು ಉಂಟು. "ದೇಸೀ ಸಂಶೋಧನೆ ಎನ್ನುವುದು ಜಡಸ್ಥಿತಿಯ ವಸ್ತು ವಿಷಯವನ್ನು ಕುರಿತದ್ದಲ್ಲ, ದೇಸಿ ಪರಂಪರೆಯ ಸತ್ಯಗಳು ಕಣ್ಣಿಗೆ ಕಾಣುವುದಿಲ್ಲ ಅಲ್ಲದೆ ಭಾರತದಂತಹ ಬಹುಮುಖಿ ಸಂಸ್ಕೃತಿಯ ಸಮಾಜಗಳಲ್ಲಿ ಒಂದು ಸತ್ಯ ಇರುವುದು ಸಾಧ್ಯವಿಲ್ಲ. ಮುಖ್ಯವಾಹಿನಿಯಲ್ಲಿ ತಿರಸ್ಕೃತವಾದ ಜಾನಪದ ಜ್ಞಾನ ಪರಂಪರೆಗಳ ಬೇರನ್ನು ಹಿಡಿದು ವರ್ತಮಾನದ ಸಾಮಾಜಿಕ ಮೌಲ್ಯಗಳನ್ನು ಕಂಡುಕೊಳ್ಳುವ ಪ್ರಯತ್ನಗಳು ಸಂಶೋಧನೆಗಳಲ್ಲಿ ಕಂಡುಬರುತ್ತವೆ" [ಅಮರೇಶ ನುಗಡೋಣಿ ಪುಟ. ೧೨೭ ೧೨೮]

ದೇಸಿ ಸಂಶೋಧನೆಗಳು ದೇಸಿ ಸಂಸ್ಕೃತಿಯ ವರ್ತಮಾನದ ಸಾಮಾಜಿಕ ಮೌಲ್ಯಗಳನ್ನು ಅದರ ಪಾರಂಪರಿಕ ಜ್ಞಾನದಸೆಲೆಗಳ ನೆರವಿನಿಂದ ಕಂಡುಕೊಳ್ಳುವ ಕಾರ್ಯವನ್ನು ಅದರಲ್ಲೂ ಅಲಕ್ಷಿತ ಜನಸಮುದಾಯಗಳಲ್ಲಿನ ಪಾರಂಪರಿಕ ಜ್ಞಾನ ಭಂಡಾರವನ್ನು ಜನರ ಪ್ರಸ್ತುತ ಸ್ಥಿತಿಗತಿಗಳನ್ನು ಗಮನದಲ್ಲಿರಿಸಿಕೊಂಡು ಅಧ್ಯಯನ ಮಾಡುವಂತಹುದು ನಡೆಯುತ್ತಿದೆ. ಸಮುದಾಯಗಳ ವೈದ್ಯ ಪ್ರಾಣಿ-ಪಕ್ಷಿಗಳನ್ನು ಕುರಿತಾದ ಅವುಗಳ ವರ್ತನಾ ಜ್ಞಾನ ಭಂಡಾರ ಇತ್ಯಾದಿ ಸ್ಥಳೀಯ ಜ್ಞಾನವನ್ನು ಕುರಿತಂತೆ ಜನಪದ ಸಂಸ್ಕೃತಿಯ ಅಧ್ಯಯನಗಳು ರೂಪುಗೊಂಡು ವಿಶೇಷವಾಗಿ ನಡೆದಿವೆ. ಇಲ್ಲಿ ಜನಸಮುದಾಯಗಳ ಅಧ್ಯಯನವೆಂದಾಗ ಕೇವಲ ಅಲಕ್ಷಿತ ಜನಸಮುದಾಯವಲ್ಲದೆ, ಜೈನ, ಬೌದ್ಧ, ಬ್ರಾಹ್ಮಣ, ಇತ್ಯಾದಿ ಸಮುದಾಯಗಳಲ್ಲೂ ಇರುವ ವಿಶಿಷ್ಟ ದೇಸಿ ಜ್ಞಾನಗಳನ್ನು ಕಂಡುಕೊಳ್ಳುವ ಪ್ರಯತ್ನಗಳು ನಡೆಯಬೇಕಾಗಿದೆ.

ದೇಸೀ ಕಥನ

ತೃತೀಯ ಜಗತ್ತಿನಲ್ಲಿ ಪಶ್ಚಿಮದ ಅನುಭವದ ನೆಲೆಯಲ್ಲಿ ಪಶ್ಚಿಮೇತರ ಸಮಾಜಗಳನ್ನು ರೂಪಿಸುವ ಪ್ರಯತ್ನದ ವಿರುದ್ಧ 'ದೇಸಿಥಿಯರಿ'ಗಳನ್ನು ಕಟ್ಟುವ ಪ್ರಯತ್ನಗಳು ನಡೆಯುತ್ತಿವೆ. ಆಧುನೀಕರಣದ ಬಗೆಗೆ ಟೀಕೆಗಳೂ ಕಂಡುಬಂದಿವೆ. ಆಧುನೀಕರಣವು ನಮ್ಮನ್ನು ಉದ್ಧರಿಸುವ ಮಾರ್ಗವೆಂಬುದನ್ನು ಒಪ್ಪದೇ, ಆಧುನೀಕರಣ ಅಥವಾ ಅಭಿವೃದ್ಧಿ ಎಂದರೆ ನಿಸ್ಸಂದೇಹವಾಗಿ ಬಂಡವಾಳದ ವಿಸ್ತರಣೆ ಎಂದು ಪರಿಗಣಿಸಲಾಗಿದೆ. ಆಧುನಿಕರಣವು ಸ್ಥಳೀಯ ಅವಶ್ಯಕತೆಗೆ ತಕ್ಕಂತೆ ರೂಪಿತವಾಗಿಲ್ಲ ಬದಲಿಗೆ ಮಾರುಕಟ್ಟೆಯ ಅಗತ್ಯಕ್ಕೆ ಅನುಗುಣವಾಗಿದೆ. ಈ ಮಾರುಕಟ್ಟೆಯ ಅಗತ್ಯವೂ ಅಂತರರಾಷ್ಟ್ರೀಯ ಮಾರುಕಟ್ಟೆಯ ಜೊತೆಗೆ ಜೋಡಣೆಯಾಗಿದೆ. ಅಲ್ಲಿ ಅವು ನಿರ್ಧರಿಸಲ್ಪಡುತ್ತವೆ.ಹಾಗಾಗಿ ನಮ್ಮ ಸಮಾಜದಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ಸಂಸ್ಥೆಗಳು ಮತ್ತು ಮೌಲ್ಯಗಳ ಮೂಲಕ ಅಭಿವೃದ್ಧಿಯನ್ನು ನಿರ್ವಚಿಸಿಕೊಳ್ಳುವುದು ಮತ್ತು ಅದನ್ನು ಆಚರಣೆಗೆ ತರುವುದು ಅಗತ್ಯ ಎಂಬ ವಿಚಾರಗಳನ್ನು ಒಳಗೊಂಡ ದೇಸೀ ಅಧ್ಯಯನಗಳು ನಡೆಯುತ್ತಿವೆ.

ಸೈದ್ಧಾಂತಿಕ ನೆಲೆಯ ಅಧ್ಯಯನ

ಇಂದು ಸಂಶೋಧನಾ ಕ್ಷೇತ್ರದಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುತ್ತಿರುವ ಸಂಶೋಧನೆ ಮಾದರಿ ಎಂದರೆ ಸಂಶೋಧಕ ಅಧ್ಯಯನವನ್ನು ಯಾವ ತಾತ್ವಿಕ ನೆಲೆಯಲ್ಲಿ ವ್ಯಾಖ್ಯಾನಿಸಿಕೊಳ್ಳುತ್ತಾನೆ ಅವನ ತಾತ್ವೀಕರಣದ ಸ್ವರೂಪವೇನು ಅಧ್ಯಯನದಲ್ಲಿ ತಾತ್ವೀಕರಣದ ಅಗತ್ಯತೆ ಏನು, ಅಧ್ಯಯನಗಳಿಗೆ ಸಿದ್ಧಾಂತಗಳ ಅಗತ್ಯತೆ ಕುರಿತು ಹೆಚ್ಚಿನ ಅರಿವು ನೀಡುತ್ತಿರುವುದನ್ನು ಗಮನಿಸಬಹುದು

ಈಗಾಗಲೇ ಚಾಲ್ತಿಯಲ್ಲಿರುವ ಅನೇಕ ಸಿದ್ಧಾಂತಗಳ ತತ್ವಗಳ ಸ್ವರೂಪಗಳನ್ನು ಅರ್ಥಮಾಡಿಕೊಂಡು ತನ್ನ ವಿಷಯಕ್ಕೆ ಅನ್ವಯಿಸಿ ಅಧ್ಯಯನ ಮಾಡುವುದು ಒಂದು ವಿಧಾನವಾದರೆ, ತನ್ನ ವಿಷಯ ವಸ್ತುವಿಗೆ ಅಗತ್ಯವಾದ ತಾತ್ವಿಕತೆಯನ್ನು ತಾನೇ ರೂಪಿಸಿಕೊಳ್ಳುವುದು ಮತ್ತೊಂದು ಬಗೆ. ಈ ನಿಟ್ಟಿನಲ್ಲಿ ಕನ್ನಡ ಸಂಶೋಧನೆಯ ಮೇಲೆ ಆಧುನಿಕ ಕಾಲದ ನಾನಾ ಪಾಶ್ಚಿಮಾತ್ಯ ಸಿದ್ಧಾಂತಗಳು ಪ್ರಭಾವ ಬೀರಿವೆ. ಹೊರಗಿನಿಂದ ಬಂದ ಸಿದ್ಧಾಂತಗಳಿಗೆ ದೇಶಿಯವಾದ ಸಿದ್ಧಾಂತಗಳ ನೆಲೆಗಳನ್ನು ಅಳವಡಿಸಿಕೊಂಡ ಅನೇಕ ಅಧ್ಯಯನಗಳು ನಡೆಯುತ್ತಿವೆ. ಎಡ್ವರ್ಡ್ ಸೈದ್, ಡೆರಿಡಾ ಗ್ರಾಮ್ಷಿ, ಫೋಕೋ, ಚಾಮ್ಸ್ಕಿ, ಲೇಬೋವ್, ಸಸೂರ್ ಮುಂತಾದವರ ಚಿಂತನೆಗಳು ಕನ್ನಡ ಸಂಶೋಧನೆಯ ಮೇಲೆ ಪ್ರಭಾವ ಬೀರುತ್ತಿರುವುದನ್ನು ಗುರುತಿಸಬಹುದು.

'ಯಾಜಮಾನ್ಯ ಮತ್ತು ಪ್ರತಿರೋಧದ ನೆಲೆಗಳನ್ನು' ಗುರುತಿಸುವ ಅನೇಕ ಅಧ್ಯಯನಗಳು ಕನ್ನಡದಲ್ಲಿ ನಡೆಯುತ್ತಿವೆ ಉದಾಹರಣೆಗೆ ನೋಡುವುದಾದರೆ,

'ಕನ್ನಡ ಆತ್ಮಕಥೆಗಳಲ್ಲಿ ಶೋಷಣೆ ಮತ್ತು ಬಂಡಾಯದ ಪ್ರತಿರೋಧದ ಸ್ವರೂಪ', 'ಕನ್ನಡದ ಮಹಿಳಾ ಕಾವ್ಯದಲ್ಲಿ ಕಂಡುಬರುವ ಯಾಜಮಾನ್ಯ ಮತ್ತು ಪ್ರತಿರೋಧ', 'ಕನ್ನಡ ಮಹಿಳಾ ವೈಚಾರಿಕ ಸಾಹಿತ್ಯದಲ್ಲಿ ಪವರ್ ಮಾರ್ಕೆಟ್ ಮತ್ತು ಮಹಿಳಾ ಪ್ರಶ್ನೆಗಳು', 'ಕನ್ನಡ ಸಣ್ಣ ಕಥೆಗಳಲ್ಲಿ ದುಡಿಯುವ ವರ್ಗದ ಸ್ವರೂಪ', 'ನವ್ಯೋತ್ತರ ಕನ್ನಡ ಸಣ್ಣ ಕಥೆಗಳಲ್ಲಿ ಆಸ್ತಿ ಮತ್ತು ಅಧಿಕಾರ ಪರಿಕಲ್ಪನೆ' ಇತ್ಯಾದಿ ಅಧ್ಯಯನಗಳು ನಡೆದಿರುವುದನ್ನು ಗಮನಿಸಬಹುದು. 'ಪ್ರತಿಸಂಸ್ಕೃತಿ', 'ಪ್ರತಿರೋಧದ ನೆಲೆಗಳು; ಪ್ರಶ್ನೆಗಳು' ಇತ್ಯಾದಿಗಳ ಚೌಕಟ್ಟಿನಲ್ಲಿ ಅಧ್ಯಯನಗಳನ್ನು ಮಾಡಲಾಗುತ್ತಿದೆ. ಅಲ್ಲದೆ ಉದಾರವಾದ, ಮಾನವತಾವಾದ, ಅಸ್ತಿತ್ವವಾದ, ಸಮತಾವಾದ, ಸ್ತ್ರೀವಾದ, ಅಂಬೇಡ್ಕರ್ವಾದ, ಗಾಂಧಿವಾದ, ನಿರಚನವಾದ, ನವ ಚಾರಿತ್ರಿಕತೆ ಕಥನ ವಿಶ್ಲೇಷಣೆ, ದೇಸಿಸಂಸ್ಕೃತಿ ಇತ್ಯಾದಿ ಹಲವು ಚಿಂತನೆಗಳು ಇಂದಿನ ಕನ್ನಡ ಸಾಹಿತ್ಯದ ಹಾಗೂ ಸಂಶೋಧನೆಯ ಮೇಲೆ ವಿಶೇಷ ಪ್ರಭಾವವನ್ನು ಬೀರಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ.

ಬರಹಗಾರರ ತಾತ್ವಿಕತೆ ಮತ್ತು ಅಭಿವ್ಯಕ್ತಿಯ ನೆಲೆಗಳನ್ನು ಗುರುತಿಸುವಂತಹ ಅನೇಕ ಅಧ್ಯಯನಗಳೂ ಸಹ ಕನ್ನಡದಲ್ಲಿ ನಡೆದಿವೆ ಉದಾಹರಣೆಗೆ ಗೀತಾ ನಾಗಭೂಷಣ, ವೀಣಾ ಶಾಂತೇಶ್ವರ, ವೈದೇಹಿ ಇವರ ಅಭಿವ್ಯಕ್ತಿಗಳ ನೆಲೆಗಳ ಅಧ್ಯಯನ ನಡೆದಿದೆ, 'ತೇಜಸ್ವಿಯವರ ಪರಿಸರ ಪ್ರಜ್ಞೆಯ ತಾತ್ವಿಕತೆ'. 'ಉತ್ತರ ಕರ್ನಾಟಕದ ಅರ್ವಾಚೀನ ಮೌಖಿಕ ಸಾಹಿತ್ಯದ ನೆಲೆಗಳು', 'ಸಮಕಾಲೀನ ಕನ್ನಡ ಕಾವ್ಯಗಳ ತಾತ್ವಿಕ ನೆಲೆ', 'ಎಂ.ಎಂ ಕಲಬುರ್ಗಿ ಅವರ ಶಾಸ್ತ್ರ ಸಾಹಿತ್ಯದ ತಾತ್ವಿಕ ನಿಲುವುಗಳು', 'ಸಿದ್ದಪ್ಪ ಕಂಬಳಿ ಅವರ ಸಾಮಾಜಿಕ ಚಿಂತನೆ ಹಾಗೂ ಹೋರಾಟಗಳು'. 'ಕನ್ನಡ ಗಜಲ್‌ಗಳಲ್ಲಿ ವಸ್ತು ಮತ್ತು ಅಭಿವ್ಯಕ್ತಿಯ ನೆಲೆ', 'ತೋಂಟದಾರ್ಯ ಸಂಸ್ಥಾನದ ಸಾಹಿತ್ಯ ಪ್ರಕಟಣೆಗಳು ತಾತ್ವಿಕ ಸ್ವರೂಪ', 'ಆಧುನಿಕ ಕನ್ನಡ ಮಹಿಳಾಸಾಹಿತ್ಯದಲ್ಲಿ ಸ್ತ್ರೀ ದೇಹ ಮೀಮಾಂಸೆ', 'ಕನ್ನಡಪ್ರಾತಿನಿಧಿಕ ಕಾದಂಬರಿಗಳಲ್ಲಿ ಯುವ ಪ್ರಜ್ಞೆಯ ಸ್ವರೂಪ' ಇತ್ಯಾದಿ ಅಧ್ಯಯನಗಳನ್ನು ಗಮನಿಸಿದಾಗ ಕನ್ನಡ ಸಂಶೋಧನೆಯು ಕನ್ನಡ ಸಾಹಿತ್ಯದ ಹಾಗೂ ವಿವಿಧ ಲೇಖಕರ ಬರಹದ ತಾತ್ವಿಕತೆ ಮತ್ತು ಅಭಿವ್ಯಕ್ತಿಯ ನೆಲೆಗಳನ್ನು ಶೋಧಿಸುವ ಕಾರ್ಯವನ್ನು ಮಾಡುತ್ತಿರುವುದು ತಿಳಿದುಬರುತ್ತದೆ.

ಕನ್ನಡ ಸಂಶೋಧನೆಯಲ್ಲಿ ತೌಲನಿಕ ಅಧ್ಯಯನದ ಪಟ್ಟಿಯು ಸಹ ದೊಡ್ಡದಿದೆ

ಇದರಲ್ಲಿ ಹಲವು ಮಾದರಿಗಳನ್ನು ಗುರುತಿಸಬಹುದು. ಒಂದು ಕನ್ನಡದ ಕೃತಿಗಳ ತುಲನೆ, ಎರಡು ಕಾಲಘಟ್ಟಗಳ ತುಲನೆ, ಮೂರು ವ್ಯಕ್ತಿಗಳ ತಾತ್ವಿಕ ದರ್ಶನಗಳ ತುಲನೆ, ನಾಲ್ಕು ಸಾಹಿತ್ಯಿಕ ಸಂವೇದನೆ, ಅಭಿವ್ಯಕ್ತಿ ವಿಧಾನಗಳ ತುಲನೆ, ಐದು ಸಾಹಿತ್ಯ ಪರಂಪರೆಯ ತುಲನೆ ಆರು ಆಧುನಿಕ ಮತ್ತು ಪರಂಪರೆಗಳ

ತುಲನೆಗಳು ಇತ್ಯಾದಿ ಬಗೆಯಲ್ಲಿ ನಡೆದಿದೆ. ಇವುಗಳಲ್ಲಿ ಕೇವಲ ಸಾಮಾನ್ಯ ವ್ಯತ್ಯಾಸಗಳನ್ನು ತರತಮಗಳನ್ನು ತೋರಿಸುವಷ್ಟಕ್ಕೇ ಕೆಲವು ಅಧ್ಯಯನಗಳು ನಿಂತು ಹೋಗಿರುವುದನ್ನು ಕಾಣಬಹುದು. ಆದರೆ ಇಂತಹ ಸಂಶೋಧನೆಗಳಲ್ಲಿ ವಿವಿಧ ಲೇಖಕರ ಕೃತಿಗಳ ಅಂತಃಸಂಬಂಧಗಳನ್ನು ಅಧ್ಯಯನಗಳಿಂದ ಕಂಡುಕೊಳ್ಳುವುದು ಬಹಳ ಮುಖ್ಯ. ಉದಾಹರಣೆಗೆ 'ಕಾರಂತ ಕುವೆಂಪು ಕಾಡು ಕಡಲು', 'ಅಪೂರ್ವ ಪಶ್ಚಿಮ', 'ಮಾರ್ಕ್ಸ್ ವಾದ ಮತ್ತು ಕನ್ನಡ ವಿಮರ್ಶೆ', 'ಬಸವೇಶ್ವರ ಮತ್ತು ಅಂಬೇಡ್ಕರ್', 'ನಾಗಾರ್ಜುನ ಮತ್ತು ಅಲ್ಲಮ' ಇಂತಹ ಕೆಲವು ಕೃತಿಗಳಲ್ಲಿ ವಿಶಿಷ್ಟವಾಗಿರುವ ಲೇಖಕರ, ಚಿಂತಕರ ತಾತ್ವಿಕ ನೆಲೆಗಳನ್ನು, ದರ್ಶನಗಳನ್ನು, ಸಂವೇದನೆಗಳನ್ನು, ಪರಂಪರೆಯ ಅಂತಃಸಂಬಂಧಗಳನ್ನು ಕುರಿತು ಅಧ್ಯಯನವನ್ನು ಕೈಗೊಂಡಿರುವುದು ಕಂಡುಬಂದಿದೆ.

ಪಾಶ್ಚಾತ್ಯ ಮತ್ತು ಭಾರತೀಯ ಚಿಂತಕರ, ತತ್ವಜ್ಞಾನಿಗಳ, ತತ್ವಸಿದ್ಧಾಂತಗಳನ್ನು ವಿಶ್ಲೇಷಿಸುವ ಅಧ್ಯಯನದ ವಿಧಾನವಾಗಿ ಮಾಡಿಕೊಂಡಿರುವಂತಹ ಅಧ್ಯಯನಗಳೂ, ದೈವಿಕವಾಗಿ ನೋಡಿರುವ ಅಧ್ಯಯನಗಳೂ ಇವೆ. ಬುದ್ಧ, ಗಾಂಧಿ, ಅಂಬೇಡ್ಕರ್, ಲೋಹಿಯಾ, ಬಸವ, ಜೆಪಿ ಹಾಗೂ ಪಾಶ್ಚಾತ್ಯರಾದ ಎಡ್ವರ್ಡ್ ಸೈದ್, ಆಂಟೋನಿಯೊ ಗ್ರಾಮ್ಷಿ, ಸಾರ್ತ್ರ್, ಮುಂತಾದವರ ಚಿಂತನೆಗಳ ತಾತ್ವಿಕತೆಗಳನ್ನು ಅಳವಡಿಸಿಕೊಂಡು ಮಾಡಿರುವ ಅಧ್ಯಯನಗಳೂ ಇವೆ.

ಸಾಹಿತ್ಯ ಪರಿಕಲ್ಪನೆಯ ವಿಸ್ತೃತ ರೂಪಗಳ ಸಂಶೋಧನೆ

ಸಾಹಿತ್ಯವೆಂದಾಗ ಕೇವಲ 'ಶುದ್ಧಸಾಹಿತ್ಯ'ವನ್ನು ಮಾತ್ರ ಪರಿಗಣಿಸುತ್ತಿದ್ದ ಕಾಲವೊಂದಿತ್ತು, ಆದರೆ ಇಂದು 'ಸಾಹಿತ್ಯ'ವೆಂಬುದನ್ನು ಶುದ್ಧಸಾಹಿತ್ಯವಲ್ಲದ ಇತರ ಬರಹಗಳಿಗೂ ವಿಸ್ತರಿಸಲಾಗಿದೆ. ಈ ಬಗೆಯ ಸಾಹಿತ್ಯ ಪರಿಕಲ್ಪನೆಯ ವಿಸ್ತೃತ ರೂಪಗಳ ಅಧ್ಯಯನವು ಇತ್ತೀಚಿನ ದಿನಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಇಲ್ಲಿ ಸಾಹಿತ್ಯ ಪರಿಕಲ್ಪನೆಯ ವಿಸ್ತೃತ ರೂಪಗಳಾದ 'ಬೈಗುಳಗಳ ಅಧ್ಯಯನ', 'ಗಾದೆಗಳ ಅಧ್ಯಯನ', 'ಮೌಖಿಕ ಸಾಹಿತ್ಯದ ಅಧ್ಯಯನ', 'ಕ್ಯಾಸೆಟ್ ಸಂಸ್ಕೃತಿ ಅಧ್ಯಯನ', 'ಆಟೋ ಘೋಷವಾಕ್ಯಗಳು', ಇತ್ಯಾದಿ ನಡೆಯುತ್ತಿವೆ.

ಲಿಖಿತ ಹೊಸ ಆಕರಗಳ ಅಧ್ಯಯನಗಳಲ್ಲಿ ಗೋಡೆ ಬರಹಗಳು, ಘೋಷವಾಕ್ಯಗಳು, ಕರಪತ್ರಗಳು, ಜಾಹೀರಾತುಗಳು, ಪತ್ರಿಕೆಗಳ ವಾಚಕರವಾಣಿ, ಅಂಕಣಗಳು ಇವುಗಳೂ ಸಹ ಅಧ್ಯಯನದ ವಿಷಯಗಳು ಆಗುತ್ತಿವೆ.

ದೃಶ್ಯಮಾಧ್ಯಮಗಳಾದ ಚಲನಚಿತ್ರಗಳು, ಸಾಕ್ಷ್ಯಚಿತ್ರಗಳು, ದೂರದರ್ಶನ ಧಾರಾವಾಹಿಗಳು ಅವುಗಳ ಸಾಂಸ್ಕೃತಿಕ ಹಾಗೂ ಭಾಷಿಕ ಅಧ್ಯಯನಗಳು ನಡೆಯುತ್ತಿವೆ. ಅಂತರ್ಜಾಲ ವಿದ್ಯುನ್ಮಾನ ಮಾಧ್ಯಮಗಳ ಜನಪ್ರಿಯ ಸಾಹಿತ್ಯದ

ಅಧ್ಯಯನಗಳು ಸಹ ಇತ್ತೀಚೆಗೆ ನಡೆಯುತ್ತಿದ್ದು, ಬರಹಗಳಲ್ಲಿ ಪ್ರಮುಖವಾಗಿ ಅಂತರ್ಜಾಲ ಪತ್ರಿಕೆಗಳು ಬ್ಲಾಗ್ ಬರಹಗಳು ಸಂಶೋಧನೆಯ ವಸ್ತುಗಳಾಗುತ್ತಿವೆ.

ದೃಶ್ಯೀಯ ಸಂಸ್ಕೃತಿ ಅಧ್ಯಯನ

ಮಾನವಶಾಸ್ತ್ರ, ಸಮಾಜಶಾಸ್ತ್ರ ಅಧ್ಯಯನದ ದೃಶ್ಯೀಯ ವಿಧಾನಗಳು, ಪ್ರಮಾಣ ವಿಧಾನ ಮುಂತಾದುವುಗಳು ಕನ್ನಡದ ವೈಜ್ಞಾನಿಕ ಸಂಶೋಧನೆಗಳಲ್ಲಿ ಬಳಸಲಾಗುತ್ತಿದೆ 'ಹಸ್ತಪ್ರತಿಗಳ ಚಿತ್ರಗಳ ಅಧ್ಯಯನ', 'ಶಾಸನ ಶಿಲ್ಪಗಳು ಒಂದು ಅಧ್ಯಯನ', 'ಕನ್ನಡ ಚಲನಚಿತ್ರಗಳಲ್ಲಿ ಸ್ತ್ರೀ ಚಿತ್ರಣ', 'ಜಾಹೀರಾತುಗಳಲ್ಲಿ ಮಹಿಳಾ ಪ್ರತಿನಿಧೀಕರಣ', 'ಕನ್ನಡ ಚಲನಚಿತ್ರಗಳಲ್ಲಿ ನೃತ್ಯಕಲೆ', 'ದೇವಾಲಯ ಶಿಲ್ಪಗಳಲ್ಲಿ ನೃತ್ಯಕಲೆ', ಇತ್ಯಾದಿ ಅಧ್ಯಯನಗಳು ನಡೆಯುತ್ತಿವೆ. 'ಪಿಚ್ಚರ್ ಪವರ್:ವಿಸುಯಲ್ ಡಿಪಿಕ್ಷನ್ ಅಂಡ್ ಸೋಶಿಯಲ್ ಬ್ಲಾಗ್ಸ್', 'ಬ್ಲಾಗ್‌ಗಳ ದೃಶ್ಯ ಸ್ವರೂಪ ಮತ್ತು ಚಿತ್ರ ವೈವಿಧ್ಯ', 'ಬ್ಲಾಗುಗಳ ಬಾಹ್ಯ ಸ್ವರೂಪ, ಚಿತ್ರಗಳ ರೂಪ ಮತ್ತು ಒಳ ತಿರುಳಿನ ಸಂಬಂಧ' ಇತ್ಯಾದಿ ಅಧ್ಯಯನಗಳು ಸಹ ನಡೆಯುತ್ತಿವೆ.

ಒಟ್ಟಿನಲ್ಲಿ ಕನ್ನಡ ಸಂಶೋಧನೆಯ ಇತ್ತೀಚಿನ ಅಧ್ಯಯನದ ಹೊಸ ಒಲವನ್ನು, ಮಾದರಿಗಳನ್ನು ಗಮನಿಸಿದಾಗ

೧. ಹೊಸ ಸಿದ್ಧಾಂತ ತತ್ವಗಳ ಹಿನ್ನೆಲೆಯಲ್ಲಿ ಪ್ರಾಚೀನ ಕಾವ್ಯಗಳ ಮರು ಓದು ೨. ಭಾಷೆಯನ್ನು ಕುರಿತ ನವ ಅಧ್ಯಯನ ಶಿಸ್ತು, ದುಭಾಷಿಕತೆ, ಮಕ್ಕಳ ಭಾಷಾ ಬೆಳವಣಿಗೆ, ಸಾಮಾಜಿಕ ಭಾಷೆ ಇತ್ಯಾದಿಗಳು ೩. ಮಹಿಳಾ ಅಧ್ಯಯನ ೪.ಬುಡಕಟ್ಟು; ಅಲೆಮಾರಿಗಳ ಅಧ್ಯಯನ ೫.ಚರಿತ್ರೆಯನ್ನು ಹೊಸ ಬಗೆಯಲ್ಲಿ ಗ್ರಹಿಸುವ ವಿಧಾನ ೬. ಅಭಿವೃದ್ಧಿಯನ್ನು ಜನಸಾಮಾನ್ಯರ ನೆಲೆಯಲ್ಲಿ ನಿಂತು ಪರಿಭಾವಿಸುವ ಹೊಸ ಕ್ರಮ ೭. ಜನಪದರ ತಿಳುವಳಿಕೆಯನ್ನು ಆಧುನಿಕ ಅರಿವಿನ ಜೊತೆಗೆ ಸಾಧಿಸುವಂತೆ ಮಾಡುವ ಪ್ರಯತ್ನಗಳು, ಜನಪದ ರಾಜಕೀಯ ದೃಷ್ಟಿಕೋನವನ್ನು ಗ್ರಹಿಸುವುದು ೯. ಲೋಹಿಯಾವಾದ, ಅಂಬೇಡ್ಕರ್ವಾದಗಳ ತಾತ್ವಿಕತೆಯಲ್ಲಿ ಅಧ್ಯಯನ ಕೈಗೊಂಡಿರುವುದು ೧೦. ಸಾಹಿತ್ಯದ ಅಧ್ಯಯನಗಳು ಸಾಮಾಜಿಕ ವಿಜ್ಞಾನದ ಅರಿವಿನಭಾಗವಾಗಿ ವಿಸ್ತರಣೆ ಗೊಂಡಿರುವುದು ೧೧. ಬುಡಕಟ್ಟು ಅಧ್ಯಯನ ಜನಾಂಗೀಯ ಜಾನಪದ ಅಧ್ಯಯನವು ಪಾಶ್ಚಾತ್ಯ ಮಾದರಿಯ ವಿಧಾನಗಳಿಗಿಂತ ಭಿನ್ನವಾದ ನೆಲೆಯಲ್ಲಿ ಸಮುದಾಯಗಳನ್ನು ಅಧ್ಯಯನ ಮಾಡತೊಡಗಿರುವುದು. ೧೨. ಅಲಕ್ಷಿತ ಜ್ಞಾನ ಪರಂಪರೆಗಳ ಪರಿಶೋಧದ ಹೊಸ ಸಂಶೋಧನೆಯ ಪರಿಭಾಷೆಯನ್ನು ರೂಪಿಸುತ್ತಿರುವುದು ೧೩. ತಳಸಮುದಾಯದ ಪರವಾದ, ಮಹಿಳಾಪರವಾದ ಅಧ್ಯಯನಗಳು ವಿಶೇಷವಾಗಿ ನಡೆದಿರುವುದು ೧೪. ಅಂತರ್ ಶಿಸ್ತೀಯ ಅಧ್ಯಯನಗಳು ಮುಂಚೂಣಿಗೆ ಬಂದಿರುವುದು, ಇವೆಲ್ಲವೂ ಕಂಡುಬರುತ್ತದೆ.

ಮುಂದಿನ ನಡೆ ಹೇಗಿರಬೇಕು

ನಮ್ಮ ಸಂಶೋಧನೆಯ ಮುಂದಿನ ನಡೆ ಹೇಗೆ ಸಾಗುತ್ತದೆ ಎಂಬುದನ್ನು ಕುರಿತು ನೋಡುವುದಾದರೆ ಮೊದಲನೆಯದಾಗಿ ದೇಸಿ ಸಂಶೋಧನಾ ಮಾರ್ಗದ ಹುಡುಕಾಟ ಸಾಹಿತ್ಯವಿಮರ್ಶೆ ಮತ್ತು ಸಾಹಿತ್ಯ ಮೀಮಾಂಸೆಯನ್ನು ಕಟ್ಟಲು ದೇಸಿ ಪ್ರಯತ್ನಗಳು ನಡೆಯುತ್ತಿರುವಂತೆಯೇ ಸಂಶೋಧನೆಗೂ ನಮ್ಮದೇ ಆದ ಮಾರ್ಗ ಬೇಕು, ನಮ್ಮದೇ ಆದ ಸಂಶೋಧನಾ ಸಿದ್ಧಾಂತವೊಂದನ್ನು ಕಟ್ಟಿಕೊಳ್ಳಲು ಸಾಧ್ಯವೇ? ಎಂಬ ಚಿಂತನೆ ನಡೆಯಬೇಕಾಗಿದೆ. ವಸಾಹತುಶಾಹಿಗಳು ನಡೆಸಿದ ಸಂಶೋಧನೆಯ ಮಾದರಿಗಳನ್ನು ಬಿಟ್ಟು ವಸಾಹತು ಪೂರ್ವದ ಕವಿರಾಜಮಾರ್ಗಕಾರ ಕೇಶಿರಾಜ ವಚನ ಸಂಕಲನಕಾರರು ತೋರಿದ ದಾರಿಯನ್ನು ಅನುಸರಿಸಬಹುದು ಎಂಬ ವಿಚಾರಗಳು ಕೇಳಿಬರುತ್ತಿವೆ. ಸಮಕಾಲೀನರಾದ ಶಂಬಾ ಜೋಷಿಯವರು ತೋರಿಸಿಕೊಟ್ಟಿರುವ ಮಾರ್ಗವು ನಮ್ಮ ಮುಂದಿದೆ. ಇವೆಲ್ಲವುಗಳ ಕಡೆಗೆ ಗಮನಹರಿಸಬೇಕೆಂಬ ಸೂಚನೆ ಕನ್ನಡ ಚಿಂತಕರಿಂದ ಬರುತ್ತಿದೆ.

ಎರಡನೆಯದಾಗಿ, ವಸಾಹತೋತ್ತರ ಸಂದರ್ಭದಲ್ಲಿ ಬಂದಿರುವ ಹೊಸ ಚಿಂತನೆಗಳನ್ನು ಅರ್ಥೈಸಿಕೊಂಡು ಅವುಗಳ ಬೆಳಕಿನಲ್ಲಿ ಕನ್ನಡ ಸಂಶೋಧನೆಯ ವಿಧಾನವನ್ನು ರೂಪಿಸಿಕೊಳ್ಳಬೇಕು. ಇಂದು ಕನ್ನಡ ಸಂಶೋಧನೆಯನ್ನು ಹೆಚ್ಚಾಗಿ ಪ್ರಭಾವಿಸುತ್ತಿರುವ ನಿರಚನವಾದ, ಮಾರ್ಕ್ಸವಾದ, ಸ್ತ್ರೀವಾದಗಳ ಮಾದರಿಯನ್ನು ಪ್ರಜ್ಞಾಪೂರ್ವಕವಾಗಿ ಹೊರಗಿಟ್ಟು, ಅಧ್ಯಯನ ನಡೆಸಲು ಸಾಧ್ಯವೇ ಎಂಬುದರತ್ತ ಗಮನಹರಿಸಬೇಕು ಎಂಬ ಮಾತುಗಳನ್ನೂ ಸಂಶೋಧಕರು ಕೇಳಿಕೊಳ್ಳುತ್ತಿದ್ದಾರೆ.

ಸಂಶೋಧನೆಗೆ ಆಧರಿಸಲಾಗುತ್ತಿರುವ ಪಶ್ಚಿಮದ ತಾತ್ವಿಕ ಚೌಕಟ್ಟುಗಳು ನಮ್ಮ ಭಾರತದಂತಹ ತೃತೀಯ ಜಗತ್ತಿನ ಸಾಮಾಜಿಕ ಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಸೋಲುತ್ತಿವೆ ಎಂಬುದರ ಅರಿವಾದನಂತರ ಅಂತಹ ಓರಿಯಂಟಲಿಸ್ಟ್ ಯೂನಿವರ್ಸಲ್ ಆನ್ವಯಿಕತೆಗಿಂತ ತೃತೀಯ ಜಗತ್ತಿನ ಸಾಮಾಜಿಕ ಸ್ವರೂಪಕ್ಕೆ ತಕ್ಕಂತೆ ಇಲ್ಲಿನ ಅಧಿಕಾರ ಯಾಜಮಾನ್ಯ ಗಳ ಲಕ್ಷಣಗಳಿಗೆ, ಸಂಬಂಧಗಳಿಗೆ ತಕ್ಕಂತೆ ಭಿನ್ನ ತಾತ್ವಿಕತೆಗಳನ್ನು ಕಟ್ಟಿಕೊಂಡು ಅಧ್ಯಯನ ಕೈಗೊಳ್ಳಬೇಕಾದ ಅವಶ್ಯಕತೆಯನ್ನು ಕಂಡುಕೊಳ್ಳಬೇಕಾಗಿದೆ. ವಸಾಹತು ಶಾಹಿ ಅನುಭವ ಅಥವಾ ಚರಿತ್ರೆಯನ್ನು ವಿಶ್ವಾತ್ಮಕವೆಂಬಂತೆ ತಾತ್ವೀಕರಿಸಿ ಅವುಗಳನ್ನು ಮುಂಚೂಣಿಗೆ ತರುವುದು ಆಧುನೀಕರಣ, ಫಂಕ್ಷನಲಿಸಂ ಇತ್ಯಾದಿ ಥಿಯರಿಗಳು ಸಿದ್ಧಾಂತಗಳು ಮತ್ತು ಸಂಶೋಧನಾ ಚೌಕಟ್ಟುಗಳು ಭಾರತದ ಅನುಭವಗಳನ್ನು ಆಧರಿಸಿ, ಬಳಸಿ ಬೆಳೆದವುಗಳಲ್ಲ ಇವುಗಳು ನಮ್ಮ ಸಮಾಜದ ಆರ್ಥಿಕ ರಾಜಕೀಯ ಸಂರಚನೆಯನ್ನು ಅರ್ಥಮಾಡಿಕೊಳ್ಳಲು ಅಷ್ಟು ಹೊಂದುವುದಿಲ್ಲವೆಂಬ ಎಚ್ಚರ ಮೂಡಿರುವ ಹಿನ್ನೆಲೆಯಲ್ಲಿ ನಮ್ಮ ದೇಸೀ ಅಧ್ಯಯನದ ಮಾದರಿಗಳನ್ನು

ಕಂಡುಕೊಳ್ಳುವ ತುರ್ತಿನ ಬಗೆಗೆ ಸಂಶೋಧನಾ ವಲಯದಲ್ಲಿ ಚರ್ಚೆಗಳು ನಡೆಯುತ್ತಿವೆ.

ಇಂದು ನಡೆಯುತ್ತಿರುವ ಸಾಹಿತ್ಯ ಅಧ್ಯಯನಗಳು ಆಯಾಯ ಕಾಲಘಟ್ಟದ ಸಾಮಾಜಿಕ ರಾಜಕೀಯ ತುರ್ತುಗಳನ್ನು ಆಧರಿಸಿ ಬಹುಮುಖಿಯಾಗಿ ಬಹುರೂಪಿಯಾಗಿ ರೂಪುಗೊಳ್ಳುತ್ತಿವೆ. ಇದಕ್ಕೆ ಹೊರಗಿನ ಚಿಂತನೆಗಳು ಸಹಕಾರಿಯಾಗಿವೆ. ಸಧ್ಯಕ್ಕೆ ಇವುಗಳನ್ನು ಬಿಟ್ಟು 'ಕನ್ನಡಕ್ಕೆ ಬೇಕು ಕನ್ನಡದ್ದೇ ಸಂಶೋಧನಾ ಸಿದ್ಧಾಂತ, ಅದನ್ನೇ ಹಿಡಿಯಬೇಕು ಎಂಬ ಹಂಬಲವೇನೋ ಕಾಣುತ್ತಿದೆ ಆದರೆ ಅದು ಸಾಧ್ಯವಾಗುವುದೇ, ಸಾಧ್ಯವಾಗುವುದಾದರೆ ಅದರ ಸ್ವರೂಪ ಎಂಥದ್ದು, ಎಂಬುದರ ಚರ್ಚೆಗಳನ್ನು ಕನ್ನಡಸಂಶೋಧಕರು ಒಟ್ಟು ಸೇರಿ ಆಲೋಚಿಸುವ, ಅದರ ರೂಪುರೇಷೆಗಳನ್ನು ಕಟ್ಟುವ ಅಗತ್ಯವಿದೆ. ಸಂಶೋಧನಾ ಕ್ಷೇತ್ರದಲ್ಲಿರುವ ಈ ಬಗೆಯ ಗೊಂದಲವನ್ನು ನಿವಾರಿಸಿಕೊಳ್ಳುವುದು ಅವಶ್ಯಕವಾಗಿದೆ.

ಕಥನ ವಿಶ್ಲೇಷಣೆ ಸಂಶೋಧನಾ ವಿಧಾನ

ಭಾಷೆಯೆಂಬುದು ತಟಸ್ಥವಲ್ಲ ಜಗತ್ತನ್ನು ಅರ್ಥಮಾಡಿಕೊಳ್ಳಲು ಭಾಷೆ ಪ್ರಮುಖವಾದದ್ದು, ಬರೆದವನು ಆಡುವವನು, ಓದುಗ-ಕೇಳುಗರ ಭಾಗವಹಿಸುವಿಕೆ ಇರುತ್ತದೆ. ಸಾಂಧರ್ಭಿಕ ಭಾಷೆ ಯಾರುಯಾರೊಂದಿಗೆ ಹೇಗೆ ಮಾತನಾಡುತ್ತಾರೆ ಹೆಣ್ಣು ಮತ್ತು ಗಂಡು ಭಾಷೆಗಳಲ್ಲಿ ಕಂಡುಬರುವ ಅಂತರ, ಭಾಷೆಯಲ್ಲಿನ ವ್ಯತ್ಯಾಸವು ಸಾಮಾಜಿಕ ಸ್ಥಾನಮಾನದ ಭಿನ್ನಾಂಶಕ್ಕೆ ಅನುಗುಣವಾಗಿ ಹೇಗೆ ಅಭಿವ್ಯಕ್ತಗೊಂಡಿದೆ. ಆಡುವವನ ಸಮಾಜವು ಅವನ ಭಾಷೆಯಲ್ಲಿ ಹೇಗೆ ಪ್ರತಿನಿಧಿತವಾಗಿದೆ ಎಂಬೆಲ್ಲ ವಿಚಾರಗಳನ್ನು ಸಾಮಾಜಿಕ ಭಾಷಾ ಅಧ್ಯಯನಗಳ ಮೂಲಕ ತಿಳಿದುಕೊಳ್ಳಬಹುದಾಗಿದೆ. ಭಾಷೆ ಎನ್ನುವುದು ಅರ್ಥವನ್ನು ರವಾನಿಸುವ ಪ್ರವಾಹಕವಲ್ಲ, ಅದು ಪ್ರಪಂಚದ ಬಗೆಗಿನ ನಮ್ಮ ಅರಿವನ್ನು ರೂಪಿಸುವ ಅಥವಾ ಬದಲಾಯಿಸುವ ಒಂದು ಸಂಗತಿಯಾಗಿರುತ್ತದೆ. ಅಧಿಕಾರಶಿಲ್ಪವೆಂಬುದು ಭಾಷೆಯಿಂದಲೇ ರೂಪಿತವಾಗುತ್ತದೆ. ಭಾಷೆಗೆ ಸದಾ ಅಧಿಕಾರದ ಸಂಬಂಧವಿರುತ್ತದೆ. ಭಾಷಾ ಬಳಕೆಯ ಬದಲಾವಣೆಗಳಿಂದ, ಅಧಿಕಾರದ ಶಿಲ್ಪವನ್ನು ಬದಲಿಸಬಹುದೆಂಬ ವಿಚಾರಗಳ ಹಿನ್ನೆಲೆಯಲ್ಲಿ ಸಂಶೋಧನೆಗಳು ನಡೆಯಬೇಕಾಗಿದೆ. ಸಂಶೋಧನೆಯಲ್ಲಿ ಕಥನ ವಿಶ್ಲೇಷಣೆ ಎಂಬುದು ಸಂದರ್ಭ ಸನ್ನಿವೇಶ ಹಾಗೂ ಸಂಶೋಧಕನು ಕೈಗೊಂಡಿರುವ ಕ್ಷೇತ್ರವನ್ನು ಆಧರಿಸಿ ಬೇರೆಬೇರೆ ಮಾರ್ಗವನ್ನು ಅನುಸರಿಸಬೇಕಾಗುತ್ತದೆ. ವಿಮರ್ಶಾತ್ಮಕ ಕಥನ ವಿಶ್ಲೇಷಣೆ ಸಂಶೋಧನೆಯಲ್ಲಿ ಮುಖ್ಯವಾಗುತ್ತದೆ. ಉದಾಹರಣೆಗೆ ದೂರದರ್ಶನದಲ್ಲಿ ಬಳಸಲಾಗುವ ಜಾಹಿರಾತುಗಳನ್ನು ಸುದ್ದಿಗಳನ್ನು ವಿಶ್ಲೇಷಿಸಬಹುದು. 'ಹಾಲುಗಲ್ಲದ ಕಂದನನ್ನು ಬಿಟ್ಟು ಪರಾರಿಯಾದ ಪಾಪಿ ತಾಯಿ'.ಇತ್ಯಾದಿ ತಲೆಬರಹದ ಸುದ್ದಿಗಳು,

'ನನಗೆ ಬೇಕಾದಷ್ಟು ಆಸ್ತಿ ಇದೆ ನನ್ನ ಹೆಂಡತಿ ಕಾಯಿಲೆ ಮನುಷ್ಯೆ, ೧೮ ೧೯ ವರ್ಷದ ಒಂದು ಹುಡುಗಿ ಇದ್ದರೆ ಬಡವಿಯಾದರೂ ಪರವಾಗಿಲ್ಲ, ಮದುವೆ ಮಾಡಿಕೊಂಡು ಬಾಳು ಕೊಡಬೇಕಂತ ಇದ್ದೇನೆ" ಇದು ೫೪-೫೫ ವರ್ಷದ ಪುರುಷನ ಮಾತುಗಳು ಇವೆಲ್ಲವೂ ಆ ಸಮಾಜದ ಸಂಪತ್ತು, ಅಧಿಕಾರದ ಸಂಬಂಧಗಳು, ಸ್ತ್ರೀ-ಪುರುಷ ಸ್ಥಾನಮಾನ ಮುಂತಾದುವುಗಳೆಲ್ಲವನ್ನು ಅಭಿವ್ಯಕ್ತಿಸುತ್ತವೆ. ನಿಗದಿತ ಪ್ರಪಂಚದ ಸಮಾಜದ ದೃಷ್ಟಿಕೋನವನ್ನು ರವಾನಿಸುತ್ತವೆ. ಇಂತಹ ಅಧ್ಯಯನಗಳು ಭಾಷಾ ಕ್ಷೇತ್ರದಲ್ಲಿ ಆರಂಭವಾಗಿವೆ. ವಾಟ್ಸಾಪ್‌ಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಸ್ತ್ರೀ ಪ್ರತಿನಿಧೀಕರಣ, ಎಡ, ಬಲ ಚಿಂತನೆಗಳು ಸಂಕೇತಗಳು, ಪ್ರಸ್ತುತ ವಿಧ್ಯಮಾನಗಳನ್ನು ಕುರಿತಂತೆ ಅಭಿವ್ಯಕ್ತಗೊಳ್ಳುತ್ತಿರುವ ನರಟೀವ್ಸ್, ಸಂಕಥನಗಳು, ಭಾಷಿಕ, ದೃಶ್ಯಾತ್ಮಕ ಅಭಿವ್ಯಕ್ತಿಗಳು ಇತ್ಯಾದಿಗಳನ್ನು ಗಮನಿಸಬಹುದು.

ಸಂಶೋಧಕನ ಗುರಿ, ಜವಾಬ್ದಾರಿಗಳು

ಸಂಶೋಧನಾ ನೆಲೆಯ ಬದಲಾವಣೆಗೆ ಸಂಶೋಧನಾ ದೃಷ್ಟಿಕೋನದಲ್ಲಿ ಆಗುವ ಬದಲಾವಣೆಗಳೇ ಕಾರಣ. ಅವುಗಳು ಪರಸ್ಪರ ಸಂಬಂಧಿಸಿದ್ದು, ಒಂದು ಮತ್ತೊಂದರ ಬದಲಾವಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಹಾಗಾಗಿ ಈ ಸಂವಾದಗಳು ಕೇವಲ ಮಾನಸಿಕ ಪರಿವರ್ತನೆ ಅಷ್ಟಕ್ಕೇ ಸೀಮಿತವಾಗದೇ, ಭೌತಿಕ ಪರಿಸರದೊಂದಿಗೆ ನಿರಂತರ ಸಂವಾದ ಏರ್ಪಡಿಸಿಕೊಳ್ಳಬೇಕಾಗುತ್ತದೆ. ಸಂಕೇತಗಳು, ಸಂಸ್ಥೆಗಳು, ಸಿದ್ಧಾಂತ, ಪರಿಭಾಷೆಗಳು, ಸಾಮಾಜಿಕ ಸಾಂಸ್ಕೃತಿಕ ಲೋಕವನ್ನು ಬದಲಾಯಿಸುವ ಪ್ರತಿಕ್ರಿಯೆಗಳಾಗಿದ್ದು, ನಿರಂತರವಾಗಿ ನಡೆಯುತ್ತಿರುವುದರಿಂದ ಪ್ರಕೃತಿ-ಪರಿಸರ-ಮಾನವ ಸಂಬಂಧಗಳ ಅಧ್ಯಯನ ವಿಶೇಷವಾದದ್ದು, ಇಂತಹ ಅಧ್ಯಯನಗಳಿಂದ ಫಲಿತವಾಗುವ ಜ್ಞಾನದ ಅರಿವು ಈ ಸಮಾಜವನ್ನು ಪರಿವರ್ತಿಸುವಲ್ಲಿ ಉದ್ದೇಶಿತ ಪಾತ್ರವನ್ನು ವಹಿಸುತ್ತದೆ. ಸಾಮಾಜಿಕ, ಆರ್ಥಿಕ, ರಾಜಕೀಯವಾದ ಲಿಂಗಸಂಬಂಧಿ ಏಣಿ ಶ್ರೇಣಿಗಳ ವಿವಿಧ ಸ್ಥರಗಳಲ್ಲಿ ಇರುವವರಲ್ಲಿ 'ಡಾಮಿನೇಟಿಂಗ್' ಆದವರು ತಾವು ಕಂಡುಕೊಂಡ ಉತ್ಪಾದಿಸಿದ ಸತ್ಯವನ್ನು ಉಳಿದ ಎಲ್ಲ ಸ್ತರಗಳವರು ನಂಬುವಂತೆ ಮಾಡುತ್ತಿರುತ್ತಾರೆ. ಹಾಗಾಗಿ ಮೇಲ್ವರ್ಗ, 'ಪುರುಷಪ್ರಧಾನ ಸಂಬಂಧ ಸಂಸ್ಥೆಗಳ ಮೌಲ್ಯ' ಮುಂತಾದವುಗಳನ್ನು ಹೊರತುಪಡಿಸಿದ ಬೇರೆಬೇರೆ ಲೋಕವನ್ನು, ಲೋಕದೃಷ್ಟಿಯೊಂದು ಇರುವುದನ್ನು ಗುರುತಿಸಲೂ ಸಹ ಅಂತಹ ವ್ಯವಸ್ಥೆ ನಿರಾಕರಿಸುತ್ತಿರುತ್ತದೆ.

ಆಚಾರ-ವಿಚಾರ ಅಧಿಕಾರಗಳ ನಡುವಿನ ಸಂಬಂಧ ಕುರಿತಂತೆ ಪ್ರತಿಯೊಬ್ಬರೂ ತಮ್ಮ ತಮ್ಮ ಆಸಕ್ತಿಗೆ ಅನುಗುಣವಾಗಿ ಈ ಪ್ರಪಂಚವನ್ನು ಅರ್ಥ ಮಾಡಿಕೊಳ್ಳುತ್ತಿರುತ್ತಾರೆ, ನಿರ್ಮಾಣ ಮಾಡಿಕೊಳ್ಳುತ್ತಿರುತ್ತಾರೆ. ತಮ್ಮ ಲೋಕದೃಷಿಯನ್ನು ಇನ್ನೊಬ್ಬರ ಪ್ರಜ್ಞೆಯ ಭಾಗವಾಗಿ ಮಾಡಲು ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಇತ್ತೀಚಿನ ಸಾಹಿತ್ಯದ ಅಧ್ಯಯನ

ಸಂಶೋಧನೆಗಳಲ್ಲಿ ಈ ಬಗೆಯ ವಿವಿಧ ಯಾಜಮಾನ್ಯದ ನೆಲೆಗಳನ್ನು ತಿಳಿದುಕೊಳ್ಳುವ, ಅವುಗಳ ಸೂಕ್ಷ್ಮರಾಜಕಾರಣವನ್ನು ಅರಿಯುವ ಪ್ರಯತ್ನ ನಡೆಯುತ್ತಿದೆ. ಆದರೆ ಅದು ಮತ್ತಷ್ಟು ವ್ಯಾಪಕವಾಗಿ ಜವಾಬ್ದಾರಿಯುತವಾಗಿ ನಡೆಯಬೇಕಾಗಿದೆ. ಯಾರನ್ನು ನಮಗೆ ಸಮಾನರೆಂದು ಮತ್ತು ಯಾರನ್ನು ನಮಗಿಂತ ಕೆಳಗಿನವರೆಂದು, ಯಾರನ್ನು ಮೇಲಿನವರೆಂದು, ಪರಿಗಣಿಸಿ ನಡೆದುಕೊಳ್ಳಬೇಕು ಎಂಬಂತಹ ಸಾಮಾಜಿಕ ವೈಚಾರಿಕತೆಗಳನ್ನು ಹೇಳಿಕೊಡುವವರು ಯಾರು? ಅದರ ಹಿಂದಿರುವ ಅಜೆಂಡಾಗಳ ವೈಚಾರಿಕ ನೆಲೆಗಳ ಉದ್ದೇಶವೇನು? ಇತ್ಯಾದಿ ಅಧ್ಯಯನಗಳು ನಡೆಯುತ್ತಿವೆ. ಅಧಿಕಾರದ ಚಲಾವಣೆಯ ವಿವಿಧ ನೆಲೆಗಳು ಯಾವುವು, ಆಮಿಷ ಬಲಪ್ರಯೋಗ ಇತರ ವಿಧಾನಗಳಿಂದ ವಿಚಾರಗಳು ಸಿದ್ಧಾಂತಗಳು ತರ್ಕಬದ್ಧವಾದಗಳ ಪರಿವರ್ತನೆಯನ್ನು ತಮಗೆ ಹೇಗೆ ಬೇಕೋ ಹಾಗೆ ಮಾಡಿಕೊಳ್ಳುತ್ತಿರುವುದು ಹೇಗೇ? ಎಂಬುದನ್ನು ತಿಳಿಯಬೇಕಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ವಿಚಾರಗಳ ಮೂಲಕವೇ ಅಧಿಕಾರದ ಚಲಾವಣೆ ಹೆಚ್ಚಾಗಿ ನಡೆಯುತ್ತದೆ. ಸಂಶೋಧಕನಾದವನು ಇಂಥ ಅಧಿಕಾರ ಪ್ರೇರಿತ 'ಜನಾಭಿಪ್ರಾಯರೂಪಣೆ'ಯಾಗುವ ಕ್ರಮಗಳನ್ನು, ಅಧಿಕಾರದ ನೆಲೆಗಳು ಚಲಾವಣೆಗೊಳ್ಳುವ ಕ್ರಮಗಳನ್ನು ಶೋಧಿಸಿ ತೆಗೆಯುವುದರಿಂದ ಅಥವಾ ಅಧಿಕಾರದ ನೆಲೆಗಳು ಹೇಗೆ ಜನಸಾಮಾನ್ಯನನ್ನು ದಿಕ್ಕು ತಪ್ಪಿಸುತ್ತವೆ ಎಂಬುದರ ಬಗೆಗೆ ಅರಿವು ಮೂಡಿಸುವುದರಿಂದ, ತನ್ನ ಸಂಶೋಧನೆಯ ಫಲಿತಗಳನ್ನು ಜನಸಾಮಾನ್ಯರ ಪ್ರಜ್ಞೆಯ ಭಾಗವಾಗಿ ಮಾಡಬೇಕಾಗುತ್ತದೆ. ಇದು ಸಂಶೋಧಕರ ಮುಖ್ಯ ಜವಾಬ್ದಾರಿಯಾಗಿರುತ್ತದೆ.

ಸಂಶೋಧನೆ ಸಮಾಜ ಮುಖಿಯಾಗಿರಬೇಕು ಎಂಬ ಕೂಗು ಸಹ ಕೇಳಿಬರುತ್ತಿದೆ. ಇತ್ತೀಚಿನ ದಿನಗಳಲ್ಲಿ ಪ್ರಭುತ್ವ ಅಥವಾ ಮಾರುಕಟ್ಟೆಯು ಎಂಥ ಸಂಶೋಧನೆಗಳು ನಡೆಯಬೇಕು ಎಂದು ನಿರ್ಧರಿಸುತ್ತವೆ. ಅವುಗಳ ಫಲಿತಗಳು ತಮ್ಮ ಅಧಿಕಾರ ಚಲಾವಣೆಗೆ / ಮನಾಪಲಿಯನ್ನು, ಮಾರುಕಟ್ಟೆಯ ಹಿಡಿತವನ್ನು ಸಾಧಿಸಿಕೊಳ್ಳಲು ಅಗತ್ಯ ಯೋಜನೆಗಳನ್ನು ರೂಪಿಸಲು ಬಳಸಿಕೊಳ್ಳುವ ಉದ್ದೇಶಹೊಂದಿ, ಸಂಶೋಧನೆಗಳನ್ನು ಪ್ರಾಯೋಜಿಸುತ್ತವೆ. ಪ್ರಭುತ್ವವು ತನ್ನ ವೈಚಾರಿಕತೆಯ ಮೂಲಕವೇ ಸಾಮಾನ್ಯರ ಒಪ್ಪಿಗೆ ಪಡೆದು 'ಅಸಮಾನ ಸಂಬಂಧಗಳ' ಸಮಾಜವನ್ನು ನಡೆಸುತ್ತಿರುತ್ತದೆ. ತನ್ನ ವ್ಯವಸ್ಥಿತ ಕಥನಗಳನ್ನು ಹರಿಯಬಿಡುತ್ತಾ, ಕುಟುಂಬ ಸಮುದಾಯದ ನಡುವೆ 'ಅಸಮಾನಸಂಬಂಧಗಳು' ಗಟ್ಟಿಗೊಳ್ಳಲು ಹೇಗೆ ನೆರವಾಗುತ್ತಿರುತ್ತದೆ ಎಂಬುದನ್ನು ಅರಿತು, ಅದರಿಂದ ವಿಮೋಚನೆಯ ದಾರಿಗಳನ್ನು ಸಂಶೋಧಕನಾದವನು ತನ್ನ ಅಧ್ಯಯನದ ಮೂಲಕ ಕಂಡುಕೊಳ್ಳುವ ತುರ್ತುಗಳಿವೆ. ಸಾಹಿತ್ಯ ರಚಿಸುವವರ ಮತ್ತು ಸಂಶೋಧಕರ ಕಣ್ಣು ಇತ್ತೀಚೆಗೆ ಇಂಥವುಗಳ ಕಡೆಗೆ ಹರಿಯುತ್ತಿರುವುದು ಆಶಾಜನಕವಾಗಿದೆ.

ಪ್ರತಿರೋಧದ ನೆಲೆಗಳು

ವೈಚಾರಿಕತೆಯನ್ನು ಪ್ರಶ್ನಿಸುವುದು ಪ್ರತಿರೋಧ ಒಡ್ಡುವುದಷ್ಟಕ್ಕೇ ನಮ್ಮ ಸಾಹಿತ್ಯ ರಚನೆಗಳು, ಅಧ್ಯಯನಗಳು ಸೀಮಿತವಾಗದೇ ಸಿದ್ಧಾಂತ, ಚಿಂತನೆ, ಬದಲಿವ್ಯವಸ್ಥೆಯನ್ನು, ಪೂರಕ ವೈಚಾರಿಕತೆಗಳನ್ನು ಕಟ್ಟಿಕೊಡುವ ನಿಟ್ಟಿನಲ್ಲೂ ಕಾರ್ಯ ಪ್ರವೃತ್ತವಾಗಬೇಕಾಗುತ್ತದೆ. ಇದು ವೈಚಾರಿಕತೆಯ ಫಲಿತವೇ ಆಗಿದ್ದು, ಹೊಸ ದೃಷ್ಟಿಕೋನದ ಅಧ್ಯಯನಗಳಿಂದ ಸೃಷ್ಟಿಯಾಗಬೇಕಾಗುತ್ತದೆ. ಸಂಶೋಧಕನು ಕಂಡುಕೊಂಡ 'ಹೊಸಸತ್ಯ'ವು ಸ್ಥಾಪಿತ ಅಧಿಕಾರಸಂಬಂಧ ಸಂಸ್ಥೆಯ ಮೌಲ್ಯಗಳನ್ನು ಪರಿವರ್ತಿಸಿ, ನವೀನವಾದ ನಿರ್ಮಾಣದ ಗುರಿಯನ್ನು ಹೊಂದಬೇಕಾಗುತ್ತದೆ. ಮೂರ್ತವಾಗಿ ಅಥವಾ ಅಮೂರ್ತವಾಗಿ ಹರಿಯುತ್ತಿರುವ ಇಂಥ ಪ್ರತಿರೋಧದನ ನೆಲೆಗಳನ್ನು ಗುರುತಿಸಿ ಅವು 'ನವಸಮಾಜದ' ಪ್ರಜ್ಞಾವಲಯದಲ್ಲಿ ಢಾಳಾಗಿ ಪ್ರವಹಿಸುವಂತೆ ಮಾಡುವುದು ಸಂಶೋಧಕರ ಕೈಲಿದೆ.

ಮಾರುಕಟ್ಟೆ ಮತ್ತು ಮನರಂಜನೆಯ ಉದ್ಯಮಗಳು ಲಿಂಗ, ಜಾತಿ, ಧರ್ಮ, ಆಚರಣೆಯಲ್ಲಿರುವ ಹುಸಿಗಳು ಅಪಕಲ್ಪನೆಗಳು, ನಂಬಿಕೆಗಳನ್ನೇ 'ಪ್ರಾಕೃತಿಕ ಸತ್ಯ' ಎಂಬಂತೆ ಬಿಂಬಿಸುತ್ತಿವೆ. ಲಿಂಗ ತಾರತಮ್ಯ, ಆಚಾರ–ವಿಚಾರ, ಅಧಿಕಾರ, ಕಾರ್ಯ ಕ್ಷೇತ್ರ ಸಂಬಂಧ, 'ಪತಿಯೇ ಪರದೈವ' ಎಂಬ ವಿಚಾರ, ಅದಕ್ಕೆ ತಕ್ಕಂತಹ ಆಚರಣೆಗಳನ್ನು ಮತ್ತೆ ಮತ್ತೆ ಪ್ರಸಾರಮಾಡುವ ಅವುಗಳನ್ನು ಮತ್ತೆ ಸ್ಥಾಪಿಸುವ ಪ್ರಯತ್ನಗಳನ್ನು ಜಾಹೀರಾತುಗಳ ಮೂಲಕ ಧಾರಾವಾಹಿಗಳು ದೂರದರ್ಶನ, ಸಿನೆಮಾ ಸಾಮಾಜಿಕ ಜಾಲತಾಣಗಳ ಮೂಲಕ ನಡೆಸುತ್ತಿರುತ್ತವೆ. ಎಂಬತ್ತರ ದಶಕದಿಂದೀಚೆಗೆ ಇಂತಹ ಪುರುಷಪ್ರಧಾನ ಸಮಾಜದಿಂದ ದತ್ತವಾದ ಚೌಕಟ್ಟುಗಳಿಂದ ಹೊರಬಂದು ಹೆಣ್ಣು ಗಂಡುಗಳ ಸಂಬಂಧಗಳನ್ನು ಮರುವ್ಯಾಖ್ಯಾನಿಸುವ ಅಸಮಾನತೆಯ ನೆಲೆಯನ್ನು ಸಮಾನತೆಯ ನೆಲೆಯಿಂದ ನೋಡುವ ಪ್ರಯತ್ನಗಳು ಜಾಹೀರಾತು ಪ್ರಪಂಚದಲ್ಲಿ, ಮಾಧ್ಯಮಗಳಲ್ಲಿ ಸ್ವಲ್ಪ ಮಟ್ಟಿಗೆ ಆರಂಭವಾಗಿದೆಯಾದರೂ ಅದು ಯಾವ ಮಾದರಿಯದಾಗಿದೆ, ಹೇಗೆ ಮಾಡಲಾಗುತ್ತಿದೆ ಎಂಬುದರ ಸೂಕ್ಷ್ಮಗಳನ್ನು ತಿಳಿಯಲು ಸಂಶೋಧನೆಗಳು ನಡೆಯಬೇಕಾಗಿದೆ.

ಯಾವುದೇ ವ್ಯಕ್ತಿ ಸಮುದಾಯ ಪ್ರದೇಶದ ಅಧ್ಯಯನಕ್ಕೆ ತೊಡಗಿದರು ಅಲ್ಲಿನ ಸಾಮಾಜಿಕ ಆರ್ಥಿಕ ರಾಜಕೀಯ ಇತ್ಯಾದಿಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗದು. ಏಕೆಂದರೆ ಈ ಎಲ್ಲವೂ ಬದುಕಿನಲ್ಲಿ ಪರಸ್ಪರ ಸಂಬಂಧ ಹೊಂದಿರುತ್ತವೆ. ಮತ್ತು ಒಂದು ಮತ್ತೊಂದನ್ನು ಗಾಢವಾಗಿ ಪ್ರಭಾವಿಸುತ್ತವೆ. ಇಂತಹ ಸಂಕೀರ್ಣವಾದ ಸಮಾಜದ ಚಿತ್ರಣವನ್ನು ಪ್ರತಿ ಬಿಂಬಿಸಿರುವ ಸಾಹಿತ್ಯದ ಅಧ್ಯಯನಗಳಲ್ಲೂ ಸಹ ಹೀಗೆ ಗಾಢವಾಗಿ ಬದುಕನ್ನು ಪ್ರಭಾವಿಸುವ ಜಾತಿ

ಸಂಬಂಧಿಯಾದ, ಲಿಂಗ ಸಂಬಂಧಿಯಾದ, ಧರ್ಮ,ಅಧಿಕಾರ ಸಂಬಂಧಿಯಾದ ನೆಲೆಯನ್ನು ಯಾವ ಬಗೆಯಲ್ಲಿ ಕಟ್ಟಿಕೊಡಲಾಗಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಇಂಥವುಗಳ ಅಂತರ್ ಪ್ರಭಾವ ಪರಿಸ್ಥಿತಿಗಳನ್ನು ಸೂಕ್ಷ್ಮವಾದ ಒಳಸುಳಿಗಳನ್ನು, ಆ ಮೂಲಕ ಒದಗಿರುವ ಸಾಮಾಜಿಕ ಪರಿಚಲನೆಗಳನ್ನು ಗುರುತಿಸಲು ಬಳಸಿರುವ ವೈಚಾರಿಕತೆಗಳೇನು ಎಂಬುದನ್ನು ಅಧ್ಯಯನ ಮಾಡಬೇಕಾಗುತ್ತದೆ. ಅಲ್ಲದೆ ಇಂತಹ ವೈಚಾರಿಕತೆಗಳು ಸಮಾಜದ ಯಾವ ಗುಂಪು ವರ್ಗ ಸ್ತರದ ಆಸಕ್ತಿಗಳನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಅಧ್ಯಯನ ಮಾಡಬೇಕಾಗುತ್ತದೆ. ಇದರ ಜೊತೆಗೆ ಸಾಹಿತ್ಯ ಕೃತಿಯೊಂದರಲ್ಲಿ ಸಂಪತ್ತು ಮತ್ತು ಅದರ ಹಂಚಿಕೆಯಲ್ಲಿ ಆಗಿರುವ ವ್ಯತ್ಯಾಸಗಳನ್ನು, ಅಂದರೆ ಜಾತಿ ಧರ್ಮ ಹಾಗೂ ಭೌತಿಕ ಸಾಂಸ್ಕೃತಿಕ ಸಂಪನ್ಮೂಲಗಳ ಒಡೆತನದ ನಡುವಿನ ಸಂಬಂಧಗಳೇನು ಜನಸಾಮಾನ್ಯರ ಪ್ರಜ್ಞೆಯ ಭಾಗವಾಗಿ ಅವು ಹೇಗೆ ಪ್ರವಹಿಸುತ್ತಿವೆ ಎಂಬುದನ್ನು ಗುರುತಿಸುವುದು ಸಂಶೋಧನೆಯ ಉದ್ದೇಶವಾಗಿರಬೇಕು. ಇಂತಹ ದೃಷ್ಟಿಕೋನದಿಂದ ನಡೆಯುತ್ತಿರುವ ಸಂಶೋಧನೆಗಳಿಂದ ಸಮಾಜದ ಸ್ಥಿತಿ ಸಂಚಲನಗಳನ್ನು, ಒಳ ಸುಳಿಗಳನ್ನು ಅರಿಯಲು ಸಾಧ್ಯವಾಗುತ್ತದೆ.

◈◈◈◈◈

ಪಂಪನ ಕಾವ್ಯಗಳಲ್ಲಿ ಐತಿಹಾಸಿಕ ಅಂಶಗಳು

◈

ಡಾ. ಬಿ. ರಾಜಶೇಖರಪ್ಪ

ಭಾರತೀಯರ ಚಾರಿತ್ರಿಕ ಪ್ರಜ್ಞೆಯ ಬಗ್ಗೆ ೧೧ನೇ ಶತಮಾನದ ಆಲ್ಬೆರೂನಿ ಎಂಬ ವಿದೇಶಿ ಪ್ರವಾಸಿಯೊಬ್ಬ ಹೇಳಿರುವ ಮಾತು ತುಂಬ ಮುಖ್ಯವಾದದ್ದಾಗಿದೆ. ಅವನು ಹೀಗೆ ಹೇಳಿದ್ದಾನೆ: "ಐತಿಹಾಸಿಕ ಘಟನಾವಳಿಗಳ ಬಗ್ಗೆ ಹಿಂದೂಗಳು ಹೆಚ್ಚು ಗಮನ ಕೊಟ್ಟಂತಿಲ್ಲ. ಕಾಲ ನಿರ್ಣಯದ ಬಗ್ಗೆಯೂ ಅವರು ಉದಾಸೀನತೆಯಿಂದಲೇ ಇರುತ್ತಾರೆ. ಪ್ರಚಲಿತ ವಿಷಯಗಳ ಬಗ್ಗೆ ಪ್ರಶ್ನೆ ಮಾಡಿದಾಗ ಏನು ಹೇಳಬೇಕು ಎಂಬುದನ್ನರಿಯದ ಅವರು ಅಡುಗೂಲಜ್ಜಿ ಕತೆ ಹೇಳಲು ಪ್ರಾರಂಭಿಸುತ್ತಾರೆ". ಈ ಮಾತು ಭಾರತೀಯರು ಇತಿಹಾಸದ ವಿಷಯದಲ್ಲಿ ವಿಮನಸ್ಕರಾಗಿದ್ದರು ಎಂದು ನಿರ್ಣಯಿಸಿದಂತಿದೆ ಅಥವಾ ಪರಿಗಣಿಸಿದಂತಿದೆ. ಇದು ಬಹುಮಟ್ಟಿಗೆ ನಿಜ ಎಂಬಂತೆ ಕಾಣಿಸಿದರೂ, ಚರಿತ್ರೆಯ ಕಡೆ ಎಲ್ಲರೂ ವಿಮನಸ್ಕರಾಗಿರಲಿಲ್ಲ. ಕೆಲವರಾದರೂ ಅವರಿಗೆ ಇಷ್ಟವೆನಿಸಿದ ರೂಪದಲ್ಲಿ (ಈಂಡಿಟ) ಅದರ ಗುರುತು ಉಳಿಸಿಡಲು ಪ್ರಯತ್ನಿಸಿದ್ದಾರೆ. ಅದು ಪುರಾಣ ರೂಪದಲ್ಲಿರಬಹುದು, ಸ್ಥಳಮಹಾತ್ಮೆಯ ರೂಪದಲ್ಲಿರಬಹುದು, ಇಲ್ಲವೆ ಒಂದು ರಾಜಮನೆತನದ ಕಥೆಯ ರೂಪದಲ್ಲಿರಬಹುದು. ಹೀಗಾಗಿಯೇ ಶಾತವಾಹನ ಕದಂಬ ದೊರೆಗಳ ಚರಿತ್ರೆಯನ್ನು ಹೇಳುವ ಪುರಾಣಗಳೂ, ಸ್ಥಳಮಹಾತ್ಮೆ ಹೇಳುವ ಅನೇಕ ಪದ್ಯ ಕೃತಿಗಳೂ, ಕಾಶ್ಮೀರ ರಾಜಮನೆತನದ ಕಥೆ ಹೇಳುವ ಕಲ್ಹಣನ ರಾಜತರಂಗಿಣಿಯಂತಹ ಕೃತಿಗಳೂ ಇರಬಹುದು. ಹೀಗೇ ಇತಿಹಾಸವನ್ನು ಕಾವ್ಯದ ಜತೆಯಲ್ಲಿ, ಅದರ ಒಡಲಲ್ಲಿ ಹೇಳುವ ಪ್ರಯತ್ನ ಮಾಡಿರುವ ಕವಿಗಳೂ ಇಲ್ಲದಿಲ್ಲ. ಅಂಥವರಲ್ಲಿ ಎತ್ತಿಹೇಳಬಹುದಾದ ನಿದರ್ಶನ ಎಂದರೆ ಕನ್ನಡದ ಆದಿಮ ಮಹಾಕವಿ

ಪಂಪ. ಅವನು ತನ್ನ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' ಎಂಬ ಎರಡು ಕೃತಿಗಳಲ್ಲೂ ಅನೇಕ ಐತಿಹಾಸಿಕ ಸಂಗತಿಗಳನ್ನು ತಂದಿರುವನು.

ಪಂಪಕವಿ ತನ್ನ ಕೃತಿಗಳಲ್ಲಿ ನೆಯ್ದು ಹೇಳಿರುವ ಆ ಚಾರಿತ್ರಿಕ ಅಂಶಗಳು ಮೂರು ಬಗೆಯಲ್ಲಿವೆ. ಒಂದು, ವೇಮುಲವಾಡ ಚಾಲುಕ್ಯ ಸಾಮಂತ ರಾಜಮನೆತನದ ರಾಜಕೀಯ ಚರಿತ್ರೆ ; ಇನ್ನೊಂದು, ತನ್ನ ಹಾಗೂ ತನ್ನ ಮನೆತನದ ಸ್ವಕೀಯ ಚರಿತ್ರೆ, ಮತ್ತೊಂದು, ಜೈನ ಮುನಿ ಪರಂಪರೆಯ ಧಾರ್ಮಿಕ ಚರಿತ್ರೆ ;. ಈ ಅಂಶಗಳನ್ನು ಬಿಡಿಬಿಡಿಯಾಗಿ ನೋಡಬಹುದು:

ರಾಜಕೀಯ ಚರಿತ್ರಾಂಶಗಳು

ಮೊದಲಿಗೆ, ಪಂಪಕವಿ 'ವಿಕ್ರಮಾರ್ಜುನ ವಿಜಯ'ದಲ್ಲಿ ನಿರೂಪಿಸಿರುವ ರಾಜಕೀಯ ಚರಿತ್ರೆಯ ಅಂಶಗಳನ್ನು ಈಹಿಂದೆ ಕೆಲವರು ಪ್ರಸ್ತಾಪಿಸಿದ್ದಾರೆ. ಆದರೆ, ಆ ಚರಿತ್ರಾಂಶಗಳನ್ನು ಅವನು ಅಭಿವ್ಯಕ್ತಿಸಿರುವ ಧಾಟಿಯಲ್ಲಿ– ಹಳಗನ್ನಡದಲ್ಲಿರುವುದನ್ನು ಹೊಸಗನ್ನಡದಲ್ಲಿ– ಇಲ್ಲಿ ನೋಡಬಹುದು:

ಪಂಪಕವಿ 'ವಿಕ್ರಮಾರ್ಜುನವಿಜಯ' ಮಹಾಕಾವ್ಯದಲ್ಲಿ, ತನ್ನ ಆಶ್ರಯದಾತನೂ ರಾಷ್ಟ್ರಕೂಟ ಚಕ್ರವರ್ತಿಗಳ ಸಾಮಂತನೂ ವೇಮುಲವಾಡದ ಚಾಲುಕ್ಯ ಮನೆತನದವನೂ ಆದ ೨ನೆಯ ಅರಿಕೇಸರಿಯನ್ನು ಮಹಾಭಾರತದ ಅರ್ಜುನನೊಂದಿಗೆ ಸಮಸ್ತಗೊಳಿಸಿ (ಒಂದುಗೂಡಿಸಿ) ಆ ಕಾವ್ಯವನ್ನು ರಚಿಸಿದ್ದುದರಿಂದ, ಆತನ ಮನೆತನದ ಚರಿತ್ರೆಯನ್ನು ಪ್ರಾಸಂಗಿಕವಾಗಿ ಕಾವ್ಯದ ಪೀಠಿಕಾಭಾಗದಲ್ಲಿ, (೧ನೇ ಆಶ್ವಾಸದ ೧೫ನೆಯ ಪದ್ಯದಿಂದ ೫೧ನೆಯ ಪದ್ಯದವರೆಗೆ, ಒಟ್ಟು ೩೭ ಪದ್ಯಗಳಷ್ಟು ವಿಸ್ತಾರದಲ್ಲಿ) ಸಾಕಷ್ಟು ವಿಶದವಾಗಿ ಹೇಳಿದ್ದಾನೆ. ಆ ಮನೆತನದ ಚರಿತ್ರೆಯ ಜೊತೆಗೆ, ಅದಕ್ಕೆ ರಾಷ್ಟ್ರಕೂಟ ಹಾಗೂ ಗಂಗ ರಾಜಮನೆತನಗಳ ಚರಿತ್ರೆಯ ಎಳೆಗಳೂ ಸೇರಿರುವುದುಂಟು. ಅವನು ನಿರೂಪಿಸಿರುವ ರೀತಿಯಲ್ಲಿ ಆ ವಿವರವನ್ನು ಹೀಗೆ ಸಂಗ್ರಹಿಸಬಹುದು:

ಪಂಪಕವಿ ನಿರೂಪಿಸುವ ಚಾಲುಕ್ಯ ವಂಶದ ಶಾಖೆಯಾದ ಅರಿಕೇಸರಿಯ ಮನೆತನದ ಚರಿತ್ರೆ (೧ನೆಯ) ಯುದ್ಧಮಲ್ಲ ಎಂಬುವನಿಂದ ಪ್ರಾರಂಭವಾಗುತ್ತದೆ. ಚಾಳುಕ್ಯ ವಂಶದ ಆಕಾಶದಲ್ಲಿ ತಣ್ಣಗಿನ ಕಾಂತಿಯನ್ನು ಬೀರುವ ಚಂದ್ರನಂತೆ ಯುದ್ಧಮಲ್ಲನಿದ್ದ. ಅವನು ತನ್ನ ಭುಜಬಲದ ಖ್ಯಾತಿಯನ್ನು ಹೊಂದಿ, ಅನೇಕ ದೊರೆಗಳನ್ನು ತನ್ನ ಪಾದಕ್ಕೆರಗಿಸಿಕೊಂಡು ಸಪಾದಲಕ್ಷ ಪ್ರದೇಶವನ್ನು ಬೋದನದಿಂದ ಆಳುತ್ತಿದ್ದ. ಆ ರಾಜ ಪ್ರತಿನಿತ್ಯ ೫೦೦ ಆನೆಗಳಿಗೆ ಎಣ್ಣೆ ಸ್ನಾನ ಮಾಡಿಸುತ್ತಿದ್ದ (ಪದ್ಯ ೧೫, ೧೬, ೧೭). [ವೇಮುಲವಾಡದ ಶಿಲಾಶಾಸನದಲ್ಲೂ ಈ ಯುದ್ಧಮಲ್ಲನ ಆನೆಗಳ ಎಣ್ಣೆಸ್ನಾನದ ಈ ಪ್ರಸ್ತಾಪ ಬರುತ್ತದೆಂದು ವಿದ್ವಾಂಸರು ಹೇಳುತ್ತಾರೆ].

ಈ ಯುದ್ಧಮಲ್ಲ ನೃಪತಿಗೆ ಮಗನಾಗಿ ಜನಿಸಿದವನೇ (೧ನೆಯ) ಅರಿಕೇಸರಿ. ಅವನೂ ಸಹ ಅನೇಕ ದೊರೆಗಳನ್ನು ಸೋಲಿಸಿ ಅವರನ್ನು ತನ್ನ ಪಾದಕ್ಕೆರಗುವಂತೆ ಮಾಡಿಕೊಂಡಿದ್ದನು. ಅವನು ಬಹು ಸುಂದರಾಂಗ, ಅಷ್ಟೇ ವೀರ. ಆನೆ ಕುದುರೆ ಪದಾತಿಗಳಿಂದ ತುಂಬಿದ್ದ ಅವನ ಸೈನ್ಯ, ಮೇಲೆತ್ತಿ ಹಿಡಿದ ಅವನ ಖಡ್ಗ, ಇವನ್ನು ನೋಡಿಯೇ ವೈರಿಗಳು ಶರಣಾಗಿದ್ದರು. ರಾಷ್ಟ್ರಕೂಟ ಚಕ್ರವರ್ತಿ ನಿರುಪಮದೇವನಿದ್ದಾಗ ಈ ಅರಿಕೇಸರಿ ವೆಂಗಿ ಪ್ರಾಂತವನ್ನೂ ತ್ರಿಕಳಿಂಗವನ್ನೂ ತನ್ನ ಹಿಡಿತಕ್ಕೆ ತೆಗೆದುಕೊಂಡು ತನ್ನ ಹಿರಿಮೆ ಏನೆಂಬುದನ್ನು ತೋರಿಸಿದ್ದನು. ಕ್ಷಾತ್ರ ತೇಜೋಗುಣಗಳು ಹಿಂದಿನ ಕ್ಷತ್ರಿಯರಲ್ಲಿ ಎಲ್ಲಿದ್ದುವು? ಅವು ನಿಜವಾಗಿ ಇದ್ದುದು ಇವನಲ್ಲಿ– ಎಂಬಂತೆ ಅವನು ಖ್ಯಾತನಾಗಿದ್ದನು (ಪದ್ಯ ೧೮, ೧೯, ೨೦, ೨೧). [ಈ ನಿರುಪಮದೇವನು ಧ್ರುವಧಾರಾವರ್ಷ ಎಂಬ ರಾಜ (ಕ್ರಿ.ಶ. ೭೮೦) ಈ ವಿಷಯ ಪರಭಣಿ ಶಾಸನದಲ್ಲೂ ಬಂದಿರುವುದಾಗಿ ವಿದ್ವಾಂಸರು ಹೇಳುತ್ತಾರೆ].

ಈ ಅರಿಕೇಸರಿಗೆ– ಅರಿಗಳ ಶಿರಗಳನ್ನು ಕತ್ತರಿಸುವ ಕೆಲಸದಲ್ಲಿ ನುರಿತ ಖಡ್ಗವನ್ನು ಹಿಡಿದಿದ್ದರೇನೋ ಎಂಬಂತಿದ್ದ– (೧ನೆಯ) ನರಸಿಂಹ ಮತ್ತು (೧ನೆಯ) ಭದ್ರದೇವ ಎಂಬುವರು ಮಕ್ಕಳು (ಪದ್ಯ ೨೨). ಆ ನರಸಿಂಹನಿಗೆ ಕೀರ್ತಿಶಾಲಿಯಾದ (೨ನೆಯ) ಯುದ್ಧಮಲ್ಲ ಎಂಬುವನು ಹಿರಿಯ ಮಗ. ಈ ಯುದ್ಧಮಲ್ಲ ಯಶೋವಂತ, ಶತ್ರುಗಳಿಗೆ ತಡೆಯಲಾಗದ ಮಹಾವೀರತ್ವ ಉಳ್ಳವ ಎಂದು ಹೆಸರಾದನು. ಅವನಿಗೆ (೨ನೆಯ) ಬದ್ದೆಗ ಎಂಬುವನು ಹಿರಿಯ ಮಗ (ಪದ್ಯ ೨೩). ಅವನ ಹೆಸರು ಭದ್ರದೇವ ಎಂದಿದ್ದರೂ ಬದ್ದೆಗ ಎಂಬ ಹೆಸರೇ ಪ್ರಚುರ. ಹುಟ್ಟುತ್ತಲೇ ಅವನಲ್ಲಿ ಜ್ಞಾನ, ಜ್ಞಾನದ ಜೊತೆಗೆ ಘನತೆ, ಘನತೆಯೊಂದಿಗೆ ಶೌರ್ಯ, ಶೌರ್ಯದ ಜೊತೆಗೆ ಶಕ್ತಿ, ಶಕ್ತಿಯ ಜೊತೆಗೆ ಮಹೋತ್ಸಾಹ– ಇವೂ ಹುಟ್ಟಿದುವು (ಪದ್ಯ ೨೪). ದಾಳಿಗಳು ನಡೆದಾಗ ಶತ್ರುರಾಜರು ಹುಚ್ಚೆದ್ದು ಓಡಿಹೋಗುವಂತೆ ಬೆನ್ನಟ್ಟಿ ಹೊಕ್ಕು ಇರಿದು ಶೌರ್ಯ ತೋರಿದವನು, ಅವನು. ಹೀಗೆ ೪೨ ಪ್ರಸಿದ್ಧವಾದ ಕಾಳಗಗಳಲ್ಲಿ ಅವನು ಪರಾಕ್ರಮ ತೋರಿ ಹೆಸರಾದನು. (ಪದ್ಯ ೨೫).

ಸಮುದ್ರವೇ ಗಡಿಯಾಗಿ ಅಲ್ಲಿಯವರೆಗೆ ಹರಡಿರುವ ಭೂಪ್ರದೇಶದಲ್ಲಿ ಸೋಲದ ಗಂಡು ಎಂದರೆ ಇವನೇ ಎನ್ನುವಂತೆ, ಕೀರ್ತಿಯನ್ನು ಅಬಾಧಿತವಾಗಿ ಸ್ಥಿರಪಡಿಸಿಕೊಂಡದ್ದಲ್ಲದೆ, ಉದ್ಧತನಾಗಿ ಮಣಿಯದಿದ್ದ ಭೀಮ ಎಂಬುವನನ್ನು – ಮೊಸಳೆಯನ್ನು ನೀರಲ್ಲಿ ಒತ್ತಿ ಮಿಸುಗಾಡದಂತೆ ಹಿಡಿದ ಹಾಗೆ– ಶೌರ್ಯದಿಂದ ಹಿಡಿದದ್ದು ಬದ್ದೆಗನ ಮಹಾಸಾಹಸವೇ ಸರಿ (ಪದ್ಯ ೨೬). ಅದಷ್ಟೇ ಅಲ್ಲ, ಆಕಾಶದೆತ್ತರಕ್ಕೆ ಏರಿದ ಘನತೆ, ಆ ಘನತೆಗೆ ಸರಿಯಾದ ಪ್ರಯತ್ನಶೀಲತೆ, ಅದಕ್ಕೆ ಸರಿಯಾಗಿ ಎಂದೂ ವ್ಯರ್ಥವಾಗದ ಆಜ್ಞೆ, ಆ ಆಜ್ಞೆಗೆ ಸರಿಯಾದ ಮಹಾದರ್ಪ, ಆ ದರ್ಪಕ್ಕೆ ಸರಿಯಾದ ಶತ್ರುಸಮೂಹ, ಹೀಗೆ ಅತಿಶಯವಾದ ಯಶಸ್ಸು

ಬದ್ದೆಗನದಾಗಿತ್ತು (ಪದ್ಯ ೨೭). ಮೇರುಪರ್ವತದ ಚಿನ್ನ, ಕಲ್ಪವೃಕ್ಷದ ತೋಟ, ರಸದ ತೊರೆ, ಸ್ಪರ್ಶಶಿಲೆಯ ಗಣಿ, ಇದೆಲ್ಲ ತನ್ನ ಭಂಡಾರದಲ್ಲಿದೆ ಎನ್ನುವಂತೆ ದಾನವನ್ನು ನಿರಂತರವಾಗಿ ನಡೆಸುತ್ತಿದ್ದ ಬದ್ದೆಗನಿಗೆ ಯಾರು ತಾನೆ ಸಾಟಿ? (ಪದ್ಯ ೨೮). ಕಾಮಧೇನು, ಐರಾವತ, ಉಚ್ಚೈಶ್ರವಸ್ಸು ಎಂಬ ದೇವಲೋಕದ ಹಸು, ಆನೆ, ಕುದುರೆಗಳು ಭದ್ರದೇವನ ಕೊಡುಗೆಯ ಮುಂದೆ ತಾವೇನೂ ಅಲ್ಲ ಎಂಬಂತೆ ಆಗಿಹೋದುವು (ಪದ್ಯ ೨೯).

ಆ ಬದ್ದೆಗನಿಗೆ ವೈರಿಗಳೆಂಬ ಕತ್ತಲೆಯನ್ನು ನಿವಾರಿಸುವ ಸೂರ್ಯನೋ ಎನ್ನುವಂತೆ, (೩ನೆಯ) ಯುದ್ಧಮಲ್ಲನೆಂಬುವ ಮಗನಾದನು (ಪದ್ಯ ೩೦). ಅವನಿಗೆ (೨ನೆಯ) ನರಸಿಂಹನೆಂಬುವನು ಮಗ. ಅವನು ಪೂರ್ವಕಾಲದ ನಹುಷ, ಪೃಥು, ಭಗೀರಥ, ನಳ ಮುಂತಾದ ಮಹಾತ್ಮರಿಗೆ ಮಿಗಿಲಾದವನಾಗಿ ಮಹಾಜ್ಞಾನಿ ಎಂದು ಖ್ಯಾತಿ ಪಡೆದನು (ಪದ್ಯ ೩೧). ಶತ್ರುಗಳನ್ನು ಮಣಿಸುವ ಕಾಲಕ್ಕೆ ಈ ದೊರೆ ಉತ್ತಮ ಜ್ಞಾನ, ಗುರುವಚನ ಇವನ್ನು ಅಂಕುಶದ ರೀತಿಯಲ್ಲಿ ಬಳಸಿದನು (ಪದ್ಯ ೩೨). ಲಾಳರನ್ನು, ಮಾಳವರನ್ನು, ಘೂರ್ಜರರನ್ನು ಸೋಲಿಸಿ, ಗಂಗಾನದಿಯವರೆಗೂ ಹೋಗಿ, ಅಖಂಡ ಜಯವನ್ನು ತನ್ನದಾಗಿಸಿಕೊಂಡವನು ಈ ನರಸಿಂಹ ದೊರೆ (ಪದ್ಯ ೩೩-೩೮). ಹೀಗೆ ಇದ್ದ ನರಸಿಂಹ ದೊರೆಗೆ ಅನುರೂಪಳಾದ ಸುಂದರ ಸತೀಮಣಿ ಜಾಕವ್ವೆ, ಇವಳನ್ನು ಸೌಂದರ್ಯದಲ್ಲಿ ಕುಲದಲ್ಲಿ ಶೀಲದಲ್ಲಿ ಮೀರಿಸುವವರು ಯಾರೂ ಇರಲಿಲ್ಲ (ಪದ್ಯ ೩೯). ಅಷ್ಟೇ ಅಲ್ಲ, ಹೊಸತಾಗಿ ಅರಳಿದ ಬಿಳಿಯ ಕಮಲದ ನಡುವೆ ಇರುವ ಲಕ್ಷ್ಮೀದೇವಿ ಸಹ ಇವಳ ಪಕ್ಕದಲ್ಲಿ ಒಂದಷ್ಟು ಮಂಕಾಗಿಯೆ ಕಾಣುತ್ತಾಳೆ ಎಂದರೆ ಇವಳಿಗೆ ಸಾಟಿ ಇನ್ನಾರು? (ಪದ್ಯ ೪೦).

ಇಂಥ ಜಾಕವ್ವೆಗೆ ಮಗನಾದವನು ಉತ್ತಮದೊರೆ, ಯಶಶ್ಶಾಲಿ, ಮಹಾಶೂರ ಎನಿಸಿದ (೨ನೆಯ) ಅರಿಕೇಸರಿ (ಪದ್ಯ ೪೧). (ಇವನೇ ಕವಿ ಪಂಪನಿಗೆ ಪ್ರಿಯನಾದ ಇಮ್ಮಡಿ ಅರಿಕೇಸರಿ ದೊರೆ. ಇವನ ಬಗ್ಗೆ ಕವಿ ೧೧ ಪದ್ಯಗಳಲ್ಲಿ ವಿಶೇಷ ವಿವರಣೆ ಮತ್ತು ವರ್ಣನೆಯನ್ನು ನೀಡಿದ್ದಾನೆ). ಈ ಅರಿಕೇಸರಿ ಎಷ್ಟು ಶೂರನೋ ಅಷ್ಟೇ ಉದಾರನೂ ಸಹ (ಪದ್ಯ ೪೨). ಇವನು ಹುಟ್ಟಿದಾಗ ಮದಿಸಿದ ಆನೆಯ ಮದಜಲವನ್ನೇ ಬಿಸಿನೀರಿನಂತೆ ಸೇಚನ ಮಾಡಿದ್ದರು; ಮದ್ದಾನೆಯ ಅಂಕುಶದಿಂದ ಹೊಕ್ಕುಳಬಳ್ಳಿಯನ್ನು ಕತ್ತರಿಸಿದ್ದರು; ಮದ್ದಾನೆಯ ದಂತದಲ್ಲಿ ಮಾಡಿದ ತೊಟ್ಟಿಲನ್ನೇರಿಸಿದ್ದರು- ಹೀಗೆ ಅವನು ಬಾಲ್ಯದಲ್ಲೇ ತಾನು 'ಗಜಪ್ರಿಯ' ಎಂಬುದನ್ನು ತೋರಿದ್ದನು (ಪದ್ಯ ೪೩). ಆದ್ದರಿಂದ ಆ ಬಿರುದು ಆತನಿಗೆ ಸಹಜವಾಗಿಯೇ ಒಪ್ಪುತ್ತಿತ್ತು. ಇದಲ್ಲದೆ, ಸಾಗರದ ಅಂಚಿನವರೆಗೆ, ಈ ದೊರೆಗೆ ಸಾಟಿ ಇನ್ನಾರು ಎಂಬಂತೆ ಇವನು ಬೆಳೆದದ್ದು (ರಾಷ್ಟ್ರಕೂಟ ದೊರೆ) ಇಂದ್ರನ (೯೧೨-೯೧೭) ತೋಳ ತೊಟ್ಟಿಲಲ್ಲೇ (ಪದ್ಯ ೪೪). ಬುದ್ಧಿ, ಪರಾಕ್ರಮ, ವಿದ್ಯೆ ಎಲ್ಲದರಲ್ಲೂ ಹೆಸರಾಗಿ

ಇವನು 'ಮನುಜಮಾರ್ತಾಂಡ' ಎನಿಸಿದನು (ಪದ್ಯ ೪೫). ಅತ್ಯಂತ ಬಾಲ್ಯಕಾಲದಲ್ಲೇ ಇವನು ಶತ್ರುಸಮೂಹವನ್ನು ನಾಶಕ್ಕೀಡುಮಾಡಿ ತನ್ನ ಸಾಮರ್ಥ್ಯವನ್ನು ತೋರಿದನು (ಪದ್ಯ ೪೬). ವೈರಿಸೈನ್ಯವು ಕೋಟಿಗೂ ಮಿಗಿಲಿದ್ದರೂ, ಪರಸ್ತ್ರೀಯರು ಅಪ್ಸರೆ ಊರ್ವಶಿಗಿಂತ ಮಿಗಿಲಿದ್ದರೂ ಅವನ ಕಣ್ಣು ಸೋಲುತ್ತಿರಲಿಲ್ಲ (ಪದ್ಯ ೪೭).

ಸಮರದಲ್ಲಿ ಶತ್ರುಸೈನ್ಯವಾಗಿ ಮೂರು ಲೋಕವೇ ನೆರೆದಿದ್ದರೂ ಅದು ತನ್ನ ಪರಾಕ್ರಮಕ್ಕೆ ಮತ್ತು ದಾನ ನೀಡುವ ಕಾಲದಲ್ಲಿ ಮೇರು ಪರ್ವತವೇ ಇದ್ದರೂ ಅದು ತಾನು ನೀಡುವ ದಾನಕ್ಕೆ ಸ್ವಲ್ಪ ಕಡಮೆಯಾಯಿತಲ್ಲ ಎಂದು ವ್ಯಥೆಪಡುತ್ತಾನೆ, 'ಪ್ರಿಯಗಳ್ಳ' ಎನಿಸಿದ ಈ ಅರಿಕೇಸರಿ (ಪದ್ಯ ೪೮). ಈ ದೊರೆ ಮತ್ತು ಉಳಿದ ಸಾಮಂತರು 'ಸ್ವಸ್ತಿಸಮಧಿಗತ ಪಂಚಮಹಾಶಬ್ದರ್', 'ಮಹಾಸಾಮಂತರ್' ಮುಂತಾದ ಪ್ರಶಸ್ತಿಗಳನ್ನು ಹೇಳಿಸಿಕೊಳ್ಳುವಲ್ಲಿ, ಸಮ ಎನಿಸಿಕೊಳ್ಳುತ್ತಾರೆ, ಅಷ್ಟೆ. ಆದರೆ ಆ ಸಾಮಂತರು ಗುಣದ ವಿಷಯದಲ್ಲಿ ಇವನಿಗೆ ಸಮ ಎನಿಸುತ್ತಾರೆಯೆ? (ಪದ್ಯ ೪೯). ತ್ಯಾಗದ ಕಂಬವನ್ನು ನಿಲ್ಲಿಸಿ, ಶೌರ್ಯದ ಶಾಸನವನ್ನು ಕೊರೆಯಿಸಿ, ವಶವಾಗದಿದ್ದ ಪ್ರದೇಶಗಳನ್ನು ವಶಪಡಿಸಿಕೊಂಡು, ತ್ಯಾಗ ಮತ್ತು ಶೌರ್ಯಗಳಲ್ಲಿ 'ಗುಣಾರ್ಣವ'ನು ಈಗಾಗಲೇ ಸುಪ್ರಸಿದ್ಧರಾಗಿರುವ ಈ ವಂಶದ ಬದ್ದೆಗ, ನರಸಿಂಹ ಇವರುಗಳಿಗಿಂತ ನಾಲ್ಕು ಬೆರಳು ಎತ್ತರವೆನಿಸಿದನು (ಪದ್ಯ ೫೦).

ಇದಲ್ಲದೆ ಈ ಕಾವ್ಯದ ೧೪ನೆಯ ಆಶ್ವಾಸದಲ್ಲಿ ಕವಿ ಪಂಪ ಅರಿಕೇಸರಿಯ ಎಲ್ಲ ೩೦ ಬಿರುದುಗಳೂ ಪಟ್ಟಿಮಾಡಿ ಅವು ಅವನಿಗೆ ಹೇಗೆ ಉಚಿತವಾಗಿ ಒಪ್ಪುತ್ತಿದ್ದವು ಎಂದು ವರ್ಣಿಸಿದ್ದಾನೆ (ಪದ್ಯ ೩೭ರ ಅನಂತರದ ವಚನ ಅರ್ಥಾತ್ ಗದ್ಯ). ಅವುಗಳಲ್ಲಿ ಹಲವು ಮಾಮೂಲಾಗಿ ಹೇಳುವ ಬಿರುದುಗಳೆನಿಸಿದರೂ, ಕೆಲವು ಚರಿತ್ರಾಂಶವನ್ನು ಒಳಗೊಂಡವು. ಜೊತೆಗೆ, ಅವನ ಗೊಜ್ಜಿಗ ಎಂಬ ಸಕಲ(?) ಚಕ್ರವರ್ತಿಯ ಕೋಪಕ್ಕೆ ಪಾತ್ರನಾಗಿ ತನ್ನ ಮರೆಹೊಕ್ಕ ವಿಜಯಾದಿತ್ಯನನ್ನು ಧೈರ್ಯದಿಂದ ಕಾಪಾಡಿ 'ಶರಣಾಗತ ಜಲನಿಧಿ' ಎನಿಸಿದ– ಹೀಗೆನ್ನುವಲ್ಲಿ ಇತಿಹಾಸದ ಒಂದು ಪ್ರಮುಖ ಘಟನೆಯನ್ನು ಸೂಚ್ಯವಾಗಿಸಿದ್ದಾನೆ. ಈರೀತಿ ಪಂಪಕವಿ ರಾಜಕೀಯ ಚರಿತ್ರೆಗೆ ಪೂರಕವಾಗಿರುವ ಅನೇಕ ಅಂಶಗಳನ್ನು ತನ್ನ ಕಾವ್ಯದ ನೆಯ್ಗೆಯಲ್ಲಿ ಎಳೆಗಳಾಗಿ ಸೇರಿಸಿದ್ದಾನೆ. ಅವನು ಕೊಡುವ ವಿವರಣೆಗಳಿಂದ ಈ ಮುಂದಿನಂತೆ ವೇಮುಲವಾಡದ ಚಾಳುಕ್ಯ ವಂಶವೃಕ್ಷವನ್ನು ಹೀಗೆ ರೂಪಿಸಬಹುದು:

ಚಳುಕ್ಯ ವಂಶ

|

|

|

(೧ನೇ) ಯುದ್ಧಮಲ್ಲ

|

(೧ನೇ) ಅರಿಕೇಸರಿ

|

|　|

(೧ನೇ) ನರಸಿಂಹ　(೧ನೇ) ಭದ್ರದೇವ (ಬದ್ದೆಗ)

|

(೨ನೇ) ಯುದ್ಧಮಲ್ಲ

|

(೨ನೇ) ಬದ್ದೆಗ

|

(೩ನೇ) ಯುದ್ಧಮಲ್ಲ

|

(೨ನೇ) ನರಸಿಂಹ (ನರಗ) (>< ಇವನ ಹೆಂಡತಿ ಜಾಕವ್ವೆ)

|

(೨ನೇ) ಅರಿಕೇಸರಿ (ಅರಿಗ)

ಸ್ವಕೀಯ ಚರಿತ್ರಾಂಶಗಳು

'ವಿಕ್ರಮಾರ್ಜುನ ವಿಜಯ'ದಲ್ಲಿ : 'ವಿಕ್ರಮಾರ್ಜುನ ವಿಜಯ'ದ ೧೪ನೇ ಆಶ್ವಾಸದಲ್ಲಿ, ೪೦ನೆಯ ಪದ್ಯದಿಂದ ೫೭ನೆಯ ಪದ್ಯದವರೆಗೆ ಒಟ್ಟು ೧೭ ಪದ್ಯಗಳಲ್ಲಿ, ಪಂಪಕವಿ ತನ್ನ ಸ್ವಕೀಯ ಹಾಗೂ ವಂಶಚರಿತ್ರೆಯ ಅನೇಕ ವಿವರಗಳನ್ನು ಕೊಟ್ಟಿದ್ದಾನೆ. ಕವಿಚರಿತ್ರೆಯ ದೃಷ್ಟಿಯಿಂದ ಈ ವಿವರಗಳು ಮುಖ್ಯವಾದವು. ಆ ಅಂಶಗಳು ಅವನ ನಿರೂಪಣೆಯಂತೆ ಈ ರೀತಿ ಇವೆ:

ಬೆಂಗಿ(ವೆಂಗಿ)ಮಂಡಳ ಎಂಬ ಪ್ರದೇಶ. ಅದರಲ್ಲಿ ವೆಂಗಿಪಟು ಎಂಬುದು ಒಂದು ಒಳ್ಳೆಯ ಊರು. ವಸಂತ(?), ಕೊಟ್ಟೂರು, ನಿಡುಗುಂದಿ, ವಿಕ್ರಮಪುರ (?),

ಇವುಗಳ ಅಗ್ರಹಾರ ಸಂಪತ್ತು ಪದವಿಗಳನ್ನು ಹೊಂದಿ ಅಗ್ರಗಣ್ಯ ಎನಿಸಿದವನು, ನೀತಿವಿದನು, ವತ್ಸ ಗೋತ್ರಕ್ಕೆ ಸೇರಿದವನು, ಸಕಲ ಶಾಸ್ತ್ರಾರ್ಥದಿಂದ ನಿಶ್ಚಯಿಸುವ ಬುದ್ಧಿಶಾಲಿ ಎಂದು ಹೆಸರಾದವನು ಮಾಧವ ಸೋಮಯಾಜಿ (ಪದ್ಯ ೪೦-೪೨). ಇವನು ಮಾಡುವ ಹೋಮ ಮಂತ್ರ ಪ್ರಯೋಗ ಪ್ರಕ್ರಿಯೆಗೆ ಇಂದ್ರ ಚಂದ್ರ ಸೂರ್ಯ ವಾಯು ಮುಂತಾದ ದೇವತೆಗಳೆಲ್ಲ - ನಾವು ಇವನ ಮಂತ್ರಕ್ಕೆ ವ್ಯತಿರಿಕ್ತವಾಗಿ ನಡೆದರೆ ನಮಗೆಲ್ಲಿ ಶಾಪ ಕೊಟ್ಟು ಬಿಡುತ್ತಾನೋ ಎಂದು- ಅಂಜುವಂತೆ ಅವನಿದ್ದನು. ಹೆಸರಲ್ಲಿ 'ಸೋಮಯಾಜಿ'ಯಾಗಿದ್ದರೂ ಅವನು 'ಸರ್ವಕ್ರತುಯಾಜಿ' ಎನಿಸಿದ್ದನು (ಪದ್ಯ ೪೩). ಅವನು ತನ್ನ ಶುಭ್ರ ಕೀರ್ತಿಯನ್ನು ತಾನು ನಡೆಸಿದ ಯಜ್ಞಗಳ ಹೊಗೆಯಿಂದ ಕಪ್ಪುಮಾಡಿಕೊಂಡನು ಎನ್ನಬೇಕು (ಪದ್ಯ ೪೪). ಆತನ ಮಗನೇ ಅಭಿಮಾನಚಂದ್ರ. ಆನೆ, ಕುದುರೆ, ರತ್ನ, ಬಂಗಾರ, ಮುಂತಾದ ಅಮೂಲ್ಯ ವಸ್ತು ವಿಶೇಷಗಳನ್ನು ಎಲ್ಲರಿಗೂ ದಾನ ನೀಡಿ ಪುರುಷೋತ್ತಮ ಎಂದು ಅವನು ಹೆಸರಾದನು (ಪದ್ಯ ೪೫). ಸಮಸ್ತ ವೇದವೇದಾಂಗ ಜ್ಞಾನಿಯೂ ಸನಾತನ ನಡೆವಳಿಕೆಯವನೂ ಆದ ಕೊಮರಯ್ಯ ಎಂಬುವನು ಅವನ ಮಗ (ಪದ್ಯ ೪೬). ಜ್ಞಾನಿ ಗುಣಮಣಿ ಎನಿಸಿದ್ದ ಅಭಿರಾಮದೇವರಾಯನು ಅವನಿಗೆ ಮಗನು (ಪದ್ಯ ೪೭). (ಕುರ್ಕ್ಯಾಲದ ಶಾಸನದಲ್ಲಿ ಪಂಪನ ತಂದೆಯ ಹೆಸರು ಭೀಮಪಯ್ಯ ಎಂದೂ ಹಾಗೇ ಪಂಪನಿಗೆ ಜಿನವಲ್ಲಭ ಎಂಬ ತಮ್ಮನೊಬ್ಬನಿದ್ದ ಎಂದೂ ವ್ಯಕ್ತವಾಗಿದೆ). ಎಲ್ಲ ಜಾತಿಗಳಲ್ಲಿ ಬ್ರಾಹ್ಮಣ ಜಾತಿಯೇ ಮಿಗಿಲಾದದ್ದು ಎನ್ನುತ್ತಾರೆ. ಅಂಥ ಬ್ರಾಹ್ಮಣನಿಗೆ ಧಾರ್ಮಿಕ ವಿಶ್ವಾಸವನ್ನು ತಳೆಯಲು ಸೂಕ್ತವೆನಿಸಿದ್ದು ಜೈನಧರ್ಮ. ಹಾಗಾಗಿ ಅವನು ಜೈನಧರ್ಮ ಸ್ವೀಕರಿಸಿ ತನ್ನ ಮೊದಲಿನ ಜಾತಿಯನ್ನು ಇನ್ನೂ ಉತ್ತಮಪಡಿಸಿಕೊಂಡನು (ಪದ್ಯ ೪೮). ಅವನ ಮಗನೇ 'ಕವಿತಾಗುಣಾರ್ಣವ' ಎಂಬ ಬಿರುದುಳ್ಳ ನಾನು.

ಪಂಪನ ವಂಶವೃಕ್ಷ

ಮಾಧವ ಸೋಮಯಾಜಿ

|

ಅಭಿಮಾನ ಚಂದ್ರ

|

ಕೊಮರಯ್ಯ

|

ಅಭಿರಾಮದೇವರಾಯ(ಭೀಮಪಯ್ಯ)

| |

ಪಂಪ ಜಿನವಲ್ಲಭ

ನನ್ನ ಹೆಸರು ಪಂಪ. ಭೂಮಂಡಲಕ್ಕೆ ದೇವತೆ ಎನ್ನುವಂತಿರುವವನು, ಚತುರಂಗಬಲಕ್ಕೆ ಭಯ ಹುಟ್ಟಿಸುವವನು. ಯಾವುದಕ್ಕೂ ನಡುಕ ಇಲ್ಲದವನು. ಸುಂದರ ಅಲಂಕಾರದವನು. ಮನ್ಮಥರೂಪಿ, ಪಾಪಕಾರ್ಯಗಳಿಂದ ದೂರ ಇರುವ ಸಜ್ಜನನು (ಪದ್ಯ ೪೯). ಕವಿಯೆಂಬ ಪ್ರಖ್ಯಾತಿ, ತನ್ನ ಒಡೆಯನಾದ ಅರಿಕೇಸರಿಯ ಯುದ್ಧಗಳಲ್ಲಿ ತಾನು ಶತ್ರುನಾಯಕರನ್ನು ಕ್ಷಿಪ್ರದಲ್ಲಿ ಮುಗಿಸಿ ಜೋಳದಪಾಳಿ(ಅನ್ನದ ಋಣ) ಯನ್ನು ಮೆರೆದ ಪ್ರಖ್ಯಾತಿ- ಇವು ಕವಿತಾಗುಣಾರ್ಣವನನ್ನು ಉತ್ತಮ ಕಲಿ ಎಂದೂ ಕವಿ ಎಂದೂ ಎಲ್ಲೆಡೆಯಲ್ಲೂ ಅಭಿಮಾನದಿಂದ ನೋಡುವಂತೆ ಮಾಡಿವೆ (ಪದ್ಯ ೫೦). ಇಂಥವನನ್ನು 'ಗುಣಾರ್ಣವ' ಎಂಬ ಬಿರುದಿನ ಅರಿಕೇಸರಿ ದೊರೆ ಪ್ರೀತಿಯಿಂದ ಕರೆಸಿಕೊಂಡು, ಅನೇಕ ಕೊಡುಗೆಗಳನ್ನು ನೀಡಿ, "ನನ್ನ ಖ್ಯಾತಿಯನ್ನು ಲೋಕದಲ್ಲಿ ಶಾಶ್ವತಗೊಳಿಸುವಂತೆ ಈಕಥೆಯನ್ನು ರಚಿಸಿ ಲೋಕಾರ್ಪಣೆ ಮಾಡು" ಎಂದು ಕೇಳಿಕೊಂಡನು (ಪದ್ಯ ೫೧). ಅದರಂತೆ, ಕೇಳಲು ಕಿವಿಗೆ ಹಿತವೆನಿಸುವಂತೆ, ಹಿಂದಿನ ಮಹಾಕವಿಗಳ ಮಾರ್ಗದಲ್ಲಿ, ಒಂದು ವರ್ಷದೊಳಗೆ ಈ ಕೆಲಸ ಪೂರೈಸಲು ಪ್ರಯತ್ನಿಸಿದ್ದೇನೆ (ಪದ್ಯ ೫೨). ಹಾಗೇ ಮಹಾಭಾರತದ ಯಾವೊಂದು ಒಳಕಥೆಗೂ ಕುಂದಾಗದಂತೆ ಹೇಳಿದ್ದೇನೆ (ಪದ್ಯ ೫೨ರ ಅನಂತರದ ವಚನ).

"ಯಾವ ರಾಜರೂ ಹೀಗೆ ಕಾವ್ಯ ಬರೆಸಿಲ್ಲ; ಯಾವ ಕವಿಯೂ ಹೀಗೆ ಕಾವ್ಯ ಬರೆದಿಲ್ಲ; ಎಲ್ಲ ಕಾಲಕ್ಕೂ ಕೀರ್ತಿ ಸ್ಥಾಯಿಯಾಗಿ ನಿಲ್ಲುವಂತೆ ಕಾವ್ಯ ಬರೆಯುವುದಾದರೆ ಪಂಪ ಮಾತ್ರ ಬರೆಯಬಲ್ಲ"- ಎಂದು ಎಲ್ಲ ಕವಿಗಳು ಸೇರಿ ನನ್ನನ್ನು ಉತ್ತೇಜಿಸಿದರು (ಪದ್ಯ ೫೩). ದೊರೆಯ ಮತ್ತು ಆ ಕವಿಗಳೆಲ್ಲರ ಒತ್ತಾಸೆಯಂತೆ, ಗುಣಾರ್ಣವನ ಕೀರ್ತಿ ಜಗತ್ತಿನಲ್ಲಿ ಅಮರವಾಗಿ ನಿಲ್ಲುವಂತೆ, ಕವಿತಾಗುಣಾರ್ಣವನು ಈ ಕೃತಿಯನ್ನು ರಚಿಸಿದ್ದಾನೆ (ಪದ್ಯ ೫೪). ಕವಿತಾಗುಣಾರ್ಣವನಿಗೆ ನಿತ್ಯವೂ ತೊಡಲು ಆಭರಣಗಳು ಪಂಚರತ್ನಗಳನ್ನು, ಹೊರಗೆ ಪ್ರಯಾಣ ಹೋಗುವಾಗ ತಾನು ಉಡುವ ರೀತಿಯ ಶ್ರೇಷ್ಠ ದರ್ಜೆಯ ವಸ್ತ್ರಾದಿಗಳನ್ನು ಕೊಡುತ್ತಿದ್ದವನು; ಕಂಡಾಗ ಅಕ್ಕರೆಯಿಂದ ತನ್ನ ಹತ್ತಿರದಲ್ಲೇ ದೊಡ್ಡ ಆಸನವನ್ನು ನೀಡುತ್ತಿದ್ದವನು ಗುಣಾರ್ಣವ ದೊರೆ. ಅಷ್ಟೇ ಅಲ್ಲ, ನನ್ನ ಸ್ವಂತ ವೆಚ್ಚಕ್ಕೆಂದು ಗ್ರಾಮದಾನ, ಹಾಲುಹೈನಕ್ಕಾಗಿ ಹಸುಗಳು, ಕೆಲಸಕ್ಕೆ ಹೆಣ್ಣಾಳುಗಳು- ಇವನ್ನು ಯಥೇಚ್ಛವಾಗಿ ನೀಡಿ, ದೂರದಲ್ಲಿರುವ ಚಕ್ರವರ್ತಿಯಾದ ರಾಷ್ಟ್ರಕೂಟ ವಂಶದ ಬಲ್ಲಹನಿಗೂ ಈಯೆಲ್ಲ ಸಂಗತಿ ತಿಳಿಯುವಂತೆ ಕೊಂಡಾಡಿರುವನು (ಪದ್ಯ ೫೪).

ಶೌರ್ಯ, ಶಕ್ತಿ, ಭಾಷೆಗೆ ತಪ್ಪದ ನಡೆ, ದಾನ, ಇವುಗಳಿಗೆ ಪ್ರತಿಯಾಗಿ ಗುಣಾರ್ಣವನು ಕವಿತಾಗುಣಾರ್ಣವನಿಗೆ ಒಂದು ಅಗ್ರಹಾರವನ್ನೇ ಪಾರಿತೋಷಕವಾಗಿ ನೀಡಿದ್ದಾನೆ (ಪದ್ಯ ೫೫). ಅದು ಸಬ್ಬಿಸಾಸಿರ ಎಂಬ ನಾಡಿನಲ್ಲಿ,

ಅರಿಗ ದೊರೆಯ ಧರ್ಮ ಭಂಡಾರದಂತೆ 'ಧರ್ಮಪುರ' ಎಂಬ ಹೆಸರಿನಿಂದ ಕಂಗೊಳಿಸುತ್ತಿದೆ (ಪದ್ಯ ೫೬). ಆ ಧರ್ಮಪುರವು- ದಿಕ್ಕುದಿಕ್ಕುಗಳಲ್ಲಿ ಯಜ್ಞದ ಹೊಗೆಯಿಂದ, ಬ್ರಾಹ್ಮಣರ ಹೋಮದಿಂದ, ಕೆರೆಗಳಲ್ಲಿ ಹಂಸ ಚಕ್ರವಾಕ ಸಾರಸ ಪಕ್ಷಿಗಳ ಹಿತವಾದ ಕಲರವದಿಂದ, ವೇದಘೋಷದ ನಿನಾದದಿಂದ, ಎಲ್ಲೆಡೆಯೂ ಕಂಗೊಳಿಸುತ್ತ, ದೇವತೆಗಳು ಕಡೆದ ಸಮುದ್ರದ ನೀರಿನ ಘೋಷದ ಹಾಗೆ- ಸದಾ ಶಬ್ದಮಯವಾಗಿ ಕಾಣುತ್ತಿದೆ (ಪದ್ಯ ೫೭).

ಪುಲಿಗೆರೆಯ (ಈಗಿನ ಲಕ್ಷ್ಮೇಶ್ವರದ) ಸಹಜವಾದ ತಿರುಳ್ಗನ್ನಡ ಭಾಷೆಯ ರೀತಿ, ಪ್ರಯೋಗ, ಶಕ್ತಿಗಳಿಂದ ಕೂಡಿದೆ, ಪಂಪನ ಈ ಕಾವ್ಯ (ಪದ್ಯ ೫೮). ತುಂಬಿದ ಯಶಸ್ಸು, ತುಂಬಿದ ಚಲ, ತುಂಬಿದ ಅಲಂಕಾರಗಳು, ತುಂಬಿದ ದೇಸಿ ಇವೆಲ್ಲ ಇರುವ ವಸ್ತುಕ ಎಂಬ ವಿಧಕ್ಕೆ ಸೇರಿದ ನನ್ನ 'ಸಮಸ್ತ ಭಾರತ' ಮತ್ತು 'ಆದಿಪುರಾಣ' ಎಂಬ ಕಾವ್ಯಗಳು ಈ ಮೊದಲಿನ ಕಾವ್ಯಗಳನ್ನೆಲ್ಲ ಇಕ್ಕಿಮೆಟ್ಟಿದುವು (ಪದ್ಯ ೫೯). ಇಲ್ಲಿ (ಸಮಸ್ತ ಭಾರತದಲ್ಲಿ) 'ಲೌಕಿಕ'ವನ್ನೂ ಅಲ್ಲಿ (ಆದಿಪುರಾಣದಲ್ಲಿ) 'ಜಿನಾಗಮ'ವನ್ನೂ ಬೆಳಗಿದ್ದೇನೆ. ಇವನ್ನು ರಚಿಸಲು ಶಪಥಮಾಡಿ, ಶಪಥಮಾಡಿದ ಹಾಗೆಯೆ- ಆರು ತಿಂಗಳಲ್ಲಿ ಒಂದು, ಮೂರು ತಿಂಗಳಲ್ಲಿ ಇನ್ನೊಂದು- ಹೀಗೆ ಸಮಾಪ್ತಿಗೊಳಿಸಿದ್ದಾನೆ, ಈ ಕವಿತಾ ಗುಣಾರ್ಣವ (ಪದ್ಯ ೬೦). ಸರಸ್ವತೀ ದೇವಿಗೂ ಹೊಸದೆನ್ನುವ ರೀತಿಯಲ್ಲಿ ಉಕ್ತಿಚಾತುರ್ಯವನ್ನು ಕವಿ ಪಂಪನು ಇವುಗಳಲ್ಲಿ ಸಾಧಿಸಿದ್ದಾನೆ (ಪದ್ಯ ೬೧). ಸತ್ಕವಿಯಾದ ವ್ಯಾಸನಿಂದ ವಿಶೇಷವಾಗಿ ರಚಿಸಲ್ಪಟ್ಟ ಕೃತಿಯನ್ನೂ ಆದಿಪುರಾಣವನ್ನೂ ರಚಿಸಿ ಕವಿತಾಗುಣಾರ್ಣವನು 'ನಾಡೊವಜ' ಎಂದೇ ಖ್ಯಾತನಾಗಿದ್ದಾನೆ (ಪದ್ಯ ೬೨).

'ಆದಿಪುರಾಣ'ದಲ್ಲಿ : ಈಮೇಲಿನಂತೆ ಕವಿ ಪಂಪನು ತನ್ನ ಮನೆತನದ ಬಗ್ಗೆ ಮತ್ತು ತನ್ನ ಬಗ್ಗೆ 'ವಿಕ್ರಮಾರ್ಜುನವಿಜಯ'ದಲ್ಲಿ ಹೇಳಿಕೊಂಡಿದ್ದರೆ, 'ಆದಿಪುರಾಣ'ದಲ್ಲಿ ೧ನೇ ಆಶ್ವಾಸದಲ್ಲಿ ಕೊಟ್ಟಿರುವ ವಿವರಣೆ ಈಮೇಲಿನ ವಿವರಕ್ಕೆ ಪೂರಕವಾಗಿ ಹೀಗಿದೆ: ತನ್ನ ಗುರು, ದೇವೇಂದ್ರಮುನೀಂದ್ರ ಎಂಬುದನ್ನು ಅವನು ಸೂಚಿಸಿದಂತಿದೆ (ಪದ್ಯ ೧). ಈ ದೇವೇಂದ್ರಮುನಿ ಶ್ರವಣಬೆಳಗೊಳದ ಶಾಸನಗಳಲ್ಲಿರುವ ಸಮಕಾಲೀನನಾದ ಗುರುವಾದ ದೇವೇಂದ್ರಮುನಿಯೇ ಇರಬೇಕು ಎಂಬುದು ವಿದ್ವಾಂಸರ ಮತ. ಜೈನಧರ್ಮದ ಬಗೆಗಿನ ಅವನ ಗೌರವ ಶ್ರದ್ಧೆ ಅನನ್ಯ ವಿಶ್ವಾಸ- ಇವನ್ನು ಕವಿ ಅನೇಕ ಪದ್ಯಗಳಲ್ಲಿ ಪ್ರಕಟಿಸಿದ್ದಾನೆ.

'ಸುಕವಿಜನಮನೋಮಾನಸೋತ್ತಂಸ ಹಂಸ' (ಪದ್ಯ ೨೬), 'ಕವಿತಾಗುಣಾರ್ಣವ' (ಪದ್ಯ ೨೭), 'ಸಂಸಾರಸಾರೋದಯ', 'ಸರಸ್ವತೀಮಣಿಹಾರ' (ಪದ್ಯ ೨೮)- ಎಂಬ ಅವನ ಬಿರುದುಗಳ ಅರ್ಥ ಔಚಿತ್ಯಗಳ ಬಗ್ಗೆ ಹೇಳುತ್ತಾ ತನ್ನ ಸ್ವಂತದ ಅನೇಕ ವಿವರಗಳನ್ನು ನೀಡಿದ್ದಾನೆ: ತನ್ನದು- ಬಾಳೆಯ

ಹೂವಿನದರಂತಹ ಶ್ಯಾಮಲ ವರ್ಣ, ತಲೆಗೂದಲು ಗುಂಗುರುಗುಂಗುರಾದವು, ಕಮಲದಂತಹ (ಗುಂಡಗಿನ) ಮುಖ, ಎತ್ತರವೂ ಅಲ್ಲದ ಕುಳ್ಳೂ ಅಲ್ಲದ ಅಥವಾ ದಪ್ಪವೂ ಅಲ್ಲದ ಸಪೂರವೂ ಅಲ್ಲದ ಮೈಕಟ್ಟು, ಹಿತಮಿತಮೃದು ಮಾತು, ಲಲಿತ ಸುಂದರ ಮಧುರ ವೇಷಭೂಷಣ (ಪದ್ಯ ೨೯). ಹಾಗೆಯೇ ತಾನು ವತ್ಸಕುಲ ಶ್ರೇಷ್ಠ, ಉತ್ತಮರಿಗೆ ಪ್ರೀತಿಪಾತ್ರ, ಅಭಿಮಾನಮೂರ್ತಿ, ಒಳ್ಳೆಯ ಕವಿಗಳ ಬಗ್ಗೆ ಮತ್ಸರವಿಲ್ಲದವನು, ಅಮೃತಮಯವಾದ ಮಾತು, ಶರತ್ಕಾಲದ ಚಂದ್ರನ ಬೆಳಕಿನಂತಹ ಕೀರ್ತಿ ಹೊಂದಿದವನು (ಪದ್ಯ ೩೦).

ಇವನು, ಸ್ತ್ರೀಯರ ಕಡೆಗಣ್ಣನೋಟವೆಂಬ ನೈದಿಲೆಯ ಸರೋವರದ ನೀರು ಉಬ್ಬುವಂತೆ ಮಾಡುವ ಚಂದ್ರ, ಯುವತಿಯರ ಸೊಂಟದ ಡಾಬಿನ ರತ್ನ, ತುಂಬುಮೊಲೆಗಳ ಭಾರದಿಂದ ಬಾಗಿರುವ ಗಣಿಕಾಸ್ತ್ರೀಯರ ಆ ಮೊಲೆಗಳ ಮೇಲೆ ಸರಿದಾಡುವ ಹಾರ (ಪದ್ಯ ೩೧); ಕೇರಳದ ಸುಂದರಿಯ ಸೊಂಟದ ಸೂತ್ರದ ಕೆಂಪುಮಣಿ, ಮಲಯಯುವತಿ ಮುಖ ನೋಡಿಕೊಳ್ಳುವ ಕನ್ನಡಿ, ಆಂಧ್ರಿಯರ ಇನ್ನೂ ರಂಧ್ರ ಆಗಿಲ್ಲದಿರುವ ತುಂಬುಮೊಲೆಗಳ ಮೇಲೆ ಸರಿದಾಡುವ ಹಾರ (ಪದ್ಯ ೩೨); ದುಂದುಭಿಯಂತಹ ಗಂಭೀರ ಶಬ್ದದವನು, ದುಂದುಭಿ ಸಂವತ್ಸರದಲ್ಲಿ ಜನಿಸಿದವನು, ಎಲ್ಲರಿಗೂ ಕೇಳಿಸುವಂತಹ ಯಶಸ್ಸಿನ ದುಂದುಭಿಯನ್ನು ಉಳ್ಳವನು, ಸಿಂಹಾಸನ ಸುರದುಂದುಭಿಯ ಒಡೆಯನಾದ ಜಿನನ ಪಾದಕಮಲದ ದುಂಬಿ, ಈ ಪಂಪ (ಪದ್ಯ ೩೩)– ಹೀಗೆಲ್ಲ ಪ್ರಾಜ್ಞರು ಮತ್ತು ಪಂಡಿತರು ತಮ್ಮ ತಮ್ಮ ಪ್ರೀತಿಯಂತೆ ಹೆಸರಿಟ್ಟು ನನ್ನನ್ನು ಕರೆಯುತ್ತಿದ್ದವರು– "ನೀನು ಈ ಕಾವ್ಯವನ್ನು ರಚಿಸು" ಎಂದು ಹೇಳಿದ್ದರಿಂದ ನಾನು ಇದನ್ನು ರಚಿಸಿ ಹೇಳುತ್ತಿದ್ದೇನೆ. ಇಲ್ಲದಿದ್ದರೆ ಗಣಧರರಂಥವರು ಹೇಳಿರುವ ಚರಿತ್ರೆಯನ್ನು ಹೇಳಲು ನನಗೆಲ್ಲಿ ಶಕ್ತಿ?– ಎನ್ನುತ್ತಾನೆ, ಪಂಪ (ಪದ್ಯ ೩೪).

ಧಾರ್ಮಿಕ ಚರಿತ್ರಾಂಶಗಳು

ಇಷ್ಟಲ್ಲದೆ 'ಆದಿಪುರಾಣ'ದ ೧ನೆಯ ಆಶ್ವಾಸದಲ್ಲಿ, ತನ್ನ ಕಾಲದ ಜೈನ ಧರ್ಮದ ಸ್ವರೂಪವನ್ನು ಅರ್ಥಾತ್ ಬದಲಾಗುತ್ತಿದ್ದ ಕೆಲವು ಅಂಶಗಳನ್ನು ಅವನು ತನ್ನ ಕಾವ್ಯದಲ್ಲಿ ಸೂಚಿಸಿರುವಂತೆ, ಜೈನ ದೇವತೆಗಳಿಗೆ ಗುರುಗಳ ಚರಿತ್ರೆಗೆ ಪೂರಕವೆನಿಸುವ ಅನೇಕ ಸಂಗತಿಗಳನ್ನು ಸಹ ಅವನು ಹೇಳಿದ್ದಾನೆ. ಗರುಡ ವಾಹನೆಯಾದ ಚಕ್ರೇಶ್ವರಿದೇವಿ (ಪದ್ಯ ೭), ವೃಷಭವಾಹನನಾದ ವೃಷಭಯಕ್ಷ (ಪದ್ಯ ೮), ಸರಸ್ವತೀದೇವಿ (ಪದ್ಯ ೯), ಶ್ರುತಸ್ಕಂದ (ಪದ್ಯ ೧೦) ಇಂಥ ದೇವತೆ ಇತ್ಯಾದಿಯರನ್ನು ಅವನು ಉಲ್ಲೇಖಿಸಿದ್ದಾನೆ. ಸಮಂತಭದ್ರ ಸ್ವಾಮಿ, ಕವಿಪರಮೇಷ್ಠಿ ಸ್ವಾಮಿ, ಪೂಜ್ಯಪಾದ ಸ್ವಾಮಿ (ಪದ್ಯ ೧೧); ಗೃಧ್ರಪಿಂಛಾಚಾರ್ಯ, ಜಟಾಚಾರ್ಯ, ಶ್ರುತಕೀರ್ತಿ ಆಚಾರ್ಯ (ಪದ್ಯ ೧೨), ಕೊಂಡಕುಂದ ಆಚಾರ್ಯ (ಪದ್ಯ ೧೪);

ಮಲಧಾರಿ ಸಿದ್ಧಾಂತಮುನಿ, ದೇವೇಂದ್ರಮುನಿ, ಜಯನಂದಿಮುನಿ (ಪದ್ಯ ೧೩)- ಇವರನ್ನೆಲ್ಲ ತುಂಬುಗೌರವದಿಂದ ಸ್ಮರಿಸಿಕೊಂಡಿದ್ದಾನೆ. ಈ ವಿವರಗಳಿಂದ ಆ ಕಾಲಕ್ಕೆ ಜೈನಧರ್ಮದ ಪರಂಪರೆಯಲ್ಲಿ ಯಾರಾರೆಲ್ಲ ಅಸಾಧಾರಣ ಚೇತನರು ಪ್ರಭಾವಶಾಲಿಗಳು ಆಗಿಹೋಗಿದ್ದರು, ಯಾವ ಯಾವ ಯಕ್ಷ-ಯಕ್ಷಿಯರ ಆರಾಧನೆ ಪ್ರಾಚುರ್ಯ ಪಡೆದಿತ್ತು ಇತ್ಯಾದಿಯಾದ ಒಂದು ಸ್ಥೂಲ ಚರಿತ್ರೆ ನಮಗೆ ಸಿಕ್ಕುತ್ತದೆ. ಹಿರಿಯ ಗುರುಗಳನ್ನು ಮುನಿಗಳನ್ನು ಆಚಾರ್ಯರನ್ನು ಸ್ಮರಣೆ ಮಾಡಿಕೊಳ್ಳುತ್ತ, ಆತನು ಅತ್ಯಂತ ಅಂತಃಕರಣದಿಂದ ಹೇಳಿರುವ ಒಂದು ಮಾತು ನಮ್ಮ ಮನಸ್ಸನ್ನು ತಟ್ಟುತ್ತದೆ: "ಕಲಿಸಿದ್ದನ್ನು ಮಾತ್ರ ಪುನರುಚ್ಚರಿಸುವ ಗಿಳಿಯಂತೆ, ಮುನಿಜನರು ನನಗೆ ಏನನ್ನು ನುಡಿಯಲು ಕಲಿಸಿದ್ದಾರೋ ಅದನ್ನು ಮಾತ್ರ ನುಡಿಯುವ ಕೊಂಡಕುಂದ (ಆಚಾರ್ಯ) ಅನ್ವಯವೆಂಬ ನಂದನವನದ ಗಿಳಿ ನಾನು- ಹೀಗೆಂದು ಎಲ್ಲ ಮುನಿಸಮೂಹ ನನಗೆ ಒಂದಿಷ್ಟು ಅನುಗ್ರಹತೋರಲಿ" (ಪದ್ಯ ೧೪)- ಎಂಬ ನುಡಿಯಂತೂ ಪಂಪನ ಧಾರ್ಮಿಕ ವಿನಯ ಸುಸಂಸ್ಕೃತತೆಗೆ ಸಾಕ್ಷಿಯಾಗುತ್ತದೆ.

ಉಪಸಂಹಾರ

'ವಿಕ್ರಮಾರ್ಜುನ ವಿಜಯ' ಮತ್ತು 'ಆದಿಪುರಾಣ' ಈ ಎರಡೂ ಮಹಾಕಾವ್ಯಗಳ ನಿರೂಪಣೆಯ ಮಹಾವಿಸ್ತಾರದ ಕಾರ್ಯದಲ್ಲಿ, ತನ್ನ ಆಶ್ರಯದಾತ ಸಾಮಂತ ದೊರೆ ಅರಿಕೇಸರಿಯ ಮನೆತನದ ಬಗ್ಗೆ, ತನ್ನ ಮನೆತನದ ಬಗ್ಗೆ ಮತ್ತು ತನ್ನ ಬಗ್ಗೆ, ಜೈನ ಘನಪರಂಪರೆಯ ಬಗ್ಗೆ ಒಂದಷ್ಟು ವಿವರಗಳನ್ನು ಹೇಳಲು ಮಹಾಕವಿ ಪಂಪ ಅವಕಾಶ ಮಾಡಿಕೊಂಡಿರುವುದು ಸಾಧಾರಣ ಸಂಗತಿಯಲ್ಲ. ಅವನು ಹೇಳಿರುವ ರಾಜವಂಶದ ಚರಿತ್ರೆಯ ಅಂಶಗಳ ಬಗ್ಗೆ ಇತಿಹಾಸ ವಿದ್ವಾಂಸರು ಮಾಡಿರುವ ವಿಮರ್ಶೆಯ ಬಗ್ಗೆ ಇಲ್ಲಿ ವಿವೇಚಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. (ಆ ವಿಮರ್ಶಾ-ಅಧ್ಯಯನ ಇನ್ನೊಂದು ಲೇಖನದ ವಸ್ತುವಾಗುವಂಥದು). ಅವನು ಆ ಅಂಶಗಳನ್ನು ಹೇಗೆ ನಿರೂಪಿಸಿದ್ದಾನೆ, ಆ ಅಂಶಗಳು ಚರಿತ್ರೆಗೆ ಪೂರಕವಾಗುವ ಎಂತಹ ಅಂಶಗಳಾಗಿವೆ ಎಂಬುದನ್ನು ಮಾತ್ರ ಇಲ್ಲಿ ಸಂಗ್ರಹವಾಗಿ ತೋರಿಸಲಾಗಿದೆ. ಕನ್ನಡದ ಎಷ್ಟೋ ಕವಿಗಳು ತಮ್ಮ ಪರಿಚಯ ಇರಲಿ, ತಮ್ಮ ಹೆಸರು ಕೂಡಾ ಹೇಳದೆ ಹೋಗಿದ್ದಾರೆ. ಅಂಥಾದ್ದರಲ್ಲಿ ಪಂಪಕವಿ ಈ ಮೇಲೆ ಹೇಳಿದ ಅನೇಕ ಅಂಶಗಳ ಬಗ್ಗೆ ಹೇಳಿರುವುದು ಅವನು ಎಷ್ಟೊಂದು ಜಾಗೃತ ಮನಸ್ಕನಾಗಿದ್ದ ಅರ್ಥಾತ್ ಪ್ರಜ್ಞಾವಂತಿಕೆಯನ್ನು ಹೊಂದಿದ್ದ ಎಂಬುದನ್ನು ಶ್ರುತಪಡಿಸುತ್ತದೆ. "ನನ್ನ ಕಾವ್ಯಗಳಲ್ಲಿ ಕಾವ್ಯಧರ್ಮ ಮತ್ತು ಧರ್ಮಗಳನ್ನು ಹೇಳಿದ್ದೇನೆ; ಅವುಗಳಲ್ಲಿ ಭಾರತದ ರೂಪಾಂತರ ಕಾವ್ಯವು ಲೌಕಿಕವನ್ನು ಹೇಳಿದರೆ, ಆದಿಪುರಾಣವು ಆಗಮಿಕವನ್ನು ಹೇಳುತ್ತದೆ"- ಎಂದು ತನ್ನ, ಅಷ್ಟೇ ಏಕೆ, ತನ್ನ ಕಾಲದ ಅಥವಾ ಅವನು ಸ್ಥಾಪಿಸಿದ ಮಾರ್ಗದ

ಕಾವ್ಯಗಳನ್ನು ಯಾವ ದೃಷ್ಟಿಯಿಂದ ನೋಡಬೇಕು ಎಂಬ ಬಗ್ಗೆ- ಓದುಗರಿಗೆ ಆ ದೃಷ್ಟಿ ಪ್ರಿಯ ಎನಿಸಲಿ, ಎನಿಸದಿರಲಿ- ಗೆರೆಕೊರೆದಂತೆ ಹೇಳುವ ಅವನ ವಿಮರ್ಶಾಪ್ರಜ್ಞೆ ನಮ್ಮನ್ನು ತಲೆದೂಗುವಂತೆ ಮಾಡುತ್ತದೆ. ಅದಕ್ಕೆಲ್ಲ ಅವನು ಒಂದು ಶ್ರೇಷ್ಠ ಮಾದರಿ ಇರುವಂತೆ, ಚಾರಿತ್ರಿಕ ಅಂಶಗಳನ್ನು ಹೇಳುವ ವಿಷಯದಲ್ಲಿ ಕೂಡಾ ಅವನು ಶ್ರೇಷ್ಠ ಮಾದರಿಯೇ ಎನಿಸಿದ್ದಾನೆ.

ಪರಾಮರ್ಶನ ಸಾಹಿತ್ಯ

೧) ಆದಿಪುರಾಣಂ – ಸಂ: ಎಸ್.ಜಿ. ನರಸಿಂಹಾಚಾರ್ಯ

೨) ವಿಕ್ರಮಾರ್ಜುನ ವಿಜಯಂ – ಸಂ: ಬೆಳ್ಳಾವೆ ವೆಂಕಟನಾರಾಯಣಪ್ಪ, ಮೈ.ವಿ.ವಿ., ಮೈಸೂರು.

೩) ಕನ್ನಡ ಸಾಹಿತ್ಯ ಚರಿತ್ರೆ – ಸಂಪುಟ ೩, ಸಂ: ಡಾ. ಹಾ.ಮಾ.ನಾ ಮತ್ತು ಡಾ. ಟಿ.ವಿ.ವಿ., ಮೈ.ವಿ.ವಿ.

೪) ಪಂಪ: ಒಂದು ಅಧ್ಯಯನ – ಸಂ: ಡಾ. ಜಿ.ಎಸ್. ಶಿವರುದ್ರಪ್ಪ, ಬೆಂ.ವಿ.ವಿ., ಬೆಂಗಳೂರು.

◈◈◈◈◈

ಶಾಸನೋಕ್ತ ಬಿರುದಾವಳಿಗಳು

◈

ಡಾ ಕೆ. ಆರ್.ಗಣೇಶ

ಕರ್ನಾಟಕದ ಶಾಸನಗಳಲ್ಲಿ ದಾನ ನೀಡಿದ ಕಾಲದಲ್ಲಿ ಆಳ್ವಿಕೆ ನಡೆಸುತ್ತಿದ್ದ ದೊರೆಯನ್ನು ಉಲ್ಲೇಖಿಸುವ ಸಂದರ್ಭದಲ್ಲಿ ಸ್ವಸ್ತಿ ಸಮಧಿಗತ ಎಂದು ಆರಂಭ ಮಾಡಿ, ಆ ದೊರೆಯ ಬಿರುದಾವಳಿಗಳನ್ನು ಹೇಳುವ ಕ್ರಮ ಕಂಡು ಬರುತ್ತದೆ.

ಬಾದಾಮಿ ಚಾಲುಕ್ಯರ ಸತ್ಯಾಶ್ರಯ, ಪರಮೇಶ್ವರ ಬಿರುದುಗಳು ರಾಷ್ಟ್ರಕೂಟರ ಅಮೋಘವರ್ಷ, ಅಕಾಲವರ್ಷ, ನೃಪತುಂಗ, ಶುಭತುಂಗ, ಕಚ್ಚೆಗ, ಮೊದಲಾದ ಬಿರುದುಗಳು.

ಕಲ್ಯಾಣದ ಚಾಲುಕ್ಯರ ಆಹವಮಲ್ಲ, ಇರಿವಬೆಡಂಗ, ಭುವನೈಕಮಲ್ಲ, ತ್ರಿಭುವನಮಲ್ಲ, ತ್ರೈಲೋಕ್ಯಮಲ್ಲ, ಜಗದೇಕಮಲ್ಲ, ಮೊದಲಾದ ಬಿರುದುಗಳು.

ಹೊಯ್ಸಳರು ಬಳಸಿಕೊಂಡ ಶನಿವಾರಸಿದ್ಧಿ ಬಿರುದು.

ರಟ್ಟರ ಶಂಕರಗಂಡರಸನ ಜಯಧೀರ, ಭುವನೈಕರಾಮ, ಬಿರುದುಗಳು.

ಅರಿಕೇಸರಿಯ ಗುಣಾರ್ಣವ ಎಂಬ ಬಿರುದು.

– ಇವು ಗಮನಾರ್ಹವಾಗಿವೆ.

ರಾಣಿಯರಿಗೆ ಸಂಬಂಧಿಸಿದಂತೆ ಶಾಂತಲೆಯ ಸವತಿಗಂಧವಾರಣ, ಅತ್ತಿಮಬ್ಬೆಯ ದಾನಚಿಂತಾಮಣಿ, ಕವಿವರ ಕಾಮಧೇನು, ಕಟಕ ಪವಿತ್ರೆ – ಮೊದಲಾದ ಬಿರುದುಗಳಿಗೆ ತಮ್ಮದೇ ಆದ ಕಥಾನಕಗಳ ಕಲ್ಪನೆಗಳನ್ನು ವಿದ್ವಾಂಸರು

ನಡೆಸಿದ್ದಾರೆ. ಸಾಹಿತ್ಯ ಕೃತಿಗಳಲ್ಲಿ ಕವಿಗಳು ಹೇಳಿಕೊಳ್ಳುವ ಬಿರುದುಗಳ ಕಡೆಗೂ ಗಮನ ಹರಿಸಬಹುದು.

ಪ್ರಸ್ತುತ ಕೆಲವನ್ನು ಮಾತ್ರ ಇಲ್ಲಿ ಪರಿಶೀಲಿಸಿದ್ದೇನೆ.

ಭುವನೈಕ ರಾಮ

ಕ್ರಿ.ಶ. ೯೩೯-೯೬೭ರಲ್ಲಿ ರಾಷ್ಟ್ರಕೂಟ ಚಕ್ರವರ್ತಿಯಾಗಿದ್ದ ಕೃಷ್ಣ-ಖಖಖ. ತಮಿಳುನಾಡಿನ ವೆಲ್ಲೂರು ಜಿಲ್ಲೆಯ ವಲಝು ತಾಲೂಕಿನ ತಿರುಮಲೈಚ್ಚೇರಿಯಲ್ಲಿ ಹಾಳಾಗಿರುವ ಈಶ್ವರ ದೇವಾಲಯವೊಂದರ ತಳಪಾಯಕ್ಕೆ ಸೇರಿಸಿರುವ ಎರಡು ಚಪ್ಪಡಿ ಕಲ್ಲುಗಳ ಮೇಲೆ ರಾಷ್ಟ್ರಕೂಟರ ಶಕ ೮೭೭ (= ಕ್ರಿ.ಶ. ೯೫೦)ರ ಶಾಸನವೊಂದು ದೊರೆತಿದೆ (ಪೂರ್ತಿ ಪಾಠ ದೊರೆಯುವುದಿಲ್ಲ.). ದೊರೆಯ ಬಿರುದುಗಳನ್ನು ಹೇಳುವಾಗ ಅಕಾಳವರ್ಷ, ಆನೆವೆಡಂಗ, ಭುವನೈಕ ರಾಮ, ಶುಭತುಂಗ ದೇವ, ಶೌಚ ಮಹಾವ್ರತಿ, ಪರಾಂಗನಾ ಪುತ್ರಕ, ಚಲಕೆ ನಲ್ಲಾತ, ಗಂಡ ಮಾರ್ತಾಂಡ, ಎಂಬ ಉಲ್ಲೇಖಗಳಿವೆ. ಇವು ಮೂರನೆಯ ಕೃಷ್ಣನಿಗೆ ಅನ್ವಯಿಸುತ್ತವೆ.

ಪುಷ್ಪದಂತ ಕವಿಯ ಪ್ರಾಕೃತ ಕಾವ್ಯ ತಿಸಟಿ ಮಹಾಪುರಿಸ ಗಣಾಲಂಕಾರದಲ್ಲಿ ಮುಮ್ಮಡಿ ಕೃಷ್ಣನಿಗೆ ಭುವನೈಕ ರಾಮ ಎಂಬ ಬಿರುದನ್ನು ಹೇಳಿದೆ. ಇದನ್ನು ಆಧಾರವಾಗಿಟ್ಟುಕೊಂಡು ಶ್ರೀ ಎಲ್.ಆರ್.ಹೆಗಡೆಯವರು ತನ್ನ ದಕ್ಷಿಣ ದಿಗ್ವಿಜಯದ ಕಥೆಯನ್ನು ರಾಮನ ಕಥೆಯೊಡನೆ ಸೇರಿಸಿ ಪೊನ್ನನಿಂದ ರಾಮಾಯಣ ಬರೆಸಿ ಕೃಷ್ಣರಾಜ, ಆತನಿಗೆ ಕವಿ ಚಕ್ರವರ್ತಿ ಎಂಬ ಬಿರುದನ್ನು ಕೊಟ್ಟು ತೃಪ್ತಿ ಹೊಂದಿರಬೇಕು ಎನ್ನುತ್ತಾರೆ. ಆದರೆ, ಪೊನ್ನ ಕವಿ ಕೊಟ್ಟಿರುವ ಕಾರಣವೇ ಬೇರೆ.

ಭುವನದ ಕನ್ನಡ ಸಕ್ಕದ
ಕವಿಗಳ್ ಸಲೆ ಸಾಲೆ ಸೋಲೆ ಸವಣಂಗಿತ್ತಂ ಶಾಲೆ
ಸವಿವೇಕನುಭಯಕವಿಚ
ಕ್ರವರ್ತಿವೆಸರಂ ನಿಜಾಹಿತೋಷ್ಣಂ ಕೃಷ್ಣಂ

- ಶಾಂತಿ ಪುರಾಣಂ, ೧-೯

ಮುಮ್ಮಡಿ ಕೃಷ್ಣ ನ ಪ್ರಸಿದ್ಧವಾದ ಬಿರುದು ಕಚ್ಚೆಗ. ಕಂಚಿಯನ್ನು ಗೆದ್ದದ್ದರಿಂದ ಧರಿಸಿದ ಬಿರುದು.

ಕರ್ನಾಟಕ ಮತ್ತು ಆಂಧ್ರಪ್ರದೇಶದ ಶಾಸನಗಳಲ್ಲಿ ಸಂಕರಗಂಡ / ಶಂಕರಗಂಡ ಎಂಬ ವ್ಯಕ್ತಿ ಕಾಣಿಸುತ್ತಾನೆ. ಅವನ ಹೆಸರು ಕಾಣಿಸಿಕೊಳ್ಳುವ ಶಾಸನಗಳ ಕಾಲಾನುಕ್ರಮಣಿಕೆ ಹೀಗಿದೆ.

	ಊರು	ತಾಲ್ಲೂಕು	ಜಿಲ್ಲೆ	ಕಾಲ (ಕ್ರಿ.ಶ.)	ದೊರೆ
೧.	ಖಂಡೇ ಬಾಗೂರು	ಹಿರೇಕೆರೂರ್	ಧಾರವಾಡ	೯೨೪	ಇಂದ್ರ–III
೨.	ಲಕ್ಷ್ಮೀಪುರ	ಹಾನಗಲ್	ಧಾರವಾಡ	೯೨೫	ಇಂದ್ರ–III
೩.	ಹಾವಂಗಿ	ಹಾನಗಲ್	ಧಾರವಾಡ	?	ಇಂದ್ರ–III
೪.	ಹಾವಂಗಿ	ಹಾನಗಲ್	ಧಾರವಾಡ	?	ಇಂದ್ರ–III
೫.	ಕ್ಯಾಸನೂರು	ಹಾನಗಲ್	ಧಾರವಾಡ	?	ನಿತ್ಯವರ್ಷ– ಅಮೋಘವರ್ಷ
೬.	ಕ್ಯಾಸನೂರು	ಹಾನಗಲ್	ಧಾರವಾಡ	?	ಕನ್ದರ ವಲ್ಲಭ
೭.	ತಾಳಗುಂದ	ಶಿಕಾರಿಪುರ	ಶಿವಮೊಗ್ಗ	?	ಬನ್ದರ ಬಲ್ಲಹ
೮.	ಉಪ್ಪಿನ ಬೆಟಗೇರಿ	ಕೊಪ್ಪಳ	ರಾಯಚೂರು	೯೬೪	ಕೃಷ್ಣ–III
೯.	ಜಫರ್ ಗಡ್	ವಾರಂಗಲ್	ವಾರಂಗಲ್	?	ನೃಪತುಂಗ ?
೧೦.	ಅಕುನೂರು	ಜನಗಾಂ	ವಾರಂಗಲ್	?	?
೧೧.	ತುಮ್ಮಲಗುಡೆಂ	ಭುವನಗಿರಿ	ನಲ್ಗೊಂಡ	?	ಕೃಷ್ಣ–III
೧೨.	ಕೊಲನುಪಾಕ	ಭುವನಗಿರಿ	ನಲ್ಗೊಂಡ	೧೦೬೭	ತ್ರೈಲೋಕ್ಯಮಲ್ಲ
೧೩.	ಕೊಲನುಪಾಕ	ಭುವನಗಿರಿ	ನಲ್ಗೊಂಡ	೧೦೭೭	ತ್ರಿಭುವನಮಲ್ಲ

ಕ್ರಿ.ಶ. ೯೬೪ರ ಉಪ್ಪಿನ ಬೆಟಗೇರಿ ಶಾಸನದ ಶಂಕರಗಂಡನ ವಂಶಾವಳಿ ಹೀಗಿದೆ:

ಪಾಣರ ರಾಜ → ಶಂಕರಗಂಡ–I → ಬೈತ ರಾಜ → ಶಂಖಪಯ → ಗೊಮ್ಮರಸ → ಅಸಗಮರಸ → ಶಂಕರಗಂಡರಸ–II

ಕ್ರಿ.ಶ. ೯೨೪ರ ಶಂಕರಗಂಡನೇ ಮೊದಲನೆಯ ಶಂಕರಗಂಡರಸ. ಕ್ರಿ.ಶ. ೯೬೪ರಲ್ಲಿರುವವನು ಶಂಕರಗಂಡರಸ– II. ಕೊಳ್ಳಿಪಾಕೆ ೭೦೦೦ ಅನ್ನು ಆಳುತ್ತಿದ್ದ, ಲತ್ತಲೂರು ಪುರವರೇಶ್ವರ, ರಟ್ಟಮಾರ್ತಾಂಡ, ಕೊಳ್ಳಿಪಾಕೆಯ ಗೋವ, ಸಮರ ಜಯಧೀರ, ಮೊದಲಾದ ಬಿರುದಿನ ಮಹಾಮಂಡಳೇಶ್ವರ ಶಂಕರಗಂಡರಸನು

ಮೈಲಾರ ದೇವಲಬ್ದ ವರಪ್ರಸಾದನಾದವನು. ಜೈನರಾದ ಮೊದಲೆರಡು ಶಂಕರಗಂಡರಿಗಿಂತ ಭಿನ್ನನಾದವನು.

ಮೊದಲನೆಯ ಶಂಕರಗಂಡನನ್ನು ಶಾಸನಗಳು ಜಯಧೀರ, ಭುವನೈಕ ರಾಮ, ಅಭಿಮಾನ ಧವಳ, ರಟ್ಟರ ಮೇರು, ಮೊದಲಾದ ಬಿರುದಿನ ಪಂಚಮಹಾಶಬ್ದ ಮಹಾಸಾಮಂತಾಧಿಪತಿ ಶಂಕರಗಂಡರಸ ಎಂದು ಹೇಳುತ್ತವೆ.

ಉಪ್ಪಿನ ಬೆಟಗೇರಿ ಶಾಸನದಲ್ಲಿರುವ ಶಂಕರಗಂಡರಸನ ಬಿರುದನ್ನು ಹೇಳುವ ಭಾಗದಲ್ಲಿ ಭುವನೈಕ ರಾಮನಭಿಮಾನಧವಳಂ ಎಂದಿದೆ. ಇದನ್ನು ಭುವನೈಕ ರಾಮನ್ ಅಭಿಮಾನಧವಳಂ ಎಂದೇ ಓದಿಕೊಳ್ಳಬೇಕು. ಉಳಿದ ಶಾಸನಗಳು ಪ್ರಕಟವಾಗುವವರೆಗೂ ಇದನ್ನು ನಿರ್ಣಯವಾಗಿ ಹೇಳುವಂತಿಲ್ಲ. ಮೂರನೆಯ ಇಂದ್ರನ ಶಾಸನಗಳಲ್ಲೂ ಶಂಕರಗಂಡರಸನಿಗೆ ಭುವನೈಕರಾಮ ಎಂದಿದೆ. ಹೀಗಿರುವಾಗ ಭುವನೈಕರಾಮನಿಗೆ ಅಭಿಮಾನಧವಳನಾಗಿದ್ದವನು ಎಂಬ ಅರ್ಥ ಸರಿಹೊಂದುವುದಿಲ್ಲ. ಕೊಪ್ಪಳದಲ್ಲಿ ಜಯಧೀರ ಜಿನಾಲಯವನ್ನು, ತುಮ್ಮಲಗುಡೆಂನಲ್ಲಿರುವ ಶಿಥಿಲವಾದ ಜಿನಾಲಯವನ್ನು ಕಟ್ಟಿಸಿದವನು ಎರಡನೆಯ ಶಂಕರಗಂಡರಸ.

೨ನೆಯ ನಾಗವರ್ಮನ ಕಾವ್ಯಾವಲೋಕನದ ೬೨೦ನೆಯ ಪದ್ಯ ರಟ್ಟರ ಮೇರುವನ್ನು ಹೊಗಳುತ್ತದೆ.

ಅವಿಹಿತ ವೇಗಮೇಟ್ಟಿಗೆಯ ಜವಂ ವ್ರಣಮಕ್ಷತ ಕಾಯಮೆತ್ತಿ ಕ
ಟ್ಟುವ ಮದಮುಣ್ಮೆ ಸೋರ್ವ ಸೊನೆ ಬೀಳ್ವ ಗಜಧ್ವಜಮಂಬರಕ್ಕೆ ನಿ
ಕ್ಕುವ ಜಯಕೇತು ಸಂದೆಯದೆ ದಂದುಗಮಂ ಕಿಡಿಸಿತ್ತು ಮುಂದಣೋ
ಡುವ ರಿಪುದಂತಿಗಂ ಪೆಱಗಣಟ್ಟುವ ಱಟ್ಟರ ಮೇರು ದಂತಿಗಂ

– ಇದನ್ನು ಭುವನೈಕ ರಾಮಾಭ್ಯುದಯದ ಪದ್ಯವಿರಬಹುದೆನ್ನುತ್ತಾರೆ.

ಅದೇ ಕಾವ್ಯದ ೧೭೩ನೆಯ ಪದ್ಯ ಹೀಗಿದೆ.

ಉದಯಾಸ್ತೋನ್ನತ ಶೈಲಸೇತು ಹಿಮವತ್ಕುಕ್ಷಿಳ ಪರ್ಯಂತ ಸಂ
ಪದೆಯಂ ವಾರ್ಧಿ ತರತ್ತರಂಗ ನಿನದತ್ಕಾಂಚೀ ಕಳಾಪಾಂಚಿತಾ
ಸ್ಪದೆಯಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ
ರ್ಚಿದಂ ಗೆಲ್ಲಂ ಭುವನೈಕರಾಮ ಮಹಿಪಂಗಕ್ಕುಂ ಪೆಱರ್ಗಕ್ಕುಮೇ

ಶ್ರೀ ಎಂ.ಬಿ. ಬೋಯಿ ಅವರು ಕಬ್ಬಿಗಂ ಎಂಬ ಪಾಠಕ್ಕೆ ಕಚ್ಚೆಗ ಎಂಬ ಪಾಠವನ್ನು ಊಹಿಸಿ, ಕಚ್ಚೆಗನಾದ ಮುಮ್ಮಡಿ ಕೃಷ್ಣನಿಗೆ ಭುವನೈಕ ರಾಮನಾದ ಶಂಕರಗಂಡರಸನು ಭೂಮಿಯನ್ನು ಗೆದ್ದುಕೊಟ್ಟನೆಂದು ಅರ್ಥೈಸಿದ್ದಾರೆ.

ಡಾ. ಎಂ.ಆರ್.ಉಮಾದೇವಿ ಅವರು, ವಿಸ್ತಾರವಾದ ರಾಜ್ಯವನ್ನು ಸಾಧಿಸಿ, ಗೆದ್ದು, ಸ್ವಲ್ಪ ನೆಲವನ್ನು ಕಬ್ಬಿಗನಿಗೆ ಕೊಟ್ಟ ಗೆಲವು ಭುವನೈಕ ರಾಮನೆನಿಸಿದ ಕೃಷ್ಣನಿಗಲ್ಲದೆ ಬೇರಾರಿಗೆ ಎಂಬ ಅರ್ಥ ಹೇಳುತ್ತಾರೆ. ಆದರೆ ಸ್ವಲ್ಪ ನೆಲವನ್ನು ಕಬ್ಬಿಗನಿಗೆ ಕೊಟ್ಟ ಎಂಬ ಅರ್ಥ ಪದ್ಯಭಾಗದಲ್ಲಿ ಹೊರಡುವುದಿಲ್ಲ. ಶ್ರೀ ಬೋಯಿ ಅವರ ಊಹಾತ್ಮಕ ಪರಿಷ್ಕರಣಕ್ಕೆ ಲಿಪಿಕಾರ ಸ್ಖಾಲಿತ್ಯದ ಬೆಂಬಲ ಇದೆ. 'ಬ' ಕಾರ, 'ಚ' ಕಾರದ ಗೊಂದಲ ಶಾಸನಶಾಸ್ತ್ರದ ವಿದ್ಯಾರ್ಥಿಗಳಿಗೆ ತಿಳಿದ ವಿಚಾರ.

ರಾಷ್ಟ್ರಕೂಟ ಮೂರನೆಯ ಕೃಷ್ಣನಿಗೆ, ಕೋದಂಡರಾಮ ಎಂಬ ಬಿರುದಿನ ಚೋಳ ರಾಜಾದಿತ್ಯನನ್ನು ಜಯಿಸಿದುದೇ ಆಗಿರಬೇಕೆಂದೂ ಚಲದಂಕರಾಮ, ಕುವರಂಕ ರಾಮ –ಗಳು ಭುವನೈಕ ರಾಮದ ಪರ್ಯಾಯಗಳೆಂದು ದ.ರಾ.ಬೇಂದ್ರೆಯವರು ಅಭಿಪ್ರಾಯ ಪಡುತ್ತಾರೆ.

ಆದ್ದರಿಂದ 'ಭುವನೈಕ ರಾಮ' ಎಂಬ ಬಿರುದು ಶಂಕರಗಂಡರಸರದೇ ಎನ್ನಬೇಕಾಗುತ್ತದೆ.

ರನ್ನಕವಿಯು ಬೂತುಗ, ನೊಳಂಬಾಂತಕ, ಚಾವುಂಡರಾಯ, ದಾನಚಿಂತಾಮಣಿ ಅತ್ತಿಮಬ್ಬೆಯ ಜೊತೆಯಲ್ಲಿ ಶಂಕರಗಂಡನನ್ನು ಸೇರಿಸಿ, 'ದಾನ ಧರ್ಮದೆಡೆಯಲ್ಲಿ ಹಿರಿಯ' ಎಂದು ಹೊಗಳಿದ್ದಾನೆ. ಬ್ರಹ್ಮಶಿವನು ತನ್ನ ಸಮಯ ಪರೀಕ್ಷೆಯಲ್ಲಿ ಪಟ್ಟಣದ ನಡುವೆ ಬೆಳ್ಳಿಯ ಬೆಟ್ಟಂಗಳನಿಟಿಪ ಜೈನ ನಿಳಯಂಗಳನೀ ಸೃಷ್ಟಿಯೊಳೆ ಕೂಡೆ ಮಾಡಿದ ರಟ್ಟಂ ಶಂಖಾವನೀಶನೆನೆ ಪೊಗಳದಾರ್ ಎಂದು ಕೀರ್ತಿಸಿದ್ದಾನೆ.

ಕ್ರಿ.ಶ. ೧೭ನೆಯ ಶತಮಾನದ ಮಾಣಿಕ ಜಿನೇಶ ಚರಿತೆ ಎಂಬ ಭಾಮಿನೀ ಷಟ್ಪದಿಯ ಕಾವ್ಯ, ಶಂಕರಗಂಡನು ಓರಂಗಲ್ಲು ಪಟ್ಟಣವನ್ನು ಆಳುತ್ತಿದ್ದ ವಿಷಯವನ್ನು, ಕೊಲ್ಲಿಪಾಕೆಯಲ್ಲಿ ಮಾಣಿಕ್ಯ ಜಿನ ಬಸದಿಯನ್ನು ಕಟ್ಟಿಸಿದ, ಶಾಸನವನ್ನು ಹಾಕಿಸಿದ ವಿಷಯವನ್ನು ಹೇಳುತ್ತದೆ.

ಪೊನ್ನನ ಭುವನೈಕ ರಾಮಾಭ್ಯುದಯ ಕಾವ್ಯದ ನಾಯಕ ಎರಡನೆಯ ಶಂಕರ ಗಂಡರಸ ಎಂದು ನಿರ್ದಿಷ್ಟವಾಗಿ ಹೇಳಲು ಧಾರವಾಡ ಜಿಲ್ಲೆಯ ಶಾಸನಗಳು ಪ್ರಕಟವಾಗುವುದಕ್ಕೆ ಕಾಯಬೇಕಾಗಿದೆ.

ಸವತಿಗಂಧವಾರಣೆ

ಹೊಯ್ಸಳ ವಿಷ್ಣುವರ್ಧನನ ಪಟ್ಟಮಹಾದೇವಿ ಶಾಂತಲೆ. ಲಕ್ಷ್ಮಾದೇವಿ, ರಾಜಲದೇವಿ, ಬಮ್ಮಲದೇವಿ ಮೊದಲಾದ ಸವತಿಯರ ನಡುವೆ ವಿಷ್ಣುವರ್ಧನನ ಮನೋನಯನಗಳಿಗೆ ಪ್ರಿಯಳಾಗಿದ್ದವಳು.

ಕ್ರಿ.ಶ. ೧೧೩೧ರ ಮಾರ್ಚ್ ೫ ರ ಶ್ರವಣಬೆಳಗೊಳದ ಶಾಸನ ಶಾಂತಲದೇವಿಯು,

ಸಮ್ಯಕ್ತ್ವ ಚೂಡಾಮಣಿಯುಂ ಉದ್ವೃತ್ತ ಸವತಿಗಂಧವಾರಣೆಯುಂ ಆಹಾರ ಅಭಯ ಭೈಷಜ್ಯ ಶಾಸ್ತ್ರ ದಾನವಿನೋದೆಯಂ ಅಪ್ಪ ಶ್ರೀಮತ್ ವಿಷ್ಣುವರ್ಧನ ಪೊಯ್ಸಳದೇವ ಪಿರಿಯರಸಿ ಪಟ್ಟಮಹಾದೇವಿ ಶಾನ್ತಲದೇವಿಯರ್ ಶ್ರೀ ಬೆಳ್ಗೊಳ ತೀರ್ತ್ಥದೊಳ್ ಸವತಿಗಂಧವಾರಣ ಜಿನಾಲಯಮಂ ಮಾಡಿಸಿ ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಅದೇ ಶಾಸನ ಶಾಂತಲೆಯು ಸಿವಗಂಗೆಯ ತೀರ್ಥದಲು ಮುಡಿಪಿ ಸ್ವರ್ಗತೆಯಾದಳು ಎಂದೂ ಹೇಳಿ, ಅನುಪಮ ಸಾನ್ತಲದೇವಿಯುಂ ಅನುನಯದಿಂ ತಂದೆ ಮಾರಸಿಂಗಯ್ಯನುಂ ಇಂಬಿನೆ ಜನನಿ ಮಾಚಿಕಬ್ಬೆಯುಂ ಇನಿಬರುಂ ಒಡನೊಡನೆ ಮುಡಿಪಿ ಸ್ವರ್ಗತರಾದರ್ ಎಂದೂ ದಾಖಲಿಸುತ್ತದೆ.

ಶ್ರವಣ ಬೆಳಗೊಳದ ಇನ್ನೊಂದು ಶಾಸನವು ಶಾಂತಲದೇವಿಯು ಸಕವರ್ಷ ಸಾಸಿರ ೪೦ಯ್ದನೆಯ ಶೋಭಕೃತು ಸಂವತ್ಸರದ ಚೈತ್ರ ಸುದ್ಧ ಪಾಡಿವ ಬ್ರಹಸ್ಪತಿವಾರದಂದು ಶ್ರೀ ಬೆಳ್ಗೊಳದ ತೀರ್ಥದೊಳ್ ಸವತಿಗಂಧವಾರಣ ಜಿನಾಲಯಮಂ ಮಾಡಿಸಿ ದೇವತಾಪೂಜೆಗೆ ರಿಷಿ ಸಮುದಾಯಕ್ಕೆ ಆಹಾರದಾನಕ್ಕೆ ಕಲ್ಕಣಿನಾಡ ಮೊಟ್ಟೆ ನವಿಲೆಯಂ ತಮ್ಮ ಗುರುಗಳ್ ಶ್ರೀ ಮೂಲ ಸಂಘದ ದೇಸಿಗಣದ ಪುಸ್ತಕಗಚ್ಛದ ಶ್ರೀ ಮನ್ಮೇಘಚಂದ್ರ ತ್ರೈವಿದ್ಯದೇವರ ಶಿಷ್ಯರ್ ಪ್ರಭಾಚಂದ್ರ ಸಿದ್ಧಾಂತದೇವರ್ಗೆ ಪಾದಪ್ರಕ್ಷಾಳನಂ ಮಾಡಿ ಸರ್ವಬಾಧಾ ಪರಿಹಾರವಾಗಿ ದತ್ತಿಯನ್ನು ನೀಡಿದ ವಿಚಾರವನ್ನು ತಿಳಿಸುತ್ತದೆ.

ಇನ್ನೊಂದು ಶಾಸನ, ವಿಳಸನ ಕಟ್ಟೆಯನ್ನು ಕೆರೆಯಾಗಿ ಕಟ್ಟಿಸಿ ಸವತಿಗಂಧ ಬಸ್ತಿ ಬಸದಿಗೆ ಆಕೆಯೇ ದಾನ ಕೊಟ್ಟದ್ದನ್ನು ಹೇಳುತ್ತದೆ. (ಕ್ರಿ.ಶ.೧೧೨೩)

ಶಾನ್ತಲದೇವಿಯು ತಾನು ಮಾಡಿಸಿದ ಸವತಿಗನ್ಧವಾರಣ ಬಸದಿಗೆ ವಿಷ್ಣುವರ್ಧನನನ್ನು ಬೇಡಿಕೊಂಡು ಗದ್ದೆಯನ್ನು ದತ್ತಿಯಾಗಿ ನೀಡಿದಳೆಂದು ಇನ್ನೊಂದು ಶಾಸನ ದಾಖಲಿಸುತ್ತದೆ.

ಕ್ರಿ.ಶ. ೧೧೭೬ರಲ್ಲಿ ಆಳುತ್ತಿದ್ದ ವೀರಬಲ್ಲಾಳನ ರಾಣಿ ಕೇತಲದೇವಿಯು ಸವತಿ ಗನ್ಧವಾರಣೆಯರಪ್ಪ ಪಿರಿಯರಸಿ ಕೇತಲದೇವಿ ಎಂದು ಉಲ್ಲೇಖಗೊಂಡಿದ್ದಾಳೆ.

ವೀರ ಬಲ್ಲಾಳನ ಇನ್ನೊಬ್ಬ ರಾಣಿ ಬಮ್ಮಲದೇವಿಗೆ ಉದ್ವೃತ್ತ ಸವತಿ ಗಜಕೇಸರಿ, ಸವತಿಯರ ಬೆಂನ ಸವಟಿಗೆ, ಸವತಿಯರ ಮುಖದರ್ಪಣೆ ಎಂಬ ಬಿರುದುಗಳನ್ನು ಕ್ರಿ.ಶ. ೧೧೮೩ರ ಶಾಸನ ದಾಖಲಿಸುತ್ತದೆ.

ಸವತಿ ಎಂದರೆ ಸಪತ್ನಿ. ಸವತಿ ಗಂಧವಾರಣೆ ಎಂದರೆ ಸವತಿಯರ ಅಹಂಕಾರವನ್ನು ಆನೆಯ ಹಾಗೆ ನಿಯಂತ್ರಿಸುವವಳು - ಹೋಗಲಾಡಿಸುವವಳು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಅರ್ಥ ನೀಡಿದೆ.

ಪಂಪ ಭಾರತದಲ್ಲಿ, ಗುಣಾರ್ಣವನಾದ ಅರಿಕೇಸರಿಯನ್ನು ಕವಿಯು ಅಮ್ಮನ ಗಂಧವಾರಣಂ, ಪಡೆಮೆಚ್ಚೆ ಗಂಡಂ ಎಂದಿದ್ದಾನೆ (೧-೧೪೮ ಪ). ಅದರ ಅರ್ಥ ತಂದೆಯ ಮದ್ದಾನೆ ಎಂದು ರನ್ನನ ಗದಾಯುದ್ಧದಲ್ಲಿ ಡಿಎಲ್‌ಎನ್ ಅವರೂ, ಅಂಕದ ಗಣನಾಯಕಂ ವರದನಕ್ಕೆಮಗೆ ಅಮ್ಮನ ಗಂಧವಾರಣಂ ಎಂದಿದೆ (೧-೧೦). ಅದಕ್ಕೆ ತಂದೆಯ ಮುದ್ದಿನ ಮದ್ದಾನೆಯಾದ ಸತ್ಯಾಶ್ರಯದೇವ ಎಂದು ಪ್ರೊ. ಸುಬ್ರಾಯ ಭಟ್ಟರೂ ಅರ್ಥ ನೀಡಿದ್ದಾರೆ.

ಬೇಲೂರಿನ ಶಾಸನವೊಂದರಲ್ಲಿ ಕ್ರಿ.ಶ.೧೧೬೧, ಈ ನರಸಿಂಹ ಭೂಭುಜಂ ಪರಿಚಿತ ಭದ್ರ ಲಕ್ಷಣದಿನೊಪ್ಪುವ ಬಪ್ಪನ ಗಂಧವಾರಣಂ ಎಂದಿದ್ದರೆ, ತೀರ್ಥಹಳ್ಳಿಯ ಕ್ರಿ.ಶ. ೧೨೫೦ರ ಶಾಸನವೊಂದರಲ್ಲಿ ಗಡಿಯಂಕಮಲ್ಲ ಬೊಪ್ಪನ ಗಂಧವಾರಣಂ ಕಲಿದೇವ ಗೋಪಾಳದೇವರ ದಿಬ್ಯ ಶ್ರೀ ಪಾದಪದ್ಮಾರಾಧಕಂ ಎಂದಿದೆ. (ಪ್ರಾಕೃತದಲ್ಲಿ ಬಪ್ಪ ಅಥವಾ ಸಂಸ್ಕೃತದಲ್ಲಿ ವ್ಯಪ್ತ = ತಂದೆ). ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಅಮ್ಮನ ಗಂಧವಾರಣಕ್ಕೆ, ಅಮ್ಮ೨ = ತಾಯಿ, ಮಾತೆ ಎಂಬ ಅರ್ಥ ಕೊಟ್ಟಿರುವುದಕ್ಕೆ ಸಮರ್ಥನೆ ಇಲ್ಲ.

ಸವತಿ ಗಂಧವಾರಣ ಎಂಬುದರಲ್ಲಿಯೂ ಸವತಿಯರಿಗೆ ಪ್ರೀತಿಯ ಆನೆ ಎಂಬ ಅರ್ಥವನ್ನು ಹೇಳುವುದು ಸೂಕ್ತ. ಇಲ್ಲದಿದ್ದರೆ ಅದನ್ನು ಬೇಲೂರಿನ ಶಾಸನವೊಂದು ವಾಚ್ಯವಾಗಿ ಹೇಳುವಂತೆ, ಶಾಂತಲೆಯು ತನ್ನ ಸವತಿಯರಿಗೆ ಮದಿಸಿದ ಆನೆಯಂತಿದ್ದಳು ಎಂದಂತಾಗುತ್ತದೆ. ಸವತಿಗಂಧವಾರಣೆಯುರಪ್ಪ ಎಂಬುದರಲ್ಲಿರುವ ವಾರಣೆಯನ್ನು ನಿವಾರಣೆ ಎಂಬ ಅರ್ಥದಲ್ಲಿ ತೆಗೆದುಕೊಳ್ಳದೆ ವಾರಣ – ಹಸ್ತಿ ಎಂಬ ಅರ್ಥದಲ್ಲಿಯೇ ಸವತಿಗಂಧ ಹಸ್ತಿ ಬಸದಿ ಎಂದು ಬಂದಿರುವುದನ್ನೂ ಗಮನಿಸಬೇಕು.

ಕ್ರಿ.ಶ.೧೦೭೦ರ ಶಾಸನವೊಂದು ಚಾಲುಕ್ಯರ ರಾಣಿಯರ ಮೈಳಲದೇವಿಗೆ ಸವತಿ ಮದ ಭಂಜಿನಿ ಎಂದು ಕರೆದಿರುವುದೂ. ಕ್ರಿ.ಶ. ೧೦೮೨ರ ಶಾಸನವೊಂದರಲ್ಲಿ, ರಾಯ ಜಗದಳ ಮನೋಜ ರತಿ ಮಚ್ಚರಿಪ ಸವತೀ ಮದ ಭಂಜನೆ ಎಂದು ರಾಣಿಯೊಬ್ಬಳನ್ನು ಕೀರ್ತಿಸಿರುವುದೂ ಅವರ ದರ್ಬಾರು ಸೂಚಕವಾಗಿದೆ ಅಷ್ಟೇ.

ಶನಿವಾರ ಸಿದ್ಧಿ

ಶನಿವಾರ ಸಿದ್ಧಿ ಎಂಬ ಬಿರುದನ್ನು ಮೊದಲು ಧರಿಸಿದವರು ಕಲ್ಯಾಣದ ಚಾಲುಕ್ಯರ ಮಹಾಮಂಡಳೇಶ್ವರರು. ಆನಂತರ ಹೊಯ್ಸಳ ದೊರೆಗಳು ಈ ಬಿರುದನ್ನು ಹೇಳಿಕೊಳ್ಳುತ್ತಾರೆ.

ಮೊದಲಬಾರಿಗೆ ಈ ಬಿರುದು ಶನಿವಾರ ವಿಜಯ ಎಂದು ಶಿಲಾಹಾರದ ಶಾಸನವೊಂದರಲ್ಲಿ ಕಾಣಿಸಿಕೊಳ್ಳುತ್ತದೆ. ಕ್ರಿ.ಶ. ೯೯೭ರಲ್ಲಿ ಶಿಲಾಹಾರರ ದೊರೆ ಅಪರಾಜಿತ ದೇವನ ಶಾಸನವೊಂದರಲ್ಲಿ,

ಸಮಧಿಗತ ಪಂಚಮಹಾಶಬ್ದ ಮಹಾಸಾಮಂತಾಧಿಪತಿ ಕಗರಪುರ ಪರಮೇಶ್ವರ ಶಿಲಾರ ನರೇಂದ್ರ ಜೀಮೂತ ವಾಹನಾನ್ವಯ ಪ್ರಸೂತ ಸುವರ್ಣಗರುಡಧ್ವಜ ಅಭಿಮಾನ ಮಹೋದಧಿ ಮಾಳಗಳಗಂಡ ಗಂಡಕಂದರ್ಪ ಸಹಜವಿದ್ಯಾಧರ ಅಪರ ದಿಗ್ವಧೂತಿಲಕ ನನ್ನಿಸಮುದ್ರಪ್ರತಾಪ ಮಾರ್ತಾಂಡ ಸನಿವಾರ ವಿಜಯ ಆದಿ ಸಮಸ್ತ ರಾಜಾವಳಿ ಸಮಲಂಕೃತ ಮಹಾಮಂಡಳೇಶ್ವರ ಶ್ರೀಮತ್ ಅಪರಾಜಿತ ದೇವರಾಜ ಎಂದಿದೆ. (ಎಪಿಗ್ರಾಫಿಯಾ ಇಂಡಿಕಾ ಸಂಪುಟ-ಖಖಖ, ನಂ. ೩೭)

ಎಫ್. ಕೀಲ್ ಹಾರ್ನ್ ಅವರು 'ಊಜ �, ತ್ಥಿಜ ಜಝುಡಿಝ (ಠಡಿ ತ್ಥುಝ) ಚಿಡಿಜ ಚಿಭಿಭಿಠಟರಿಟ್ಝುಜಜ ಠಟಿ ಖಚಿಣಣಡಿಜಚಿಥಿ' ಎಂದು ವಿವರಿಸುತ್ತಾರೆ. (ಎಪಿಗ್ರಾಫಿಯಾ ಇಂಡಿಕಾ ಸಂಪುಟ-ಖಖಖ, ಪು. ೨೦೭-೨೦೮).

ರನ್ನನ ಗದಾಯುದ್ಧದಲ್ಲಿರುವ ಒಂದು ಪದ್ಯ ಶನಿವಾರದ ಬಗ್ಗೆ ಒಂದು ನಂಬಿಕೆಯ ವಿಚಾರವನ್ನು ತಿಳಿಸುತ್ತದೆ.

ಕಳಶಜನನಿಂತು ಕೊಲಿಸಿದ

ಖಳನೆ ಗಡಂ ಧರ್ಮನಂದನಂ ಕ್ರೂರದಿನಂ

ಗಳ ಪೆಸರಂ ಮಱಿಯಿಸಿ ಮಂ

ಗಳವಾರಂ ವಡ್ಡವಾರಮೆಂಬಂತೆವಲಂ (೨-೨೬)

ಕೀಲ್ ಹಾರ್ನ್, ಫ್ಲೀಟ್, ರೈಸ್, ಬಾರ್ನೆಟ್ ಮುಂತಾದ ವಿದ್ವಾಂಸರು ಇಂಡಿಯನ್ ಆಂಟಿಕ್ವರಿ ಪತ್ರಿಕೆಗಳಲ್ಲಿ ವಡ್ಡವಾರದ ಬಗ್ಗೆ ಚರ್ಚಿಸಿದ್ದಾರೆ. ಕುಜನವಾರವನ್ನು ಕುಜವಾರವೆಂದು, ಶನಿಯವಾರವನ್ನು ಶನಿವಾರವೆಂದೂ ಕರೆಯಬಾರದು. ಅವು ಕ್ರೂರ ಗ್ರಹಗಳು. ಅದರಿಂದ ತೊಂದರೆಯುಂಟಾಗಬಹುದು. ಆ ಹೆಸರುಗಳನ್ನು ಮರೆಮಾಡಿ ಮಂಗಳವಾರವೆಂದೂ, ವಡ್ಡವಾರವೆಂದೂ ಕರೆದರೆ, ಆ ಗ್ರಹಗಳಿಗೂ ತೃಪ್ತಿ, ಕರೆದವರಿಗೂ ಕ್ಷೇಮ. ಹಾಗೆಯೇ ಅಧರ್ಮ ನಂದನಂ ಎಂದು ಕರೆಯುವುದಕ್ಕೆ ಬದಲಾಗಿ ಧರ್ಮನಂದನಂ ಎಂದು ಕರೆಯಬೇಕಾಗಿದೆ ಎಂಬುದೇ ರನ್ನನ ಪದ್ಯದ ಅರ್ಥ (ಡಿಎಲ್ಎನ್).

ವಡ್ಡವಾರದಂದು ಒಳ್ಳೆಯ ತಿಥಿಗಳು ಬಂದಿದ್ದರೆ, ಆ ದಿನ ದತ್ತಿಯನ್ನು ಕೊಟ್ಟಿದ್ದಕ್ಕೆ ಶಾಸನಗಳಲ್ಲಿ ಅನೇಕ ಉದಾಹರಣೆಗಳಿವೆ. ವಾರ ಶನಿವಾರವಾದರೂ ತಿಥಿ, ಫಾಲ್ಗುಣ ಶುದ್ಧ ಪಂಚಮಿ, ಕಾರ್ತಿಕ ಪುಣ್ಣಮೆ ವಡ್ಡವಾರದಂದಿನ ಸೋಮಗ್ರಹಣ, ಜೇಷ್ಠ ಬಹುಳ ಷಷ್ಠಿ ಫಾಲ್ಗುಣ ಪೌರ್ಣಮಿ, ವೈಶಾಖ ಬಹುಳ ಪಂಚಮಿ, ವಡ್ಡವಾರ ಉತ್ತರಾಯಣ ಸಂಕ್ರಮಣ, ಮಾಘ ಶುದ್ಧ ತ್ರಯೋದಶಿ, ರೋಹಿಣೀ ನಕ್ಷತ್ರ - ಮೊದಲಾದವುಗಳು ಬಂದಿದ್ದರೆ ದತ್ತಿಗಳನ್ನು ನೀಡಲಾಗಿದೆ.

ಹಾಗೆಯೇ ಶನಿವಾರದಂದು ಯಾವುದೇ ಯುದ್ಧ ನಡೆಯಬಹುದು. ಅದರಲ್ಲಿ ದೊರೆ ಜಯಗಳಿಸಬಹುದು. ಅಂತಹ ವಿಜಯ ಎಲ್ಲ ದೊರೆಗಳಿಗೂ ಬಂದಿದೆ ಎಂದೇನಿಲ್ಲ. ಪರಂಪರಾಗತವಾಗಿ ಬಿರುದನ್ನು ದೊರೆಗಳು ಹೇಳಿಕೊಳ್ಳುತ್ತಾ ಬರುತ್ತಾರೆ.

ಶನಿವಾರ ಸಿದ್ಧಿಯ ಅತ್ಯಂತ ಪ್ರಾಚೀನ ಉಲ್ಲೇಖ ಕ್ರಿ.ಶ. ೧೦೮೪, ಸೆಪ್ಟೆಂಬರ್ ೧೧ ರ ಶಾಸನದ್ದು. ಕಲ್ಯಾಣದ ಚಾಲುಕ್ಯ ದೊರೆ ತ್ರಿಭುವನಮಲ್ಲ ವಿಕ್ರಮಾದಿತ್ಯನ ಮಹಾಮಂಡಳೇಶ್ವರ ಆಹವಮಲ್ಲ ಪೆರ್ಮಾನಡಿಯನ್ನು ಆ ಶಾಸನವು ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಪ್ರತಾಪ ಮಹೇಶ್ವರಂ ವೈರಿನಾರಾಯಣಂ ನೀತಿ ನಾರಾಯಣಂ ರಿಪುಹೃದಯಸೆಲ್ಲಂ ಸವಳಕ್ಕೆ ಮಲ್ಲಂ ಚಾಳುಕ್ಯ ರಾಮರಾಜ್ಯಾಭಿವೃದ್ಧಿ ಶನಿವಾರಸಿದ್ಧಿ ಎಂದು ಪರಿಚಯ ಮಾಡಿಕೊಡುತ್ತದೆ.

ಕ್ರಿ.ಶ. ೧೧೯೩ರ ಇನ್ನೊಂದು ಶಾಸನವೂ ಆಹವಮಲ್ಲ ಪೆರ್ಮಾನಡಿಯ ಇದೇ ಬಿರುದುಗಳನ್ನು ಉಲ್ಲೇಖಿಸುತ್ತದೆ. ಶನಿವಾರ ಸಿದ್ಧಿ – ಇಲ್ಲಿ ಸಣಿವಾರ ಸಿದ್ಧಿ ಆಗಿದೆ. ಈಗ ಹೈದರಾಬಾದಿನ ಕೆ.ಬಿ. ಮ್ಯೂಜಿಯಂನಲ್ಲಿರುವ ಈ ಪೆರ್ಮಾನಡಿಯ ಮತ್ತೊಂದು ಶಾಸನವೂ ಶನಿವಾರ ಸಿದ್ಧಿಯನ್ನು ಉಲ್ಲೇಖಿಸುತ್ತದೆ. ಶಾಸನ ತ್ರುಟಿತವಾಗಿರುವುದರಿಂದ, ತೇದಿ ಹಾಳಾಗಿದೆ.

ಕ್ರಿ.ಶ. ೧೧೪೩ರ ಶಿಲಾಹಾರ ವಿಜಯಾದಿತ್ಯನಿಗೂ ಶನಿವಾರ ಸಿದ್ಧಿಎಂಬ ಬಿರುದಿತ್ತು (ಎಪಿಗ್ರಾಫಿಯಾ ಇಂಡಿಕಾ ಸಂಪುಟ–ಖಖಖ, ಪು. ೨೦೭–೨೦೮).

ಶನಿವಾರ ಸಿದ್ಧಿ– ಸನಿವಾರ ಸಿದ್ಧಿ – ಸನಿವಾರ ಸಿದಿ – ಮೊದಲಾದ ರೂಪಗಳು – ಲಿಪಿಕಾರ ಸ್ಖಾಲಿತ್ಯದಿಂದ ಉಂಟಾದವು. ಕೆಲವು ಇನ್ನಿತರ ಉಲ್ಲೇಖಗಳಲ್ಲಿ ಕಲಚೂರ್ಯರ ಸೋಯಿದೇವ (೧೧೬೧), ಬಿಜ್ಜಳ (೧೧೬೨), ಸೋವಿದೇವರಸ (೧೧೭೦), ಸಂಕಮದೇವ (೧೧೭೮)(೧೧೭೬) ರಿಗೆ ಶನಿವಾರ ಸಿದ್ಧಿ ಬಿರುದು ಕಂಡು ಬರುತ್ತದೆ.

ಉಳಿದ ಎಲ್ಲಾ ಉಲ್ಲೇಖಗಳೂ ಹೊಯ್ಸಳರಿಗೆ ಸೇರಿದುದು.

ಹೊಯ್ಸಳ ವಿಷ್ಣುವರ್ಧನನಿಗೆ ಎಲ್ಲೂ ಶನಿವಾರ ಸಿದ್ಧಿ ಎಂದು ಕರೆದಿಲ್ಲ. ಅವನ ಮಗ ಒಂದನೆಯ ನರಸಿಂಹನಿಗೆ ಈ ಬಿರುದು ಇದೆ. ಐದು ಶಾಸನಗಳಲ್ಲಿ ಒಂದನೆಯ ನರಸಿಂಹನಿಗೆ ಶನಿವಾರ ಸಿದ್ಧಿ ಎಂಬ ಬಿರುದಿದೆ.

ಶಾಸನ ಸಂಪುಟ	ಶಾಸನ ಸಂಖ್ಯೆ	ತಾಲ್ಲೂಕು	ಕಾಲ
ಎಪಿಗ್ರಾಪಿಯಾ ಕರ್ನಾಟಿಕಾ – III	ನಂ. ೩೨೭	ನಂಜನಗೂಡು	ಕ್ರಿ.ಶ. ೧೧೬೪
ಎಪಿಗ್ರಾಪಿಯಾ ಕರ್ನಾಟಿಕಾ – IV	ನಂ. ೧೦೮	ಚಾಮರಾಜನಗರ	ಕ್ರಿ.ಶ. ೧೧೬೫
ಎಪಿಗ್ರಾಪಿಯಾ ಕರ್ನಾಟಿಕಾ – X	ನಂ. ೧೧೩	ಅರಸೀಕೆರೆ	ಕ್ರಿ.ಶ. ೧೧೬೪
ಎಪಿಗ್ರಾಪಿಯಾ ಕರ್ನಾಟಿಕಾ – X	ನಂ. ೫೧	ಚೆನ್ನರಾಯಪಟ್ಟಣ	ಕ್ರಿ.ಶ. ೧೧೪೨–?
ಎಪಿಗ್ರಾಪಿಯಾ ಕರ್ನಾಟಿಕಾ – XI	ನಂ. ೨೬	ಮೂಡಗೆರೆ	ಕ್ರಿ.ಶ. ೧೧೬೪

ಒಂದನೆಯ ನರಸಿಂಹನ ಮಗ ಎರಡನೆಯ ಬಲ್ಲಾಳ ಅಥವಾ ವೀರಬಲ್ಲಾಳ–II. ಕ್ರಿ.ಶ. ೧೧೭೩ ರಲ್ಲಿ ಪಟ್ಟಕ್ಕೆ ಬಂದ. ಈ ವೀರಬಲ್ಲಾಳನ ಮಹತ್ವದ ವಿಜಯ ಉಚ್ಚಂಗಿಯ ಮೇಲಿನದು. ಉಚ್ಚಂಗಿಯ ಕೋಟೆಯ ಮೇಲೆ ಕ್ರಿ.ಶ. ೧೧೭೭ ರಲ್ಲಿ ಆಕ್ರಮಣ ಮಾಡಿ, ಗೆಲವು ಸಂಪಾದಿಸಿದುದನ್ನು ವೀರಬಲ್ಲಾಳನ ಶಾಸನಗಳು ಅತಿಶಯವಾಗಿ ಬಣ್ಣಿಸಿವೆ.

ಚೆನ್ನರಾಯಪಟ್ಟಣದ ಕ್ರಿ.ಶ. ೧೧೮೨ರ ಶಾಸನದ ಪದ್ಯ ಇದು.

ಹೆಸರುಚ್ಚಂಗಿಯ ಕೋಟೆಯ

ನಸದೃಶಭುಜಬಳದೆ ಮುನ್ನೆ ಕೊಂಡರಸುಗಳಾರ್

ಅಸಹಾಯಶೂರ ಶನಿವಾ

ರಸಿದ್ಧಿ ಗಿರಿದುರ್ಗಮಲ್ಲ ಬಲ್ಲಾಳನವೊಲ್

ವೀರಬಲ್ಲಾಳನಿಗೆ ಈ ವಿಜಯ ದೊರೆತದ್ದು ಶನಿವಾರದಂದು. ಕ್ರಿ.ಶ. ೧೧೮೨ ರ ಬೇಲೂರಿನ ಶಾಸನವೊಂದು ಅದನ್ನು ಹೀಗೆ ಹೇಳಿದೆ.

ಶನಿವಾರದಂದೆ ಪಾಂಡ್ಯಾ

ವನಿಪನ ಸಪ್ತಾಂಗಮೆಯ್ದೆ ಸಿದ್ಧಿಸಿದುದಜಿಂ

ಶನಿವಾರ ಸಿದ್ಧಿವೆಸರಂ

ಜನಪತಿ ಬಲ್ಲಾಳದೇವನೆಸೆದಿರೆ ತಳೆದಂ

ಈ ಯುದ್ಧದಲ್ಲಿ ಪಾಂಡ್ಯರ ಕಾವದೇವ ಮತ್ತು ಅವನ ತಂದೆ ಒಡೆಯ ಇಬ್ಬರೂ ಸಂಪೂರ್ಣವಾಗಿ ಸೋತು ವೀರಬಲ್ಲಾಳನಿಗೆ ಶರಣಾದರು.

ಕ್ರಿ.ಶ. ೧೨೨೦ರ ಆಳ್ವಿಕೆ ನಡೆಸಿದ ಈ ವೀರ ಬಲ್ಲಾಳ-II ನ ಸುಮಾರು ೧೦೦ಕ್ಕಿಂತಲೂ ಹೆಚ್ಚಿನ ಶಾಸನಗಳಲ್ಲಿ ಶನಿವಾರ ಸಿದ್ಧಿ ಬಿರುದನ್ನು ಇತರ ಬಿರುದುಗಳೊಂದಿಗೆ ಉಲ್ಲೇಖಿಸಿದೆ.

ತಿರುಮಕೂಡಲು ನರಸೀಪುರ ತಾಲ್ಲೂಕಿನ ಕ್ರಿ.ಶ. ೧೧೮೮ ರ ಮತ್ತು ಕ್ರಿ.ಶ. ೧೧೭೩ ರ ತಮಿಳು ಶಾಸನಗಳಲ್ಲೂ ವೀರಬಲ್ಲಾಳನಿಗೆ ಶನಿವಾರ ಸಿದ್ಧಿ ಎಂಬ ಬಿರುದನ್ನು ಹೇಳಿದೆ. ಚೋಳ ರಾಜ್ಯ ಪ್ರತಿಷ್ಠಾಚಾರ್ಯ ಎಂಬ ವೀರಬಲ್ಲಾಳ (ಖಖ)ನ ಬಿರುದಿನ ಬಗೆಗೂ ಚಿಂತಿಸಬಹುದು.

ಕ್ರಿ.ಶ. ೧೨೨೦ ರಿಂದ ೧೨೩೫ ರ ವರೆಗೆ ಆಳ್ವಿಕೆ ನಡೆಸಿದ ನರಸಿಂಹ-II ನ ಕ್ರಿ.ಶ. ೧೨೨೬ ರ ಶಾಸನವೊಂದು ಅವನನ್ನು ಹೀಗೆ ಹೊಗಳಿದೆ.

ಸನಿವಾರದೊಳೀಯಲು ಕಲು

ತಿನವಾರದೊಳ್ ಜಯಿಪ್ಪದಂಡಾಧಿಪರಂ (?)

ನೆನವುದೆ ಪೇಶಳ ಹನುಮನ **(ಸುಂದರ)**

ನನವರತ ವಿನೋದ ದಾನಿಯಂ ಹೊಗಳ್ವೆಡೆಯೊಳ್

ಸುಮಾರು ೧೬ ಶಾಸನಗಳಲ್ಲಿ ಎರಡನೆಯ ನರಸಿಂಹನಿಗೆ ಶನಿವಾರ ಸಿದ್ಧಿ ಬಿರುದನ್ನು ಉಲ್ಲೇಖಿಸಿದೆ.

ಕ್ರಿ.ಶ. ೧೨೩೫ - ೧೨೫೩ ರವರೆಗೆ ಆಳಿದ ಹೊಯ್ಸಳ ದೊರೆ ಸೋಮೇಶ್ವರ, ಇಮ್ಮಡಿ ನರಸಿಂಹನ ಮಗ. ಸೋಮೇಶ್ವರನಿಗೆ ಸುಮಾರು ೨೫ ಶಾಸನಗಳಲ್ಲಿ ಶನಿವಾರ ಸಿದ್ಧಿ ಎಂಬ ಬಿರುದಿದೆ.

ಸೋಮೇಶ್ವರನ ನಂತರ ಹೊಯ್ಸಳ ರಾಜ್ಯ ಎರಡು ಭಾಗವಾಯಿತು. ಅವನ ರಾಣಿ ಬಿಜ್ಜಲೆಯ ಮಗ ಮೂರನೆಯ ನರಸಿಂಹ, ರಾಣಿ ದೇವಲೆಯ ಮಗ ರಾಮನಾಥ.

ಮೂರನೆಯ ನರಸಿಂಹ ೧೨೫೩ ರಿಂದ ೧೨೯೨ ರವರೆಗೂ ಆಳುತ್ತಾನೆ. ಜೊತೆ-ಜೊತೆಯಲ್ಲಿ ತಮಿಳುನಾಡಿನ ಕಣ್ಣಾನೂರ ಕೊಪ್ಪಂನಿಂದ ರಾಮನಾಥನು ೧೨೫೩ ರಿಂದ ೧೨೯೫ ರವರೆಗೂ ಆಳುತ್ತಾನೆ.

ಮೂರನೆಯ ನರಸಿಂಹನ ಸುಮಾರು ೩೫ ಶಾನಸಗಳಲ್ಲಿ ಶನಿವಾರ ಸಿದ್ಧಿ ಬಿರುದಿದೆ. ರಾಮನಾಥನು ಈ ಬಿರುದನ್ನು ಧರಿಸಿದ್ದಂತೆ ಕಾಣುವುದಿಲ್ಲ.

ಮೂರನೆಯ ನರಸಿಂಹನ ಮಗ ಮೂರನೆಯ ಬಲ್ಲಾಳ ಕ್ರಿ.ಶ. ೧೨೯೧ ರಿಂದ ೧೩೪೨ ರವರೆಗೆ ಆಳ್ವಿಕೆ ನಡೆಸಿದ. ಇವನ ಸುಮಾರು ೧೮ ಶಾಸನಗಳಲ್ಲಿ ಶನಿವಾರ

ಸಿದ್ಧಿ ಬಿರುದಿದೆ. ಇವುಗಳಲ್ಲಿ ಒಂದೆರಡು ಶಾಸನಗಳು ಮೂರನೆಯ ಬಲ್ಲಾಳನ ಮಗ ವಿರೂಪಾಕ್ಷ ಬಲ್ಲಾಳ ಅಥವಾ ನಾಲ್ಕನೆಯ ಬಲ್ಲಾಳನದೂ ಇರಬಹುದು.

ಆನಂತರದ ವಿಜಯನಗರದ ದೊರೆಗಳು ಹಿಂದಿನ ಈ ಬಿರುದುಗಳನ್ನು ಕೈ ಬಿಟ್ಟು ತಮ್ಮದೇ ಆದ ಬಿರುದಿನ ಬಗೆಗಳನ್ನು ರೂಪಿಸಿಕೊಂಡರು.

ಆಧಾರ ಗ್ರಂಥಗಳು –ಲೇಖನಗಳು

೧) ಎಪಿಗ್ರಾಫಿಯಾ ಕರ್ನಾಟಿಕಾ – ಹಳೆಯ/ ಹೊಸ ಸಂಪುಟಗಳು.

೨) ಎಪಿಗ್ರಾಫಿಯಾ ಇಂಡಿಕಾ ಸಂಪುಟಗಳು.

೩) ತಮಿಳುನಾಡಿನ ಕನ್ನಡ ಶಾಸನಗಳು. ಸಂ: ಡಾ. ಎಚ್.ಎಸ್. ಗೋಪಾಲರಾವ್, ಡಾ. ಪಿ.ವಿ. ಕೃಷ್ಣಮೂರ್ತಿ. ಕರ್ನಾಟಕ ವಿಶ್ವವಿದ್ಯಾಲಯ, ಹಂಪಿ.

೪) ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಸಂಪುಟಗಳು.

೫) ಇನ್‌ಸ್ಕ್ರಿಪ್ಷನ್ಸ್ ಆಫ್ ಆಂಧ್ರಪ್ರದೇಶ್ ಸಂಪುಟಗಳು.

೬) ಭಾರತೀಯ ಶಾಸನ ಇಲಾಖೆಯ ವಾರ್ಷಿಕ ವರದಿಗಳು.

೭) ಎಪಿಗ್ರಾಫಿಯಾ ಆಂಧ್ರಿಕಾ ಸಂಪುಟಗಳು.

೮) ಎರಡನೆಯ ನಾಗವರ್ಮನ 'ಕಾವ್ಯಾವಲೋಕನಂ'. ಸಂ: ಎಚ್. ದೇವಿರಪ್ಪ. ಕನ್ನಡ ಸಾಹಿತ್ಯ ಪರಿಷತ್ತು, ೨೦೦೪.

೯) ರನ್ನ ಕವಿಯ 'ಸಾಹಸ ಭೀಮ ವಿಜಯಂ'. ಸಂ: ಬಿ. ಎಸ್. ಸಣ್ಣಯ್ಯ, ಡಾ. ರಾಮೇಗೌಡ. ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೮೫.

೧೦) ಪಂಪ ಕವಿಯ 'ವಿಕ್ರಮಾರ್ಜುನ ವಿಜಯಂ'. ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೭೩.

೧೧) ದ.ರಾ. ಬೇಂದ್ರೆ – ಪ್ರಬುದ್ಧ ಕರ್ನಾಟಕ – ೧೫–೪.

೧೨) ಡಾ. ಎಂ.ಎಂ. ಕಲಬುರ್ಗಿ – 'ಶಂಕರಗಂಡ' – ಐತಿಹಾಸಿಕ – ಪುಟ ೭೯.

೧೩) ಪೊನ್ನ ಕವಿಯ 'ಶಾಂತಿಪುರಾಣಂ' – ಸಂ: ಡಾ. ಹಂ.ಪ. ನಾಗರಾಜಯ್ಯ.

೧೪) ಪೊನ್ನ ಮತ್ತು ಆತನ ಕೃತಿಗಳು – ಡಾ. ಎಂ.ಆರ್. ಉಮಾದೇವಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೯.

೧೫) ಕರ್ನಾಟಕ ಭಾರತಿ – ೩–೨ – ಡಾ. ಎಂ.ಬಿ. ಬೋಯಿ.

◈◈◈◈◈

ಬಸವರಾಜ ಕಟ್ಟೀಮನಿ ಕಾದಂಬರಿ ನೀ ನನ್ನ ಮುಟ್ಟಬೇಡ: ವಿಶ್ಲೇಷಣಾತ್ಮಕ ನೋಟ

◈

ಹಳೆಮನೆ ರಾಜಶೇಖರ

ಬಸವರಾಜ ಕಟ್ಟೀಮನಿಯವರು ಅಪ್ಪಟ ವಾಸ್ತವವಾದಿ ಬರಹಗಾರರು. ತಮ್ಮ ಕಣ್ಣಿಗೆ ಕಾಣುವ ದುಡಿವ ವರ್ಗದ ಬದುಕಿನ ವಿನ್ಯಾಸವನ್ನು ಚಾರಿತ್ರಿಕ ನೆಲೆಯಲ್ಲಿ ಕಥನ ಮಾಡುತ್ತಾ ಬಂದವರು. ಸಾಮಾಜಿಕ ಬದ್ಧತೆಯಲ್ಲಿ ಅಪಾರ ನಂಬಿಕೆ ಹೊಂದಿದ ಅವರು ಆ ನಿಷ್ಠೆಯಿಂದಲೇ ಸಾಹಿತ್ಯವನ್ನು ಕುರಿತು ಚಿಂತಿಸಿದವರು. ಕೂಲಿಕಾರರು, ಕಾರ್ಮಿಕರು, ರೈತರು, ಮಹಿಳೆಯರು ಅನುಭವಿಸುವ ಬಡತನ, ಶೋಷಣೆ, ಅಸಹಾಯಕತೆಯನ್ನು ಹೃದಯ ಹಿಂಡುವಂತೆ ತಮ್ಮ ಕಥನದಲ್ಲಿ ಚಿತ್ರಿಸಿದವರು. ಉಳ್ಳವರು ಮಾಡುವ ದಬ್ಬಾಳಿಕೆ, ಶೋಷಣೆ, ಅನ್ಯಾಯಗಳನ್ನು ಓದುಗರಲ್ಲಿ ಆಕ್ರೋಶ ಹುಟ್ಟುವಂತೆ ಕಥನದಲ್ಲಿ ಕಟ್ಟಿದವರು. ಪುರೋಹಿತರು ಸೃಷ್ಟಿಸಿದ ಹುಸಿ ಸಿದ್ಧಾಂತಗಳನ್ನು ಮನೋಜ್ಞವಾಗಿ ನಿರಾಕರಿಸಿ ಹೊಸ ಜಾಗೃತಿಯನ್ನು ಸಮಾಜದಲ್ಲಿ ಮೂಡಿಸಿದವರು. ಮನುಷ್ಯನ ತಲ್ಲಣಗಳಿಗೆ ಸದಾ ಸ್ಪಂದಿಸುತ್ತಾ ಬಂದವರು. ಮನುಷ್ಯನ ಸಹಜ ಬದುಕಿನ ನಡೆಗಳನ್ನು ಸೂಕ್ಷ್ಮವಾಗಿ ಕಥನದಲ್ಲಿ ತಂದವರು.

ಸಾಮಾಜಿಕ ಬದಲಾವಣೆ ಅವರಿಗೆ ಮುಖ್ಯವಾದುದು. ದುಡಿವ ವರ್ಗಕ್ಕೆ ಘನತೆಯ ಬದುಕು ದೊರೆಯಬೇಕೆಂಬುದು ಅವರ ಬಲವಾದ ಕನಸು. ಅದನ್ನು ನನಸು ಮಾಡಲು ತಮ್ಮ ಜೀವನದುದ್ದಕ್ಕೂ ಅವಿರತ ಹೋರಾಟ ಮಾಡುತ್ತಾ ಬಂದವರು. ಇದರಿಂದ ಅವರ ಸಾಹಿತ್ಯಕ್ಕೆ ವಾಸ್ತವಿಕತೆಯ ಅನನ್ಯತೆ ಮತ್ತು ಸ್ಪಷ್ಟತೆ ದಕ್ಕಿದೆ. ಯಾವ ಗೊಂದಲಗಳಿಲ್ಲದೆ ವಾಸ್ತವ ಬದುಕನ್ನು ಓದುಗರಿಗಾಗಿ

ಕಟ್ಟಿಕೊಡುತ್ತಾರೆ. ಪ್ರಭುತ್ವ, ಅಧಿಕಾರ ರಾಜಕಾರಣ ಮಾಡುವ ಹುನ್ನಾರಗಳು, ಅದನ್ನು ಅರ್ಥಮಾಡಿಕೊಳ್ಳದೆ ನರಳುವ ದುಡಿವ ಸಮುದಾಯಗಳ ಅಸಾಯಕತೆಯನ್ನು ತಮ್ಮ ಕಥನದಲ್ಲಿ ಶೋಧಿಸುತ್ತಾ ಬಂದವರು.

ಅವರ ಸಾಮಾಜಿಕ ನಿಜ ಕಳಕಳಿ ಮತ್ತು ನಿಷ್ಠುರತೆ ಪ್ರಗತಿಶೀಲ ಸಾಹಿತ್ಯದಲ್ಲಿ ಅವರನ್ನು ಭಿನ್ನ ದಾರಿಯ ಪಯಣಿಗನನ್ನಾಗಿಸಿದೆ. ಮುಖ್ಯವಾಗಿ ತಮ್ಮ ಸಮುದಾಯದ ಒಳಗಿನ ಧಾರ್ಮಿಕ ಕಂದಾಚಾರದ ವಿರುದ್ಧ ಐತಿಹಾಸಿಕ ಆಂದೋಲನವನ್ನು ತಮ್ಮ ಸಾಹಿತ್ಯದ ಮೂಲಕ ಮಾಡಿದವರು. ಮಠಾಧೀಶರ ಅನ್ಯಾಯಗಳ ವಿರುದ್ಧ ಅವರು ಬರೆದದ್ದು ಸಾಮಾನ್ಯ ಸಂಗತಿಯಲ್ಲ. ಯಾವ ಲೇಖಕ ತನ್ನ ಸಮುದಾಯಗಳ ಒಳಗಿನ ಅನ್ಯಾಯಗಳಿಗೆ ಧೈರ್ಯದಿಂದ ಮುಖಾಮುಖಿಯಾಗುವದಿಲ್ಲವೋ ಆತ ವಾಸ್ತವವನ್ನು ಸರಿಯಾಗಿ ಗ್ರಹಿಸಲಾರ. ಅದು ಹುಸಿ ಸ್ಪಂದನೆಯಾಗುತ್ತದೆ. ಆದರೆ ಕಟ್ಟೀಮನಿಯವರ ಕಥನ ಯಾವ ಸೈದ್ಧಾಂತಿಕ ಒಲವುಗಳಿಗೆ ಬಲಿಯಾಗದೆ ಮನುಷ್ಯತ್ವದ ಹುಡುಕಾಟವೇ ಅವರ ಸಾಹಿತ್ಯದ ಜೀವಾಳವಾಗಿದೆ. ಈ ಹಿನ್ನಲೆಯಲ್ಲಿ ಅವರ ನೀ ನನ್ನ ಮುಟ್ಟಬೇಡ ಕಾದಂಬರಿಯನ್ನು ಅವಲೋಕಿಸಲಾಗಿದೆ.

ಕಾದಂಬರಿಯ ವಸ್ತು

ಉಳ್ಳವರ ಸಾಮಾಜಿಕ ಶಾಪಕ್ಕೆ ಒಳಗಾದ ಅಸ್ಪೃಷ್ಯತೆಯ ಪಿಡುಗಿನಿಂದ ನರಳುವ ಸಮುದಾಯದ ಬದುಕೇ ಈ ಕಾದಂಬರಿಯ ವಸ್ತು. ನಾವು ಗ್ರಾಮೀಣ ಪರಿಸರದಲ್ಲಿ ಸಮಾಜವನ್ನು ಎರಡು ಭಾಗವನ್ನಾಗಿ ಮಾಡಿದ್ದೇವೆ. ಉಳ್ಳವರು ವಾಸ ಮಾಡುವ ಪರಿಸರ ಒಂದು. ಯಾವುದೇ ಸ್ವಾತಂತ್ರವಿಲ್ಲದೆ ಉಳ್ಳವರ ಅಧೀನದಲ್ಲಿ ಬದುಕುವ ಇನ್ನೊಂದು ಭಾಗ. ಇವರು ವಾಸಿಸುವ ಪರಿಸರವನ್ನು ಕೇರಿ ಎಂದು ಕರೆಯಲಾಗುತ್ತದೆ. ಈ ಕೇರಿಯಲ್ಲಿ ಜೀವಿಸುವವರು ಕಡು ಬಡವರು. ಹೊಲೇರು, ಮಾದರು ಎಂದು ಕರಿಸಿಕೊಳ್ಳುವ ಅಸ್ಪೃಷ್ಯ ಸಮುದಾಯ. ಇವರಿಗೆ ಯಾವುದೇ ಸವಲತ್ತುಗಳಿಲ್ಲ. ಉಳ್ಳವರ ಜಮೀನುಗಳನ್ನು ಅವಲಂಬಿಸಿಯೆ ಜೀವನ ಮಾಡಬೇಕು. ಅವರಿಗೆ ಯಾವುದೇ ಸ್ವಾತಂತ್ರವಿಲ್ಲ. ಕನಿಷ್ಟ ತಮ್ಮ ಮದುವೆಗಳನ್ನು ಮಾಡಿಕೊಳ್ಳುವ ಹಕ್ಕಿಲ್ಲ. ಮುಖ್ಯವಾಗಿ ಅಲ್ಲಿ ದುಡಿಯುವ ಮಹಿಳೆಯರು ಉಳ್ಳವರ ಭೋಗಕ್ಕೆ ಬಲಿಯಾಗುವವರು. ಋತುಮತಿಯಾದ ಕೂಡಲೆ ಉಳ್ಳವರ ಯಾರೋ ಭೋಗಕ್ಕೆ ದಾಸಿಯಾಗಬೇಕಾದ ಪರಸ್ಥಿತಿಯನ್ನು ನಿರ್ಮಾಣ ಮಾಡಿಡಲಾಗಿದೆ. ಇದನ್ನು ಯಾರು ಪ್ರಶ್ನಿಸದೆ ಅದೇ ಸತ್ಯವೆಂದು ಒಪ್ಪಿಕೊಂಡು ಬರಲಾಗಿದೆ. ಅವರು ಸದಾ ಅತಂತ್ರರು. ಆದ್ದರಿಂದ ಉಳ್ಳವರನ್ನು ಎದುರಿಸಿ ಬದುಕುವ ಯಾವ ಧೈರ್ಯವು ಅವರಲ್ಲಿ ಇಲ್ಲ. ತಮ್ಮ ಕೇರಿಯ ಹೆಣ್ಣುಮಕ್ಕಳನ್ನು ಉಳ್ಳವರು ತಮ್ಮ ಭೋಗಕ್ಕೆ ಬಳಿಸಿಕೊಂಡರೂ ಅದನ್ನು ಪ್ರಶ್ನಿಸದೆ ಒಪ್ಪಿಕೊಂಡು ಅಸಹಾಯಕತೆಯಿಂದ ಬದುಕುವವರು. ಕೇರಿಯಲ್ಲಿ

ಯಾವ ಸವಲತ್ತುಗಳು ಇಲ್ಲ. ಇರಲು ಗಟ್ಟಿಯಾದ ವಸತಿಗಳಿಲ್ಲ. ಗುಡಿಸಲುಗಳಲ್ಲಿಯೇ ಜೀವನ ಮಾಡಬೇಕು. ಮಳೆ ಛಳಿ ಬಿಸಿಲುಂಡು ಬದುಕುವ ಜೀವಿಗಳು ಕೇರಿಯಲ್ಲಿರುವವರು. ಈ ಕಾದಂಬರಿ ಅಂತವರ ಜೀವನ ಬವಣೆಗಳನ್ನು ಹೃದಯ ಕಲುಕುವಂತೆ ಚಿತ್ರಿಸುತ್ತದೆ. ಕಟ್ಟೀಮನಿಯವರ ಚಿತ್ರಕ ಶಕ್ತಿ ಅಮೋಘವಾದುದು. ಅದಕ್ಕೆ ಅವರಿಗೆ ಅವರೇ ಸಾಟಿ.

ಕಾದಂಬರಿಯಲ್ಲಿ ಕೇರಿಯ ಚಿತ್ರಣ ಹೀಗೆ ಬರುತ್ತದೆ 'ಅಲ್ಲಿದ್ದವು ಇಪ್ಪತ್ತು ಇಪ್ಪತ್ತೈದು ಮನೆಗಳಷ್ಟೆ. 'ಮನೆ'ಗಳೆಂದರೆ ಕಲ್ಲಿನಿಂದ ಕಟ್ಟಿದ ಮನೆಗಳಲ್ಲ. ಮಣ್ಣ ಹೆಂಟೆ, ಬಿದಿರುಗಳ, ಜೋಳದ ದಂಟು, ಅಡವಿಯ ಕಟ್ಟಿಗೆಗಳಿಂದ ಸಿದ್ಧಗೊಳಿಸಿದ ಗುಡಿಸಲುಗಳು. ಇಡಿಯಾಗಿ ಮಣ್ಣಿನ ಹೆಂಟೆಗಳಿಂದ ಕಟ್ಟಿದ ಒಂದು ಗುಡಿಯೂ ಇತ್ತು ಕೇರಿಯ ಮಧ್ಯದಲ್ಲಿ. ಅದು ದುರ್ಗಾದೇವಿಯ ಗುಡಿ. ಕೇರಿಯಲ್ಲೆಲ್ಲ ಹಂಚುಗಳು ಕಾಣುತ್ತಿದ್ದುದು ಅದೊಂದು ಗುಡಿಯ ಮೇಲೆ ಮಾತ್ರ. ಇನ್ನಿತರ ಗುಡಿಸಲುಗಳಿಗೆಲ್ಲ ಈಚಲು ಚಾಪೆ, ಹಳೆಯ ತಗಡು, ಹಳೆಯ ಚೀಲ, ಕಾಡಿನ ಹುಲ್ಲು, ತೆಂಗಿನ ಗರಿಗಳೇ ಛಾವಣಿ.

ಪ್ರತಿವರ್ಷವೂ ಮಳೆಗಾಲಕ್ಕಾರಂಭವಾಗುತ್ತಲೂ ಛಾವಣಿಗಳಿಂದ ನೀರು ಸೋರಿ ಎಲ್ಲ ಗುಡಿಸಲುಗಳಲ್ಲೂ ಚಿಕ್ಕ ಕೆರೆಗಳನ್ನು ನಿರ್ಮಿಸುತ್ತಿತ್ತು. ನಿಂತ ನೀರನ್ನು ಬಳಿದು ಹೊರದೂಡಿ ರಾಡಿನೆಲದ ಮೇಲೆ ಹೇಗೋ ಮಲಗಿ ನಿದ್ದೆ ಮಾಡುವುದು ಅವರಿಗೆ ಅಭ್ಯಾಸವಾಗಿತ್ತು. ಅತಿವೃಷ್ಟಿಯಾದ ವರ್ಷಗಳಲ್ಲಿ ಹಳ್ಳಿಯ ಓಣಿಗಳಿಂದ ಹರಿದು ಬಂದ ನೀರು ಇವರ ಕೇರಿಗೆ ನುಗ್ಗಿ ಗುಡಿಸಲುಗಳ ದುರ್ಬಲ ಗೋಡೆಗಳನ್ನು ಕೆಡವಿ ಸಣ್ಣಪುಟ್ಟ ಸಾಮಾನುಗಳನ್ನು ಕೊಚ್ಚಿಕೊಂಡು ಹೋಗುತ್ತಿತ್ತು. ನೀರಿನ ಹಾವಳಿ ಮುಗಿಯುವ ತನಕ ದುರ್ಗವ್ವನ ಗುಡಿಯೇ ಅವರಿಗೆ ಆಶ್ರಯ ಸ್ಥಾನವಾಗುತ್ತಿತ್ತು. ಮಳೆಯ ಅಬ್ಬರ ಕೊಂಚ ಇಳಿದ ಬಳಿಕ ಮತ್ತೆ ಗೋಡೆಗಳನ್ನು ಕಟ್ಟುವುದು, ಚಪ್ಪರಕ್ಕೆ ತೆಂಗಿನ ಗರಿಗಳನ್ನು ಹೊದಿಸುವುದು, ಆ ಕಟ್ಟೋಣವನ್ನು ಮತ್ತೊಂದು ಮಳೆ ನಾಶಗೈದಾಗ ತಮ್ಮ ದೈವವನ್ನು ಹಳಿಯುತ್ತಾ ಅಸಹಾಯಕರಾಗಿ ಕಂಬನಿ ಸುರಿಸುವುದು. ಶತ ಶತಮಾನಗಳಿಂದ ಅಂಥ ತೊಂದರೆಗಳನ್ನು ಎದುರಿಸುತ್ತ ಬಂದುದರಿಂದಾಗಿ ಒಂದು ಬಗೆಯ ಜಡತೆಯೂ ನಿಷ್ಕ್ರಿಯತೆಯೂ ಅವರನ್ನು ಆವರಿಸಿಕೊಂಡಿತ್ತು. ಆ ಕೇರಿಯಲ್ಲಿನ ಹೆಚ್ಚು ಜನಕ್ಕೆ ಜೀವನದ ವಿಷಯವಾಗಿ ಉತ್ಸಾಹವೂ ಇರಲಿಲ್ಲ. ಆಸಕ್ತಿಯೂ ಇರಲಿಲ್ಲ. ಹುಟ್ಟಿ ಬಂದ ತಪ್ಪಿಗಾಗಿ ಸಾಯುವವರೆಗೂ ಹೇಗೋ ಬದುಕಬೇಕೆಂಬುದೇ ಅವರ ಸಾಮನ್ಯ ಭಾವನೆಯಾಗಿತ್ತು. ಪಶುಗಳಿಗೂ ಅವರಿಗೂ ಹೆಚ್ಚಿನ ವ್ಯತ್ಯಾಸವೇನು ಇದ್ದಂತೆ ಕಂಡುಬರುತ್ತಿರಲಿಲ್ಲ. ದನದ ಕೊಟ್ಟಿಗೆಗಳಿಗಿಂತಲೂ ಕೀಳ್ತರದ ಸ್ಥಳದಲ್ಲಿ ಅವರು ತಮ್ಮ ಹೆಂಡಿರು ಮಕ್ಕಳೊಡನೆ ಬದುಕು ಸಾಗಿಸುತ್ತಿದ್ದರು. ದನಗಳನ್ನು

ನಡೆಸಿಕೊಳ್ಳುವ ಹಾಗೆಯೆ ಹಳ್ಳಿ ಜನರು ಈ ಹರಿಜನರನ್ನು ನಡೆಸಿಕೊಳ್ಳುತ್ತಾ ಬಂದಿದ್ದರು.' (ಪು.೧೮)

ಇಂತಹ ದುಸ್ಥಿತಿಯಲ್ಲಿ ಬದುಕುವ ಕುಟುಂಬಗಳು ಎರಡು ರೀತಿಯಲ್ಲಿ ಅನ್ಯಾಯಗಳನ್ನು ಎದುರಿಸುತ್ತವೆ. ಒಂದೆಡೆ ಪರಂಪರಾಗತವಾಗಿ ಬಂದಿರುವ ಊಳಿಗಮಾನ್ಯ ವ್ಯವಸ್ಥೆಯ ನಿಯಮಗಳಿಗೆ ಒಳಗಾಗಿ ನಿರಂತರ ಗೌಡರ, ಜಮೀನುದಾರರ, ಕುಲಕರ್ಣಿಯವರ, ಪೂಜಾರಿಗಳ ಶೋಷಣೆಯನ್ನು ಎದುರಿಸುವುದು. ಶಿಕ್ಷಣದ ಪರಿಣಾಮವಾಗಿ ಹೊಸ ಬದುಕಿಗೆ ತೆರೆದುಕೊಂಡ ಯುವ ಸಮುದಾಯ ನವ ನಾಗರಿಕರ ಶೋಷಣೆಯನ್ನು ಎದುರಿಸುವುದು. ಈ ಎರಡು ಬಿಕ್ಕಟ್ಟುಗಳನ್ನು ಎದುರಿಸಿ ಬದುಕುವ ಅವರ ಬವಣೆಗಳನ್ನು ಕಾದಂಬರಿ ಮನೋಜ್ಞವಾಗಿ ಕಣ್ಣ ಮುಂದೆ ಅನಾವರಣ ಮಾಡುತ್ತದೆ.

ಸ್ವಾತಂತ್ರಪೂರ್ವದ ಗ್ರಾಮದ ಕಥನವಿದು. ಶಾಲೆಗಳು ಗ್ರಾಮಗಳನ್ನು ಪ್ರವೇಶ ಮಾಡಿ ಕೇರಿಗಳಲ್ಲಿ ಅರಿವನ್ನುಂಟುಮಾಡಿ ಹೊಸ ಪಲ್ಲಟಗಳಿಗೆ ಕಾರಣವಾಗುತ್ತಿದ್ದ ಕಾಲದ ಚಿತ್ರಣವಿದು. ಈ ಸಮಸ್ಯೆಗಳು ಕೇರಿಯಲ್ಲಿ ನವ ವಸಾಹತುಶಾಹಿಯ ಮೂಲಕ ಮತ್ತೊಂದು ರೀತಿಯಲ್ಲಿ ಕಾಣಿಸಿಕೊಳ್ಳುತ್ತಿವೆ. ಯಾವತ್ತಿಗೂ ದುಡಿವ ವರ್ಗ ಬಲಾಢ್ಯವಾಗುತ್ತಿರುವ ಪ್ರಭುತ್ವಶಕ್ತಿಯನ್ನು ಎದುರಿಸಿಯೆ ಬದುಕುಗಳನ್ನು ಕಟ್ಟಿಕೊಳ್ಳಬೇಕೆಂದು ಕಾದಂಬರಿ ಚಿಂತಿಸುತ್ತದೆ. ಕಾದಂಬರಿಯ ಕಾಲ ಹಳೆಯದಾದರೂ ಕೇರಿ ಅನುಭವಿಸುವ ಬವಣೆಗಳು ಕಾಲಾತೀತವಾದುವು.

ಕಾದಂಬರಿಯಲ್ಲಿ ಬರುವ ಪಾತ್ರಗಳು

ಈ ಕಾದಂಬರಿಯಲ್ಲಿ ಐದು ಬಗೆಯ ಪಾತ್ರಗಳು ಬರುತ್ತವೆ.

೧. ಕೇರಿಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವ ತಮಗೆ ಬೇಕಾದಾಗ ಭೋಗಿಸಲಿರುವವೆಂದು ಭಾವಿಸಿರುವ ಶರಣಪ್ಪ, ಸಿದ್ದೇಗೌಡರು. ಇವರ ಮುಂದಿನ ತಲೆಮಾರು ಶರಣಪ್ಪನ ಮಗ ಸಂಗಣ್ಣ, ಸಿದ್ದೇಗೌಡರ ಮಗ ತಿಪ್ಪೇಶಿ ಕೂಡ ಇದೇ ಮನೋಭಾವದವರು

೨. ಹರಿಜನರನ್ನು ಉದ್ಧಾರ ಮಾಡುತ್ತೇವೆಂದು ಸರಕಾರದಿಂದ ಅನುದಾನ ಪಡೆದುಕೊಂಡು ಗಾಂಧೀಜಿಯ ಹೆಸರಿನಲ್ಲಿ ಅನಾಥಶ್ರಮ ನಡೆಸುವ ಚೆಂಪಾವತಿ, ಚೆನ್ನಪ್ಪ ದಂಪತಿಗಳು. ಇವರಿಗೆ ಸಹಾಯ ಮಾಡುವ ಶ್ರೀಮಂತ ಕುಬೇರಪ್ಪ. ಈ ಮೂರು ಜನ ಅನಾಥ ದಲಿತ ಹಣ್ಣುಮಕ್ಕಳನ್ನು, ಹುಡಗರನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವವರು. ಅನಾಥಾಶ್ರಮದಲ್ಲಿ ಅನೈತಿಕ ಚಟುವಟಿಕೆಗಳನ್ನು ಮಾಡುವವರು

೩. ಗಬ್ಬೂರಿನಲ್ಲಿ ಸರಕಾರದ ಸಹಾಯ ಪಡೆದು ದಲಿತ ಹುಡುಗರಿಗೆ ಅನಾಥಾಲಯ ನಡೆಸುವ ಜ್ಞಾನೇಶ್ವರ. ಈತ ಹುಡುಗರನ್ನು ಉದ್ಧಾರ ಮಾಡುವ ನೆಪದಲ್ಲಿ ತನ್ನ ಕಾಮ ತೃಷೆಗೆ ಬಳಿಸಿಕೊಳ್ಳುವವನು

೪. ಸುಧಾರಣಾವಾದಿ ಗಾಂಧೀಜಿಯ ಅನುಯಾಯಿ ದೀನ ದಲಿತರ ಕಾಳಜಿ ಮಾಡುವ, ಅನ್ಯಾಯಗಳನ್ನು ಎದುರಿಸಲು ದಲಿತ ಯುವಕರಲ್ಲಿ ಜಾಗೃತಿ ಮೂಡಿಸುವ ಶಿಕ್ಷಕ ಸಾಂಬಯ್ಯ ಮಾಸ್ತರರು

೫. ಕೇರಿಯಲ್ಲಿ ಬರುವ ಅತ್ಯಂತ ದಯನೀಯವಾಗಿ ಕೀಳಾಗಿ ಬದುಕುವ ಮರಡಳ್ಳಿ ಕೇರಿಯ ಶಿವಗಂಗೆ, ಲಚಿಮಿ, ಚಂದ್ರಿ, ಮಹಾದೇವ, ಮಾದ

ಈ ಪಾತ್ರಗಳ ಸುತ್ತಾ ಕಾದಂಬರಿ ಬೆಳೆಯುತ್ತಾ ಹೋಗುತ್ತದೆ. ಕಾದಂಬರಿಯ ಕೇಂದ್ರ ಮರಡಳ್ಳಿ ಗ್ರಾಮ. ಈ ಗ್ರಾಮದಲ್ಲಿ ಶರಣಪ್ಪ ಮತ್ತು ಸಿದ್ದೇಗೌಡ ದೊಡ್ಡ ಜಮೀನುದಾರರು. ಅವರು ಹೇಳಿದಂತೆ ಊರು ಮುನ್ನಡೆಯುತ್ತಿತ್ತು. ಇವರು ಕೇರಿಯ ಜನರನ್ನು ತಮ್ಮ ಉಪಭೋಗಕ್ಕೆ ಇರುವರೆಂದು ನಂಬಿದ್ದರು. ಹೀಗಾಗಿ ಇಬ್ಬರು ಕೇರಿಯ ಮೇಲೆ ದಾಳಿ ಮಾಡಿ ಅಲ್ಲಿಯ ಮಹಿಳೆಯರನ್ನು ಬಲಾತ್ಕರಿಸುವುದು ಸರ್ವೆ ಸಾಮನ್ಯವಾಗಿತ್ತು. ಅದನ್ನು ಪ್ರತಿಭಟಿಸುವ ಯಾವ ಜಾಗೃತಿಯು ಅಲ್ಲಿರಲಿಲ್ಲ. ಅದೊಂದು ಸಹಜ ಕ್ರಿಯೆ ಎಂಬಂತೆ ನಡೆದು ಹೋಗುತ್ತಿತ್ತು. ಗಂಡನನ್ನು ಕಳೆದುಕೊಂಡು ಮರಡಳ್ಳಿ ಕೇರಿಗೆ ಬಂದ ಶಿವಗಂಗಾಳನ್ನು ಸಿದ್ದೇಗೌಡರು ಬಲಾತ್ಕರಿಸಿ ತಮ್ಮ ಅಧೀನಕ್ಕೊಳಪಡಿಸಿಕೊಳ್ಳುತ್ತಾರೆ.

ಗಂಡನನ್ನು ಕಳೆದುಕೊಂಡು ಆರುತಿಂಗಳ ಮಗುವನ್ನು ಕಂಕುಳಲ್ಲಿ ಇಟ್ಟುಕೊಂಡು ಊರಿಗೆ ಬಂದಾಗ ಆಕೆಗಾಗಿ ಯಾರು ಮರುಗುವದಿಲ್ಲ. ತಮ್ಮ ಸ್ವಾರ್ಥಕ್ಕೆ ಹೇಗೆ ಬಳಿಸಿಕೊಳ್ಳಬೇಕೆಂದೆ ಎಲ್ಲಾರು ಯೋಚಿಸುತ್ತಾರೆ. 'ಅಂದು ಮಧ್ಯಾಹ್ನ ಹಳ್ಳದ ದಂಡೆಯಲ್ಲಿ ಕಾಣಿಸಿಕೊಂಡ ಶರಣಪ್ಪನ ಮೂರ್ತಿ ಶಿವಗಂಗೆಯ ಒಳಗಣ್ಣುಗಳೆದುರಿಗೆ ಮೂಡಿದಂತಾಯಿತು. ಅವನು ತನಗಾಗಿ ಹೊಂಚು ಹಾಕಿ ಕುಳಿತ್ತಿದ್ದಾನೆ. ಗೌಡನು ತನ್ನ ಮೇಲೆ ಕಣ್ಣಿಟ್ಟಿದ್ದಾನೆ. ತಾನು ಹೊಲೆಯರ ಹೆಣ್ಣು, ಗಂಡನನ್ನು ಕಳೆದುಕೊಂಡ ಅನಾಥೆ. ತನ್ನನ್ನು ಅವರು ಬಯಸುವದೇನೋ ಸ್ವಾಭಾವಿಕವೇ ಆಗಿದೆ. ಆದರೆ ತನಗೀಗ ಯಾರ ಸಹವಾಸವೂ ಇಷ್ಟವಿಲ್ಲ. ತನ್ನ ಗಂಡ.. ಅವನು ಎಂಥವನೆ ಇದ್ದರೇನಂತೆ, ಪೀಡಿಸುತ್ತಿದ್ದರೇನಂತೆ. ಅಂತೂ ಅವನು ತನ್ನ ಗಂಡನಾಗಿದ್ದ. ತಾನು ಅವನ ಮದುವೆಯ ಹೆಂಡತಿಯಾಗಿದ್ದವಳು. ಆತ ಸತ್ತು ಇನ್ನೂ ಒಂದೂ ತಿಂಗಳು ಕಳೆದಿಲ್ಲ. ಅವನ ದೇಹವಿನ್ನೂ ಮಣ್ಣಿನೊಡನೆ ಬೆರೆತಿಲ್ಲ. ಇಷ್ಟರಲ್ಲಿಯೆ ನಾನು ಬೇರೊಬ್ಬರಿಗೆ ದೇಹವನ್ನೊಪ್ಪಿಸುವದೇ? ಛೆ ಅಸಹ್ಯ. ಕೂಲಿ ನಾಲಿ ಮಾಡಿಕೊಂಡು ಮಗನ ಜೊತೆ ಹಾಯಾಗಿ ಕಾಲ ಕಳೆಯುವ ಯೋಚನೆಯಿಂದ ತವರಿಗೆ ಬಂದುದಾಗಿದೆ. ಸೂಳೆಗಾರಿಕೆ ಮಾಡುವ ಆಪೇಕ್ಷೆ

ತನಗೇನು ಇಲ್ಲ. ಆದರೆ..... ಇವರೇನೂ ತನ್ನನ್ನೂ ಹಾಗೆ ಬಿಡುವಂತೆ ತೋರುವದಿಲ್ಲ. ಅತ್ತ ಶರಣಪ್ಪ, ಇತ್ತ ಗೌಡ. ಇಬ್ಬರಿಗೂ ತನ್ನ ದೇಹದ ಮೇಲೆ ಆಶೆ.'(ಪು.೨೬) ಇಂತಹ ಅಸಹಾಯಕ ಸ್ಥಿತಿಯಲ್ಲಿರುವ ಶಿವಗಂಗೆಯನ್ನು ಗೌಡರು ಕರುಣೆಯಿಂದ ನೋಡದೆ ತಮ್ಮ ಹಾಸಿಗೆಗೆ ಯಾವಾಗ ಬರುವಳೆಂದು ಕಾಯುವವರು. ಆಕೆ ಬರಲು ನಿರಾಕರಿಸಿದಾಗ ಹೆದರಿಸಿ ಬೆದರಿಸಿ ತಮ್ಮ ಸ್ವತ್ತನ್ನಾಗಿಸಿಕೊಳ್ಳುತ್ತಾರೆ.

ಆಕೆಯ ಗಂಡ ದರೋಡೆಕೋರನಾಗಿದ್ದರಿಂದ ಪೋಲೀಸರ ಕೈಯಲ್ಲಿ ಸಿಕ್ಕಿಹಾಕಿಕೊಂಡು ಸತ್ತ ಎಂಬ ಸುದ್ದಿ ಇತ್ತು. ಇದನ್ನೇ ಬಂಡವಾಳ ಮಾಡಿಕೊಂಡ ಸಿದ್ದೇಗೌಡ ಹವಲ್ದಾರರನ್ನು ಕರೆಸಿ ಆಕೆಯ ಮೇಲೆ ಕಳ್ಳತನದ ಆರೋಪ ಹೊರಿಸಿ ತಮ್ಮ ಕೈವಶ ಮಾಡಿಕೊಳ್ಳುತ್ತಾರೆ. ಇಡೀ ಕೇರಿ ಮೇಲೆ ದಾಳಿ ಮಾಡುತ್ತಾರೆ. 'ಗೌಡ ಹವಲ್ದಾರ, ಹಳಬರು, ಓಲೆಕಾರರು ಎಲ್ಲರೂ ಸೇರಿ ರಾತ್ರೆ ಹರಿಜನ ಕೇರಿಯ ಎಲ್ಲ ಮನೆಗಳಲ್ಲೂ ಹೊಕ್ಕು ಅತ್ಯಾಚಾರ ಮಾಡಿದರು. ಅತ್ಯಂತ ದಾರಿದ್ರ್ಯದಲ್ಲೂ ಬಟ್ಟೆ ಬರೆಗಳಿಗೆಂದು ಉಳಿಸಿ ಮಡಿಗಿಸಿಟ್ಟಿದ್ದ ಆಣೆ ಕಾಸುಗಳನ್ನು ದೋಚಿಕೊಂಡರು. ಶಿವಗಂಗೆಯನ್ನು ಅವಳ ಗುಡಿಸಿಲಿಗೆ ಕರೆದೊಯ್ದು ಬೆಳಕು ಹರಿಯುವವರೆಗೂ ಪೀಡಿಸಿದರು. ಹವಲ್ದಾರ, ಸಿದ್ದಗೌಡ, ಹಳಬರು, ಓಲೆಕಾರರು ಎಲ್ಲಾರು ಒಬ್ಬರಾದ ಬಳಿಕ ಒಬ್ಬರಂತೆ ಅವಳ ಶೀಲಭಂಗ ಮಾಡಿದರು. ಅತ್ತು ಅತ್ತು ಸೋತು ಬಿದ್ದಿದ್ದ ಬಾಲಕ ಮಹಾದೇವನನ್ನು ಲಚುಮಿ ತನ್ನ ಗುಡಿಸಿಲಿಗೆ ಕರೆದೊಯ್ದು ಮಲಗಿಸಿದ್ದಳು.

ಸೂರ್ಯೋದಯದ ಸಮಯಕ್ಕೆ ದಾಳಿಗಾರರೆಲ್ಲ ಹರಿಜನ ಕೇರಿಯನ್ನು ತ್ಯಜಿಸಿ ಹೊರಟರು. ಗುಡಿಸಲು ಮೂಲೆಯಲ್ಲಿ ಶವದಂತೆ ಬಿದ್ದುಕೊಂಡಿದ್ದ ಶಿವಗಂಗೆಯನ್ನು ಎಡಗಾಲಿನಿಂದ ಒದೆದು 'ಇಂದಿನಿಂದ ಗೌಡರನ್ನ ದಿನಾಲು ತಪ್ಪದೇ ಕರಕೊಂಡಿಯೋ, ನೀ ಇಲ್ಲಿ ಉಳಿತೀ, ಅವರಿಗೇನಾರ ಅಪಮಾನ ಮಾಡಿಯಂದರ ನೋಡು, ಹುಷಾರಿ. ಬೇಡಿ ಹಾಕಿ ಜೇಲಿಗೆ ಸಾಗುಸುತೀನಿ.' ಎಂದು ಎಚ್ಚರಿಕೆಯನ್ನಿತ್ತು ಹೊರಟ ಹವಲ್ದಾರ'(ಪು.೩೮)

ಮುಂದೆ ಯಾವಾಗ ಹೋದರು ದೇಹ ಒಪ್ಪಿಸುವ ಸೇವಕಿಯಾಗಿ ಶಿವಗಂಗೆ ಇರಬೇಕಾಯಿತು. ಇದು ಕೇವಲ ಶಿವಗಂಗೆಯ ಸ್ಥಿತಿಯಲ್ಲ. ಆ ಕೇರಿಯಲ್ಲಿ ವಾಸ ಮಾಡುವ ಬಹುತೇಕ ಮಹಿಳೆಯರು ಇದೇ ಸ್ಥಿತಿಯಲ್ಲಿದ್ದರು. ಯಾವ ಭದ್ರತೆಯಿಲ್ಲದ ಈ ಮಹಿಳೆಯರು ಉಳ್ಳವರ ಆಧೀನದಲ್ಲಿಯೆ ಇರಬೇಕಾಗಿತ್ತು. ಅವರ ಹೊಲಗಳಲ್ಲಿ ದುಡಿದು ಜೀವಿಸಬೇಕಾದ್ದರಿಂದ ಅನಿವಾರ್ಯವಾಗಿ ಅವರ ಅಂಕೆಗೆ ಒಳಗಾಗುತ್ತಿದ್ದರು. ದುಡಿಯುವ ಶಕ್ತಿ ಕಡಿಮಿಯಾದಂತೆ ಅವರನ್ನು ಕೇಳುವವರೆ ಇರುವದಿಲ್ಲ. ಉಟಕ್ಕೂ ಕಷ್ಟ ಪಡಬೇಕಾಗುತ್ತದೆ. ಕೆಲವು ಸಾರಿ ಊಟಕ್ಕಿಲ್ಲದೆ ಸಾವನ್ನಪ್ಪುವ ಸ್ಥಿತಿ ಬರುತ್ತದೆ.

ಕಾದಂಬರಿಯಲ್ಲಿ ಶಿವಗಂಗೆಯು ಗೌಡನ ಅಮಾನುಷ ಭೋಗಕ್ಕೆ ಒಳಗಾಗುತ್ತಾಳೆ. ಆಕೆಗೆ ಯಾವ ಸಹಾಯವೂ ಮಾಡುವದಿಲ್ಲ.'ಜಿಪುಣನಾದ ಸಿದ್ಧಗೌಡನಿಂದ ಶಿವಗಂಗೆಗೆ ಒಂದು ಕಾಸು ಸಿಕ್ಕುವಂತಿರಲಿಲ್ಲ. ಅಂತೆಯೇ ಅವಳು ಜೀವನೋಪಾಯಕ್ಕೆಂದು ತಂದೆಯ ಕಾಯಕವನ್ನಾರಂಭಿಸಬೇಕಾಯಿತು. ಪೆಟ್ಟಿಗೆಯಲ್ಲಿ ಬಿದ್ದುಕೊಂಡಿದ್ದ ರಂಪಿಗೆ, ಉಳಿ ಮೊದಲಾದ ಆಯುಧಗಳನ್ನು ಹೊರದೆಗೆದಳು. ಢೋರರ ಮನೆಗೆ ಹೋಗಿ ಒಂದು ರೂಪಾಯಿಯ ಚರ್ಮವನ್ನು ಕೊಂಡು ತಂದಳು. ದಾರವನ್ನು ಮೇಣವನ್ನು ಸಜ್ಜುಗೊಳಿಸಿಕೊಂಡು ಪಾದರಕ್ಷೆಗಳನ್ನು ಸಿದ್ಧಗೊಳಿಸತೊಡಗಿದಳು. ಎರಡು ದಿನಗೊಳಗಾಗಿ ಎರಡು ಜೊತೆ ಪಾದರಕ್ಷೆಗಳನ್ನು ತಯಾರಿಸಿ ರಾಮಪುರದ ಸಂತೆಗೊಯ್ದು ಮಾರಿ ಮನೆಗೆ ಬೇಕಾದ ಸಾಮಾನುಗಳನ್ನು ಕಾಳು ಕಡ್ಡಿಗಳನ್ನು ಕೊಂಡು ತಂದಳು'(ಪು.೩೯) ಕೇರಿಯ ಮಹಿಳೆಯರನ್ನು ಉಂಡು ಬಿಸಾಡುವ ಪ್ರವೃತ್ತಿ ಅಲ್ಲಿಯ ಗೌಡರಲ್ಲಿ ಬೆಳೆದಿತ್ತು. ಮಗನನ್ನು ಉಡಿಯಲ್ಲಿ ಕಟ್ಟಿಕೊಂಡು ಜೀವನವನ್ನು ಶಿವಗಂಗೆ ಕಳೆಯಬೇಕಿತ್ತು. ಮಗನಿಗೆ ಓದಿಸಬೇಕೆಂಬ ಹಂಬಲವೂ ಇತ್ತು. ಆದರೆ ಆಕೆ ದುಡಿದ ಹಣ ದಿನದ ಬದುಕಿಗೆ ಸಾಲುತ್ತಿರಲಿಲ್ಲ. ಬಡವರಿಗೆ ಕಾಯಿಲೆ ಜಾಸ್ತಿ ಎಂಬಂತೆ ಆಗಾಗ ಶಿವಗಂಗೆ ಕಾಯಿಲೆ ಬೀಳುತ್ತಿದ್ದಳು. ಏನು ಉತ್ಪಾದಿಸಲು ಶಕ್ತಿಯಿಲ್ಲದ ಮಹಾದೇವ ಅವ್ವನನ್ನು ನೋಡಿ ಮರುಗುತ್ತಿದ್ದನಷ್ಟೇ. ಅವನ ಹೊಟ್ಟೆಗೂ ಅಮ್ಮ ದುಡಿದದ್ದೂ ಸಾಲುತ್ತಿರಲಿಲ್ಲ.

ಕಾಯಿಲೆಯಿಂದ ನರಳುತ್ತಿದ್ದ ಶಿವಗಂಗೆಯನ್ನು ಉಪಚರಿಸುವವರು ಯಾರು ಇರಲಿಲ್ಲ. ವಿಪರೀತ ಜ್ವರ ಬಂದು ದುಡಿಲಾರದ ಸ್ಥಿತಿಗೆ ಬಂದಿದ್ದಳು. ಆಗ ಮಹಾದೇವ ಸಾಂಬಯ್ಯ ಮಾಸ್ತಾರನಿಂದ ಔಷಧಿ ತಂದುಕೊಟ್ಟ. ಆದರೆ ಔಷಧಿ ತಗೊಳ್ಳಲು ಮನೆಯಲ್ಲಿ ಊಟ ಇರಲಿಲ್ಲ. ಕಾಳು ಕಡಿ ಎಲ್ಲಾ ಬರಿದಾಗಿದ್ದವು.

'ನೀನು ಒಂದೀಟೂ ಉಣಬೇಕವ್ವಾ, ಅನ್ನಾ ಉಣ್ಣಿಸಿದ ಮ್ಯಾಲ ಔಷಧಿ ಕುಡಿಸಿಬೇಕಂತ ಹೇಳಿದರಾ ಮಾಸ್ತರು. ಎಂದು ಹೇಳುತ್ತಾ ಮಹಾದೇವ ಮೆಲಕ್ಕೆದ್ದು ಪೆಟ್ಟಿಗೆಯನ್ನು ತೆರೆದು ಅದರಲ್ಲಿದ್ದ ಗಡಿಗೆಯೊಂದರಲ್ಲಿ ಕೈ ಹಾಕಿದ. ನವಣೆಯಕ್ಕಿಯನ್ನಿಡುವ ಆ ಗಡಿಗೆ ಪೂರ್ತಿಯಾಗಿ ಬರಿದಾಗಿತ್ತು.

'ಅಕ್ಕಿಯೆಲ್ಲಾ ತೀರಿ ಹೋಗ್ಯೈತಿ ಅವ್ವಾ'

'ಹೌದೌದು ನಾ ಮರತೇಬಿಟ್ಟಿದ್ದೀನಿ. ನಿನ್ನೆ ರಾತ್ರಿಗೆ ತೀರಿ ಹೋಗಿತ್ತಲ್ಲಾ? ನಾ ಹೀಂಗ ಮಲಿಗಿಬಿಟ್ಟೀನಿ. ಕೆಲಸ ನಿಂತು ಹೋತು. ಮುಂದ ಹೆಂಗಾ ಮಾಡೂದು ಮಗನೇ?'

ಆ ವೇಳೆಗೆ ಹನುಮನ ಮಗಳು ಚೆಂದ್ರಾ ಇವರ ಬಾಗಿಲಲ್ಲಿ ಬಂದು ನಿಂತು ಕೇಳಿದಳು

'ಹಸಿವು ಬಾಳ ಆಗ್ಯೆತಿ ಅತ್ತೀ ಏನಾರ ಕೊಡು ಒಂದೀಟು'

ಮಹಾದೇವನ ಕಣ್ಣುಗಳಿಂದ ದಳದಳನೆ ನೀರು ಸುರಿಯತೊಡಗಿತು. ಚೆಂದ್ರಳಿಗೆ ಏನು ಹೇಳಬೇಕು? ಇ ದರಿಂದ ಆತಂಕಗೊಂಡ ಮಹಾದೇವ ಕೇರಿಯ ಜನರನ್ನು ವಿಚಾರಿಸಿದರೆ ಯಾರು ಸ್ಪಂದಿಸುವದಿಲ್ಲ.

ಕೊನೆಗೆ ಮಾದಣ್ಣನ ಹತ್ತಿರ ಬರುತ್ತಾನೆ. ಮಾದಣ್ಣ ಹೇಳುವ ಮಾತುಗಳು ಕೇರಿಯ ಜನರ ಹಸಿವಿನ ಭೀಕರತೆಯನ್ನು ಮನಗಾಣಿಸುತ್ತದೆ.

'ಅವ್ವಾಗ ಬಾಳ ಜ್ವರ ಮಾದಣ್ಣ. ಮನ್ಯಾಗ ಏನು ಇಲ್ಲ ಉಣ್ಣಾಕ.'

'ಇಲ್ಲದಿದ್ದರ ಇಲ್ಲ. ನಾಯೇನ ಮಾಡಲಿ?ನಾನರೆ ಏನು ಸಾಹುಕಾರನು?'

'ಏನಾದರೂ ಕೊಡಪಾ ಮಾದಣ್ಣಾ'

'ಕೊಟ್ಟರ ನನ ಜೀವನ ಕೊಡಬೇಕು ನೋಡು' (ಪು.೩೯)

ಹೀಗಾಗಿ ಕೇರಿಗಳು ಊಟಕ್ಕೂ ಗತಿಯಿಲ್ಲದೆ ಬದುಕುತ್ತಿದ್ದವು. ಇಂಥದರಲ್ಲಿ ಉಳ್ಳವರು ಅವರಿಗೆ ಯಾವ ಮಾನವೀಯತೆಯನ್ನು ತೋರಿಸದೆ ಅದೊಂದು ಸಹಜ ಜೀವನ ಎಂದೇ ಭಾವಿಸಿದ್ದರು.

ಕೇರಿಗಳು ಬದುಕುವ ರೀತಿಯು ಮನಕಲಕುವಂಥದ್ದು."ಸತ್ತ ದನದ ಮಾಂಸಗಳಿಂದಲೇ ಅವರು ಹೊಟ್ಟೆ ಹೊರೆಯಬೇಕಾಗುತ್ತಿತ್ತು. ಎಂಟು ಹತ್ತು ಮಕ್ಕಳನ್ನೊಳಗೊಂಡ ದೊಡ್ಡ ಸಂಸಾರಿಗಳಿಗೆ 'ಆಯ'ದ ಎರಡು ತಿಂಗಳು ಸಾಲುತ್ತಿರಲಿಲ್ಲ. ಮುಂದಿನ ಹತ್ತು ತಿಂಗಳವರೆಗೆ ದನದ ಮಾಂಸವೇ ಗತಿಯಾಗುತ್ತಿತ್ತು. ರೈತರ ಹೊಲಗಳಲ್ಲಿ ಕೂಲಿ ಕೆಲಸ ಸಿಕ್ಕಿದಾಗ ಒಂದೆರಡು ಸೇರು ಜೋಳ ಸಿಕ್ಕುತ್ತಿತ್ತು. ಅಷ್ಟೇ ಮಳೆಗಾಲದ ದಿನಗಳಲ್ಲಿ ಕೂಲಿ ಕೆಲಸವೂ ದೊರೆಯುತ್ತಿರಲಿಲ್ಲವಾದ್ದರಿಂದ ಎರಡು ಮೂರು ತಿಂಗಳವರೆಗೆ ಅವರಲ್ಲಿ ಅನೇಕರು ಅರೆ ಹೊಟ್ಟೆಯಿಂದಲೇ ಇರಬೇಕಾಗುತ್ತಿತ್ತು. ಹುಡುಗರು ಹಳ್ಳಿಗಳಲ್ಲಿ ತಿರುಗಿ ತಂಗಳು ರೊಟ್ಟಿಯ ತುಣುಕುಗಳನ್ನು ಭಿಕ್ಷೆ ಬೇಡಿ ತರುತ್ತಿದ್ದರು. ದೊಡ್ಡವರು ಚಿಕ್ಕವರು ಎಲ್ಲರೂ ಅವಗಳನ್ನೇ ಹಂಚಿಕೊಂಡು ಹೇಗೋ ಜೀವ ಉಳಿಸಿಕೊಳ್ಳುತ್ತಿದ್ರು. ಸೂಳೆಗಾರಿಕೆ ಮಾಡುತ್ತಿದ್ದ ಹೆಂಗಸರು ಮನೆಯವರಿಗೆ ಮಾತ್ರ ಹೆಚ್ಚು ತೊಂದರೆಯಾಗುತ್ತಿರಲಿಲ್ಲ. ಹಾಗೆಂದು ಕೇರಿಯಲ್ಲಿನ ಎಲ್ಲಾ ಸ್ತ್ರೀಯರು ಸೂಳೆಗಾರಿಕೆ ಮಾಡುವಂತಿರಲಿಲ್ಲ. ಉಪವಾಸ ಕಾಯಿಲೆ ಕಸಾಲೆಗಳಿಂದಾಗಿ ಎಲುಬಿನ ಗೂಡುಗಳಂತಾದ ಆ ಬಡ ಸ್ತ್ರೀಯರನ್ನು ಇಟ್ಟುಕೊಳ್ಳುವವರಾದರೂ ಯಾರೂ? ಅವರ ಪಾಲಿಗೆ ಮತ್ತೆ ಉಪವಾಸವೆ ಬರುತ್ತಿತ್ತು. ಮಕ್ಕಳು ಹುಟ್ಟುತ್ತಿದ್ದವು, ಸಾಯುತ್ತಿದ್ದವು. ಬದುಕಿರುವವರು ಸತ್ತವರಂತೆಯೆ ಕಾಣಿಸುತ್ತಿದ್ದರು. ಹರಿಜನ ಕೇರಿಯಲ್ಲಿ ಹೆಚ್ಚು ಭಾಗ ಸ್ಮಶಾನದ

ನೆನಪನ್ನು ತಂದುಕೊಡುವತಂತಿತ್ತು. ಅಲ್ಲಿ ಜೀವವಿರಲಿಲ್ಲ. ಉತ್ಸಾಹವಿರಲಿಲ್ಲ. ಉಲ್ಲಾಸವಿರಲಿಲ್ಲ. ಮಾನವೀಯ ಭಾವನೆಗಳನ್ನೂ ಮೌಲ್ಯಗಳನ್ನೂ ಅರಿಯದ ಪಶುಗಳ ಹಾಗೆ ಅಲ್ಲಿನವರ ಬದುಕು ಸಾಗುತ್ತಿತ್ತು."(ಪು.೧೯)

ಹೀಗಾಗಿ ಶಿವಗಂಗೆಯಂತವರ ಬದುಕು ಹೊಟ್ಟೆಗೆ ಹಿಟ್ಟಿಲ್ಲದೆ ಸಾಗುತ್ತಿತ್ತು. ಆಕೆ ಹಸಿವಿನಿಂದ ನರಳುತ್ತಿದ್ದರೂ ಕೇರಿಯಲ್ಲಿ ಊಟವಿರಲಿಲ್ಲ. ಅಂತಹ ದಾರುಣತೆ ಕೇರಿಯಲ್ಲಿ ತಾಂಡವಾಡುತ್ತಿತ್ತು. ಇದನ್ನು ಎದುರಿಸುವ ಶಕ್ತಿ ಅಲ್ಲಿರುವ ಜನರಿಗೆ ಇರಲಿಲ್ಲ. ತಮ್ಮ ಸ್ಥಿತಿಗೆ ಕಾರಣವೇನೆಂಬ ಅರಿವು ಅವರಿಗಿರಲಿಲ್ಲ. ಇದರಿಂದಾಗಿ ಶಿವಗಂಗೆ ಊಟವಿಲ್ಲದೆ ನರಳಿ ನರಳಿ ದುರಂತ ಸಾವನ್ನಪ್ಪುತ್ತಾಳೆ. ಅಸಹಾಯಕನಾದ ಮಗ ಮಹಾದೇವ ಇದನ್ನೆಲ್ಲಾ ನೋಡಿಕೊಂಡೆ ಜೀವನ ದೂಡಬೇಕಾಗುತ್ತದೆ. ಇದಕ್ಕೆ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯ ಕೇರಿಯ ಜನರಿಗೆ ಇರಲಿಲ್ಲ.

ಶಿವಗಂಗೆಯ ಮಗ ಮಹಾದೇವ. ಅಮ್ಮನ ಶೋಷಣೆಯನ್ನು ನೋಡಿಯೂ ಏನು ಮಾಡಲಾಗದ ಅಸಹಾಯಕ. ಕೇರಿಯಲ್ಲಿ ತಮ್ಮ ಜನರು ಎದುರಿಸುವ ಈ ಸಮಸ್ಯೆಗಳನ್ನು ನೋಡಿ ಮಮ್ಮಲ ಮರುಗುವವನು. ಇದರಿಂದ ಅವರನ್ನು ಬಿಡುಗಡೆಗೊಳಿಸುವ ದಾರಿ ಯಾವುದೆಂದು ಹುಡುಕುವವನು. ಬೆಂಬಲಕ್ಕೆ ಯಾರು ಇಲ್ಲದ್ದರಿಂದ ಎಲ್ಲಾ ದಬ್ಬಾಳಿಕೆ ಅನ್ಯಾಯಗಳನ್ನು ನೋಡಿಯೂ ಮೂಕನಾಗಿರುವ ಪರಸ್ಥಿತಿ ಅವನದು. ಅಮ್ಮನ ದುರಂತ ಬದುಕು ಅವನನ್ನು ಮತ್ತಷ್ಟೂ ಕುಗ್ಗಿಸುತ್ತದೆ. ಅದರಿಂದ ಪಾರಾಗಲು ಪಟ್ಟಣ ಸೇರುತ್ತಾನೆ. ಅಲ್ಲಿಯೂ ಅಸ್ಪೃಶ್ಯರಿಗೆ ಒಳ್ಳೆಯ ಜೀವನ ಇಲ್ಲ.

ಗಬ್ಬೂರಿಗೆ ಬಂದು ಅನಾಥಾಲಯ ಸೇರುತ್ತಾನೆ. ಈಗಾಗಲೆ ತಮ್ಮೂರಿಗೆ ಬಂದು ಅಕ್ಷರದ ಅರಿವು ಮೂಡಿಸಿದ್ದ ಸಾಂಬಯ್ಯ ಮಾಸ್ತರರು ಆಶ್ರಯ ನೀಡುತ್ತಾರೆ. ಅನಾಥಾಲಯದಲ್ಲಿಯು ನೂರೆಂಟು ಸಮಸ್ಯೆಗಳು. ಇವರನ್ನು ಹರಿದು ತಿನ್ನುವವರೆ. ಅಲ್ಲಿಂದ ಇನ್ನೊಂದು ಆಶ್ರಮಕ್ಕೆ ಬರುತ್ತಾನೆ. ಚೆಂಪಾವತಿ ನೇತೃತ್ವದಲ್ಲಿ ನಡೆಯುತ್ತಿದ್ದ ಅನಾಥಾಲಯವು ಅನೈತಿಕತೆಯಿಂದ ಕೂಡಿದೆ. ಅಲ್ಲಿರುವ ಬಾಲಕಿಯರನ್ನು ದುರುಪಯೋಗ ಮಾಡಿಕೊಳ್ಳುವ ದಂದೆ ಅಲ್ಲಿ ನಡೆಯುತ್ತದೆ. ಅದನ್ನು ಪ್ರತಿಭಟಿಸುವ ಸಾಂಬಯ್ಯ ಮಾಸ್ತರರನ್ನು ಕಳ್ಳತನದ ಆರೋಪ ಹೊರಸಿ ಜೈಲಿಗೆ ಕಳಿಸುತ್ತಾರೆ. ಕಸ್ತೂರಿಯ ಮೇಲೆ ಕುಬೇರಪ್ಪರಿಂದ ಬಲತ್ಕಾರ ನಡೆಯುತ್ತದೆ. ಇದನ್ನೂ ನೋಡಿಯೂ ಎದುರಿಸಲಾರದ ಸ್ಥಿತಿಯನ್ನು ಮಹಾದೇವ ಅನುಭವಿಸುತ್ತಾನೆ. ನಿಜವಾಗಿಯು ಇವರನ್ನು ಮುಟ್ಟಬಾರದು. ಆದರೆ ಸಮಾಜ ನಮ್ಮನ್ನು ಹುಟ್ಟುತ್ತಲೇ ಹೊಲೆಯರು ಎಂದು ಗುರುತಿಸಿ ಮುಟ್ಟಬೇಡಿ ಎನ್ನುತ್ತದೆ ಎಂಬ ಸಾತ್ವಿಕ ಆಕ್ರೋಶ ಅವನದು. ಅದಕ್ಕೆ ಈ ವ್ಯವಸ್ಥೆಯಲ್ಲಿ ಬೆಲೆ ಇಲ್ಲ.

ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ಮಹಾದೇವ ಬದುಕಿಗಾಗಿ ಗಬ್ಬೂರಿನಲ್ಲಿರುವ ಅನಾಥಾಲಯ ಸೇರುತ್ತಾನೆ. ಅಲ್ಲಿ ಚೌಡೇಶ್ವರ ಬ್ರಹ್ಮಚಾರಿ ಅನಾಥಾಶ್ರಮ ನೋಡಿಕೊಳ್ಳುತ್ತಿರುತ್ತಾನೆ. ಆತ ಬ್ರಹ್ಮಚರ್ಯದ ಹೆಸರಿನಲ್ಲಿ ಅಲ್ಲಿರುವ ಬಾಲಕರನ್ನು ತನ್ನ ಕಾಮತೃಷೆಗೆ ಬಳಿಸಿಕೊಳ್ಳುತ್ತಿರುತ್ತಾನೆ. ಅದು ತಪ್ಪು ಎಂದು ಗೊತ್ತಿದ್ದು ಆ ಕೃತ್ಯದಲ್ಲಿ ತೊಡಗಿರುತ್ತಾನೆ. ಮಹಾದೇವ ಈ ಬಲೆಗೆ ಸಿಕ್ಕಿಕೊಳ್ಳದೆ ಅನಾಥಾಶ್ರಮವನ್ನು ಬಿಟ್ಟು ಚೆಂಪಾವತಿ ನಡೆಸುವ ಹರಿಜನೋದ್ಧಾರದ ನಿಲಯವನ್ನು ಸೇರುತ್ತಾನೆ. ಅಲ್ಲಿಯೂ ಬಾಲಕಿಯರ ಲೈಂಗಿಕ ಶೋಷಣೆ ನಡೆಯುತ್ತದೆ. ಅಲ್ಲಿರುವ ಜಾನಕಿ ಚೆಂಪಾವತಿಯವರ ಮೋಸಕ್ಕೆ ಬಲಿಯಾಗಿ ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಇದನ್ನು ನೋಡಿಯೂ ಮಹಾದೇವ ಏನು ಮಾಡದ ಅಸಹಾಯಕನಾಗುತ್ತಾನೆ. ಜಾನಕಿಯೂ ಅನಾಥೆಯಾಗಿದ್ದರಿಂದ ಯಾರಲ್ಲಿ ನ್ಯಾಯ ಕೇಳುವುದೆಂದು ಸಹಿಸಿಕೊಂಡಿರುತ್ತಾಳೆ.

ಮಹಾದೇವ ತನ್ನ ಬದುಕಿನುದ್ದಕ್ಕೂ ಮನುಷ್ಯರ ರಕ್ತ ಹೀರುವ ಮುಖಗಳನ್ನು ನೊಡುತ್ತಾ ಅನುಭವಿಸುತ್ತಾ ಹೋಗುತ್ತಾನೆ. ಗ್ರಾಮದಲ್ಲಿ ಒಂದು ರೀತಿಯ ಅಸ್ಪೃಷ್ಯರ ಶೋಷಣೆಯಾದರೆ, ನಗರಗಳಲ್ಲಿ ಮತ್ತೊಂದು ರೀತಿಯ ಶೋಷಣೆಯ ಕರಾಳ ಮುಖಗಳನ್ನು ಮಹಾದೇವ ಕಾಣುತ್ತಾನೆ. ದಲಿತೋದ್ಧಾರದ ಹೆಸರಿನಲ್ಲಿಯೇ ನಡೆಯುವ ಅನ್ಯಾಯದ ವಿವಿಧ ಮುಖಗಳನ್ನು ಕಾದಂಬರಿ ಬಿಚ್ಚಿಡುತ್ತದೆ.

ದಲಿತರನ್ನು ಉದ್ಧಾರ ಮಾಡಬೇಕೆಂಬ ಉದಾತ್ತ ಧ್ಯೇಯವನ್ನು ಹೊಂದಿದ ಸಾಂಬಯ್ಯ ಮಾಸ್ತರರು ಈ ಕರಾಳ ಮುಖಗಳನ್ನು ಸರಿ ಮಾಡಲಾಗುವದಿಲ್ಲ. ಚೆಂಪಾವತಿ ಚೆನ್ನಪ್ಪ ಕುಬೇರಪ್ಪ ಮಾಡುವ ಅಕ್ರಮ ಅನ್ಯಾಯಗಳನ್ನು ಕಣ್ಣಾರೆ ನೋಡಿಯು ಎದುರಿಸಲಾರದೆ ಸೋತು ಹೋಗುತ್ತಾರೆ. ಉದ್ಧಾರದ ಹೆಸರಿನಲ್ಲಿ ಅವರು ತಮ್ಮ ಉದ್ಧಾರ ಮಾಡಿಕೊಳ್ಳುತ್ತಾರೆ. ದಲಿತರ ಉದ್ಧಾರಕ್ಕೆ ಬರುವ ಹಣವನ್ನು ತಮ್ಮ ಸ್ವಾರ್ಥಕ್ಕೆ ಬಳಿಸಿಕೊಳ್ಳುತ್ತಾರೆ. ಇದನ್ನು ಪ್ರತಿಭಟಿಸಿದ ಸಾಂಬಯ್ಯ ಮಾಸ್ತರರನ್ನು ಕಳ್ಳತನದ ಆರೋಪ ಹೊರಿಸಿ ಜೈಲಿಗೆ ಕಳಿಸಲಾಗುತ್ತದೆ.

ಕುಬೇರಪ್ಪನಂತಹ ಶ್ರೀಮಂತರು ದಲಿತರ ಉದ್ಧಾರ ಮಾಡುತ್ತೇವೆಂದು ಸಹಾಯ ಮಾಡುತ್ತಾರೆ. ಅವರು ತಮ್ಮ ಸ್ವಾರ್ಥಕ್ಕೆ ಅಲ್ಲಿಯ ಬಾಲಕಿಯರನ್ನು ಬಳಿಸಿಕೊಳ್ಳುತ್ತಾರೆ. ಅನಾಥಾಲಯ ನಡೆಸುವ ಚೆಂಪಾವತಿಯ ಜೊತೆ ಅಕ್ರಮ ಸಂಬಂಧ ಹೊಂದಿದ ಕುಬೇರಪ್ಪ ಆಕೆಯ ಅಣತಿಯಂತೆ ನಡೆಯುತ್ತಾನೆ. ಮುಂದೆ ಚುನಾವಣೆಗೆ ನಿಂತು ಗೆದ್ದು ಅಧಿಕಾರ ಮಾಡುವವರು ಇವರೆ. ಚುನಾವಣೆಯಲ್ಲಿ ಗೆದ್ದು ಬರಲು ಈ ರೀತಿಯ ಉದ್ಧಾರದ ನಾಟಕವನ್ನು ಮಾಡುವುದು. ಇವರನ್ನು ಯಾರು ಕೇಳುವವರು ಇಲ್ಲ. ಅವರು ಬಲಾಢ್ಯರಾದ್ದರಿಂದ ಕಾನೂನುಗಳನ್ನು ತಮ್ಮ ಪರವಾಗಿ ಇರುವಂತೆ ನೋಡಿಕೊಳ್ಳುತ್ತಾರೆ. ಇವರು ಮಾಡುವ ಅನ್ಯಾಯಗಳನ್ನು

ನೋಡಿಯೂ ನೋಡದಂತೆ ಸಮಾಜ ಇರುತ್ತದೆ. ಇವರ ಅನ್ಯಾಯದ ಮುಖಗಳನ್ನು ಅನಾವರಣ ಮಾಡುವದೆ ಕಾದಂಬರಿಯ ಉದ್ದೇಶವಾಗಿದೆ.

ಕುಬೇರಪ್ಪನ ಕಾಮ ಲಾಲಸೆಗೆ ಬಲಿಯಾಗುವ ಕಸ್ತೂರಿಯಂತಹ ಬಾಲಕಿಯರನ್ನು ಯಾರು ರಕ್ಷಣೆ ಮಾಡುವವರಿಲ್ಲ. ಅನಾಥಾಶ್ರಮವನ್ನು ನಂಬಿ ಬರುವ ಇಂತಹ ಬಾಲಕಿಯರನ್ನು ಕುಬೇರಪ್ಪ, ಚೆಂಪಾವತಿ, ಚೆನ್ನಪ್ಪನಂತವರು ನಿರ್ಧಯವಾಗಿ ಶೋಷಣೆ ಮಾಡುತ್ತಾರೆ. ಈ ವಿಷಯಗಳನ್ನು ಯಾರ ಮುಂದೆ ಹೇಳಿ ನ್ಯಾಯ ಕೇಳುವುದು ಎಂಬ ಸ್ಥಿತಿಯನ್ನು ಕಾದಂಬರಿ ಬಿಂಬಿಸುತ್ತದೆ. ನ್ಯಾಯ ಕೊಡುವ ಸ್ಥಾನದಲ್ಲಿರುವವರೆಲ್ಲಾ ನೈತಿಕವಾಗಿ ಅಧೋಗತಿಗಿಳಿದವರು. ಇವರ ವಿರುದ್ಧ ದೊಡ್ಡ ಆಂದೋಲನ ಮಾಡಬೇಕಾದ ಮಹಾದೇವನಂತವರು ತಮ್ಮ ಹೊಟ್ಟೆ ತುಂಬಿಸಿಕೊಳ್ಳದೆ ಒದ್ದಾಡುತ್ತಿದ್ದಾರೆ. ಇದು ಕೇವಲ ಮಹಾದೇವನ ಸಮಸ್ಯೆಯಲ್ಲ. ದೇಶದ ಯುವಕರ ಸಮಸ್ಯೆಯು ಆಗಿದೆ.

ಮರಡಳ್ಳಿಯಲ್ಲಿರುವ ಚಂದ್ರಿ ಬಸವಿ ಬಿಡುವ ಪದ್ದತಿಗೆ ಬಲಿಯಾಗುತ್ತಾಳೆ. ದಲಿತರಿಗೆ ಈ ಪದ್ದತಿ ಕರಾಳವಾದುದು. ಅದನ್ನು ದೇವರು ಮಾಡಿದ್ದು, ಒಪ್ಪಿಕೊಂಡು ಹೋಗಬೇಕೆಂದು ದಲಿತರು ನಂಬಿದ್ದಾರೆ. ದೇವರ ಹೆಸರಿನಲ್ಲಿ ಇಂತಹ ಕರಾಳ ಕೃತ್ಯ ನಡೆಯುತ್ತದೆ. ಇದು ಮಹಾದೇವನಿಗೆ ಗೊತ್ತಾಗುತ್ತದೆ. ಚಂದ್ರಿಗೆ ಎಷ್ಟು ತಿಳಿಸಿ ಹೇಳಿದರೂ ಆಕೆಯು ಕೂಡ ಅಸಹಾಯಕಳು. ಇದನ್ನು ಪ್ರತಿಭಟಿಸಿ ಜೀವಿಸಬೇಕೆಂದರೂ ಎಲ್ಲಿ ಬದುಕುವದು. ಯಾರು ತಮಗೆ ಬದುಕು ನೀಡುತ್ತಾರೆ. ನಗರದಲ್ಲಿರುವ ಅನಾಥಾಲಯಗಳು ಮತ್ತೊಂದು ರೀತಿಯಲ್ಲಿ ಶೋಷಣೆ ಮಾಡುತ್ತಿವೆ. ಈ ಇಕ್ಕಟ್ಟಿನಿಂದ ಪಾರಾಗುವ ಬಗೆ ಹೇಗೆ ಎಂಬುದೇ ಕಾದಂಬರಿಯ ಜಿಜ್ಞಾಶೆಯಾಗಿದೆ. ಆದ್ದರಿಂದ ಚಂದ್ರಿ ಈ ಕೆಟ್ಟ ಪದ್ದತಿಗೆ ತಲೆ ಕೊಡುತ್ತಾಳೆ. ಊರಿನ ಉಳ್ಳವರು ಕೇರಿಗೆ ಊಟ ಹಾಕಿಸಿ ಒಂದು ಸಾವಿರ ರುಪಾಯಿ ಸೀರೆ ಕೊಟ್ಟು ಅಮಾಯಕ ಚೆಂದ್ರಿಯಂತಹ ಕಂದಮ್ಮಗಳನ್ನು ಅನುಭವಿಸುವದು. ಅವರಿಗೆ ಯಾವುದೆ ಅಧಿಕೃತ ಭದ್ರತೆಯಲ್ಲ. ಬೇಕಾದಾಗ ಬಳಿಸಿಕೊಂಡು ಬಿಸಾಡುವ ವಸ್ತುವಿನಂತೆ ಈ ಜೀವಿಗಳನ್ನು ಉಳ್ಳವರು ನೋಡುತ್ತಾರೆ. ಹನ್ನೆರಡು ಹದಿಮೂರು ವರ್ಷಕ್ಕೆ ಬಲಿಯಾಗುವ ಈ ಜೀವಿಗಳು ಅವರ ಕಾಮ ತೃಷೆ ತೀರಿದ ಮೇಲೆ ಇವರು ಅನಾಥೆಯರಾಗಿ ದೇಹ ಮಾರಿಕೊಂಡು ಬದುಕುವ ದುಸ್ಥತಿಗೆ ಈಡಾಗುತ್ತಾರೆ. ಮತ್ತೆ ಇಂತಹವರನ್ನು ಉಳ್ಳವರು ಕೇರಿಯಲ್ಲಿ ಸೃಷ್ಟಿಸುತ್ತಲೇ ಇರುತ್ತಾರೆ. ಅದೊಂದು ದೈವಿಕ ನಿಯಮವನ್ನಾಗಿ ಮಾಡಿದ್ದಾರೆ.

ಈ ಪದ್ದತಿಯನ್ನು ಪ್ರತಿಭಟಿಸುವ ಮಹಾದೇವನನ್ನು ಕೇರಿಯವರು ಒಪ್ಪುವದಿಲ್ಲ. ಚೆಂದ್ರಿಯನ್ನು ಸೂಳೆಯನ್ನಾಗಿ ಬಿಡಬೇಕೆಂದು ಕೇರಿಯವರು ತೀರ್ಮಾನ ಮಾಡಿದಾಗ ಮಹಾದೇವ ಪ್ರಶ್ನಿಸುತ್ತಾನೆ." ದೈವದವರೆಲ್ಲಾ ನನ್ನ ಮಾತು ಸ್ವಲ್ಪ

ಕೇಳರಪೋ. ದೇವರು ಹೆಸರಿನ್ಯಾಗ ಸೂಳಿ ಬಿಡೋದಂದರ ಬಾಳ ಮೂರ್ಖತನದ ಕೆಲಸ. ಇನ್ನಾದರೂ ನಾವು ಈ ಹೊಲಸು ಪದ್ದತಿ ಬಿಡಬೇಕು. ಚೆಂದ್ರಾನ್ನ ಸೂಳಿ ಬಿಡೋದನ್ನ ನಾನೆಂದೂ ಒಪ್ಪೂದಿಲ್ಲ.....

ದೈವದವರೆಲ್ಲಾ ಬೆಚ್ಚಿಬಿದ್ದು ಅವನ ಕಡೆ ತಿರುಗಿದರು. ತುಂಬಿದ ಸಭೆಯಲ್ಲಿ ಎದ್ದು ನಿಂತು ಹಿರಿಯರ ಮಾತನ್ನು ಖಂಡಿಸುವ ಈ ಹುಡುಗನ ಉದ್ಧಟತನವೇ! ಎಂದುಕೊಂಡು ಭರಮಜ್ಜ ಕೋಪದಿಂದ ಕನಲಿ ಕೂಗಿಕೊಂಡ:

'ಯಾರಲೇ ನೀ ನಮಗ ಬುದ್ಧೀ ಹೇಳವಾ? ಇನ್ನ ಮಾರಿಯ ಮ್ಯಾಲ ಮೀಸಿ ಬಂದಿಲ್ಲಾ. ಇಷ್ಟ ಧೈರ್ಯ ಬಂತೇನ ನಿನಗ?'

'ಕುಂದ್ರಲೆ ಬಯಿಮುಚ್ಚಿಕೊಂಡು ಕುಂಡ್ರು ಸುಮ್ಮನ' ಎಂದ ಮಾದ

'ನನ್ನ ಮಗಳನ್ನ ಸೂಳೀ ಬಿಡೂದಕ ನೀನ್ಯಾವನಲೇ ಬ್ಯಾಡ ಅನ್ನೂವ?'

ಎಂದ ಹನುಮ

ಆ ಬಿರುನುಡಿಗಳಿಂದ ಮಹಾದೇವನ ಆವೇಶ ಅರ್ಧಕ್ಕರ್ಧ ಇಳಿಯಿತಾದರೂ ಆತ ಅಷ್ಟಕ್ಕೆ ಸುಮ್ಮನಾಗದೆ ಮತ್ತೆ ದನಿ ಎತ್ತಿ ಹೇಳಿದ:

'ನನಗ ತಿಳಿದದ್ದು ನಾನು ಹೇಳುವವನೆ. ಸೂಳೀ ಬಿಡೂದು ತಪ್ಪು. ಹಾದರಾ ಮಾಡೂದು ತಪ್ಪು. ಆ ಹುಡುಗಿ ಬಾಳೇವು ಹಾಳು ಮಾಡಬ್ಯಾಡ್ರಿ. ಚೆಂದ್ರಿ ಸೂಳಿಯಾಗುದ್ರಿಂದಯಲ್ಲವ್ವಗೇನು ಆನಂದ ಆಗೂದಿಲ್ಲ.'

'ಏ ಎಷ್ಟುದ್ದಾ ಮಾತಾಡಿತಿಯೋ? ಇದರಾಗೆಲ್ಲಾ ನಿನಗೇನು ತಿಳಿತೈತಿ? ಒಂದೀಟು ಸಾಲಿ ಕಲೀತೀದಿಯಂತ ದೊಡ್ಡ ಶ್ಯಾಣ್ಯಾ ಆದೇನು? ನೀನನ್ನುವ ಮಾತು ಕೇಳಿ, ದೇವಿ ಮತ್ತ ನಮ್ಮೆಲ್ಲರ ಮ್ಯಾಲ ಸಿಟ್ಟಾದಳು. ತಣ್ಣಗ ಕುಂಡ್ರು'

ಎಂದು ಗದ್ದರಿಸಿದ ಭರಮಜ್ಜ

'ಸೂಳಗಾರಿಕೆ ಪಾಪ...ಪಾಪ... ಎಂದು ಮಹಾದೇವ ಮತ್ತೆ ಹೇಳುತ್ತಿದ್ದ. ಹಾಗೆ ಅವನ ಹತ್ತಿರವೆ ಕುಳಿತ್ತಿದ್ದ ಹರಿಜನೊಬ್ಬ ಕೈಯೆತ್ತಿ ಮಹಾದೇವನ ಕೆನ್ನೆಗೆ ಒಂದೇಟು ಬಿಟ್ಟ. ಸೂಳೆಗಾರಿಕೆ ಅಂತ ಸೂಳೆಗಾರಿಕೆ! ನಮ್ಮ ಕುಲಾಚಾರದ ಪದ್ದತಿ ಐತಿ. ಸೂಳೆಗಾರಿಕೆ ಯಾರು ಮಾಡಿಲ್ಲ? ನಿಮ್ಮವ್ವಳೂ ಮಾಡಿದಾಳ.'(ಪು.೬೦)

ಎಂಬುದು ಊರ ಜನರ ಪ್ರತಿಕ್ರಿಯೆ. ಈ ಪದ್ಧತಿಯಿಂದ ಹೊರಬರಲಾರದಂತೆ ಕೇರಿಯ ಜನರನ್ನು ಉಳ್ಳವರು ಬಲವಾಗಿ ನಂಬಿಸಿದ್ದಾರೆ. ಇದರಿಂದ ಬಿಡುಗಡೆಗೊಳ್ಳಬೇಕೆಂದು ಹೊಸ ದಲಿತ ಸಮುದಾಯ ಪ್ರಶ್ನೆ ಮಾಡಿ ತಿಳುವಳಿಕೆ ಮೂಡಿಸಲು ಪ್ರಯತ್ನಿಸಿದರೆ ಅವರನ್ನೆ ಬೆದುರಿಸುತ್ತಾರೆ. ತಾವು ಮಾಡುತ್ತಿರುವದು

ತಪ್ಪು ಎಂಬ ಅರಿವು ಅವರಲ್ಲಿ ಮೂಡಲಿಲ್ಲ. ಈ ಅರಿವನ್ನು ಅವರಲ್ಲಿ ಮೂಡಿಸಬೇಕಾದದು ನಮ್ಮ ಜವಬ್ದಾರಿ ಎಂಬುದು ಕಾದಂಬರಿಕಾರರ ನಂಬಿಕೆ.

ಯಲ್ಲಪ್ಪ, ಹನುಮ, ಕಾಮಣ್ಣ, ಲಚುಮಿ, ಶಿವಗಂಗಾ, ಮಹಾದೇವ, ಚಂದ್ರಿಯಂತಹ ಜೀವಿಗಳು ಇದೆಲ್ಲವನ್ನು ಸಹಿಸಿಕೊಂಡು ಜೀವಿಸುತ್ತಿವೆ. ಶರಣಪ್ಪ, ಸಿದ್ದೇಗೌಡರಂತಹ ಉಳ್ಳವರು ಕೇರಿಯ ಜನರು ತಮ್ಮ ಇಚ್ಚೆಯನ್ನು ಈಡೇರಿಸಲು ಇರುವವರು ಎಂದು ನಂಬಿದ್ದಾರೆ. ಇದು ತಪ್ಪು ಎಂದು ಯಾರಿಗೆ ಅನಿಸುವದಿಲ್ಲ. ಮುಂದೆ ಬಂದ ಶರಣಪ್ಪನ ಮಗ ಸಂಗಪ್ಪ, ಸಿದ್ಧೇಗೌಡರ ಮಗ ತಿಮ್ಮಪ್ಪ ಈ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಇವರೇ ಮುಂದೆ ರಾಜಕಾರಣಿಗಳಾಗಿ ಅಧಿಕಾರ ಇಡಿದು ವ್ಯವಸ್ಥೆಯನ್ನು ಮುನ್ನಡೆಸುವವರು. ನಗರಗಳಲ್ಲಿ ಕುಬೇರಪ್ಪ, ಚೆಂಪಾವತಿಯಂತ ಹಗಲು ದರೋಡೆಕೋರರಿಗೆ ಸಹಾಯ ಮಾಡುವವರು. ಈ ನಡುವೆ ಬಡವರನ್ನು ಕೇಳುವರಿಲ್ಲ. ಆದಷ್ಟೂ ಎಲ್ಲಾರು ಬಡವರ ರಕ್ತ ಹೀರುವವರೆ ಇದ್ದಾರೆ.

ಬಡವರು, ದಲಿತರು, ಕೂಲಿಕಾರರು, ರೈತರು, ಮಹಿಳೆಯರ ಬಗ್ಗೆ ಅಪಾರ ಕಾಳಜಿ ಹೊಂದಿದ ಕಟ್ಟೀಮನಿಯವರು ಅವರ ಸ್ಥಿತಿಗತಿಯನ್ನು ಅನಾರಣ ಮಾಡುವುದು ಮುಖ್ಯವಾಗಿತ್ತು. ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಬಿಡಿಸಲು ಪ್ರಯತ್ನಿಸಬೇಕೆಂಬ ನಿಲುವು ಅವರದು. ಆದ್ದರಿಂದ ತಮ್ಮ ಕಾದಂಬರಿಗಳಲ್ಲಿ ನಾಡಿನ ವಾಸ್ತವ ಸ್ಥಿತಿ ಏನಿದೆ ಎಂಬುದನ್ನು ಅತ್ಯಂತ ಮನೋಜ್ಞವಾಗಿ ನಾಡಿನ ಜನತೆಗೆ ತಮ್ಮ ಕಾದಂಬರಿಗಳ ಮೂಲಕ ಮನವರಿಕೆ ಮಾಡಿದರು. ಈ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿ ಜನಾಂದೋಲನ ಉಂಟುಮಾಡುವುದು ಅವರ ಧ್ಯೇಯವಾಗಿತ್ತು. ಸ್ವತಹ ಅವರು ಈ ಆಂದೋಲನದಲ್ಲಿ ತೊಡಗಿಸಿಕೊಂಡವರು. ಬದುಕು ಬರಹವನ್ನು ಒಂದೇ ನೆಲೆಯಲ್ಲಿ ಅವರು ನೋಡಿದವರು. ಹೀಗಾಗಿ ಕಾದಂಬರಿಯಲ್ಲಿ ಬರುವ ಪಾತ್ರಗಳು ಹುಸಿ ಚಿತ್ರಗಳಾಗಿ ಬರುವದಿಲ್ಲ. ಅವು ನಾಡಿನ ಜೀವಂತ ಚಿತ್ರಗಳಾಗಿ ಬರುತ್ತವೆ.

ಸನ್ನಿವೇಶ ನಿರ್ಮಾಣ

ಕಟ್ಟೀಮನಿಯವರು ಕುಶಲಮತಿ ಕಥನಕಾರರು. ಕಾದಂಬರಿಯ ನೆಯ್ಗೆ ಸೂಕ್ಷ್ಮವಾಗಿರುತ್ತದೆ. ಎಲ್ಲಿಯೂ ಓದುಗನಿಗೆ ಭಂಗ ಬರದಂತೆ ಪ್ರತಿಯೊಂದು ಸನ್ನಿವೇಶವನ್ನು ಚಿತ್ರಕವಗಿ ಕಟ್ಟುತ್ತಾರೆ. ಪ್ರತಿ ಪಾತ್ರವನ್ನು ಎಲ್ಲಾ ಪಾತ್ರಗಳೊಂದಿಗೆ ಸಂಯೋಗ ಸಂಬಂಧ ಹೊಂದುವಂತೆ ಮಾಡುತ್ತಾರೆ. ಈ ಕಾದಂಬರಿ ಶಿವಗಂಗೆಯ ಕಥೆಯಾದರೂ ಅದು ಇಡೀ ಮರಡೊಳ್ಳಿ ಗ್ರಾಮ ಮತ್ತು ಗಬ್ಬೂರು ನಗರದ ಕಥನವಾಗಿ ಬರುತ್ತದೆ. ಒಂದಕ್ಕೊಂದು ಸಂಬಂಧವಿರುವಂತೆ ಸನ್ನಿವೇಶವನ್ನು ಕಟ್ಟುತ್ತಾ ಹೊಗುತ್ತಾರೆ. ಓದುಗ ಕೇಂದ್ರಿತ ಬರವಣಿಗೆ ಇವರದಾದ್ದರಿಂದ ಎಲ್ಲಿಯೂ

ಓದುಗನಿಗೆ ಭಂಗ ಬರದಂತೆ ಸನ್ನಿವೇಶಗಳನ್ನು ಸೃಷ್ಟಿಸುವದು ಅವರಿಗೆ ಮುಖ್ಯ. ಶಿವಗಂಗೆ, ಮಹಾದೇವ, ಸಾಂಬಯ್ಯ ಮಾಸ್ತಾರ, ಹನುಮ, ಚೆಂದ್ರಿ, ಕಸ್ತೂರಿ, ಶರಣಪ್ಪ, ಸಿದ್ಧೇಗೌಡ, ಚೆಂಪಾವತಿ, ಚೆನ್ನಪ್ಪ, ಕುಬೇರಪ್ಪ, ಜ್ಞಾನೇಶ್ವರರಂತಹ ಪಾತ್ರಗಳು ಒಂದಕ್ಕೊಂದು ನಂಟನ್ನು ಹೊಂದುವಂತೆ ಸನ್ನಿವೇಶವನ್ನು ಜೋಡಿಸುತ್ತಾರೆ. ಇದರಿಂದ ಕಾದಂಬರಿಯ ಬಂಧ ಗಟ್ಟಿಯಾಗುತ್ತದೆ. ಕಾದಂಬರಿಯ ಲಯ ತಪ್ಪುವದಿಲ್ಲ.

ಮಹಾದೇವನ ಮೂಲಕ ಮುನ್ನಡೆಯುವ ಕಥೆ ಓದುಗನನ್ನು ಒಳಗು ಮಾಡಿಕೊಳ್ಳುತ್ತದೆ. ಕಾದಂಬರಿಯ ನಡೆಗೆ ಎಲ್ಲಿಯೂ ತೊಡಕಾಗದಂತೆ ಸನ್ನಿವೇಶಗಳನ್ನು ಜೋಡಿಸಲಾಗಿದೆ. ಕೇರಿ ಮತ್ತು ಊರಿನ ಸಂದರ್ಭಗಳನ್ನು ಕಟ್ಟಲಾಗಿದೆ. ಇಲ್ಲಿ ಕೇರಿಯ ಧಾರುಣತೆ ಮತ್ತು ಊಳ್ಳವರ ನಿರ್ಧಯ ಶೋಷಣೆಯ ವಿನ್ಯಾಸವನ್ನು ಮನ ಕಲುಕುವಂತೆ ನಿರ್ಮಾಣ ಮಾಡಲಾಗಿದೆ. ಕಾದಂಬರಿಯಲ್ಲಿ ಬರುವ ಯಾವುದೇ ಸನ್ನಿವೇಶಗಳು ದುರ್ಬಲವಾಗಿಲ್ಲ. ಅವು ಕಥೆಯ ವೇಗಕ್ಕೆ ಪೂರಕವಾಗಿ ಬರುತ್ತವೆ. ಇದರಿಂದ ಕಾದಂಬರಿ ತನ್ನ ಸತ್ವವನ್ನು ಉಳಿಸಿಕೊಂಡಿದೆ.

ಕಾದಂಬರಿಯ ಭಾಷೆ

ಕಾದಂಬರಿಯಲ್ಲಿ ಎರಡು ರೀತಿಯ ಭಾಷೆಯನ್ನು ಬಳಿಸಲಾಗಿದೆ. ಗ್ರಾಮದ ಜನ ಬಳಸುವ ಭಾಷೆ. ಅದು ಗ್ರಾಮದ ಪಾತ್ರಗಳು ಬಂದಾಗ ಬಳಸುತ್ತಾರೆ. ನಿರೂಪಣೆಯ ಭಾಷೆ ಗ್ರಾಂಥಿಕವಾದುದು. ಇವರ ಭಾಷೆ ಕಾವ್ಯದ ಲಯವನ್ನು ಹೊಂದಿದೆ. ಪಾತ್ರಗಳನ್ನು ಚಿತ್ರಸುವಾಗ ಭಾಷೆಯು ಸಂದರ್ಯಾನುಭೂತಿಯನ್ನು ಉಂಟುಮಾಡುತ್ತದೆ. ಮನಸ್ಸಿಲ್ಲಿ ಪಾತ್ರಗಳು ಉಳಿಯುವಂತೆ ಭಾಷೆಯ ಮೂಲಕ ಕಡೆದು ನಿಲ್ಲಿಸುತ್ತಾರೆ. ಗ್ರಾಮೀಣ ಭಾಷೆಯನ್ನು ಯಥಾವತ್ತಾಗಿ ಕಾದಂಬರಿಯಲ್ಲಿ ಮೂಡಿಸಿದ್ದಾರೆ. ಗೋಕಾಕ ಪ್ರದೇಶದ ಭಾಷೆ ಕಾದಂಬರಿಯಲ್ಲಿ ಜೀಂತಿಕೆಯನ್ನು ಪಡೆದಿದೆ. ಅಲ್ಲಿಯ ಬದುಕಿನ ಒಟ್ಟಂದದ ಸಂಬಂಧವೂ ಭಾಷೆಯ ವಿನ್ಯಾಸದಲ್ಲಿಯೆ ಸೇರಿಕೊಳ್ಳುತ್ತದೆ. ಹಾಗೆ ಭಾಷೆಯನ್ನು ಬಳಸಲಾಗಿದೆ. ಭಾಷೆಯ ಸಂಯೋಗವು ಬದುಕಿನೊಂದಿಗೆ ಬೆರೆತಾಗ ಅದು ಬದುಕನ್ನು ಸರಿಯಾಗಿ ಹಿಡಿದಿಡುತ್ತದೆ. ಇಲ್ಲದಿದ್ದರೆ ಭಾಷೆಯು ಯಾಂತ್ರಿಕವಾಗಿ ಕಾದಂಬರಿಯ ವೇಗವನ್ನು ತಡೆಯುತ್ತದೆ. ಕಾಲದ ನೆಲೆಯು ಲಯ ತಪ್ಪುತ್ತದೆ. ಸನ್ನಿವೇಶಗಳು ಸಂಬಂಧಗಳನ್ನು ಕಳೆದುಕೊಳ್ಳುತ್ತವೆ. ಆದರೆ ಕಟ್ಟೀಮನಿಯವರು ಭಾಷೆಯನ್ನು ಇಡೀ ಬದುಕು ಮರುಸೃಷ್ಟಿಯಾಗುವಂತೆ ಬಳಸುತ್ತಾರೆ. ಓದುಗನು ಪಾತ್ರಗಳಲ್ಲಿ ಹೊಂದಾಗುವಂತೆ ಭಾಷೆಯ ಸೊಗಸುಗಾರಿಕೆಯನ್ನು ನಿರೂಪಿಸುತ್ತಾರೆ. ಇದರಿಂದ ಇವರ ಕಾದಂಬರಿ ಎಲ್ಲ ಕಾಲದ ಓದುಗರಿಗೆ ಆಪ್ತವಾಗುತ್ತದೆ. ಓದುಗನಲ್ಲಿ ಸಂವಾದ ಮತ್ತು ಚಿಂತನೆಯನ್ನು ಹುಟ್ಟು ಹಾಕುವ ಭಾಷಿಕ ನೆಲೆ ಇವರದು. ಬದುಕನ್ನು ಸಜೀವಗೊಳಿಸುವದರ ಜೊತೆಗೆ

ಜಾಗೃತಿ, ಹೋರಾಟ, ಮಾನವೀಯತೆಯನ್ನು ಬೆಳಸುವ ಭಾಷಿಕ ಶಕ್ತಿ ಇವರದಾಗಿದೆ. ಅನುಭವಗಳ ಸಾತತ್ಯವನ್ನು ಕಲಾತ್ಮಕಗೊಳಿಸುವ ಗುಣ ಇವರ ಭಾಷೆಗೆ ಇದೆ. ಹೀಗಾಗಿ ಕಾದಂಬರಿಯಲ್ಲಿ ಸೃಷ್ಟಿಯಾಗುವ ಅನುಭವ ವಾಸ್ತವ ಸ್ವರೂಪವನ್ನು ಪಡೆಯುತ್ತದೆ. ವೈಚಾರಿಕತೆಯ ದರ್ಶನವು ಅನುಭವದ ಭಾಷಿಕ ಕಥನದಲ್ಲಿ ಸಂಯೋಗಗೊಳ್ಳುತ್ತದೆ.

ವರ್ತಮಾನದಲ್ಲಿ ಕಾದಂಬರಿಯ ಪ್ರಸ್ತುತತೆ

ಮನುಷ್ಯನನ್ನು ಕೇಂದ್ರವಾಗಿಟ್ಟುಕೊಂಡು ರಚನೆಯಾಗುವ ಕಥನಗಳು ಕಾಲದೊಂದಿಗೆ ಚಲಿಸುತ್ತಿರುತ್ತವೆ. ಮನುಷ್ಯನ ಸಮಸ್ಯೆಗಳು, ಸಂಘರ್ಷಗಳು, ವೈರುದ್ಯಗಳು, ಸಂಬಂಧಗಳು, ವಿಕಾರಗಳು, ಹಿಂಸೆಗಳು, ಮಾನವೀಯ ಸಂಬಂಧಗಳು, ಆದರ್ಶಗಳು, ಚಿಂತನೆಗಳು ಕಾದಂಬರಿಯಲ್ಲಿ ಮೈಪಡೆದುಕೊಂಡಾಗ ಅದು ಎಲ್ಲಾ ಕಾಲಕ್ಕೂ ಸಲ್ಲುತ್ತದೆ. ಕಟ್ಟೀಮನಿಯವರು ಈ ರೀತಿಯ ಕಾದಂಬರಿಗಳನ್ನು ರಚಿಸಿದವರು. ಸಮಾಜವನ್ನು ಕುರಿತು ಆಳವಾಗಿ ಚಿಂತಿಸಿದವರು. ಸಮಾಜ ಅನುಭವಿಸುವ ಬವಣೆ, ಶೋಷಣೆ, ದಬ್ಬಾಳಿಕೆ, ಅನ್ಯಾಯ, ಅಕ್ರಮ, ಅನೈತಿಕತೆ, ಹಿಂಸೆಯನ್ನು ಕಾದಂಬರಿಯಲ್ಲಿ ಕಟ್ಟಿದವರು. ಇವು ಯಾವತ್ತು ಮನುಷ್ಯನನ್ನು ಕಾಡಿದ ಸಂಗತಿಗಳು. ಪ್ರಸ್ತುತ ಕಾದಂಬರಿಯು ಕೂಡ ಈ ನೆಲೆಯನ್ನು ಪಡೆದುಕೊಂಡಿದೆ.

ಅಸ್ಪೃಶ್ಯರ ಸಮುದಾಯದಲ್ಲಿ ಅನೇಕ ಬದಲಾವಣೆ ಆಗಿರಬಹುದು. ಸಾಮಾಜಿಕವಾಗಿ ಅನೇಕ ಅವಕಾಶಗಳನ್ನು ಪಡೆದುಕೊಂಡು ಹೊಸ ಜೀವನ ಕಟ್ಟಿಕೊಂಡಿರಬಹುದು. ಸಮಾಜವು ಅವರನ್ನು ಮೊದಲಷ್ಟೂ ಕ್ರೂರವಾಗಿ ನೋಡದೆ ತಮ್ಮವರೆಂದು ಒಪ್ಪಕೊಂಡಿರಬಹುದು. ಆದರೆ, ಅವರನ್ನು ಇನ್ನೂ ನಮ್ಮ ಅಂತರಂಗದವರನ್ನಾಗಿ ಸ್ವೀಕರಿಸಿಲ್ಲ. ಅಲ್ಲಿ ಮಹಾದೇವ ಒಬ್ಬ ಅಸ್ಪೃಷ್ಯನಾಗಿ ತನ್ನ ಕೇರಿಯ ಜನ ಅನುಭವಿಸುವ ಹಿಂಸೆಯನ್ನು ಕಣ್ಣಾರೆ ಕಂಡು ಏನು ಮಾಡದ ಅಸಹಾಯಕತೆಯಿಂದ ಬಳಲುವ ಸ್ಥಿತಿ ಈಗಲೂ ಕೇರಿಗಳಲ್ಲಿದೆ. ಅವರನ್ನು ಶೋಷಿಸುವ ಸ್ವರೂಪ ಬದಲಾಗಿರಬಹುದು. ಶೋಷಣೆಯ ಜಾಗದಲ್ಲಿ ಜಾಗತೀಕರಣದ ಮಾಲೀಕರು ಬಂದು ಸೇರಿಕೊಂಡಿದ್ದಾರೆ. ಅವರು ಎಲ್ಲರನ್ನೂ ತಮ್ಮ ತೆಕ್ಕೆಗೆ ತೆಗೆದುಕೊಂಡು ಭಾರತವನ್ನು ನುಂಗುತ್ತಿದ್ದಾರೆ. ಹಣವಂತರು ಅವರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಜೀವನವನ್ನು ಮುನ್ನೆಡಿಸುತ್ತಾರೆ. ಮಹಾದೇವನಂತಹ ಅಸ್ಪೃಷ್ಯರು, ಅತಂತ್ರರು ಇವರ ಶೋಷಣೆಯ ದಾಳಗಳಾಗುತ್ತಾರೆ.

ಬದುಕಿಗಾಗಿ ಸದಾ ಹೋರಾಟ ಮಾಡಬೇಕಾಗುತ್ತದೆ. ಅವರ ಸಮುದಾಯದಲ್ಲಿ ಶಿಕ್ಷಣದ ಕೊರತೆ ಇದೆ. ಯಾವುದೇ ಭದ್ರತೆಯ ಆದಾಯವಿಲ್ಲ.

ಇನ್ನೊಬ್ಬರನ್ನು ಅವಲಂಬಿಸಿ ಬದುಕುವ ಪರಸ್ಥಿತಿ ಇದೆ. ಎಲ್ಲಾ ಕ್ಷೇತ್ರಗಳು ಉಳ್ಳವರ ಕೈಯಲ್ಲಿವೆ. ಅವು ಭ್ರಷ್ಟಗೊಂಡಿವೆ. ಶಿಕ್ಷಣ ಹೊಂದಿದರೂ ಅವರಿಗೆ ಉದ್ಯೋಗವಿಲ್ಲ. ಸರಕಾರಿ ಉದ್ಯೋಗಗಳು ಕಡಿತಗೊಳ್ಳುತ್ತಿವೆ. ಖಾಸಗಿ ಕಂಪನಿಗಳಲ್ಲಿ ಮೀಸಲಾತಿ ಇಲ್ಲ. ಅಲ್ಲಿ ಅಸ್ಪೃಷ್ಯರಿಗೆ ಸುಲಭವಾಗಿ ಉದ್ಯೋಗ ನೀಡುವದಿಲ್ಲ. ಕಲಿತವರು ಅತಂತ್ರ ಸ್ಥಿತಿಲ್ಲಿದ್ದಾರೆ. ಈ ಎಲ್ಲಾ ಸವಾಲುಗಳನ್ನು ಇಂದು ಮಹಾದೇವನಂತವರು ಎದುರಿಸಬೇಕಾಗಿದೆ. ಶಿವಗಂಗೆ, ಚಂದ್ರಿ, ಕಸ್ತೂರಿಯಂತರು ಅನುಭವಿಸುವ ಲೈಂಗಿಕ ಶೋಷಣೆ ಮತ್ತೊಂದು ರೂಪದಲ್ಲಿ ಮಹಿಳೆಯರನ್ನು ಬೆನ್ನತ್ತಿದೆ. ಹೊರಗಡೆ ದುಡಿಯಲು ಹೋಗುವ ಮಹಿಳೆಯು ಪುರುಷರ ವಿಕಾರಗಳನ್ನು ಎದುರಿಸಿ ಬದುಕುವ ಅನಿವಾರ್ಯತೆ ಬಂದಿದೆ. ಚೆಂಪಾವತಿ, ಕುಬೇರಪ್ಪ, ಜ್ಞಾನೇಶ್ವರ, ಚೆನ್ನಪ್ಪನಂತಹ ಗೋಮುಖ ವ್ಯಾಗ್ರರು ಹೆಚ್ಚಾಗುತ್ತಿದ್ದಾರೆ. ಇಂತವರು ನಿರಂತರ ಬಡವರನ್ನು ಸುಲಿಗೆ ಮಾಡುತ್ತಲೆ ಇರುತ್ತಾರೆ. ಹೀಗಾಗಿ ಕಾದಂಬರಿಯಲ್ಲಿ ಬದುಕಿನ ಚಿತ್ರಣಗಳು ಯಾವುದೋ ಕಾಲದ್ದೂ ಅನಿಸದೆ ಈ ಕಾಲದ್ದೇ ಅನಿಸುತ್ತದೆ. ಒಂದು ಸಾಮಾಜಿಕ ಚರಿತ್ರೆಯನ್ನು ಅದು ಕಟ್ಟಿಕೊಡುತ್ತದೆ. ಆದ್ದರಿಂದ ನಾವು ಅದರ ಮೂಲಕ ಹೊಸ ಬಗೆಯ ಚಿಂತನೆ ಮತ್ತು ಹೋರಾಟವನ್ನು ರೂಪಿಸಿಕೊಳ್ಳಬೇಕಿದೆ. ಸಾಂಬಯ್ಯ ಮಾಸ್ತರರ ಆದರ್ಶ ಕಾಳಜಿ ಎಲ್ಲಾ ಕ್ಷೇತ್ರದ ಜನರಿಗೆ ಬರಬೇಕಿದೆ.

◈◈◈◈◈

ಹಿರೇನಲ್ಲೂರಿನ ಅಪ್ರಕಟಿತ ಐತಿಹಾಸಿಕ ಸ್ಮಾರಕಗಳು

◈

ಹೆಚ್.ಆರ್. ಪಾಂಡುರಂಗ

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೋಕು ಕೇಂದ್ರದಿಂದ ಉತ್ತರಕ್ಕೆ ಹದಿನಾಲ್ಕು ಕಿಲೋಮೀಟರ್ ಅಂತರದಲ್ಲಿರುವ ಹೋಬಳಿ ಕೇಂದ್ರ "ಹಿರೇನಲ್ಲೂರು" ಇತಿಹಾಸ ಪ್ರಸಿದ್ಧವಾದುದು ಹಾಗೂ ಈ ಶಾಸನೋಕ್ತ ಹಿರೇನಲ್ಲೂರು ಹೊಯ್ಸಳರ ಕಾಲದಲ್ಲಿ "ಶ್ರೀ ಮದನಾದಿಯಗ್ರಹಾರ ಕೇಶವೇಶ್ವರಪುರ" ಎಂಬ ಪ್ರಸಿದ್ಧ ಅಗ್ರಹಾರ ಹಾಗೂ ವಿದ್ಯಾಕೇಂದ್ರವಾಗಿತ್ತು ಹಾಗೂ ಅಸಂದಿ ಗಂಗ ಅರಸರ ಕಾಲದಲ್ಲಿ "ಅಸಂದಿ ಅಯ್ನೂರು ನಾಡು" ಆಡಳಿತಕ್ಕೆ ಸೇರಿತ್ತು ಹಾಗೂ ಹನ್ನೆರಡನೇ ಶತಮಾನದ ಹೊಯ್ಸಳ ಚಕ್ರೇಶ್ವರ ಇಮ್ಮಡಿ ವೀರಬಲ್ಲಾಳನ ಆಳ್ವಿಕೆಯಲ್ಲಿ ನಿರ್ಮಿತವಾದ ಹೊಯ್ಸಳ ಶಿಲ್ಪಕಲಾ ಚಾತುರ್ಯದ "ಶ್ರೀ ಕೇಶವೇಶ್ವರ-ಶ್ರೀ ಮಲ್ಲಿಕಾರ್ಜುನ-ಶ್ರೀ ಸೂರ್ಯನಾರಾಯಣ" ತ್ರೈಕೂಟ ದೇವಾಲಯ ಹಾಗೂ ಸಮುದ್ರದೋಪಾಧಿಯ ಹಿರೇನಲ್ಲೂರಿನ ಜೀವನಾಡಿಯಂತಿದ್ದ ಹೊಯ್ಸಳರ ಕಾಲದ ನೀರು ವಿತರಣೆಯ 'ಐತಿಹಾಸಿಕ ಕಲ್ಲಿನ ತೂಬು' ಇದ್ದ ಕೆರೆ ಶಾಸನೋಕ್ತ "ಹಿರೀಕೆರೆ" ಹಾಗೂ ತರೀಕೆರೆ ಪಾಳೇಗಾರರ ಕಾಲದ ಶ್ರೀ ಆಂಜನೇಯ ಹಾಗೂ ಗ್ರಾಮದೇವತೆ ಶ್ರೀ ಕಂಚಿಕಾಳೇಶ್ವರಿ ದೇವಾಲಯ ಗಳಿರುವ ಹಿರೇನಲ್ಲೂರು ಐತಿಹಾಸಿಕ ಸಮೃದ್ಧ ಚರಿತ್ರೆ ಹೊಂದಿರುವ ಚಾರಿತ್ರಿಕ ಸ್ಥಳವಾಗಿದೆ.

ಈ ಶಾಸನೋಕ್ತ ಹಿರಿಯ ನಲ್ಲೂರು ಅರ್ಥಾತ್ ಹಿರೇನಲ್ಲೂರಿನಲ್ಲಿ ಚಾರಿತ್ರಿಕ ಸ್ಮಾರಕಗಳಾದ ಗಂಗರ ಕಾಲದ ಶಾಸನರಹಿತ ಅಪ್ರಕಟಿತ ವೀರಗಲ್ಲು ಹಾಗೂ ಹೊಯ್ಸಳರ ಕಾಲದ ಅಪ್ರಕಟಿತ ಮಹಾಸತಿಕಲ್ಲು ನನ್ನ ಕ್ಷೇತ್ರಕಾರ್ಯದಲ್ಲಿ ದೊರೆತಿವೆ.




೧ "ಗಂಗ ಅರಸರ ಕಾಲದ ಯುದ್ದದ ವೀರಗಲ್ಲು"

ಹಿರೇನಲ್ಲೂರಿನ ಶ್ರೀ ಆಂಜನೇಯ ದೇವಾಲಯದ ಸನಿಹ ರೈತ ಸಂಪರ್ಕ ಕೇಂದ್ರದ ಗೋಡೆಗೆ ಹೊಂದಿಕೊಂಡಂತೆ ಪೂರ್ವಾಭಿಮುಖವಾಗಿ ನಿಂತಿದ್ದು ಗ್ರಾಮಸ್ಥರಿಂದ "ಕೋಡುಗಲ್ಲು" ಎಂದು ಕರೆಯಲ್ಪಡುತ್ತಿರುವ ಹತ್ತು ಅಡಿ ಎತ್ತರದ ,ಮೂರು ಅಡಿ ಅಗಲ,ಅರ್ಧಅಡಿ ದಪ್ಪದ ಅಳತೆಯ,ಮೂರು ಹಂತದ ಸುಂದರ ಕೆತ್ತನೆಯಿರುವ ವೀರಗಲ್ಲು ದೊರೆತಿದೆ. ಯುದ್ದದಲ್ಲಿ ವೀರಮರಣ ಹೊಂದಿದ ಅಶ್ವಾರೋಹಿ ವೀರನೊಬ್ಬನ ಶಾಸನರಹಿತ ಈ ವೀರಗಲ್ಲು ರಾಷ್ಟ್ರಕೂಟ ಚಕ್ರವರ್ತಿಗಳ ಮಂಡಲೇಶ್ವರರಾದ ತಲಕಾಡು ಗಂಗರ ಕಾಲದ್ದಾಗಿರಬಹುದೆಂದು ಭಾವಿಸಬಹುದಾಗಿದೆ.

೧-ಕೆಳ ಪಟ್ಟಿಕೆ : ವೀರಗಲ್ಲಿನ ಕೆಳಭಾಗದ ಪಟ್ಟಿಕೆಯಲ್ಲಿ ನಾಲ್ಕು ಅಶ್ವಾರೋಹಿ ಸೈನಿಕರ ಚಿತ್ರಣವಿದ್ದು, ಎರಡೂ ಪಕ್ಷಗಳಿಂದ ತಲಾ ಇಬ್ಬರು ಭರ್ಚಿಗಳಿಂದ ಯುದ್ದ ಮಾಡುತ್ತಿದ್ದು ಮುಂದಿರುವ ಇಬ್ಬರು ವೀರರೂ ಸಹಾಪರಸ್ಪರ ಭರ್ಚಿಗಳಿಂದ ಯುದ್ದ ಮಾಡುತ್ತಿದ್ದು ಎಡ ಭಾಗದ ಅಶ್ವಾರೋಹಿ ವೀರನು ತನ್ನ ಬಲಗೈಯಲ್ಲಿ ಭರ್ಜಿಯನ್ನುಎದುರಾಳಿ ಮೇಲೆ ಪ್ರಯೋಗಿಸಲು ಸಜ್ಜಾಗಿದ್ದಾನೆ,ಆದರೆ ಬಲಭಾಗದ ಅಶ್ವಾರೋಹಿ ವೀರ ಅವನಿಗಿಂತ ಮೊದಲೇ ಎಡಭಾಗದ ವೀರನ ಹೊಟ್ಟೆಗೆ ಭರ್ಚಿಯಿಂದ ಇರಿದಿದ್ದಾನೆ ಹಾಗಾಗಿ ವೀರ ಭರ್ಚಿಯ ಇರಿತದಿಂದ ವೀರ ಮರಣ ಹೊಂದಿದ್ದಾನೆ

೨-ಮಧ್ಯದ ಪಟ್ಟಿಕೆ : ಮೇಲಿನ ಹಂತ ಅಂದರೆ ವೀರಗಲ್ಲಿನ ಮಧ್ಯದ ಪಟ್ಟಿಕೆಯಲ್ಲಿ ಯುದ್ದದಲ್ಲಿ ವೀರಮರಣ ಹೊಂದಿದ ವೀರನನ್ನು ಇಬ್ಬರೂ ಅಪ್ಸರೆಯರು ತಮ್ಮ ತೋಳುಗಳಲ್ಲಿ ಎತ್ತಿಕೊಂಡು,ಏಳು ಜನರ ತಂಡದ ತಾಳವಾದ್ಯ,ನೃತ್ಯ ಸಂಗೀತಗಾರ್ತಿಯರ ವಾದ್ಯಮೇಳದೊಂದಿಗೆ,ಸ್ವರ್ಗಕ್ಕೆ ಹಾರುತ್ತಿರುವ ಚಿತ್ರಣ

ಸೊಗಸಾಗಿ ಕಂಡರಣೆಯಾಗಿದೆ.ಹಾಗೂ ಪಟ್ಟಿಕೆಯ ಎಡ ಮೂಲೆಯಲ್ಲಿ ಸಮಾಧಿ ರೂಪದ ಗುಂಡಿ ಅಥವಾ ಗೂಡಿನಂತಹ ಚಿತ್ರಣವಿದ್ದು ಅದರೊಳಗೆ ಕೈಮುಗಿದು ಕುಳಿತಿರುವ ವ್ಯಕ್ತಿಯೊಬ್ಬನ ಶಿಲ್ಪವಿದ್ದು ಮೃತವೀರನನ್ನು ಸಮಾಧಿಮಾಡಿದ ಸಂಕೇತವಿರಬಹುದು.ಹಾಗಾದಲ್ಲಿ ಇದೊಂದು ಗಂಗರ ಕಾಲದ ವಿಶೇಷ ವೀರಗಲ್ಲೆಂದು ಪರಿಗಣಿಸಬೇಕಾಗುತ್ತದೆ.

೩–ಮೇಲಿನ ಪಟ್ಟಿಕೆ : ವೀರಗಲ್ಲಿನ ಶಿರೋಭಾಗದ ಪಟ್ಟಿಕೆಯಲ್ಲಿ ವೀರಮರಣ ಹೊಂದಿದ ವೀರಯೋಧ ಕಳಸಗಳಿಂದ ಅಲಂಕೃತ ಮಂಟಪದಲ್ಲಿ ಪೀಠದ ಮೇಲೆ ವೀರಮಂಡಿ ಭಂಗಿಯಲ್ಲಿ (ಇಮ್ಮಡಿ ಪುಲಿಕೇಶಿ ಭಂಗಿ) ರಾಜಠೀವಿಯಲ್ಲಿ ಕುಳಿತಿದ್ದು ಎರಡೂ ಪಾರ್ಶ್ವಗಳಲ್ಲಿ ತಮ್ಮ ಭುಜದ ಮೇಲೆ ಚಾಮರಧರಿಸಿದ ಚಾಮರಧಾರಿಣಿಯರು ನಿಂತಿರುವ ಚಿತ್ರಣ ಸೊಗಸಾಗಿದೆ.

ಕೆಂಪು ಮರಳು(ಗ್ರಾನೈಟ್) ಕಲ್ಲಿನಲ್ಲಿ ನಿರ್ಮಾಣವಾದ ಈ ವೀರಗಲ್ಲು ೯ ನೇ ಶತಮಾನದಲ್ಲಿ ರಾಷ್ಟ್ರಕೂಟ ಚಕ್ರವರ್ತಿಗಳ ಕಾಲದಲ್ಲಿ–ತಲಕಾಡುಗಂಗವಾಡಿ ದೊರೆ,ಶ್ರೀಮತ್ ಪೃಥ್ವೀಕೊಂಗುಣಿವರ್ಮನ ಆಳ್ವಿಕೆಯಲ್ಲಿ ಬಲಿವಂಶ ತಿಲಕ–ಅರಿವಲ್ಲಭ ನೀಗುರ್ಂದ ಶ್ರೀ ಮುತ್ತರಸ,ಅಸಂದಿ ನಾಡಿನ ಪ್ರಭುವಾಗಿ ಆಳ್ವಿಕೆ ಮಾಡುವ ಕಾಲದಲ್ಲಿ ಹಿರೇನಲ್ಲೂರು ಪ್ರದೇಶದಲ್ಲಿ ನೊಳಂಬರೊಡನೆ ನಡೆದ ಯುದ್ಧವೊಂದರಲ್ಲಿ ಮಡಿದ ಸೇನಾಧಿಪತಿಯೊಬ್ಬನ ವೀರಮರಣದ ಸ್ಮಾರಕವಾಗಿ ಈ ವೀರಗಲ್ಲು ಸ್ಥಾಪನೆ ಮಾಡಿರಬಹುದೆಂದು ಭಾವಿಸಬಹುದಾಗಿದೆ.

೨ – ಹೊಯ್ಸಳರ ಕಾಲದ ಅಪ್ರಕಟಿತ ಮಹಾಸತಿ ಕಲ್ಲು.

ಹಿರೇನಲ್ಲೂರಿನ ಸರ್ಕಾರಿ ಪಶುವೈದ್ಯ ಆಸ್ಪತ್ರೆಯ ಮುಂಭಾಗದಲ್ಲಿ ಪೂರ್ವಾಭಿಮುಖವಾಗಿ,ಶತ ಶತಮಾನಗಳಿಂದ ಪುಣ್ಯಸ್ತ್ರೀಯೊಬ್ಬಳ ಸ್ಮಾರಕವಾಗಿ ನಿಂತಿದ್ದ ಅಪ್ರಕಟಿತ ಮಹಾಸತಿ ಕಲ್ಲನ್ನು ಕೆಲವರ ಮೂಢನಂಬಿಕೆಯಿಂದಾಗಿ ಮಹಾಸತಿ ಸ್ಮಾರಕವನ್ನು ಪಶುವೈದ್ಯ ಆಸ್ಪತ್ರೆಯ ಹಿಂಭಾಗಕ್ಕೆ ಸ್ಥಳಾಂತರಿಸಿ ಉತ್ತರಾಭಿಮುಖವಾಗಿ ನಿಲ್ಲಿಸಿದ್ದಾರೆ.

ನಾಲ್ಕು ಅಡಿ ಎತ್ತರ,ಒಂದೂವರೆ ಅಡಿ ಅಗಲವಾದ ಬಳಪದ ಕಲ್ಲಿನಿಂದ ಹೊಯ್ಸಳರ ಕಾಲದ ಈ ಮಹಾಸತಿ ಶಿಲ್ಪದಲ್ಲಿ ಚಿತ್ರಿಸಿದ ಸ್ತ್ರೀ ಶಿಲ್ಪ ಸುಂದರವಾಗಿದೆ.ಕೆಳಗಿಳಿಸಿದ ಎಡಗೈನಲ್ಲಿ ನಿಂಬೆಫಲ ಹಿಡಿದು,ಬಲಗೈಯನ್ನು ಎತ್ತಿಹಿಡಿದ ಭಂಗಿಯಲ್ಲಿ ನಿಂತ ಈ ಶಿಲ್ಪ ಪೀತಾಂಬರ ಧರಿಸಿದ್ದು, ಕೈ ಕಡಗ, ತೋಳಬಂದಿ ಧರಿಸಿದ್ದು, ಕೊರಳಲ್ಲಿ ಕಂಠೀಹಾರ, ಕಿವಿಯಲ್ಲಿ ಕರ್ಣ ಕುಂಡಲ ಧರಿಸಿದ ಈ ಮಹಾಸತಿ ಶಿಲ್ಪ, ಹೊಯ್ಸಳರ ಕಾಲದಲ್ಲಿ ಹಿರೇನಲ್ಲೂರು ನಾಡಿನಲ್ಲಿ ಆಡಳಿತ ನಡೆಸುತ್ತಿದ್ದ ಅಥವಾ ಸೇನಾಪತಿ ಕುಟುಂಬದವರ ಹೆಣ್ಣು

ಮಗಳದಾಗಿರಬಹುದಾಗಿದ್ದು,ಬಹುಶಃ ಯಾವುದೋ ಯುದ್ಧ ಅಥವಾ ಅವಘಡದಲ್ಲಿ ಈ ಮಹಾ ಸತಿಯ ಪತಿ ಮರಣ ಹೊಂದಿದ ನಿಮಿತ್ತ ಪತಿಯ ಅಗಲಿಕೆಯ ನೋವನ್ನು ಭರಿಸಲಾಗದೆ ಈ ಮಹಾಸತಿ "ಸತಿ ಸಹಗಮನ" ಮಾಡಿರ ಬೇಕು ತನ್ನಿಮಿತ್ತ ಈ ಮಹಾಸತಿಯ ಕುಟುಂಬಸ್ಥರು,ಅವಳ ತ್ಯಾಗ ಬಲಿದಾನದ ಸಂಕೇತವಾಗಿ ಈ ಮಹಾಸತಿ ಸ್ಮಾರಕ ನಿರ್ಮಿಸಿರ ಬೇಕು.

ಗಂಗ ಅರಸರು ಹಾಗೂ ಹೊಯ್ಸಳ ಕಾಲದಲ್ಲಿ "ಶ್ರೀ ಮದನಾದಿಯಗ್ರಹಾರ ಶ್ರೀ ಕೇಶವೇಶ್ವರ ಪುರ"ವಾಗಿದ್ದ ಹಿರೇನಲ್ಲೂರು ಮಹಾಜನ ಸ್ಮೃತಿ, ಕಾವ್ಯ, ನಾಟಕ, ಕವಿತ್ವ, ತರ್ಕ ವಿದ್ಯೆಗಳಲ್ಲಿ ನಿಪುಣರಾಗಿದ್ದರು ಎನ್ನುವ ಶಾಸನೋಕ್ತ ಉಲ್ಲೇಖದೊಂದಿಗೆ ಹಿರೇನಲ್ಲೂರು ಜನತೆ ವೀರರೂ,ಕಡುಗಲಿಗಳೂ ಆಗಿರುವುದರೊಂದಿಗೆ ತ್ಯಾಗ ಬಲಿದಾನಕ್ಕೂ ಹೆಸರಾಗಿದ್ದರು ಎನ್ನುವುದಕ್ಕೆ ನನ್ನ ಸಂಶೋಧನೆಯಲ್ಲಿ ದೊರೆತ ಈ ವೀರಗಲ್ಲು ಹಾಗೂ ಮಹಾಸತಿ ಶಿಲ್ಪಗಳು ಐತಿಹಾಸಿಕ ಸಾಕ್ಷಿಗಳಾಗಿವೆ ಎಂದರೆ ಅತಿಶಯೋಕ್ತಿಯಲ್ಲ.

(ಈ ಸಂಶೋಧನಾ ಪ್ರಬಂಧ ರಚನೆಯಲ್ಲಿ ಮಾರ್ಗದರ್ಶನ ಮಾಡಿದ ಕರ್ನಾಟಕ ಇತಿಹಾಸ ಅಕಾದೆಮಿ ವಿದ್ವಾಂಸರಾದ ಶ್ರೀ ಹೆಚ್.ಎಸ್.ಗೋಪಾಲರಾವ್ ಹಾಗೂ.ಶ್ರೀ ಶಿ ರಾಜೇಂದ್ರಪ್ಪ ಮತ್ತು ಶ್ರೀಮತಿ ಸ್ಮಿತಾ ರೆಡ್ಡಿ ಅವರಿಗೆ ಹಾಗೂ ಕ್ಷೇತ್ರಕಾರ್ಯದಲ್ಲಿ ನೆರವಾದ ನನ್ನ ಸೋದರ ಹೆಚ್.ಆರ್.ಕಾಂತರಾಜ್ ಅವರೆಲ್ಲರಿಗೂಹೃತ್ಪೂರ್ವಕ ಧನ್ಯವಾದಗಳು)

◈◈◈◈◈

ಕದಿರೇನಹಳ್ಳಿಯಲ್ಲಿ ಪ್ರಾಚೀನ ಶಿಲಾಸ್ಮಾರಕಗಳು ಪತ್ತೆ

◈

ಡಾ. ಮುತ್ತುರಾಜ್

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕದಿರೇನಹಳ್ಳಿಯಲ್ಲಿನ ಮುಖ್ಯರಸ್ತೆಯ ಬದಿಯ ಹೊಲವೊಂದರಲ್ಲಿ ಎರಡು ಪ್ರಾಚೀನ ಶಿಲಾಸ್ಮಾರಕಗಳು ಪತ್ತೇ ಆಗಿವೆ. ಗಿಡಗಂಟಿ ಮತ್ತು ಮಣ್ಣಿನ ಕೆಸರುವಿನಿಂದ ಆವೃತ್ತವಾಗಿದ್ದ ಇವುಗಳನ್ನು ಇತ್ತೀಚೆಗೆ ಸ್ವಚ್ಛ ಮಾಡಿ ಸಂರಕ್ಷಿಸಲಾಗಿದೆ. ಮೂರು ಮೂರು ಚಪಡಿಕಲ್ಲುಗಳ ಆಸರೆಯಿಂದ ಗುಡಿಗಳನ್ನು ನಿರ್ಮಿಸಿ ಈ ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸಿಕೊಂಡು ಬರಲಾಗಿದೆ. ನಾಲ್ಕೂವರೆ ಅಡಿ ಅಗಲ ಮತ್ತು ನಾಲ್ಕು ಅಡಿ ಎತ್ತರದ ಅಂದವಾದ ವೀರಮಾಸ್ತಿ ಸ್ಮಾರಕ ಶಿಲ್ಪವು ಸ್ಥಳೀಯ ಕಣಶಿಲೆಯಿಂದ ಮೂಡಿ ಬಂದಿದ್ದು ವೀರನೊಬ್ಬನು ತನ್ನ ಎಡದ ಕೈನಲ್ಲಿ ಎತ್ತರವಾದ ಧನಸ್ಸುವನ್ನು ಹಿಡಿದಿದ್ದು, ಮೇಲೆ ಎತ್ತಿದ ತನ್ನ ಬಲದ ಕೈನಲ್ಲಿ ಬಾಣವನ್ನು ಹಿಡಿದು ವೀರತನದಿಂದ ಉತ್ಸಾಹಭರಿತನಾಗಿ ನಿಂತಿದ್ದಾನೆ. ಅಲ್ಲದೇ ತನ್ನ ನಡುವಿನಲ್ಲಿ ಹಿರಿದಾದ ಖಡ್ಗವನ್ನು ಹೊಂದಿದ್ದಾನೆ. ಸಾಮಾನ್ಯವಾಗಿ ವೀರಗಲ್ಲು ಶಿಲ್ಪಗಳಲ್ಲಿ ಬಿಚ್ಚುಗತ್ತಿ ನಡುವಿನಲ್ಲಿ ಇರುತ್ತವೆ. ಇಲ್ಲಿ ಖಡ್ಗವೇ ಇರುವುದರಿಂದ ಈ ವೀರನು ಧನುರ್ವಿಧ್ಯೆಯಂತೆಯೇ ಖಡ್ಗ ಪ್ರಯೋಗ ಪರಿಣಿತಿಯನ್ನು ಹೊಂದಿರುವುದು ಗಮನಾರ್ಹವಾಗಿದೆ. ಈತನ ಶಿರದ ಎಡಭಾಗದಲ್ಲಿ ಎತ್ತಿ ಕಟ್ಟಿರುವ ದೊಡ್ಡ ತುರುಬು ಇದೆ. ರೋಷಭರಿತ ನೇತ್ರಗಳು, ವೀರತನದ ಮುಖಭಾವನೆಯು ಚಹರೆಯಲ್ಲಿವೆ. ಕೊರಳಿನ ಹಾರಗಳು ತೋಳು ಮತ್ತು ಮುಂಗೈಗಳಲ್ಲಿ ಬಂಧಿಗಳು ಮತ್ತು ಕಾಲಿನ ಖಡಗಗಳ ಆಭರಣಗಳು ಈ



ವೀರನಿಗಿವೆ. ವೀರಗಚ್ಚೆಯ ವಸ್ತ್ರದ ಉಡುಗೆ ಇವನಿಗೆ ಇದೆ. ಈ ವೀರನ ಎಡಭಾಗದಲ್ಲಿ ಇವನ ಸತಿಯ ಚಿತ್ರಣವಿದ್ದು ಈಕೆ ಸಾವಿನಲ್ಲೂ ಪತಿಯನ್ನು ಹಿಂಬಾಲಿಸಿ ಸ್ವರ್ಗಕ್ಕೆ ಅಂದಿನ ಸಾಮಾಜಿಕ ಸತಿ ಪದ್ಧತಿಯಂತೆ ಹೋಗಿದ್ದಾಳೆ.

ಅತ್ಯಂತ ಕಲಾತ್ಮಕವಾಗಿ ಮೂಡಿಸಿರುವ ಈಕೆಯ ಚಿತ್ರಣದಲ್ಲಿ ಹಿರಿದಾದ ಕೇಶತುರುಬು ಇದೆ, ಕರ್ಣಗಳಲ್ಲಿ ಕುಂಡಲಗಳು ತೋಳು ಮತ್ತು ಮುಂಗೈಗಳಲ್ಲಿ ಬಂಧಿಗಳು ಕಾಲುಗಳಲ್ಲಿ ಖಡಗಗಳು ಇವೆ. ಅಲ್ಲದೆ ನಡುವಿನಲ್ಲಿ ಡಾಬುವಿನ ಆಭರಣವನ್ನು ಧರಿಸಿದ್ದಾಳೆ. ಈಕೆ ಧರಿಸಿರುವ ವಸ್ತ್ರದಲ್ಲಿ ಅಲಂಕಾರಯುಕ್ತ ನರಿಗೆಗಳ ಕಲಾತ್ಮಕತೆ ಎದ್ದು ಕಾಣುತ್ತಿದೆ. ಈಕೆಯ ಚಿತ್ರಣದಲ್ಲಿ ಉಬ್ಬಿರುವಂತೆ ಕುಚಗಳನ್ನು ಮೂಡಿಸಲಾಗಿದೆ, ತನ್ನ ಎಡದ ಕೈಯನ್ನು ಭೂಸ್ಪರ್ಶಿಯಾಗಿ ಇಳಿಬಿಟ್ಟಿದ್ದಾಳೆ. ತನ್ನ ಬಲದ ಕೈಮಡಚಿ ತಾವರೆಯ ಹೂವಿನ ಮೊಗ್ಗನ್ನು ಹಿಡಿದು ನಿಂತಿದ್ದಾಳೆ. ಈಕೆಯ ಪತಿ ಯಾವುದೋ ಕಾರಣಕ್ಕೆ ತನ್ನ ಶತೃಗಳ ಜೊತೆ ಹೋರಾಡಿ ಮಡಿದಿದ್ದಾನೆ. ಆ ಕಾರಣಕ್ಕಾಗಿ ಚಿತೆಯನ್ನು ಏರಿ ಅಗ್ನಿಪ್ರವೇಶಮಾಡಿ ಆತ್ಮಬಲಿದಾನ ಮಾಡಿಕೊಂಡಿದ್ದಾಳೆ. ಕ್ರಿ.ಶ. ಸುಮಾರು ೧೦ನೇ ಶತಮಾನಕ್ಕೆ ಈ ಪ್ರಾಚೀನ ವೀರ-ಮಾಸ್ತಿ ಸ್ಮಾರಕವು ಸೇರಿದುದಾಗಿದೆ.

ಬಳಿಯಲ್ಲಿಯೇ ಇರುವ ಎರಡನೆಯ ಪ್ರಾಚೀನ ವೀರಗಲ್ಲು ಸ್ಮಾರಕವು ಒಂದೇ ಹಂತದ ಚಿತ್ರಣವನ್ನು ಹೊಂದಿದ್ದು ವೀರನ ಚಿತ್ರಣವೇ ಇಲ್ಲಿ ಪ್ರಧಾನವಾಗಿದೆ. ನಾಲ್ಕು ಅಡಿ ಎತ್ತರ ಮತ್ತು ನಾಲ್ಕು ಅಡಿ ಅಗಲವನ್ನು ಹೊಂದಿರುವ ಈ ಶಿಲ್ಪವೂ ಸಹ ಸ್ಥಳೀಯ ಕಣಶಿಲೆಯಲ್ಲಿಯೇ ಮಾಡಿದುದಾಗಿದೆ. ವೀರನು ವೀರತನದಿಂದ ನಿಂತಿದ್ದು ತನ್ನ ಬಲದ ಕೈನಲ್ಲಿ ಧನಸ್ಸುವನ್ನು ಹಿಡಿದಿದ್ದು ಎಡದ ಕೈನಲ್ಲಿ ಎತ್ತಿ ಬಾಣವನ್ನು ಹಿಡಿದಿದ್ದಾನೆ. ಈತನ ಶಿರದಲ್ಲಿ ಶಿರೋಮುಡಿ ಇದ್ದು ಬೆನ್ನಿನಲ್ಲಿನ ಭತ್ತಳಿಕೆಯಲ್ಲಿ ಬಾಣಗಳು ತುಂಬಿವೆ. ನಡುವಿನಲ್ಲಿ ಹಿರಿದಾದ ಖಡ್ಗವಿದ್ದು ಮುಂಗೈ ಮತ್ತು ತೋಳುಗಳಲ್ಲಿ ಬಂಧಿಗಳು ಇವೆ. ಕಾಲುಗಳಲ್ಲಿ ಖಡಗಗಳ ಆಭರಣವೂ ಇದ್ದು. ವೀರಗಚ್ಚೆಯ ವಸ್ತ್ರದ ಉಡುಗೆ ಇವನಿಗಿದೆ.

ಇಲ್ಲಿನ ವೀರನು ಸಹ ಯಾವುದೋ ಕಾರಣಕ್ಕಾಗಿ ತನ್ನ ಶತೃಗಳ ಜೊತೆ ಹೋರಾಡಿ ಮಡಿದಿದ್ದಾನೆ. ಈ ಕಾರಣಕ್ಕಾಗಿ ಈ ವೀರಗಲ್ಲುವಿನ ಸ್ಮಾರಕ ನಿರ್ಮಾಣವಾಗಿದೆ. ಕ್ರಿ.ಶ.ಸು. ೧೦ನೇ ಶತಮಾನಕ್ಕೆ ಸೇರುವ ವೀರಗಲ್ಲು ಸಹ ಇದಾಗಿದ್ದು. ಕದಿರೇನ ಹಳ್ಳಿಯ ವೀರಮತ್ತು ತ್ಯಾಗದ ಸಂಕೇತವಾಗಿದೆ.

ಪ್ರಾಚೀನ ವೀರಮಾಸ್ತಿಕಲ್ಲು ಕಾಲ ಕ್ರಿ.ಶ. ಸುಮಾರು ೧೦ನೇ ಶತಮಾನದ ಕದಿರೇನ ಹಳ್ಳಿ ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

ಪ್ರಾಚೀನ ವೀರಗಲ್ಲು ಕಾಲ ಕ್ರಿ.ಶ. ಸು ೧೦ನೇ ಶತಮಾನ ಕದಿರೇನಹಳ್ಳಿ ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

◈◈◈◈◈

ಆಧುನಿಕೋತ್ತರ ಭಾಷೆ ಮತ್ತು ಸಂಸ್ಕೃತಿಯ ಹೊಸ ಅಭಿವ್ಯಕ್ತಿಯಾಗಿ ಕನ್ನಡದ ಬ್ಲಾಗ್‌ಗಳು

◈

ಕುಸುಮ ಎಂ.

ನಮ್ಮ ಪೂರ್ವಿಕರು ಕಲಿತ ವಿದ್ಯೆ, ಜ್ಞಾನ, ಸಂಪತ್ತು ಬಾಯಿಂದ ಬಾಯಿಗೆ ಹರಿದ ವಾಣಿ, ಮಂತ್ರ ಪಠಣ ಇತ್ಯಾದಿಗಳು ಸಂಚಾರಗೊಂಡು ಅವರ ವಿದ್ವತ್ತು ಅವರ ಧ್ವನ್ಯಂಗಗಳಲ್ಲಿಯೇ ಉಳಿದುಕೊಂಡ ಒಂದು ಪರಂಪರೆಯಿತ್ತು. ಆದರೆ ಬರಬರುತ್ತ ಜನವಾಣಿಯನ್ನು ಸಂಗ್ರಹಿಸುವ, ಶೇಖರಿಸುವ, ಲಿಖಿತಗೊಳಿಸುವ ಯೋಚನಾಲಹರಿಯಿಂದಾಗಿ ಭಾವಲಿಪಿ, ಚಿತ್ರಲಿಪಿ, ಧ್ವನಿಲಿಪಿಗಳು ಮೂಡತೊಡಗಿದವು. ಅದರಂತೆ ನಮ್ಮ ಭವ್ಯ ಭಾರತೀಯ ಪರಂಪರೆಯ ಇತಿಹಾಸವನ್ನು ಗಮನಿಸಿದರೆ ಶಾಸನಗಳು, ಹಸ್ತಪ್ರತಿಗಳು, ಕಡತಗಳು, ತಾಮ್ರಪಟಗಳು, ನಾಣ್ಯಗಳು, ಮುಂತಾದು ಲಿಖಿತ ದಾಖಲೆಗಳು ನಮ್ಮ ಜ್ಞಾನ ಸಂಪತ್ತಿನ ಬೇರುಗಳಾಗಿವೆ.

ವಿವಿಧ ಅಧ್ಯಯನ ಶಿಸ್ತುಗಳು, ವಿವಿಧ ಜ್ಞಾನ ಶಾಖೆಗಳಾಗಿ ಕವಲೊಡೆಯುತ್ತಾ ೧೭–೧೮ನೇ ಶತಮಾನಕ್ಕೆ ಮುದ್ರಣ ವ್ಯವಸ್ಥೆಯು ಚಾಲ್ತಿಗೆ ಬರಲು ಶುರುವಾಯಿತು. ಮುದ್ರಿತ, ಪ್ರಕಟಿತ, ಕೈಯಲ್ಲಿ ಹಿಡಿಯಬಹುದಾದ ಪ್ರತಿಗಳು, ಬೆರಳಚ್ಚುಗಳು ಬಂದವು. ಕ್ರಮೇಣ ೧೯ನೇ ಶತಮಾನಕ್ಕೆ ತಂತ್ರಜ್ಞಾನದ ಯಶಸ್ವಿ ಸಂಕ್ರಮಣದಿಂದಾಗಿ ಜಾಗತಿಕ ಮಟ್ಟದಲ್ಲಿ ಎಲ್ಲರನ್ನು ಸಂಪರ್ಕಿಸುವ ಗಣಕಯಂತ್ರ ತಂತ್ರಜ್ಞಾನ ಅಂತರ್ಜಾಲದ ಆವಿಷ್ಕಾರವಾಯಿತು. ಪ್ರಸಾರ ಮತ್ತು ಪ್ರಚಾರ ಮಾಧ್ಯಮವಾಗಿ ಇದು ವಿದ್ಯುನ್ಮಾನ ಮೂಲಕ ಎಲ್ಲೆಡೆಯು ಸಾಗಿ ಜನರ ಸಂದೇಶ, ಸಂಪರ್ಕ ಕೊಂಡಿಗಳಾದವು. E-Learning, E-mailing, Browsing, E-Chatting, E-Banking, E-Networking, E-

Video/Audio Chatting, E-Paper, E-Journal, E-Magazines ಎಂಬ ಎಲೆಕ್ಟ್ರಾನಿಕ್ ಪ್ರಪಂಚದಲ್ಲಿ ಸ್ಪರ್ಶಿಸಬಹುದಾದ ಭೌತಿಕ ಬರಹ ಪ್ರತಿಗಳಿಗಿಂತ 'ಸಾಫ್ಟ್ ಕಾಪಿಗಳ' ಕಾರ್ಯಭಾರವೇ ಹೆಚ್ಚಾಯಿತು. ಡಿಜಿಟಲ್ ಆವಿಷ್ಕಾರಗಳಿಂದ ಇಂದು ಎಲ್ಲೆಲ್ಲೂ ವಿದ್ಯುನ್ಮಾನ ಪ್ರಗತಿಯು ನಾಗಾಲೋಟದಲ್ಲಿದೆ. ಆಧುನಿಕ 'ಲಿಖಿತಾಭಿವ್ಯಕ್ತಿ'ಯ ಹೊಸ ಮಾದರಿಯಾಗಿರುವ ಬ್ಲಾಗ್‌ಗಳು ನಮ್ಮ ಕುತೂಹಲವನ್ನು ಕೆರಳಿಸುತ್ತಿವೆ. ಈ ಹಿನ್ನಲೆಯಲ್ಲಿ ಬ್ಲಾಗ್‌ಗಳು ಎಂದರೇನು? ಅವುಗಳ ಪ್ರಚಲನೆ, ಪ್ರಭಾವ, ಆಕರ್ಷಣೆ, ಒಲವು ಎಂಥದ್ದು ಎಂಬುದನ್ನು ಗಮನಿಸಬೇಕಾದ ಅವಶ್ಯಕತೆ ಈ ಆಧುನಿಕೋತ್ತರ ಸಾಹಿತ್ಯಕಾಲಘಟ್ಟದಲ್ಲಿ ಮುಖ್ಯ ಎಂದೆನಿಸುತ್ತದೆ.

ಬ್ಲಾಗ್‌ನ ಅರ್ಥವೇನು? ಸ್ವರೂಪ ಎಂಥದ್ದು?, ಬ್ಲಾಗುಗಳ ಇತಿಹಾಸ ಎಲ್ಲಿಂದ ಆರಂಭ, ಬ್ಲಾಗ್‌ನಲ್ಲಿ ವೈವಿದ್ಯತೆಗಳಿವೆಯಾ? ಬ್ಲಾಗ್‌ಗಳ ಹುಟ್ಟು ಮತ್ತು ಸಾವಿಗೆ ಕಾರಣವೇನು?, ಬ್ಲಾಗ್‌ನ ಮಿತಿಗಳು ಯಾವುವು? ಹೀಗೆ ಹಲವು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಇವುಗಳಿಗೆ ಉತ್ತರ ಹುಡುಕುತ್ತಾ ಹೋದಾಗ ಕುತೂಹಲಕರವಾದ ಬ್ಲಾಗಿಗರ ಲೋಕವೇ ತೆರೆದುಕೊಳ್ಳುತ್ತದೆ.

ಆಧುನಿಕೋತ್ತರ ಕನ್ನಡ ಸಾಹಿತ್ತಾಭಿವ್ಯಕಿಯ ಹೊಸ ಪ್ರಕಾರವಾಗಿ ಬ್ಲಾಗ್‌ಗಳನ್ನು ಗುರುತಿಸಬಹುದೇ ಎಂಬುದನ್ನು ಪರಿಶೀಲಿಸುವುದು ಈ ಲೇಖನದ ಉದ್ದೇಶವಾಗಿರುವುದರಿಂದ ನಾನು ಕನ್ನಡದ ಬ್ಲಾಗುಗಳ ಬಗೆಗೇ ಇಲ್ಲಿ ಪ್ರಸ್ತಾಪಿಸುತ್ತೇನೆ. ಕನ್ನಡದಲ್ಲಿರುವ ಬ್ಲಾಗ್‌ಗಳು ಯಾವುವು? ಅವುಗಳಲ್ಲಿ ವೈವಿಧ್ಯತೆ ಇದೆಯೆ? ಎಂಬ ಪ್ರಶ್ನೆಗಳಿಗೆ ಉತ್ತರ ಆಶ್ಚರ್ಯವಾಗುವಷ್ಟಿದೆ. ನಾನು ಕಂಡ ಹಲವು ಬ್ಲಾಗ್‌ಗಳಲ್ಲಿ ಕನ್ನಡ ನಾಡು, ನುಡಿ, ಪ್ರೀತಿ, ಪ್ರೇಮ, ಮಾಹಿತಿ ತಂತ್ರಜ್ಞಾನ, ವಿಜ್ಞಾನ, ಔಷಧ, ಪಾಕಶಾಸ್ತ್ರ, ಸಿನಿಮಾ, ಸಂಗೀತ, ಛಾಯಗ್ರಹಣ, ಚಾರಣ, ಪ್ರವಾಸ, ಹಾಡು-ಹರಟೆ, ಕೀಟಲೆ, ಬಾಲ ಪ್ರಪಂಚ, ರಾಜಕೀಯ, ಪತ್ರಿಕೋದ್ಯಮ, ಹಾಸ್ಯ, ಹೀಗೆ ವಿವಿಧ ವಿಷಯೋಪರಿ ವೈವಿಧ್ಯಮಯ ಬರಹಗಳನ್ನು ನಾವು ಗಮನಿಸಬಹುದು ಹಾಗೂ ಪ್ರಶಂಸಿಸಬಹುದು. ತಂತ್ರಜ್ಞಾನದ ಸಹಾಯದಿಂದ, ಬಹು ಮಾಧ್ಯಮದ ಸಹಾಯದಿಂದ, ವಿಷಯ ವೈವಿಧ್ಯತೆಯಲ್ಲಿ ಬಹುಮುಖಿಯಾಗಿರುವ ಕನ್ನಡದ ಕೆಲ ಆಯ್ದ ಬ್ಲಾಗಿಗರ ಹೊಸ ನೋಟ, ಕಲ್ಪನೆಗಳು ಹೃದ್ಯವೆನಿಸುತ್ತವೆ.

ಇನ್ನು "ಸಾಹಿತ್ಯ ಎಂಬುದು ಭಾಷೆಯ ಹಾಗೆಯೇ ನಿರಂತರ ಬದಲಾವಣೆಯ ಪ್ರಕ್ರಿಯೆಗೆ ತೆರೆದುಕೊಂಡೇ ಇರುವ ಸಮಾಜೋಸಾಂಸ್ಕೃತಿಕ ಅಭಿವ್ಯಕ್ತಿ" ಎಂದು ಒಪ್ಪುವುದಾದರೆ ಈ ಬ್ಲಾಗುಗಳೂ ಸಹ ಸಾಹಿತ್ಯದ ಹೊಸ ಅಭಿವ್ಯಕ್ತಿ ಎಂದು ಒಪ್ಪಬೇಕಾಗುತ್ತದೆ. ಹಾಗೆ ಒಪ್ಪುವ ಮೊದಲು ಬ್ಲಾಗ್‌ಗಳಿಗೆ ಆ ಸಾಹಿತ್ಯ ಗುಣವಿದೆಯೇ? ಎಂಬುದನ್ನು ಕಂಡುಕೊಳ್ಳಬೇಕಾಗುತ್ತದೆ. ಬ್ಲಾಗುಗಳಲ್ಲಿನ ಕವಿತೆ, ಹರಟೆ, ಲೇಖನ, ಹನಿಗವನ, ಚುಟುಕುಗಳು ಎಲ್ಲಾ ಸಾಹಿತ್ಯ ಪ್ರಕಾರಗಳನ್ನೂ

ಒಳಗೊಂಡಿರುವುದರಿಂದ ಇದನ್ನು ಸಾಹಿತ್ಯ ಸೃಷ್ಠಿಯ ಹೊಸ ಆವರಣವೆಂದು ಒಪ್ಪಬಹುದು. ನಿಜವಾಗಲೂ ಇಲ್ಲಿನ ಬರಹ ಸಾಹಿತ್ಯಿಕ ಮೌಲ್ಯವನ್ನು ಪಡೆದುಕೊಂಡಿವೆಯೇ? ಇಲ್ಲವೇ? ಎಂಬುದನ್ನು ಪರಿಶೀಲಿಸಲು ಪ್ರಸಕ್ತ ಆಧುನಿಕೋತ್ತರ ಸಾಲಿನಲ್ಲಿ 'ಬ್ಲಾಗ್' ಕೂಡ ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ. ಪ್ರಸಿದ್ಧಿ ಪಡೆದ ಸಾಹಿತಿಗಳು ಬ್ಲಾಗ್‌ಗಳನ್ನು ತೆರೆದಿದ್ದಾರೆಯೇ? ಎಂಬ ಪ್ರಶ್ನೆಗೆ ಹಲವು ಸಾಹಿತಿಗಳ ಪ್ರತ್ಯೇಕ ಬ್ಲಾಗ್ ಇರುವುದು ಕಂಡು ಬಂದಿರುವುದರಿಂದ ಹೌದು ಎಂಬ ಉತ್ತರ ನೀಡಬಹುದು. ಬ್ಲಾಗ್‌ನಿಂದಲೇ ಪ್ರಖ್ಯಾತರಾದ ಸಾಹಿತಿ ಇದ್ದಾರೆಯೇ? ಎಂಬುದರ ಬಗ್ಗೆ ಅವಲೋಕಿಸಬೇಕಾಗಿದೆ.

ಕನ್ನಡ ನಾಡು-ನುಡಿಗೆ ಸಂಬಂಧಿತವಾ ಅನೇಕ ಬ್ಲಾಗುಗಳು ಇರುವುದನ್ನು ಗುರುತಿಸಬಹುದು. ಈ ಬ್ಲಾಗುಗಳು ಕರ್ನಾಟಕದ ಸಮೃದ್ಧವಾದ ಇತಿಹಾಸ ಮತ್ತು ಸಂಸ್ಕೃತಿಯನ್ನು ಕುರಿತು ಹೇಳುತ್ತವೆ. ಕೇವಲ ನಾಡು-ನುಡಿ ಮಾತ್ರವಲ್ಲದೆ ನೆಲ-ಜಲ, ಸಂಸ್ಕೃತಿ, ಸಾಹಿತ್ಯದ ಬಗ್ಗೆಯೂ ಸಹ ಬ್ಲಾಗಿಸಲಾಗುತ್ತದೆ. ಕವಿರಾಜ ಮಾರ್ಗದಿಂದ ಹಿಡಿದು ಅದರ ಪೂರ್ವ ಸಾಹಿತ್ಯ ಮತ್ತು ಸಮಕಾಲೀನ ಸಾಹಿತ್ಯ ರಚನೆಗಳ ಬಗೆಗಿನ ಚರ್ಚೆಗಳನ್ನು ಬ್ಲಾಗುಗಳಲ್ಲಿ ಬರೆಯಲಾಗುತ್ತದೆ. ಕನ್ನಡ ನಾಡಿನ ಪರಿಸರ ಸಂಪತ್ತು, ಖನಿಜ ಸಂಪತ್ತು, ನಾಡಿನ ಉದ್ದಿಮೆಗಳು, ವಿದ್ಯಾಸಂಸ್ಥೆಗಳು ಮತ್ತು ತರಬೇತಿ ಕೇಂದ್ರಗಳು, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಬ್ಲಾಗಿಸಲಾಗಿರುತ್ತದೆ. ಅಂತರ್ಜಾಲದ ಹೊತ್ತಿಗೆಯನ್ನು ಒಳ ಹೊಕ್ಕು ನೋಡಿದರೆ, ಹಲವು ಬಗೆಯ ಬ್ಲಾಗುಗಳು ರಾರಾಜಿಸಿವೆ ಅವುಗಳನ್ನು ವಿಷಯವಾರು ವಿಂಗಡಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ.

ಕನ್ನಡ ಬ್ಲಾಗಿನಲ್ಲಿ ನಾಡು-ನುಡಿ ಚಿಂತನೆ: ಮೊದಲನೆಯದಾಗಿ ಬ್ಲಾಗುಗಳಲ್ಲಿ ಕಂಡು ಬಂದಿರುವ ಕನ್ನಡ ಮಾತೃಭಾಷಾ ಸ್ನೇಹಿ ಬ್ಲಾಗ್‌ಗಳ ಬಗೆಗೆ ಚರ್ಚಿಸಬಹುದು. ಕನ್ನಡದ ಮೇಲೆ ಅತಿಯಾದ ಪ್ರೀತಿ, ಗೌರವವನ್ನು ಇಟ್ಟಿರುವಂತವರು ಕನ್ನಡ ಪ್ರೇಮವನ್ನು ಸಾರುವುದರ ಮೂಲಕ ಬ್ಲಾಗುಗಳನ್ನು ಬ್ಲಾಗಿಸಿರುತ್ತಾರೆ. ಈ ಬ್ಲಾಗುಗಳ ಮೂಲಕ ಕನ್ನಡದ ಭಾಷೆಯ ಬಗ್ಗೆ ನೀರಸ ಭಾವನೆಯನ್ನು ತೋರುವ ವ್ಯಕ್ತಿಗಳಿಗೆ ಕನ್ನಡ ನಾಡು-ನುಡಿ, ಜಲ-ನೆಲ, ಸಂಸ್ಕೃತಿ, ಸಂಪ್ರದಾಯ, ಆಚರಣೆ-ಕಲರವ, ಸೊಗಡು-ಬೆಡಗುಗಳ ಬಗ್ಗೆ ತಿಳಿಸುವ ಪ್ರಯತ್ನವನ್ನು ಮಾಡುವುದರ ಜೊತೆಗೆ ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಸರಿಸುವ, ಅದರ ಮೋಡಿಗೆ ಒಳಗಾಗುವ ಹಲವರನ್ನು ಇಲ್ಲಿ ನಿಂದಿಸುವ ಕಾರ್ಯವೂ ಸಹ ನಡೆಯುತ್ತದೆ.

'ಗಾಂಚಲಿ ಬಿಡಿ ಕನ್ನಡ ಮಾತಾಡಿ' ಎಂಬುದೊಂದು ಪ್ರಸಿದ್ಧ ಬ್ಲಾಗ್, ಇದರಲ್ಲಿ ಆರೋಗ್ಯ, ಉದ್ಯೋಗ, ತಿಂಡಿ-ತೀರ್ಥ, ದೇವರು ಮತ್ತು ಭವಿಷ್ಯ ವಿಭಾಗಗಳನ್ನು

ಮಾಡಿಕೊಂಡಿದ್ದು, ಈ ವಿಷಯಗಳ ಕುರಿತು ಬರಹಗಳನ್ನು ಪ್ರಕಟಿಸುತ್ತದೆ. ಇದೊಂದು ಸಮುದಾಯದ ವೆಬ್ ಆಗಿದೆ. ಆದರೆ, ತನ್ನ ಶೀರ್ಷಿಕೆಯಿಂದ ಹೆಸರನ್ನು ಪಡೆದು ಟ್ವಿಟರ್, ಫೇಸ್‌ಬುಕ್, ವಾಟ್ಸಪ್ ಖಾತೆಗಳನ್ನು ಸಹ ತೆರೆದಿದೆ. 'ಕನ್ನಡದಲ್ಲಿ ನುಡಿ ಮುತ್ತುಗಳು' ಎಂಬುದು ಸತ್ಯ ಚರಣ್ ಎಸ್.ಎಂ. ಅವರ ಬ್ಲಾಗ್ ಆಗಿದ್ದು, ಕನ್ನಡ ನುಡಿ ಮುತ್ತುಗಳನ್ನು ಹೆಕ್ಕಿ ತೆಗೆದು ಬ್ಲಾಗ್‌ನಲ್ಲಿ ಪ್ರಕಟಿಸುತ್ತಾರೆ ಹಾಗೂ ಇತರ ಭಾಷೆಯ ನುಡಿಮುತ್ತುಗಳನ್ನು ಕನ್ನಡ ಭಾಷೆಗೆ ಕೆಲವನ್ನು ಅನುವಾದಿಸಿ ಪ್ರಕಟಿಸುತ್ತಾರೆ. ಕನ್ನಡ ಕನ್ನಡಿಗ ಕರ್ನಾಟಕ: ಇದೊಂದು ಸಮುದಾಯದ ಬ್ಲಾಗ್ ಆಗಿದ್ದು, ಸತೀಶ್ ಆರ್, ದಿಲೀಪ್, ಪುಟ್ಟಿ, ಶಿವಪ್ರಸಾದ್, ಅವರು ಬ್ಲಾಗ್ ತೆರೆದಿದ್ದಾರೆ. ಕನ್ನಡ ನಾಡು ನುಡಿಗೆ ದುಡಿದವರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ಪ್ರಕಟಿಸುತ್ತಾರೆ. ಈ ಬ್ಲಾಗ್‌ನ ಮುಖ ಪುಟದಲ್ಲಿ ನಾಡು ಮತ್ತು ಇತಿಹಾಸ, ಕನ್ನಡದ ಬಗ್ಗೆ, ಕನ್ನಡ ಗಾದೆಗಳು, ನನ್ನ ಕ್ಯಾಮರಾ ಕಣ್ಣಲ್ಲಿ ಬ್ಲಾಗಿನ ಉದ್ದೇಶ, ಉದ್ಯೋಗ ಮಾಹಿತಿ, ಇತರ ತಾಣಗಳು ಎಂಬ ವಿಭಾಗಗಳಿದ್ದು, ಇದಕ್ಕೆ ಸಂಬಂಧಿಸಿದ ಬರಹಗಳನ್ನು ಪ್ರಕಟಿಸುತ್ತದೆ. "ಕನ್ನಡವೇ ಜಾತಿ, ಕನ್ನಡವೇ ಧರ್ಮ, ಕನ್ನಡವೇ ದೇವರು" ಎಂಬ ಘೋಷ ವಾಕ್ಯದೊಂದಿಗೆ ಮೈದಳೆದ ಕರವೇ ಸಂಘಟನೆ ಶ್ರೀ ಟಿ.ಎ. ನಾರಾಯಣ ಗೌಡ ಅವರದು. ಇದರ ರಾಜ್ಯಾಧ್ಯಕ್ಷರು ಮಾಲೆಕಲ್ ತಿರುಪತಿ. ನಿರಂತರವಾಗಿ ಕರ್ನಾಟಕದ ವಿವಿಧ ವಿಷಯಗಳಾದ ಬೆಳಗಾವಿ ಗಡಿ ಸಮಸ್ಯೆ, ಕೃಷ್ಣ ನದಿ ನೀರು ಹಂಚಿಕೆ, ಕಾವೇರಿ ಜಲವಿವಾದ, ಮಹದಾಯಿ ಯೋಜನೆ, ಕನ್ನಡಕ್ಕೆ ಭಾಷಾ ಸ್ಥಾನಮಾನ, ಆಡಳಿತದಲ್ಲಿ ಕನ್ನಡ ಅನುಷ್ಠಾನ, ಕನ್ನಡ ಚಲನಚಿತ್ರ ಸಮಸ್ಯೆ, ಹೀಗೆ ಹಲವಾರು ಹೋರಾಟಗಳನ್ನು ಮಾಡುತ್ತಾ ನಾಡಿನ ಎಲ್ಲಾ ಸ್ತರಗಳಲ್ಲೂ ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ, ಅನಿಯಂತ್ರಿತ ವಲಸೆ ವಿರುದ್ಧ ಅರ್ಥಪೂರ್ಣ ಹೋರಾಟಗಳನ್ನು ನಡೆಸುತ್ತಾ ಬಂದಿದೆ. ಸಮೃದ್ಧವಾದ ನಾಡನ್ನು ಕಟ್ಟಲು ಕಟೀಬದ್ಧವಾಗಿರುವ ಕರವೇ ಕೈಂಕರ್ಯದಲ್ಲಿ ಯಶಸ್ಸನ್ನು ಸಾಧಿಸುತ್ತಿದೆ. ಹೆಚ್ಚು ಕನ್ನಡಿಗರು ಇದನ್ನು ಓದುತ್ತಾರೆ.

ಕನ್ನಡೇತರರಿಗೆ ಕನ್ನಡ ಕಲಿಸುವ ವೇದಿಕೆಯಾಗಿ ಬ್ಲಾಗುಗಳು

ಕನ್ನಡ ಗೊತ್ತಿಲ್ಲ: ಇದೊಂದು ಸಮುದಾಯ ಬ್ಲಾಗ್ ಆಗಿದ್ದು, ಅನೂಪ್‌ಮಯ್ಯ, ರಾಕೇಶ್ಮಯ್ಯ, ಪ್ರಶಾಂತ್, ರೋಹಿತ್.ಟಿ.ಎ ದಿನಾ ಶೇಷಪ್ಪ, ಅರ್ಪಿತ್ ಕುಮಾರ್, ಸಿ.ಪಿ ಅಪರ್ಣ ರಾವ್, ವರುಣ್, ಗೌತಮ್, ಸುಮಾ ಆರ್. ಅನಿಲ್, ನಿವೇದಿತಾ ಬಿ.ಎಸ್, ರಂಜು ಕೃಷ್ಣ, ಶ್ರೀನಿಧಿ ದರ್ಬೆ, ಡಾ||ಗೋಪಿ ಅಂಬಿಕಾಪತಿ, ಮೇಘನಾ ಸುಧೀಂದ್ರ, ಅವಿನಾಶ್, ಸಾಗರ್, ವೃತ್ತಿಪರರಾಗಿದ್ದು, ಹೊರ ರಾಜ್ಯದ ಜನರಿಗೆ 'ಕನ್ನಡ ಗೊತ್ತಿಲ್ಲ' ಎಂದು ಪದ ಬಳಕೆ ಮಾಡಬಾರದೆಂಬ ನಿಟ್ಟಿನಲ್ಲಿ ಕನ್ನಡ ಕಲಿಕಾ ವಿಧಾನವನ್ನು ಫೇಸ್‌ಬುಕ್, ಟ್ವಿಟರ್, ಬ್ಲಾಗ್, ವಾಟ್ಸಾಪ್,

ವೆಬ್‌ಸೈಟ್ ಮೂಲಕ ಜನರಿಗೆ ತಲುಪಿಸಿ ಅವರ ಕನ್ನಡ ಕಲಿಕಾ ವಿಧಾನದಲ್ಲಿ ಚಿತ್ರಗಳು, ವಿಡಿಯೋಗಳು, ಸರಳ ವಾಕ್ಯಗಳು, ಆಡಿಯೋಗಳು, ಪ್ರಶ್ನೋತ್ತರ ಮಾಲಿಕೆ, ಸಂಭಾಷಣೆ, ಮುಂತಾದ ವಿಧಾನಗಳ ಮೂಲಕ ಕನ್ನಡ ಭಾಷಾ ಕಲಿಕೆಗೆ ಸ್ಫೂರ್ತಿದಾಯಕ ಕೆಲಸಗಳನ್ನು ಮಾಡುತ್ತಿದ್ದಾರೆ.

ಬೇಸಿಕ್ ಕನ್ನಡ : ಇದೊಂದು ಸಮುದಾಯದ ಬ್ಲಾಗ್ ಆಗಿದ್ದು, ನವೀನಾ, ಸತೀಶ, ದರ್ಶನ್, ಪದ್ಮಾ, ರಘು, ಕೀರ್ತಿ, ಶ್ವೇತಾ, ಶಂಕರ್, ಉಮೇಶ್, ಪುರುಷೋತ್ಸವ, ವಿಕ್ರಮ್ ಮತ್ತು ರಮಿ ಇವರುಗಳು ಈ ಬ್ಲಾಗ್ ನಡೆಸುತ್ತಿದ್ದು, ಸ್ಥಳೀಯಾ ಭಾಷಾ ಜ್ಞಾನವನ್ನು ಸಂಭಾಷಣೆಯಲ್ಲಿ ಅಡಚಣೆಯಾಗದಂತೆ ಸಂಪರ್ಕ ಸಂವಹನ ಸಾಧಿಸಲು ಕನ್ನಡ ಭಾಷಾ ಪದಗಳು ಮತ್ತು ಅವುಗಳಿಗೆ ಇಂಗ್ಲೀಷ್‌ನಲ್ಲಿ ಭಾಷಾಂತರ ಅವುಗಳ ಅರ್ಥವನ್ನು ನೀಡಿ ಪ್ರಕಟಿಸುತ್ತಾರೆ. 'ಕನ್ನಡದಲ್ಲಿ ಉಪಯುಕ್ತ ಪದಗಳು' ಇವರ ಪ್ರಖ್ಯಾತಿ ಪಡೆದಿರುವ ಅಂಕಣವಾಗಿದೆ. ಇದರಿಂತ ಇತರ ಭಾಷಿಕರಿಗೆ ಕರ್ನಾಟಕದಲ್ಲಿ ಕನ್ನಡ ಪದಗಳನ್ನು ಬಳಸಲು ಮಾತನಾಡಲು ಅವಕಾಶ ಸಾಧ್ಯವಾಗಿದೆ.

ಕನ್ನಡಿಗರಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಬ್ಲಾಗ್‌ಗಳು:

ಕನ್ನಡದ ವಿಜ್ಞಾನ ತಂತ್ರಜ್ಞಾನ ತಾಣಗಳ ಪಟ್ಟಿಗೆ ಇದೀಗ ತನ್ನದೇ ಆದ ಪ್ರತ್ಯೇಕ ಪುಟ ಇದೆ. 'ಇ–ಜ್ಞಾನ ಬಳಗ' ಎಂಬ ಬ್ಲಾಗ್‌ನಲ್ಲಿ ವಿಜ್ಞಾನದ ಕುರಿತ ಅನೇಕ ಬ್ಲಾಗ್‌ಗಳು ಇತ್ತೀಚಿಗೆ ಅಪ್‌ಡೇಟ್ ಆಗುತ್ತಿವೆ. ಕನ್ನಡದಲ್ಲಿ ವಿಜ್ಞಾನ–ತಂತ್ರಜ್ಞಾನದ ಬ್ಲಾಗುಗಳೆಷ್ಟಿವೆ ಎಂದು ಪ್ರಶ್ನೆ ಹಾಕಿಕೊಂಡಾಗ ನಮಗೆ ದೊರೆತ ಬ್ಲಾಗ್‌ಗಳು ಈ ರೀತಿ ಇವೆ. ಈ ಎಲ್ಲಾ ಬ್ಲಾಗ್‌ಗಳು ಆಕ್ಟೀವ್ ಆಗಿಲ್ಲ. ಕೆಲವು ಮಾತ್ರ ಆಗಿವೆ. ಅವುಗಳೆಂದರೆ ಇ–ಜ್ಞಾನ, ವಿಶ್ವ ಕನ್ನಡ, ಇಂದಿನ ವಿಜ್ಞಾನ, ತಂತ್ರಜ್ಞಾನ ಕುತೂಹಲ, ಧಿವೀ–ದಸ್ ನೌನ್, ವಿಸ್ಮಯ, ಅಶೋಕ್ ವರ್ಲ್ಡ್, ಈ ಎಲ್ಲಾ ಬ್ಲಾಗ್‌ಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಅನೇಕ ಜನರಿಗೆ ಮಾಹಿತಿಯನ್ನು ನೀಡುವ ಕಾರ್ಯವನ್ನು ಮಾಡುತ್ತಿವೆ.

ಇ–ಜ್ಞಾನ ಡಾಟ್ ಕಾಮ್: ಶ್ರೀನಿಧಿ ಟಿ.ಜಿ. ಅವರ ಬ್ಲಾಗ್ ಆಗಿದ್ದು, ವಿಜ್ಞಾನ ತಂತ್ರಜ್ಞಾನ ವಿಷಯಗಳ ಸಂವಹನಕ್ಕಾಗಿ ಮೀಸಲಾಗಿರುವ ಕನ್ನಡ ವೆಬ್/ಬ್ಲಾಗ್. ಈ ಕ್ಷೇತ್ರಕ್ಕೆ ಸಂಬಂಧಪಟ್ಟ ಲೇಖನ, ಅಂಕಣ, ಸಂದರ್ಶನ, ಪುಸ್ತಕ ಪರಿಚಯ, ಸುದ್ದಿ ವಿಶ್ಲೇಷಣೆ ಮುಂತಾದ ಬರಹಗಳು ಇ–ಜ್ಞಾನದಲ್ಲಿ ನಿಯಮಿತವಾಗಿ ಪ್ರಕಟವಾಗುತ್ತವೆ. ಇದರ ಪ್ರಖ್ಯಾತಿ ಹೆಚ್ಚಿದ್ದು ಓದುಗರ ಸಂಖ್ಯೆಯು ಕೂಡ ಹೆಚ್ಚಿದೆ.

ಪವನಜ: ಡಾ॥ ಪವನಜ ಯು. ಬಿ. ಅವರ ಬ್ಲಾಗ್ ಆಗಿದ್ದು, ಕನ್ನಡದ ಪ್ರಪ್ರಥಮ ಅಂತರ್ಜಾಲ ನಿರ್ಮಾಪಕ, ಕಂಪ್ಯೂಟರ್ ತಂತ್ರಾಂಶ ತಜ್ಞ, ಮಾಹಿತಿ ತಾಣಗಳ

ಆಯೋಜಕ. ವಿಶ್ವಕನ್ನಡ.ಕಾಂ ಎಂಬ ಕನ್ನಡದ ಮೊದಲ ಆನ್ ಲೈನ್ ಪತ್ರಿಕೆಯನ್ನು ಆರಂಭಿಸಿದವರು. ಮಾಹಿತಿ ಮತ್ತು ತಂತ್ರಜ್ಞಾನ ಕುರಿತಂತೆ ಇಂಗ್ಲೀಷ್ ಮತ್ತು ಕನ್ನಡ ಎರಡು ಭಾಷೆಯಲ್ಲಿಯೂ ಬರಹಗಳನ್ನು ನಿಯಮಿತವಾಗಿ ಪ್ರಕಟಿಸುತ್ತಾ ಯೂನಿಕೋಡ್‌ನಲ್ಲಿ ಕನ್ನಡ ಸ್ಥಾನಮಾನಗಳ ಕುರಿತು ಚರ್ಚೆ, ಕನ್ನಡ ಗಣಕ ಪರಿಷತ್ತಿನ ನುಡಿ ತಂತ್ರಾಂಶದ ತಯಾರಿಕೆಯಲ್ಲಿ ತಾಂತ್ರಿಕವಾದ ಮಾಹಿತಿ, ಸಲಹೆ, ಸೂಚನೆ, ನೀಡುತ್ತಾ ಬಂದಿದ್ದಾರೆ. ಕನ್ನಡ ಭಾಷಾ ಬಳಕೆಯನ್ನು ಸುಗಮಗೊಳಿಸಲು ಹಲವು ಶಿಷ್ಟತೆಗಳನ್ನು ಜಾರಿಗೊಳಿಸುವ ಉದ್ದೇಶ ಕನ್ನಡದ ಉತ್ಸಾಹಿ ತಂತ್ರಜ್ಞರು ಮತ್ತು ವೃತ್ತಿಪರರು. ಪ್ರಸಕ್ತ ಕನ್ನಡಕ್ಕೆ ಒಂದು ಓಪನ್ ಟೈಪ್ ಫಾಂಟಿನ ತಾಯರಿಕೆಯಲ್ಲಿ ನಿರತರಾಗಿದ್ದಾರೆ.

ಲಿನಕ್ಸಾಯಣ: ಓಂ ಶಿವಪ್ರಕಾಶ್ ಅವರ ಬ್ಲಾಗ್ ಆಗಿದ್ದು, ಗಣಕಯಂತ್ರ, ಲಿನಕ್ಸ್ ಆಪರೇಟಿಂಗ್ ಸಿಸ್ಟಂ ಬಗ್ಗೆ ಮಾಹಿತಿ ಬರಹಗಳಿವೆ. ಸ್ವತಂತ್ರ ತಂತ್ರಾಂಶ ಮತ್ತು ಮಾನದಂಡಗಳನ್ನು ಕಲಿಸುವ ಸ್ನಾತಕೋತ್ತರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಮಾಹಿತಿ ತಂತ್ರಜ್ಞಾನದ ಬರಹಗಳನ್ನು ಪ್ರಕಟಿಸುತ್ತಾರೆ. ಸಂಪದ.ನೆಟ್‌ನಲ್ಲಿ ಪ್ರಕಟಣೆಯನ್ನು ಕಂಡಿದೆ.

ಅಶೋಕ್ ವರ್ಲ್ಡ್: ಅಶೋಕ್ ಕುಮಾರ್ ಎ. ಅವರ ಬ್ಲಾಗ್ ಆಗಿದ್ದು, ತಂತ್ರಜ್ಞಾನ ಕ್ಷೇತ್ರದಲ್ಲಿನ ಲ್ಯಾಪ್ ಟಾಪ್ ಬಳಕೆ, ಮೊಬೈಲ್ ಒಳಗಿನ ಸೇವೆಗಳು, ಡೆಸ್ಕ್ಟಾಪ್, ಹಾರ್ಡವೇರ್, ಗಣಿತದ ಸಮಸ್ಯೆಗಳು, ಹೀಗೆ ಹಲವಾರು ಲೇಖನಗಳನ್ನು ಪ್ರಕಟಿಸುತ್ತಾರೆ.

ವಿಸ್ಮಯ+: ಅರ್ಶದ್ ಹುಸ್ಸೈನ್ ಅವರ ಬ್ಲಾಗ್ ಆಗಿದ್ದು, ಆರೋಗ್ಯಕ್ಕೆ ಸಂಬಂಧಿಸಿದ ಮನೆಮದ್ದು, ಆಯುರ್ವೇದದ ಶಕ್ತಿ, ಆಹಾರ ಕ್ರಮ, ದೈನಂದಿನ ಜೀವನ, ಮಾನಸಿಕ ಆರೋಗ್ಯ ಇವುಗಳ ಕುರಿತು ಚಿತ್ರ ಸಮೇತ ಬರಹಗಳನ್ನು ಹಾಗೂ ವಿಜ್ಞಾನಕ್ಕೆ ಸಂಬಂಧಿಸಿದ ಅಂಕಿಗಳ ಆಟ, ಫಝಲ್‌ಗಳು, ಹೀಗೆ ವೈವಿಧ್ಯಮಯವಾದ ಪುಟ್ಟ ಬರಹಗಳನ್ನು ಪ್ರಕಟಿಸುತ್ತಾರೆ.

ಹಳತು ಹೊನ್ನು: ನೆಲ್ಸನ್ ಅವರ ಬ್ಲಾಗಾಗಿದ್ದು ತಂತ್ರಜ್ಞಾನದಲ್ಲಿ ಗೂಗಲ್ ಹೊಸ ಆವಿಷ್ಕಾರದ ಲೇಖನಗಳು, ಆ್ಯಪಲ್ ಫ಼ೋನ್, ಮೆಮೊರಿ, ಚಿಪ್, ಹೀಗೆ ಹಾರ್ಡವೇರ್ ಕುರಿತ, ಮತ್ತು ತಂತ್ರಾಂಶ ಬಳಕೆಯ ಕುರಿತು, ಹೊಸ ಸ್ಮಾರ್ಟ್ ಪೋನ್‌ನ ಬಳಕೆಯಲ್ಲಿ ವಾಟ್ಸಪ್, ಪೇಸ್ಬುಕ್, ಟ್ವಿಟರ್ ಸೆಟ್ಟಿಂಗ್ಸ್ ಕುರಿತ ಹಲವಾರು ಮಾಹಿತಿ ಬರಹಗಳನ್ನು ಪ್ರಕಟಿಸಿದ್ದಾರೆ.

ಕಲರವ: ಭಾರ್ಗವ್ ಎ.ಪಿ ಅವರ ಬ್ಲಾಗ್ ಆಗಿದ್ದು, ಪಕ್ಷಿ ವೀಕ್ಷಣೆ, ಪರಿಸರ ಸಂರಕ್ಷಣೆ, ಖಗೋಳ, ಕುರಿತಾದ ಹುಳು, ನೇರಳೆ, ಕುಟರ, ಕುಟಿಗ, ಹಾರುವ ಓತಿ,

ಜೋಳಿಗೆ ಹುಳು, ಉಗುಳು ಕೀಟ, ಕಾಗೆ, ರಣಹದ್ದು, ಪೆಲಿಕಾನ್ ಹಕ್ಕಿ, ಎಂಬ ಪರಿಸರ ಮತ್ತು ಪಕ್ಷಿಗಳನ್ನು ಕುರಿತ ಬರಹಗಳು, ಚಂದ್ರ ಚಲನೆಗಳು, ಕತ್ತಲ ಲೋಕದ ಅನಾವರಣ ಎಂಬ ಖಗೋಳದ ಬರಹಗಳು, ಇ-ತ್ಯಾಜ್ಯ ನಿರ್ವಹಣೆ ಹಾಗೂ ವಿಲೇವಾರಿ, ವಸ್ತುಗಳ ಅಂತರ್ಜಾಲ ಎನ್ನುವ ತಂತ್ರಜ್ಞಾನದ ವಿಶೇಷ ಬರಹಗಳು ಕಂಡುಬಂದಿದೆ.

ಯಾವುದೇ ಭಾಷೆಯು ಕೇವಲ ಸಾಹಿತ್ಯಕ್ಕಷ್ಟೇ ಮೀಸಲಾಗಿದ್ದರೆ ಅದರ ಅಭಿವೃದ್ಧಿ ಕುಂಟಿತವೆಂದೇ ಹೇಳಬೇಕು ಅಭಿವೃದ್ಧಿಶೀಲವಾದ ನವನವೀನ ಜ್ಞಾನ ಶಿಸ್ತುಗಳಿಗೆ ಅಭಿವ್ಯಕ್ತಿ ನೀಡುವ ಸಾಮರ್ಥ್ಯ ಯಾವ ಭಾಷೆಗೆ ಇರುತ್ತದೋ ಅಂತಹ ಭಾಷೆ ಪ್ರೌಢವಾದ ಸಮರ್ಥವಾದ ಭಾಷೆ ಎಂದೇ ಹೇಳಬೇಕು. ಸಾಹಿತ್ಯೇತರವಾದ ಇತರ ಜ್ಞಾನ ಶಿಸ್ತುಗಳನ್ನು ದಾಖಲಿಸುವುದಕ್ಕೆ ಮತ್ತು ಪ್ರಸರಣಗೊಳ್ಳುವುದಕ್ಕೆ ಭಾಷೆಯ ಬಳಕೆ ನಡೆದಾಗ ಭಾಷಾ ಕೋಶವೂ ಬೆಳೆಯುತ್ತದೆ. ನವನವೀನ ಪದಗಳ ಸೃಷ್ಟಿ ಸಾಧ್ಯವಾಗುವ ಮೂಲಕ ಮತ್ತು ಸ್ವೀಕರಣದ ಮೂಲಕ ಶಬ್ದಕೋಶ ವಿಸ್ತರಣೆಯಾಗುತ್ತದೆ. ಹಾಗೆ ನೋಡಿದರೆ ಕನ್ನಡದಲ್ಲಿ ವೈಜ್ಞಾನಿಕ ಶಿಸ್ತುಗಳಿಗೆ ಕನ್ನಡವನ್ನು ಬಳಸಲು ಸಾದ್ಯವಿಲ್ಲಂಬ ಅನಿಸಿಕೆಯನ್ನು ಹುಸಿಮಾಡಿ ಅನೇಕ ವೈಜ್ಞಾನಿಕ ಬರಹಗಳು ಬಂದಿವೆ, ಭಿನ್ನ ಶಿಸ್ತು, ಶಾಸ್ತ್ರಗಳ ಬರಹಕ್ಕಾಗಿಯೇ ಅನೇಕ ಬಗೆಯ ಪಾರಿಭಾಷಿಕ ಪದಗಳ ಸೃಷ್ಟಿ ಹಾಗೂ ಪಾರಿಭಾಷಿಕ ಪದಕೋಶಗಳ ಸೃಷ್ಟಿ ನಡೆಯುತ್ತಿದೆ. ಈಗ ಅಂತರ್ಜಾಲ , ಸಾಮಾಜಿಕ ಮಾಧ್ಯಮಗಳ ಕಾರಣದಿಂದಾಗಿ ಭಾಷಾ ಬಳಕೆಯಲ್ಲಿ ತೀವ್ರತರವಾದ ಬದಲಾವಣೆಗಳು ನಡೆಯತೊಡಗಿವೆ. ಸಾಂಸ್ಕೃತಿಕ ಸ್ವೀಕರಣಕ್ಕೆ ಹೆಚ್ಚು ಅವಕಾಶವಾಗುತ್ತದೆ.

ಆಡುಮಾತಿನ ಶೈಲಿಯ ಬ್ಲಾಗ್‌ಗಳು:

ಬರಹವೆಂಬುದು ಬರಿಯ ಪ್ರಮಾಣ ಭಾಷೆಯಲ್ಲಷ್ಟೇ ಇದ್ದು ಆಡುನುಡಿಗಿಂತ ಭಿನ್ನವಾಗಿ ಸಾಹಿತ್ಯ ರಚನೆಯಲ್ಲಿ ಕಂಡುಬರುವುದು. ಆಡುನುಡಿ ಬರಹದ ಭಾಷೆಗಿಂತಲೂ ಹೆಚ್ಚು ಜೀವಂತವೂ ಹಾಗೂ ಚಲನಶೀಲವೂ ಆಗಿದ್ದು ನವನವ ಪಲ್ಲಟಗಳಿಗೆ ತೆರೆದುಕೊಳ್ಳತ್ತದೆ. ಆಡುನುಡಿಯಲ್ಲಿ ಕಂಡು ಬರುವ ವೈವಿಧ್ಯತೆ, ಪ್ರಾದೇಶಿಕತೆ, ಸೊಗಡು , ಆಪ್ತ ಅಬಿವ್ಯಕ್ತಿ ಶಿಷ್ಟಭಾಷೆಯಲ್ಲಿ ಮರೆಯಾಗುವುದು ಸಹಜ. ಕವಿರಾಜಮಾರ್ಗಕಾರನೇ ಕನ್ನಡಂಗಳ್ ಎಂಬ ಪದವನ್ನು ಬಳಸಿ ಕನ್ನಡ ನಾಡಿನಲ್ಲಿರುವ ಭಾಷಾ ವೈವಿಧ್ಯತೆಯ ಕಡೆಗೆ ಗಮನಸೆಳೆದಿದ್ದಾನೆ, ಪ್ರಾದೇಶಿಕ ವೈವಿದ್ಯತೆಯೊಂದಿಗೆ ಸಾಮಾಜಿಕ ವೈವಿದ್ಯತೆಯೂ ಕೂಡ ಒಂದು ಸಂಸ್ಕೃತಿಯ ಹಲವು ಚಹರೆಗಳನ್ನು ಗುರುತಿಸಿಕೊಳ್ಳಲು ಅತ್ಯಂತ ಅವಶ್ಯಕ.

ಕನ್ನಡ ಬ್ಲಾಗುಗಳಲ್ಲಿ ಇಂತಹ ವೈವಿದ್ಯ ಪೂರ್ಣವಾದ,ಹಲವು ಉಪಭಾಷಾ ಸೊಗಸನ್ನು ಕಾಣಿಸುವುದು ಸಾಧ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಜನರು ತಮ್ಮ ಭಾಷೆ,

ಅಡಿಗೆ–ತಿಂಡಿ, ವಸ್ತ್ರ–ಒಡವೆ, ಎಂದು ದೇಸೀ ಸಂಸ್ಕೃತಿಯತ್ತ ಮುಖಮಾಡಿದ್ದಾರೆ, ತಮ್ಮ ಬೇರುಗಳನ್ನು ಗಟ್ಟಿಗೊಳಿಸಿಕೊಳ್ಳಬೇಕಾದ ಅನಿವಾರ್ಯ ಕಾಲಘಟ್ಟದಲ್ಲಿದ್ದಾರೆ. ಹಾಗಾಗಿ ಸಾಂಸ್ಕೃತಿಕ ಅಸ್ಮಿತೆಯಲ್ಲಿ ಪ್ರದಾನ ಪಾತ್ರ ವಹಿಸುವ ಭಾಷೆ ಜನರನ್ನು ಒಟ್ಟುಗೂಡಿಸುವ ಸಶಕ್ತವಾದ ಮಾಧ್ಯಮ ಎಂಬುದರಲ್ಲಿ ಅನುಮಾನವೇಇಲ್ಲ. ಕುಂದಾಪುರ ಕನ್ನಡ, ಹವ್ಯಕ ಕನ್ನಡ, ಬಿಜಾಪುರ ಕನ್ನಡ, ಗುಲ್ಬರ್ಗ ಕನ್ನಡ, ಮಂಗಳೂರು ಕನ್ನಡದಂತಹ ಪ್ರಾದೇಶಿಕ ಭಾಷೆಗಳು, ಆಡು ಮಾತಿನ ಒಳ ನುಡಿಯ ವೈಶಿಷ್ಟ್ಯತೆಯನ್ನು ಬಿಂಬಿಸುತ್ತವೆ. ಪಾರಂಪರಿಕ ಆಚರಣೆ, ಸಂಪ್ರದಾಯ, ಉಡುಗೆ–ತೊಡುಗೆ ಎಂಬ ಇತ್ಯಾದಿ ಕ್ರಿಯಾ ಲೋಕದಲ್ಲಿರುವ ಪ್ರಾದೇಶಿಕತೆ, ಉತ್ತರ ಕನ್ನಡ ಸೊಬಗು ಬೆಡುಗುಗಳನ್ನು ಉಳಿಸುವ ಪ್ರಯತ್ನವನ್ನು ಬ್ಲಾಗ್ ವೇದಿಕೆಗಳು ಮಾಡಿಕೊಡುತ್ತವೆ. ಆಡು ಮಾತಿನ ವೈಶಿಷ್ಟ್ಯವು ಮರೆಯಾಗುತ್ತಿದೆಯೇ ಎಂಬ ಶಂಕೆಯನ್ನು ತಪ್ಪಿಸುವ ಉದ್ದೇಶದಿಂದ ಹಲವಾರು ಜನ ಬ್ಲಾಗ್‌ಗಳಲ್ಲಿ ತಮ್ಮ ನಾಡಿನ ಸೊಗಡನ್ನು ಬಿತ್ತರಿಸುತ್ತಿದ್ದಾರೆ.

ಪ್ರಶಾಂತ ಆಡೂರ ಅವರು 'ಕೆಂಡ ಸಂಪಿಗೆ' ಬ್ಲಾಗ್‌ನಲ್ಲಿ ಪ್ರಮಾಣ ಭಾಷೆಯಲ್ಲಿ ಬರಹಗಳನ್ನು ಬರೆಯದೆ "ಹುಟ್ಟಿದ್ದು ಶಿವಮೊಗ್ಗದೊಳಗ. ಮುಂದೆ ಕಲತಿದ್ದು ಬೆಳದಿದ್ದು ಬಲತಿದ್ದು ಎಲ್ಲಾ ಹುಬ್ಬಳ್ಳಿ ಒಳಗ. ಒಂದ ಆರ ವರ್ಷದಿಂದ ತಿಳದಾಗೊಮ್ಮೆ, ಟೈಮ ಸಿಕ್ಕಾಗೊಮ್ಮೆ ಕನ್ನಡ ಹಾಸ್ಯ ಲೇಖನಗಳನ್ನ ಬರಲಿಕತ್ತೇನಿ. ಉತ್ತರ ಕರ್ನಾಟಕದ ಆಡು ಭಾಷೆಯೊಳಗ ಬರೇಯೊದು ನನ್ನ ಲೇಖನಗಳ ವಿಶೇಷತೆ" ಎಂದು ಹೇಳಿಕೊಂಡಿದ್ದಾರೆ. ಇವರ ಬರಹಗಳು ಆಡು ಮಾತಿನ ಶೈಲಿಯಲ್ಲಿದ್ದು ಉತ್ತರ ಕರ್ನಾಟಕ ಭಾಷಾ ಸೊಗಡಿನಿಂದ ಓದುಗರ ಮನಸ್ಸನ್ನು ಸೆಳೆದುಕೊಂಡಿವೆ. ಹಳ್ಳಿಯ ಜನ ತಮ್ಮ ಊರಿನ ಭಾಷೆಯನ್ನು ಮಾತನಾಡಲು ಬೆಂಗಳೂರಿನಲ್ಲಿ ಮುಜುಗರಪಟ್ಟು ಇರುಸು ಮುರುಸಾಗುವುದುಂಟು, ಆದರೆ ಬ್ಲಾಗ್‌ಲೋಕ ಸ್ವತಂತ್ರವಾಗಿ ಸ್ವ–ಇಚ್ಚೆಯಿಂದ, ಹೆಮ್ಮೆಯಿಂದ ತನ್ನ ಭಾಷಾ ರುಚಿಯನ್ನು ಉಣಬಡಿಸುತ್ತಿದೆ. ಹೊರನಾಡಿನ ಹೊರದೇಶದ ನಮ್ಮ ಕನ್ನಡಿಗರು ಹಾಗೂ ಬೆಂಗಳೂರಿನ ಕನ್ನಡಿಗರೂ ಈ ಉತ್ತರ ಕರ್ನಾಟಕದ ಭಾಷಾ ಶೈಲಿಯನ್ನು ಹೆಚ್ಚು ಕೇಳಿ ಅದರ ಸವಿಯನ್ನು ಸವಿಯಲು ಇಷ್ಟ ಪಡುತ್ತಾರೆ. ಜೊತೆಗೆ ಭಾಷಾ ಅಭಿಮಾನಿಗಳು ಇದರ ಸೊಗಡಿಗೆ ಮನಸೋತು ಜನಪ್ರಿಯಗೊಳಿಸುತ್ತಾರೆ. ಆಡು ಮಾತಿನ ಸಲ್ಲಾಪ, ಸರಸ, ವಿರಸ, ಹರಟೆ ಸಿಕ್ಕರೆ ಸಾಕು ಸಹೃದಯನ ಮನಸನ್ನು ಸೆಳೆದಿಡಲು ಇನ್ನೇನು ಬೇಕು. ಅದರ ಒಂದು ತುಣುಕು ಹೀಗಿದೆ ನೋಡಿ

"ನನ್ನ ಲಗ್ನ ಆಗಿ ಎರಡ ಮೂರ ತಿಂಗಳಾಗಲಿಕ್ಕಿ ಬಂದಿತ್ತ. ಒಂದ ದಿವಸ ನಂಗ ಒಮ್ಮಿದೊಮ್ಮಿಲೆ ಊಟ ಸೇರಲಾರದಂಗ ಆಗಿ ಏನ ಉಂಡರು ವೈಕ್ ವೈಕ್ ಅನ್ನೊಂಗ ಆಗಲಿಕತ್ತ, ನಮ್ಮವ ಅದನ್ನ ನೋಡಿ "ಅಯ್ಯ ನಮ್ಮಪ್ಪ, ಇದೇನ ಕಾಲ

ಬಂತೊ ಮಾರಯಾ? ಲಗ್ನ ಆಗಿ ಮೂರ ತಿಂಗಳ ಆಗೋ ಪುರಸತ್ತ ಇಲ್ಲದ ನಿನ್ನ ಹೆಂಡ್ತಿ ಬದ್ಲಿ ನೀ ವಾಂತಿ ಮಾಡ್ಕೋಳಿಕತ್ತೀಯಲ್ಲಾ, ಯಾಕ ಕೇಸ ಏನರ ಉಲ್ಟಾ ಆಗದೇನ? ಅಂತ ನಂಗ ಚಾಷ್ಟಿ ಮಾಡಿದ್ಲು.

ಫೇಸ್‌ಬುಕ್ ಬ್ಲಾಗ್‌ಗಳು

'ಕನ್ನಡ ಬ್ಲಾಗ್ – ನ್ಯೂಸ್ ಮತ್ತು ಮಾದ್ಯಮ': ಫರ್ಹಾನ್ ರಶೀದ್ನ ಅವರ ಬ್ಲಾಗ್ ದಿನಾಂಕ: ೧೧/೦೪/೨೦೧೭ ರಂದು ಪ್ರಾರಂಭಿಸಲಾಗಿದ್ದು, ಪ್ರಸಕ್ತ ಚಾಲ್ತಿಯಲ್ಲಿದೆ.'ಇಂಟರ್ನೆಟ್‌ನಲ್ಲಿ ಇಂಗ್ಲಿಷ್ ಮಾತ್ರ ಯಾಕೆ, ಕನ್ನಡ ಕೂಡಲಭ್ಯ!' ಇದು ಇವರ ಟ್ಯಾಗ್ ಲೈನ್. ಪ್ರಚಲಿತ ರಾಜಕೀಯ ವಿದ್ಯಾಮಾನಗಳು, ಆರ್ಥಿಕ, ಸಾಮಾಜಿಕ, ಕಲಾತ್ಮಕ, ಸಾಂಸ್ಕೃತಿಕ ವಸ್ತು ವಿಷಯಗಳನ್ನು ಒಳಗೊಂಡಿದೆ. ಅಷ್ಟೇ ಅಲ್ಲದೇ ದೃಶ್ಯ ಮತ್ತು ಶ್ರವ್ಯ ಮಾದ್ಯಮಗಳ ಮೂಲಕ ನ್ಯೂಸ್‌ಗಳನ್ನು ಅಪಲೋಡ್ ಮಾಡುತ್ತದೆ. ಜನರಿಗೆ ಅತಿ ಬೇಗ ಕರ್ನಾಟಕದ ಸ್ಥಿತಿಗತಿಗಳನ್ನು ತಿಳಿಸುವಲ್ಲಿ ಇದು ಹೆಸರುವಾಸಿಯಾಗಿದೆ.

'ಕನ್ನಡ ಬ್ಲಾಗ್–ಕಂಪ್ಯೂಟರ್ & ಇಂಟರ್‌ನೆಟ್ ವೆಬ್‌ಸೈಟ್': techkarnataka.blogspot.com ನ ಆವೃತ್ತಿ ಕಂಪ್ಯೂಟರ್, ಲ್ಯಾಪ್‌ಟಾಪ್, ಟ್ಯಾಬ್, ಮೊಬೈಲ್, ಹಾಂಡ್‌ಸೆಟ್, ಹಾರ್ಡ್‌ಡಿಸ್ಕ್, ಸಿ.ಡಿ. ಪ್ಲೇಯರ್, ಐಪೋನ್ ಹೆಡ್ ಸೆಟ್, ಮೆಮೊರಿ ಕಾರ್ಡ್, ಮುಂತಾದ ಎಲೆಕ್ಟ್ರಾನಿಕ್ ವಸ್ತುಗಳ ಬೆಲೆ, ರಿಯಾಯಿತಿ, ಜಾಲತಾಣ, ಕುರಿತಂತೆ ಮಾಹಿತಿಯನ್ನು ನೀಡುತ್ತದೆ. ವಿಡಿಯೋಗಳ ಲಿಂಕ್‌ನ್ನು ಕೊಟ್ಟಿದ್ದು ವಸ್ತು ಖರೀದಿಗೆ ದಾರಿಯಾಗಿದೆ. 'ಇ' ಮಾರುಕಟ್ಟೆ ಮತ್ತು ದೇಸೀ ಭಾಷೆಗಳು' ಎಂಬುದನ್ನು ಅಧ್ಯಯನ ಮಾಡುವವರಿಗೆ ಇಂತಹ ಬ್ಲಾಗುಗಳು ಮುಖ್ಯವಾಗುತ್ತವೆ.

ಕನ್ನಡ ಬ್ಲಾಗ್‌ನ – ಭಾಷೆ

ಭಾಷೆ ಒಂದು ಸಂವಹನ ಮಾಧ್ಯಮ. ಪರಸ್ಪರ ಸಂವಹನಕ್ಕಾಗಿ ನಿರೂಪಿತವಾಗಿರುವ ಸಂಕೇತಗಳ ಪದ್ಧತಿ. ಈ ಸಂಕೇತಗಳು ಉಚ್ಚರಿತವಾಗಿರಬಹುದು, ಲಿಖಿತವಾಗಿರಬಹುದು. ಭಾಷೆ ಮಾನವನ ಅನುಪಮ ಗುಣಗಳಲ್ಲಿ ಒಂದಾಗಿದೆ. ಭಾಷೆ ಎನ್ನುವುದು ಮಾನವನಿಗೆ ಮಾತ್ರ ಸಾಧಿಸಲ್ಪಡಬಹುದಾದ ಒಂದು ಸಂಕೀರ್ಣ ಸಂವಹನ ಮಾಧ್ಯಮವಾಗಿದೆ. ಈ ಸಂವಹನ ಮಾಧ್ಯಮದಲ್ಲಿ ಭಾಷೆಯನ್ನು ನಾವು ಒಂದು ವಿಷಯವನ್ನಾಗಿ ತೆಗೆದುಕೊಂಡಾಗ ಅದು ಅರ್ಥೈಸಿಕೊಳ್ಳಬಹುದಾದ ಸಾಮರ್ಥ್ಯವನ್ನೊಳಗೊಂಡ ಒಂದು ಸಂಕೀರ್ಣ ವ್ಯವಸ್ಥೆಯೆನ್ನಬಹುದು. ಇದು ಅರ್ಥಪೂರ್ಣ ವಾಕ್ಯಗಳನ್ನು ನೀಡುವ ಸಾಮರ್ಥ್ಯವನ್ನು ಹೊಂದಿದ್ದು ಭಾವನೆಗಳನ್ನು ಸನ್ನಿವೇಷಕ್ಕೆ ತಕ್ಕಂತೆ ವ್ಯಕ್ತಪಡಿಸಲು ಅವಕಾಶವಿದೆ.

ಭಾಷೆಯನ್ನುವುದು ಚಿಂತನಾಶೀಲವಾದುದು ಹಾಗೂ ಚಲನಾಶೀಲವಾದುದು. ಇದು ಕಾಲ ಕಾಲಕ್ಕೆ ತಕ್ಕಂತೆ ಬದಲಾವಣೆಗೊಳಪಡುತ್ತದೆ. ಈ ಒಂದು ಭಾಷೆಯು ಮನುಷ್ಯನ ಮಿದುಳಿನ ಭಾಗಗಳ ಸಲಹೆಯಂತೆ ಯೋಚನೆಗಳು ಪದಗಳಾಗಿ ಹೊರಬರುತ್ತವೆ. ನಾವು ಭಾಷೆಯನ್ನು ಸಾಮಾಜಿಕ ಸನ್ನಿವೇಶಗಳಲ್ಲಿನ ಸಂವಹನದೊಂದಿಗೆ ಕಲಿಯುತ್ತೇವೆ. ಅದರಲ್ಲೂ ಭಾಷೆ ಪ್ರಾದೇಶಿಕ ಹಾಗೂ ಸಂಸ್ಕೃತಿಗಳನ್ನು ಪ್ರತಿಬಿಂಬಿಸುವ ಕಾರ್ಯವನ್ನು ಮಾಡುತ್ತದೆ. ಭಾಷೆಯು ಕಾಲಕಾಲಕ್ಕೆ ಮೌಲ್ಯಮಾಪನಕ್ಕೆ ಒಳಪಡುವ ಹಾಗೂ ಕೌಶಲಗಳನ್ನು ವೃದ್ಧಿಸಿಕೊಳ್ಳುವ ಶಕ್ತಿಯುಳ್ಳದ್ದಾಗಿದೆ. ಹಾಗಾದರೇ ಈ ಭಾಷೆ ಅಭಿವ್ಯಕ್ತ ಮಾದ್ಯಮವಾಗಿ ನಮ್ಮ ಬ್ಲಾಗ್‌ಗಳಲ್ಲಿ ಹೇಗೆ ಕಂಡು ಬಂದಿದೆ? ಈ ಪ್ರಶ್ನೆಯನ್ನಿಟ್ಟು ಕೊಂಡು ಬ್ಲಾಗ್‌ನಲ್ಲಿರುವ ಭಾಷೆ, ನುಡಿ ಮಿಶ್ರಣ, ನುಡಿ ಜಿಗಿತ, ತಂತ್ರಾಂಶ, ಲಿಪೀಕರಣದ ಸಮಸ್ಯೆ ಮುಂತಾದ ವಿಷಯಗಳನ್ನು ಇದರಲ್ಲಿ ಅಧ್ಯಯನ ನಡೆಸಬಹುದಾಗಿದೆ.

ಬ್ಲಾಗ್‌ನಲ್ಲಿ ಪ್ರಾದೇಶಿಕ ಭಾಷಾ ವೈವಿಧ್ಯತೆ

ಬ್ಲಾಗ್‌ಗಳು ಕನ್ನಡ ಭಾಷಾ ಪ್ರಭೇದಗಳಲ್ಲಿ ಭಾಷಾ ವೈವಿಧ್ಯತೆಯನ್ನು ಉಳಿಸುವ ವರ್ಗವಾಗಿ ಬ್ಲಾಗ್‌ಗಳು ಕೆಲಸ ಮಾಡುತ್ತಿವೆ. ಶಿಷ್ಟ ಭಾಷೆಗೆ ತರುವಾಗ ಮುದ್ರಣ, ಸಾಮಾನ್ಯ ಭಾಷಾ, ಸರ್ವರಿಗೂ ಅರ್ಥ ವಾಗುವಂತಹ ಒಂದು ಪ್ರಮಾಣ ಭಾಷೆಯಲ್ಲಿರಬೇಕು. ಎಂಬುದು ನಿಯಮಾನುಸಾರವಾಗಿ ಎಲ್ಲಾ ಪತ್ರ ವ್ಯವಹಾರ, ಇಲಾಖೆಯ ವೆಬ್‌ಸೈಟ್‌ಗಳಲ್ಲಿ ಕಾಣುತ್ತಿರುವ ಸಂದರ್ಭದಲ್ಲಿ ಬ್ಲಾಗ್ ಲೋಕ ಮಾತ್ರ ತಮ್ಮ ತಮ್ಮ ನಾಡಿನ ನೆಲ-ಜಲ, ನುಡಿಗೆ ಪ್ರಾಧಾನ್ಯತೆಯನ್ನು ಸ್ವಾತಂತ್ರ್ಯವನ್ನು ಸಮಾನ ಅವಕಾಶವನ್ನು ಕಲ್ಪಿಸಿಕೊಡುತ್ತಿದೆ. ಸಹಜವಾದ ಆಡು ನುಡಿಯ ಅಭಿವ್ಯಕ್ತಿಯ ಮಾಧ್ಯಮವಾಗಿ ಕೆಲಸ ಮಾಡುತ್ತದೆ. ಭಾಷೆಯ ತಾಜಾತನ, ಓದುವ ಆನಂದ ಜನರಿಂದ ಅತ್ಯುತ್ತಮ ಪ್ರತಿಕ್ರಿಯೆ ಬರಲು ಈ ಪ್ರಾದೇಶಿಕ ಭಾಷೆಯು ತನ್ನ ಛಾಪನ್ನು ಮೂಡಿಸಿದೆ. ಆಡು ನುಡಿ ಆಡಿದ ತಕ್ಷಣ ಕ್ಷಣಿಕವಾಗದಲೇ ಶಾಶ್ವತೀಕರಿಸುವ ಒಂದು ತಾಣವಾಗಿದೆ. ವ್ಯಕ್ತಿ ಭಾಷೆಯ ವೈಶಿಷ್ಟ್ಯತೆಯು ಅದರ ಅನನ್ಯತೆಯನ್ನೂ ಸಾರುವ ಮೂಲಕ ಬರಹಗಳಲ್ಲಿ ವಿವಿಧತೆಯನ್ನು ಗಮನಿಸಬಹುದಾಗಿದೆ.

ಪ್ರಮಾಣೀಕೃತ ಭಾಷೆ ಶುದ್ಧ ಎಂಬ ಪರಿಕಲ್ಪನೆಯಿತ್ತು. ಹಿಂದೆ ಪ್ರಮಾಣ ಭಾಷೆಯೇ ಮುಖ್ಯ ಎಂಬ ಒಂದು ಮಾತಿತ್ತು. ಆದರೆ ಬರಬರುತ್ತಾ ನಮ್ಮ ಆಡು ಮಾತಿನ ಕ್ರಿಯಾಲೋಕದ ಸಂಪ್ರದಾಯಗಳ ಆಚರಣೆಗಳನ್ನು ಸೊಬಗು, ಬೆಡಗುಗಳನ್ನು ತೋರಿಸುವ ಕರ್ನಾಟಕದ ಒಳ ನುಡಿಗಳ ವೈಭವ ಮತ್ತು ವೈಶಿಷ್ಟ್ಯತೆಗೆ ಈ ಬ್ಲಾಗ್ ಲೋಕ ಅವಕಾಶವನ್ನು ಕಲ್ಪಿಸಿದೆ. ತಮ್ಮ ನೆಲದ ನುಡಿಯನ್ನು ಆಡುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟಿದೆ. ಸದ್ಯದ ನಿಜದ ಸ್ಥಿತಿ. "ನನ್ನ ಭಾಷೆ ನನ್ನ ಅಭಿವ್ಯಕ್ತಿ,

ನನ್ನ ನೆಲ, ನನ್ನ ನುಡಿ" ಎಂದು ಹೆಮ್ಮೆಯಿಂದ ಕುಂದಾಪುರ, ಬಾಗಲಕೋಟೆ, ಬಿಜಾಪುರ, ಧಾರವಾಡ, ಮಂಗಳೂರು ಕನ್ನಡ ಬ್ಲಾಗಿನಲ್ಲಿ ರಾರಾಜಿಸುತ್ತಿವೆ.

ಬ್ಲಾಗ್‌ನಲ್ಲಿ ನುಡಿಮಿಶ್ರಣ: ಬ್ಲಾಗ್‌ನಲ್ಲಿ ನುಡಿ ಬೆರಕೆ ಸಾಮಾನ್ಯ. ಈಗೀನ ಆಧುನಿಕ ಯುಗದಲ್ಲಿ ಎಲ್ಲಾ ಪ್ರದೇಶವಾರಿನಿಂದಲೂ ಸಂವಹನ ಸಂಪರ್ಕದಿಂದ ಭಾಷಾ ಸ್ವೀಕರಣ ಹೆಚ್ಚು ನೆಡೆದಿರುವ ಹಿನ್ನೆಲೆಯಲ್ಲಿ ಇತರ ಭಾಷೆಯ ಪದಗಳು ಕನ್ನಡದಲ್ಲಿ ಬಳಕೆಗೊಂಡಿವೆ. ಅದರಂತೆ ಬ್ಲಾಗಿಗಳ ಬರಹಗಳಲ್ಲಿ ನುಡಿ ಮಿಶ್ರಣವಾಗುತ್ತಿರುವುದು ಹೆಚ್ಚಿನ ಪ್ರಮಾಣದಲ್ಲಿಯೇ ಕಂಡು ಬಂದಿದೆ.

"ನೀನು ಈ ಮಾತು ಹೇಳ್ತಿದೀಯಾ..?? ಒಂದೇ ಒಂದು ಸಲ ನನ್ನ ತಲೆ ಪೂರಾ ಫಾರ್ಮಾಟ್ ಆಗೋಗಿದ್ರೆ ಅದೆಷ್ಟು ಚೆನ್ನಾಗಿರದು ಅಂತ ದಿನಕ್ಕೆ ಹತ್ತು ಭಾರಿ ಮೇಕ್ ಎ ವಿಷ್ ಮಾಡೋ ನಿಂಗೆ ಈಗ್ಯಾಕೆ ಹೀಗನ್ನಸ್ತಿದೆ...?? ಓಹ್, ಗೋದಿ ಬಣ್ಣದ ಹ್ಯಾಂಗೋವರ್ ಇನ್ನೂ ಹೋಗಿಲ್ಲಾ ಅಂತಾಯ್ತು".

"ನಿಜಾ ಹೇಳಲಾ? ನಂಗೂ ನಿಂಗೂ ಮಧ್ಯ ಏನೋ ಲಿಂಕಿದೆ, ಹಳೇ ಜನ್ಮದ ಫ್ಲಾಷ್ ಬ್ಯಾಕಿದೆ. ಬೇಕಿದ್ದರೆ ನೋಡು, ನಿನ್ನ ಹಣೆಯ ಕುಂಕುಮವಿಡುವ ಭಾಗದ ಪಕ್ಕದಲ್ಲೂ ಮಚ್ಚೆಯಿದೆ, ಅದೇ ಸ್ಥಳದಲ್ಲಿ ನನಗೂ ಮಚ್ಚೆಯಿದೆ".

ಬ್ಲಾಗ್‌ಗಳಲ್ಲಿ ಭಾಷಾ ಬೆಳವಣಿಗೆ ಹಾಗೂ ಕನ್ನಡ ವ್ಯಾಕರಣದ ಬಗ್ಗೆಯೂ ಸಹ ಬ್ಲಾಗಿಸಲಾಗಿರುತ್ತದೆ. 'ಸಂಸ್ಕೃತದಿಂದ ಕನ್ನಡಕ್ಕೆ ಮತ್ತು ಕನ್ನಡಿಗರಿಗೆ ಏನು ಪ್ರಯೋಜನ' ಎಂದು ಹೇಳುವ ಮೂಲಕ ಕನ್ನಡತನವನ್ನು ಮೆರೆದು ಒಂದು ಭಾಷೆಯ ಬೆಳವಣಿಗೆಗೆ ಬ್ಲಾಗ್‌ಗಳು ನೆರವಾಗಿವೆ. ಇಂಗ್ಲಿಷ್ ಇರುವವರೆಗೂ ಕನ್ನಡ ಭಾಷೆ ಇದ್ದೇ ಇರುತ್ತದೆ. ಕನ್ನಡಕ್ಕೆ ಸಾವಿಲ್ಲ ಕನ್ನಡಿಗರಿಗೆ ಭಯ ಬೇಡ ಎನ್ನುವ ಅಭಯವನ್ನು ಈ ಬ್ಲಾಗ್‌ಗಳು ನೀಡುತ್ತವೆ.

ಈ ಬ್ಲಾಗ್‌ಗಳ ಮೂಲಕ ನಮ್ಮ ಕನ್ನಡ ಕಾವ್ಯ ವಾಚನವೂ ಎಂದರೆ ಕರ್ನಾಟಕದ ಒಂದು ವಿಶಿಷ್ಟ ಕಲೆಯಾದ ಗಮಕ ಕಲೆ ನಮ್ಮ ಸಂಸ್ಕೃತಿಯ ಪ್ರತೀಕವಾಗಿ ಸ್ಟಾನ್‌ಫರ್ಡನಲ್ಲಿ ಕೇಳಿಬಂದಿರುವುದು ಈ ಬ್ಲಾಗ್‌ಗಳ ಸಹಾಯದಿಂದಲೇ. ಉತ್ತರ ಕರ್ನಾಟಕದ ಕನ್ನಡ ಶಬ್ದಕೋಶವನ್ನು, ಕನ್ನಡಕ್ಕೆ ಸೇರ್ಪಡೆಯಾದ ಹೊಸ ಸಂಸ್ಕೃತ ಶಬ್ದಗಳನ್ನು ಸಂಚಲನ, ಲೋಕಾರ್ಪಣೆ ಬ್ಲಾಗ್‌ಗಳ ಮೂಲಕ ತಿಳಿಯಬಹುದಾಗಿದೆ.

ಕನ್ನಡ ತಂತ್ರಾಂಶ ಮತ್ತ ಲಿಪೀಕರಣ

ಗಣಕಯಂತ್ರದಲ್ಲಿ ಕನ್ನಡ ಅಕ್ಷರಗಳನ್ನು ಬರೆಯುವುದು ಹೇಗೆ? ಯಾವ ತಂತ್ರಾಂಶ ಅಳವಡಿಸಿಕೊಳ್ಳಬೇಕು? ಇಂಟರ್‌ನೆಟ್ ಸಹಾಯವಿಲ್ಲದೇ, ಭಾಷಾಂತರ, ಅನುವಾದದ ಸಹಾಯವಿಲ್ಲದೇ ಕನ್ನಡ ಅಕ್ಷರವನ್ನು ಮೂಡಿಸುವ ಕ್ರಮ ಹೇಗೆ

ಎಂಬುದು ಸಹಸ್ರಾರು ಜನರಲ್ಲಿ ಸಮಾನ್ಯವಾಗಿ ಏಳುವ ಪ್ರಶ್ನೆ. ಆದರೆ ಈಗಿನ ಜಾಗತಿಕ ಪ್ರಸಾರ, ಪ್ರಚಾರ ಕಲಿಕಾ ವಿಸ್ತರಣ ಸಾಮರ್ಥ್ಯವು ಹೆಚ್ಚಾಗಿರುವುದರಿಂದ ಜೊತೆಗೆ ವಾಯ್ಸ್ ಟೆಕ್ಸ್ಟ್‌ಗಳು ಕೂಡ ಹೆಚ್ಚಾಗಿರುವುದರಿಂದ ಅಕ್ಷರ ಮೂಡಿಸುವ ಗೋಜಿಗೆ ಯಾರು ಹೋಗುತ್ತಿಲ್ಲ. ಆದರೂ ಈ ತಂತ್ರಾಂಶಗಳು ಬೆಳೆದು ಬಂದ ಬಗೆ ಹೇಗೆ ಎಂಬುದನ್ನು ಅವಲೋಕಿಸುವುದಾದರೆ ೨೦೦೬ ರಲ್ಲಿಯೇ ಹಲವಾರು ವಿದ್ವಾಂಸರು, ಲೇಖಕರು, ಸಂಶೋಧಕರು, ಬರಹಗಾರರೂ ಅಂತರ್ಜಾಲ ಮುಖೇನ ಯಾವ ರೀತಿಯಲ್ಲಿ ಲಿಪಿಯನ್ನು ಮುದ್ರಿಸಬಹುದು ಎಂಬುದನ್ನು ಹುಡುಕುವಾಗ 'MS Paint' ನಲ್ಲಿ ಕನ್ನಡ ರಾಜ್ಯೋತ್ಸವದ ಶುಭಾಶಯವೆಂದು ಬಣ್ಣದಿಂದ ಬರೆದು ಜೆಪಿಇಜಿ.(JPEG) ಗೆ ಪರಿವರ್ತಿಸಿ ಸ್ನೇಹಿತರಿಗೆ ಇ-ಮೇಲ್ ಮಾಡಲಾಗುತ್ತಿತ್ತು. ದಿನಗಳು ಕಳೆದಂತೆ ಬರಹ ಮತ್ತು ನುಡಿ ತಂತ್ರಾಂಶದಿಂದ ಯೂನಿಕೋಡ್ ರೂಪಕ್ಕೆ ಪರಿವರ್ತಿಸುವ, ಲಿಪೀಕರಣ ಮಾಡುವುದು ಚಾಲ್ತಿಗೆ ಬಂದಿತು.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾಷಾ ಬರಹಗಳ ಬಗ್ಗೆ ವಿವಿಧ ಆವಿಷ್ಕಾರ ಸಂಶೋಧನೆಗಳು ನಡೆದು ಗೂಗಲ್‌ನವರು 'Google Indic Transliteration' ಎನ್ನುವ ಸುಲಭ ಮತ್ತು ಸರಾಗವಾಗಿ ಬರೆಯುವುದನ್ನು ಅಭಿವೃದ್ಧಿ ಪಡಿಸಿದ್ದರು. ಕೆಲವು ವರ್ಷಗಳ ನಂತರ ಗೂಗಲ್ www.google.com/inputtools ಪರಿಚಯಿಸಿ ಎಲ್ಲಾ ಭಾಷಾ ಸಮುದಾಯಗಳಿಗೆ ಮಾತೃ ಭಾಷೆಯಲ್ಲಿ ಸರ್ಚ್ ಅವಕಾಶವನ್ನು ಕಲ್ಪಿಸಿತು.

ಇತ್ತೀಚೆಗೆ ಜನರ ಕೆಲಸಗಳು ವರ್ಕ್ ಫ್ರಂ ಹೋಮ್ ರೀತಿಗೆ ಒಗ್ಗಿಕೊಂಡಿರುವುದರಿಂದ ಎಷ್ಟೋ ಸರ್ಚ್ ಇಂಜಿನ್‌ಗಳು, ಅಂತರ್ಜಾಲ ಪುಟಗಳು, ಕನ್ನಡೀಕರಣ ಆಗುತ್ತಿರುವುದು ಒಂದು ವಿಶೇಷ ಸಂಗತಿ. ಸಂಪೂರ್ಣ ಇ-ಆಡಳಿತ ಸೇವೆಯನ್ನು ಸರ್ಕಾರ ಈಗ ಕನ್ನಡದ ವೆಬ್‌ಸೈಟ್‌ನಲ್ಲಿಯೇ ಪ್ರಕಟಿಸುತ್ತಿದೆ. ವಿಶ್ವಕನ್ನಡ. ಭಾರತ ಹಾಗೂ ಅವಿನಾಶ. ಭಾರತ ಕನ್ನಡ ಡೋಮೇನ್‌ಗಳನ್ನು ಆಯಾ ತಾಣಗಳಿಗೆ ರೀಡೈರೆಕ್ಟ್ ಮಾಡಲಾಗಿದ್ದು, ಕನ್ನಡದ ಡೊಮೇನ್ ಹೆಸರುಗಳಿರುವ ಮೊದಲ ತಾಣಗಳಿವು. ಕನ್ನಡಿಗರೆಲ್ಲರೂ ಡಾಟ್ ಭಾರತ ಹೆಸರಿನಲ್ಲಿ ತಮ್ಮ ತಮ್ಮ ಹೆಸರಿನ, ಸಂಸ್ಥೆಯ ಜಾಲತಾಣಗಳನ್ನು ಈಗ ನೋಂದಾಯಿಸಿಕೊಳ್ಳಬಹುದಾಗಿದೆ.

ಪ್ರಖ್ಯಾತ ಬರಹಗಾರರ ಬ್ಲಾಗುಗಳು

'ಬೆತ್ತಲೆ ಜಗತ್ತು' ಪ್ರತಾಪ್ ಸಿಂಹ ಅವರ ಪ್ರಮುಖ ಬ್ಲಾಗ್. ಇವರು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿಯನ್ನು ಮಾಡಿದ್ದು, ೨೦೦೮ರಲ್ಲಿ 'ಬೆತ್ತಲೆ ಜಗತ್ತು' ಎಂಬ ಅಂಕಣವನ್ನು ಬರೆಯುತ್ತಿದ್ದರು. ಇವರ ಪ್ರಮುಖ ಗ್ರಂಥಗಳೆಂದರೆ, 'ನರೇಂದ್ರ ಮೋದಿ ಯಾರೂ ತಿಳಿಯದ ಹಾದಿ', 'ಟಿಪ್ಪುಸುಲ್ತಾನ - ಸ್ವಾತಂತ್ರ

ವೀರಾನಾ?, 'ಚಲ್ಲೋ ದಿಲ್ಲಿ ಎಂದು ಹೋದರೆಲ್ಲಿ?, ಪತ್ರಿಕೋದ್ಯಮದಲ್ಲಿ ನಿರಂತರ ೧೩ ವರ್ಷಗಳ ಸೇವೆಯನ್ನು ಸಲ್ಲಿಸಿದ್ದ ಇವರು ರಾಜಕೀಯ ಕ್ಷೇತ್ರದಲ್ಲಿ ತಮ್ಮದೇ ಆದ ಹೆಸರನ್ನು ಗಳಿಸಿದ್ದಾರೆ. ಇವರ ಬ್ಲಾಗ್‌ನಲ್ಲಿ ಸಮಕಾಲೀನ ಆಗು ಹೋಗುಗಳನ್ನು ವೈಚಾರಿಕ ಒರೆಗೆ ಉಜ್ಜುವುದು ಪ್ರತಾಪ್ ಅವರ ಬರಹಗಳ ವೈಶಿಷ್ಟ್ಯ. ನಿಖರತೆ ಮತ್ತು ದಿಟ್ಟ ಬರವಣಿಗೆಗೆ ಹೆಸರಾದ ಓರ್ವ ಪತ್ರಕರ್ತರಾಗಿ ಸಾರ್ವಜನಿಕ ಅಭಿಪ್ರಾಯಗಳಿಗೆ ಎರಕ ಹೊಯ್ಯುತಿದ್ದವರು. ಬರಹಗಾರರಾಗಿ ನಿರ್ದಿಷ್ಟ ಚಿಂತನೆ ಮತ್ತು ಸ್ಪಷ್ಟ ಅಭಿಪ್ರಾಯಗಳನ್ನು ತಾಳುತ್ತಾರೆ, ಅದು ಅವರ ವೈಖರಿ ಮತ್ತು ಜಾಯಮಾನ.

'ಸೂರ್ಯಶಿಕಾರಿ' ಇದು ರವಿಬೆಳಗೆರೆ ಅವರ ಪ್ರಮುಖ ಬ್ಲಾಗ್. ಇವರು ಇತಿಹಾಶ ಮತ್ತು ಪ್ರಾಚ್ಯ ಶಾಸ್ತ್ರದಲ್ಲಿ ಎಂ.ಎ ಪದವಿಯನ್ನು ಮಾಡಿದ್ದು, ಪತ್ರಿಕೋದ್ಯಮ ಕ್ಷೇತ್ರದಲ್ಲಿ ತಮ್ಮದೇ ಆದ ಹೆಸರನ್ನು ಪಡೆದಿದ್ದಾರೆ. 'ಹಾಯ್ ಬೆಂಗಳೂರು' ಎಂಬ ಪತ್ರಿಕೆಯನ್ನು ಪ್ರಾರಂಭಿಸುವುದರ ಮೂಲಕ ಜನಪ್ರಿಯ ಹೆಸರನ್ನು ಪಡೆದವರು. 'ಓದುವ ಸುಖ ಬಲ್ಲ, ಬಲ್ಲಿದರಷ್ಟೇ ಅಲ್ಲ', 'ಬಸ್ಸು ಬರದ ಊರಿನ ರೈತ ಹಾಗೂ ಬೆಂಗಳೂರಿನ ಆಟೋ ಚಾಲಕ', 'ಓದುವ ಅಭ್ಯಾಸ ಉಳಿಸಿಕೊಂಡಿರುವುದಕ್ಕೆ 'ಹಾಯ್ ಬೆಂಗಳೂರ್' ಎಂಬ ಕಪ್ಪು ಸುಂದರಿಯೇ ಕಾರಣ' ಎಂದು ಹೇಳಿದ್ದಾರೆ. ಪ್ರತಿ ಅಕ್ಷರವನ್ನೂ ಅಕರಾಸ್ಥೆಯಿಂದ ಪೊರೆವ 'ಹಾಯ್ ಬೆಂಗಳೂರು' ಲಂಕೇಶ್ ನಂತರದಲ್ಲಿ ಕನ್ನಡ ಪತ್ರಿಕೆಗಳ ಓದುಗ ಸಮೂಹವನ್ನು ಸೆಳೆದ ಬಹುದೊಡ್ಡ ಚುಂಬಕ ಶಕ್ತಿ. ಪ್ರತಿ ಸೋಮವಾರ ಈ ಅಕ್ಷರ ಮಾಂತ್ರಿಕನ ಬಹುಮುಖಿ ಬರಹಗಳು 'ಸೂರ್ಯಶಿಕಾರಿ' ಎಂಬ ಬ್ಲಾಗಿನಲ್ಲಿ ದಾಖಲಾಗಿವೆ. ಜನ ಇವನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ.

'ನೂರೆಂಟು ಮಾತು: ವಿಶ್ವೇಶ್ವರ ಭಟ್ ಅವರ ಪ್ರಮುಖ ಬ್ಲಾಗ್. ಇವರು ಕನ್ನಡದ ಪತ್ರಕರ್ತರು, ಬರಹಗಾರರು ಹಾಗೂ ಪ್ರಮುಖ ಅಂಕಣಕಾರರೂ. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಮೂರೂರಿನವರು. ಭೂಗರ್ಭ ಶಾಸ್ತ್ರದಲ್ಲಿ ಎಂ.ಎಸ್ಸಿ ಸ್ನಾತಕೋತ್ತರ ಪದವಿಯನ್ನು ಮಾಡಿದ್ದು, ಇಂಗ್ಲೆಂಡಿನಲ್ಲಿ ಪತ್ರಿಕೋದ್ಯಮದ ಉನ್ನತ ವ್ಯಾಸಂಗವನ್ನು ಮಾಡಿದ್ದಾರೆ. ಪ್ರಮುಖ ಕನ್ನಡ ಪತ್ರಿಕೆಗಳಲ್ಲಿ ಪತ್ರಕರ್ತರಾಗಿ, ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಕನ್ನಡದಲ್ಲಿ ೫೦ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದು ಅನುವಾದಿಸಿದ್ದಾರೆ. ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಬರೆದಿದ್ದಾರೆ.

ಲೋಕದ ಜನ ಜನರ ನಡಾವಳಿ, ವಿನೋದಾವಳಿ. ಇತ್ಯಾದಿ ಸಂಗತಿ- ಸ್ವಾರಸ್ಯ ಮಾಹಿತಿಯನ್ನು ಅಕ್ಷರಗಳಲ್ಲಿ ತುಂಬಿ ಓದುಗ ಬಳಗದೊಂದಿಗೆ ಮಾತಿಗೆ ಕೂರುತ್ತಿದ್ದಾರೆ. ಕನ್ನಡದ ದೈನಿಕ ಪತ್ರಿಕೆಯ ಕಾರ್ಯ ನಿರ್ವಾಹಕ ಸಂಪಾದಕರಾಗಿ 'ನೂರೆಂಟು ಮಾತು' ಎಂಬ ಅಂಕಣ ಸಮೃದ್ಧ ಓದು, ಅಲೆದಾಟ, ಲೇಖನ,

ಅನುಭವ ಮತ್ತು ಅಭಿವ್ಯಕ್ತಿಯ ಪ್ರತೀಕವಾಗಿದೆ. ಈ ರೀತಿಯ ಅನುಭವದ ಬರಹಗಳು ಅವರ 'ನೂರೆಂಟು ಮಾತು' ಎಂಬ ಬ್ಲಾಗಿನಲ್ಲಿ ಪ್ರತಿ ಶನಿವಾರವೂ ಬ್ಲಾಗಿಸಲಾಗುತ್ತದೆ. 'ನೂರೆಂಟು ಮಾತು' ೧-೧೦ ಸಂಪುಟಗಳಲ್ಲಿ ಹೊರ ತಂದಿದ್ದಾರೆ.

'ಕಾಡುಹರಟೆ' – ಶ್ರೀನಿಧಿ ಡಿ.ಎಸ್. ಅವರ ಪ್ರಮುಖ ಬ್ಲಾಗ್. ಕಾಡು ಹರಟೆ ಹೊಡೆಯಲು ಬಂದಿರುವ ಮಲೆನಾಡಿನ ಹುಡ್ಗ ಶ್ರೀನಿಧಿ ಒಬ್ಬ ಕನಸುಗಾರ ತನ್ನ ಸುತ್ತ ಮುತ್ತಲಿನ ಪರಿಸರದಲ್ಲಿನ ಸೂಕ್ಷ್ಮತೆಗಳನ್ನು ಅರ್ಥಪೂರ್ಣವಾಗಿ ಗ್ರಹಿಸಿ ಅಕ್ಷರ ರೂಪ ನೀಡಬಲ್ಲ ಸಂವೇದನಾ ಶೀಲ ಯುವ ಲೇಖಕ. ಭಾವನೆಗಳಿಗೆ ತಕ್ಕ ವರ್ಣನೆಗಳನ್ನು ಹೊಂದಿಸಿ ಕವನ ರಚಿಸುವುದರ ಜೊತೆಗೆ ನಿತ್ಯ ಜೀವನದ ಆಗು ಹೋಗುಗಳನ್ನು ಹೊಸ ಆಯಾಮದಲ್ಲಿ ಅಕ್ಷರಗಳನ್ನು ಪೋಣಿಸಿ ಕಥನಗಳನ್ನು ಹೆಣೆಯುವ ಕಲಾಕಾರ ದಕ್ಷಿಣ ಕನ್ನಡದ ಕಿನ್ನಿಗೋಳಿಯವರಾದ ಇವರು, ಕೊಡಚಾದ್ರಿ ತಪ್ಪಲಿನಲ್ಲಿ ನಂದಿನಿ ನದೀ ತೀರದಲ್ಲಿ ವಿಹರಿಸುವಾಗಲೆಲ್ಲಾ ಕಂಡದ್ದು ಒಂದೇ ಕನಸು ಸಮೂಹ ಮಾಧ್ಯಮದಲ್ಲಿ ತೊಡಗಿಸಿಕೊಳ್ಳಬೇಕು ಎಂಬುದು. ತಮ್ಮ ತಂದೆಯ ಜೊತೆ ಹವ್ಯಾಸದ ಬೇಸಾಯದ ಜೊತೆಗೆ ಅಕ್ಷರ ಕೃಷಿಗೆ ಇಳಿಯಬೇಕು ಎಂಬುದು ಇವರ ಬಾಲ್ಯದ ಕನಸಾಗಿತ್ತು. ಇಂತಹ ತಮ್ಮ ಬಾಲ್ಯದ ಕನಸನ್ನು ಈಡೇರಿಸಿಕೊಳ್ಳುವ ಸಲುವಾಗಿ 'ಕಾಡುಹರಟೆ'ಯನ್ನು ತೆರೆಯುವ ಮೂಲಕ ತಮ್ಮ ಕನಸನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. ಭಾವನೆಗಳಿಗೆ ತಕ್ಕಂತೆ ಬ್ಲಾಗುಗಳು ಹುಟ್ಟುವ ಕಾರಣ ಇಂತಹ ಅನೇಕ ಬ್ಲಾಗುಗಳನ್ನು ತೆರೆಯಲು ಸ್ಫೂರ್ತಿಯನ್ನು ನೀಡುತ್ತವೆ.

ಪ್ರಮುಖ ಆಯ್ದ ಕನ್ನಡ ಸಾಹಿತ್ಯಿಕ ಬ್ಲಾಗ್‌ಗಳು

ಕವಿತೆಗಳು ಮ್ಯಾಜಿಕ್ ಇದ್ದ ಹಾಗೆ ಯಾವ ಕವಿತೆ ಹೃದಯದಿಂದ ಬರುವುದು ಅವೆಲ್ಲಾ ಕೂಡ ಮ್ಯಾಜಿಕ್‌ಗಳೇ ಯಾಕಂದರೆ ಅವು ನಮ್ಮನ್ನು ಸ್ಪರ್ಶಿಸುತ್ತವೆ, ಅಳಿಸುತ್ತವೆ, ನಗಿಸುತ್ತವೆ, ಆಕರ್ಷಿಸುತ್ತವೆ. ಯೋಚನಾ ಲಹರಿಯನ್ನೆ ಬದಲಾವಣೆ ಮಾಡುತ್ತವೆ. ಸಮಾಜದ ಬದುಕು, ಸುಖ, ಖುಷಿ, ಸ್ವಾಸ್ಥ್ಯ, ನೆಮ್ಮದಿ, ಬವಣೆ, ಹಸಿವು, ನೋವು, ಸಂಕಟ, ಸಮಸ್ಯೆ, ಆಕಂದ್ರನ ಎಲ್ಲದರ ಕನ್ನಡಿಯಂತೆ ಕೆಲಸ ಮಾಡುವ ಶಕ್ತಿ ಕಾವ್ಯ ಸೌಂದರ್ಯಕ್ಕೆ ಇದ್ದೇ ಇದೆ. ಅದು ಬರಿಯ ಬ್ಲಾಗ್ ಕವಿಗಳ ಲೋಕದಲ್ಲಿಯೂ ಕೂಡ ಇದ್ದೇ ಇದೆ.

ಹಳೆಗನ್ನಡ ಕಾವ್ಯ ಸಂಗ್ರಹ: ಕೆ. ಎನ್. ನಿಂಗ್ಯಯ ಅವರ ಬ್ಲಾಗ್ ಆಗಿದ್ದು ಹಳೆಗನ್ನಡ ಕಾವ್ಯದ ಸೊಗಡನ್ನು ಎಲ್ಲರಿಗೂ ಲಭಿಸುವಂತೆ ಮಾಡುವುದೇ ಈ ಬ್ಲಾಗ್‌ನ ಮುಖ್ಯ ಉದ್ದೇಶ. ಈಗಿನ ಯುವ ಪೀಳಿಗೆಯು ಹಳಗನ್ನಡ ಸತ್ವವನ್ನು, ಅದರ ಭಾಷಿಕ ಸೌಂದರ್ಯವನ್ನು ಸವಿಯನ್ನು ಸವಿಯಲು ಹೆಣಗಾಡುವ

ಸಂಧರ್ಭವಿದೆ. ಆದ ಕಾರಣ 'ಪಂಪ ಭಾರತ', 'ವಿಕ್ರಮಾರ್ಜುನ ವಿಜಯ', ರನ್ನನ 'ಗಧಾಯುದ್ಧ', ಪ್ರಭುಲಿಂಗಲೀಲೆ' 'ಗದುಗಿನ ಕುಮಾರವ್ಯಾಸ ಭಾರತ', 'ನಳಚರಿತೆ', 'ಯಶೋಧರ ಚರಿತೆ', 'ಹರಿಭಕ್ತಸಾರ', 'ಸೋಮೇಶ್ವರ ಶತಕ' ಗ್ರಂಥಗಳ ಆಯ್ದ ಕಾವ್ಯ ಭಾಗಗಳನ್ನು ಈ ಬ್ಲಾಗ್‌ನಲ್ಲಿ ಪ್ರಕಟಿಸಲಾಗಿದೆ.ದೇಸಿ ಕನ್ನಡವನ್ನು ಪ್ರಸರಿಸಲು ಆಂಡಯ್ಯನ ಕಬ್ಬಿಗರ ಕಾವ ಎಂಬ ಕಾವ್ಯ ಕನ್ನಡ ಸಾಹಿತ್ಯ ಲೋಕದಲ್ಲಿ ಒಂದು ಮೈಲಿಗಲ್ಲಾಗಿದೆ. ನಿಂಗಯ್ಯವರು ಕೂಡ ಯುವ ಜನತೆ ಹಳಗನ್ನಡವನ್ನು ಕಲಿಯುವ ಅದರ ಅರ್ಥವನ್ನು, ಜ್ಞಾನವನ್ನು ತಿಳಿದುಕೊಳ್ಳುವ ಸಲುವಾಗಿಯೇ ಬ್ಲಾಗಿದೆ. ವಿಷಯ ಜ್ಞಾನವೆಂಬುದು ಎಲ್ಲಾ ಶಾಸ್ತ್ರಗಳಿಂದ, ಸುಜ್ಞಾನದಿಂದ, ಸಜ್ಜನ ಸಂಗದಿಂದ ಬರುವ ತಿಳಿವನ್ನು ಈ ಪದ್ಯ ಸಾರುತ್ತದೆ. ಸೋಮೇಶ್ವರ ಶತಕದಲ್ಲಿರುವ ಆದಿ ಭಾಗವನ್ನು ಈ ಬ್ಲಾಗಿನಲ್ಲಿ ದಾಖಲಿಸಿದ್ದಾರೆ. ಓದುಗರಿಗೆ ಬಸವಣ್ಣ ಅಕ್ಕಮಹದೇವಿ, ಅಲ್ಲಮಪ್ರಭು, ಮತ್ತು ಸರ್ವಜ್ಞರ ವಚನಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

ದಾಸರವಾಣಿ: ಸಮಾಜದ ದೋಷಗಳ ತೊಳೆಯುವ ಮಹಾಕಾರ್ಯ ದಾಸರ ಕೃತಿಗಳದ್ದು. ಆಚಾರ್ಯ ಮಧ್ವರಿಂದ ಸ್ಫೂರ್ತಿ ಪಡೆದ ಹರಿದಾಸ ಸಾಹಿತ್ಯ, ಆಡು ಭಾಷೆಯಾದ ಕನ್ನಡದಲ್ಲಿ ಗಹನವಾದ ಆಧ್ಯಾತ್ಮಿಕ ತತ್ವಗಳನ್ನು ಹರಡಿ, ಜನರ ಮನಗಳಲ್ಲಿ ಚಿಂತನೆಯ ದೀಪ ಹಚ್ಚಿ, ಸಮಾಜದ ಹಾಗೂ ಆತ್ಮದ ಉದ್ಧಾರಕ್ಕೆ ದಾರಿ ತೋರಿದೆ. ಇಂತಹ ದಾಸ ಸಾಹಿತ್ಯವು ಅಂತರ್ಜಾಲದಲ್ಲಿ ಅನೇಕ ತಾಣಗಳಲ್ಲಿ ದೊರೆಯುತ್ತಿದೆ. ಅಂತಹ ಒಂದು ಬ್ಲಾಗ್ ಈ ದಾಸವಾಣಿ. ಇದರಲ್ಲಿ ದೇವರನಾಮಗಳು, ಕೀರ್ತನಾ ಸಾಹಿತ್ಯದಲ್ಲಿ ಹೆಸರಾದ ಶ್ರೀಪಾದರಾಯರು, ವಾದಿರಾಜರು, ಪುಂದರರದಾಸರು, ಕನಕದಾಸರು, ವಿಜಯದಾಸರು, ಜಗನ್ನಾಥದಾಸರು, ಇವರ ಆಯ್ದ ಕೀರ್ತನೆಗಳು ಕನ್ನಡ ಭಾಷೆಯಲ್ಲಿ ಪ್ರಕಟಿಸಿರುವುದಲ್ಲದೇ ಅದಕ್ಕೆ ಇಂಗ್ಲಿಷ್ ಲಿಪಿಯ ಬರವಣಿಗೆಗಳಿವೆ. ಅನ್ಯ ಭಾಷಿಕರಿಗೆ ನಮ್ಮ ಸಾಹಿತ್ಯದ ಸೊಗಡನ್ನ ತಿಳಿಸಲು, ಕಲಿಯಲು ಸಹಾಯವಾಗಿದೆ. ಪ್ರಾಸ, ಅರ್ಥ, ಪುರಾಣ ಕಥೆಗಳು, ಮಾಧ್ವ ಸಿದ್ಧಾಂತ ಹಾಗೂ ಇತಿಹಾಸದ ದೃಷ್ಟಿಯಿಂದ ತಾಳೆಹೊಂದುವ ದೇವರ ನಾಮಗಳ ಸಾಹಿತ್ಯ ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಗ್ರಂಥಾಲಯಗಳಿಗೆ ಭೇಟಿ ನೀಡಿ, ಇಲ್ಲವೆ ಪುಸ್ತಕ ಕೊಂಡು ಓದುವ ಹವ್ಯಾಸವಿಲ್ಲದವರಿಗೂ ಬೆರಳ ತುದಿಯಲ್ಲಿ ದೊರಕುವ ಇಂತಹ ಸಾಹಿತ್ಯದ ಸಂಪರ್ಕ ಸಾಹಿತ್ಯ ಸಂವಹನದ ವೇದಿಕೆಯಾಗಿರುವುದು ಮುಖ್ಯ , ಬದಲಾದ ಕಾಲಮಾನದಲ್ಲಿ ಮನೆ ಬಾಗಿಲಿಗೆ ಸಾಹಿತ್ಯವನ್ನು ಕೊಂಡೊಯ್ಯಬೇಕಾದ ಅನಿವಾರ್ಯತೆ ಉಂಟಾಗಿದೆ. ಅಂತಹದಕ್ಕೆ ಬ್ಲಾಗುಗಳು ಉತ್ತಮ ವೇದಿಕೆಯಾಗಿವೆ. ಕೋವಿಡ್ ೧೯, ಕರೋನಾದ ಸಂದರ್ಭದಲ್ಲಂತೂ ಅಂತರ್ ಜಾಲಕ್ಕೆ ಅಂಟಿಕೂತ ಜನರಲ್ಲಿ ಸಾಹಿತ್ಯ–ಸಂಸ್ಕೃತಿಯ ಅರಿವನ್ನೂ ಪ್ರೇಮವನ್ನೂ ಓದುವ ಹವ್ಯಾಸವನ್ನೂ ಇಂತಹ ಬ್ಲಾಗುಗಳು ಮಾಡುತ್ತಿವೆ.

ಕೆಂಡಸಂಪಿಗೆ – ಕನ್ನಡದ ಬೆಡಗು ಪರಿಮಳ: ಈ ಬ್ಲಾಗ್ ಒಂದು ವಿಶೇಷ ವಿನ್ಯಾಸದಿಂದ ಕೂಡಿದ್ದು ಪೇಸ್‌ಬುಕ್, ಟ್ವಿಟರ್, ವೆಬ್ ಖಾತೆಗಳನ್ನು ಹೊಂದಿದೆ. ಹಾಗೆಯೇ ವಿಶೇಷವಾಗಿ ಇದರಲ್ಲಿ ಅಂಕಣ, ಸಾಹಿತ್ಯ, ಸರಣಿ, ಪ್ರವಾಸ, ವ್ಯಕ್ತಿವಿಶೇಷ, ಸಂಪಿಗೆ ಸ್ಪೆಷಲ್, ಜೂನಿಯರ್ ಸಂಪಿಗೆ, ನಮಗೆ ನೀವು ಇಲ್ಲೇ ಬರೆಯಬಹುದು ಎಂಬ ಒಳ ಕೊಂಡಿಗಳನ್ನು ಒಳಗೊಂಡಿದ್ದು ಹೊಸ ಬರಹಗಳ ಪರಿಮಳ ಓದಿರಿ, ಬರೆಯಿರಿ ಮತ್ತು ಪಾಲುಗೊಳ್ಳಿ ಎಂಬ ಮಾತಿನಿಂದ ಜನ ಮನ ಗೆದ್ದಿರುವ ಕೆಂಡಸಂಪಿಗೆಯು ಕುಳಿತಲ್ಲೇ ಬರೆದು ನಮಗೆ ಸಲ್ಲಿಸಿ ಕೆಂಡಸಂಪಿಗೆಗೆ ಬರೆಯಲು ನೀವು ಖ್ಯಾತ ಬರಹಗಾರರೇ ಆಗಬೇಕಿಲ್ಲ! ಎಂಬ ಟ್ಯಾಗ್‌ನ್ನು ಕೂಡ ಹಾಕಿಕೊಂಡಿದೆ. ಅಂದರೆ ಯಾರೇ ಎಲ್ಲೇ ಇರಲಿ ಯಾವುದೇ ರೀತಿಯ ಕಥೆ, ಕವನ ಅಂಕಣ, ಚುಟುಕ, ಚಿತ್ರ, ಸಾಕ್ಷ್ಯ ಇನ್ನಿತರ ವಿಶೇಷ ಲೇಖನ ಬರಹಗಳನ್ನು ಇದು ಆಹ್ವಾನಿಸಿ ಪ್ರಕಟಿಸುತ್ತದೆ. ಅಷ್ಟೇ ಅಲ್ಲದೇ ಸಂವಾದ, ಚರ್ಚೆಗಳೆಂಬ ಕಾರ್ಯಕ್ರಮಗಳನ್ನು ಏರ್ಪಡಿಸಿ ಬರಹಗಾರರಿಗೆ ಪ್ರೋತ್ಸಾಹವನ್ನು ಕೊಡುವ ಕೆಲಸವನ್ನು ಮಾಡುತ್ತದೆ.

ಭಾವ ಶರದಿ – 'ನನ್ನ ಸವಿನೆನಪುಗಳ, ಹೊಸಕನಸುಗಳ, ಅನುಭವಗಳ ಅಂಬುಧಿ': ವಿನಯ್ ಕುಮಾರ್ ಸಜ್ಜನರಿ ಅವರ ಈ ಬ್ಲಾಗ್ ಕವನಗಳು, ಹನಿಗವನಗಳು, ಚುಟುಕಗಳು, ಪುಸ್ತಕ ವಿಮರ್ಶೆ, ಸಣ್ಣ ಕಥೆಗಳು, ಅಂಕಣಗಳು, ಲೇಖನಗಳು, ಹರಟೆ, ಮಾತು, ಹೀಗೆ ೧೦–೧೨ ಒಳ ಕಿಂಡಿಗಳನ್ನು ಒಳಗಿಒಂಡಿರುವ ವಿವಿಧ ವೈಚಾರಿಕ ಅರ್ಥಪೂರ್ಣ ಲೇಖನಗಳು ಮತ್ತು ಟಿಪ್ಪಣಿಗಳನ್ನು ಒಳಗೊಂಡಿದೆ. ಇವರ ಭಾಷೆಯು ಕೂಡ ಸಾಮನ್ಯ ಕನ್ನಡಿಗನಿಗೂ ಕೂಡ ಅರ್ಥವಾಗುತ್ತದೆ. ಇವರ ಬ್ಲಾಗ್‌ನ ಕೆಲವು ಕವನಗಳನ್ನು ನೋಡಬಹುದು ಚಿಕ್ಕ ಚೊಕ್ಕ ಸ್ಪುಟ ಸುಂದರ ಬರಹಗಳು. ಹಾಸ್ಯ, ಲವಲವಿಕೆ, ತುಂಟತನ, ಪ್ರೀತಿ ಪ್ರೇಮ ಹೀಗೆ ನಾನಾರಸ ಪ್ರಬೇಧಗಳು ಇವರ ಬ್ಲಾಗ್‌ನಲ್ಲಿವೆ.

ನೀಲಿ ಹೂವು: ಸುಮಧುರ ಕವನ, ಪ್ರಚಲಿತ ಬರಹ, ಸರಳ ನುಡಿ, ಸಾಮಾಜಿಕ ಚಿಂತನೆಯ ವಿಷಯವನ್ನೇ ವಸ್ತುವನ್ನಾಗಿಸಿ ಸ್ವ–ರಚಿತ ಕವನಗಳನ್ನು ಪ್ರಕಟಿಸಿರುವುದನ್ನು ಈ ಬ್ಲಾಗಿನಲ್ಲಿ ಕಾಣಬಹುದಾಗಿದೆ. ಒತ್ತಡದ ಬದುಕು, ಅಸಹಾಯಕತೆ, ಆಧುನಿಕ ಜೀವನ ಶೈಲಿ, ಜೀವಿಸಬೇಕೆಂಬ ಹಂಬಲವನ್ನೇ ವಸ್ತುವನ್ನಾಗಿಸಿರುವ ಕವಿತೆಗಳು ಇವರ ಬ್ಲಾಗಿನಲ್ಲಿ ವಿಶೇಷವಾಗಿ ಕಂಡು ಬಂದಿದೆ.

ದೊಡ್ಡ ಚಿಕ್ಕ ಮುಳ್ಳಿನ
ಸತತ ತಿವಿತ ಬೆನ್ನಿಗೆ
ತಪ್ಪಿಸಿಕೊಳ್ಳುವ ಯತ್ನದಲ್ಲೇ
ಬದುಕಿನ ನಾಗಾಲೋಟ

ದಿನದ ಬ್ಯಾಸ್ಕೆಟ್ಟಿನಲ್ಲಿ

ತುರುಕುತ್ತಿದ್ದೇವೆ ಒತ್ತಿ ಒತ್ತಿ

ಬದುಕಿನ ಬಟ್ಟೆಯನು, ಉಸಿರು ಆಡಲಾಗದಷ್ಟು

ಒತ್ತರಿಸಿಕೊಂಡಿದೆ, ಇನ್ನೊಂದಿಷ್ಟು

ಜಾಗವಿದ್ದಿದರೆ ಮತ್ತಷ್ಟು ತುಂಬಿಸಬಹುದೇ

ಅನ್ನುವ ಚಿಂತೆ ಎಂದಿಗೂ

ತ್ರಿ-ವಿಕ್ರಮ: ವಿಕ್ರಮ್ ಅವರ ಬ್ಲಾಗ್ ಆಗಿದ್ದು, ಆಧುನಿಕ ಜನರ ಜೀವನ ಶೈಲಿಯನ್ನೇ ವಸ್ತುವಾಗಿಸಿಕೊಂಡು ಕವನಗಳನ್ನು ಬರೆಯುತ್ತಾರೆ. ಜೊತೆಗೆ ಕನ್ನಡ ಕಿರುಚಿತ್ರಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಅದರ ಲಿಂಕ್ ಕೊಂಡಿಗಳನ್ನು ಹಾಕಿದ್ದಾರೆ.

ಲೈಟ್-ದ- ಸ್ಮೈಲ್: ದೀಪ ಲಕ್ಷ್ಮೀ ಭಟ್ ಅವರ ಬ್ಲಾಗ್ ಆಗಿದ್ದು, ಕವಿತೆಗಳ ಹೊಸ ತನವನ್ನು ಸೃಷಿಸುವ ಮತ್ತು ಹೊಸ ಭಾವನ ಲಹರಿಯು ಹರಿಯುವುದು ಪ್ರಮುಖವಾಗಿ ಕಂಡು ಬರುತ್ತದೆ. ತನ್ನ ಪಿಸು ಮಾತುಗಳು ಕಾವ್ಯಗಳಲ್ಲಿ ಹರಿಸಬೇಕೆಂಬ ಹಂಬಲ ಹೊತ್ತವರು ಈ ಬ್ಲಾಗ್, ಎಂದು ತೋರುತ್ತದೆ.

ಅವಿತಿದೆ ನನ್ನಲೇ ಎಲ್ಲೋ....

ಭಾವನೆಗಳ ಗುಹೆಯೊಳಗೆ.....

ಒಂದು ಸುಂದರವಾದ ಸ್ವಪ್ನ

ಸಾಕಾರವಾಗಲು ತಲ್ಲಣಿಸುತ್ತ

ಕಾವ್ಯ ಸ್ಪರ್ಶ: ಸೋಮೇಶ್ ನಿಂಗೇಗೌಡ ಅವರ ಬ್ಲಾಗ್ ಆಗಿದ್ದು 'ನೊಂದ ಹೃದಯಗಳಿಗೆ, ಬೆಂದ ಮನಕೆ ಗುಳಿಗೆ!' ಎಂಬ ಟ್ಯಾಗ್ ಲೈನ್‌ನೊಂದಿಗೆ 'ಒಲವಿನ ಕಥೆಗಳು', 'ಒಲವಿನ ಕವನಗಳು' ಎಂಬ ಇನ್ನೆರಡು ವಿಭಾಗಳನ್ನು ಹೊಂದಿದ್ದು ಇವರು ಪೇಸ್‌ಬುಕ್‌ನಲ್ಲಿಯೂ ಕವಿತೆಗಳನ್ನು ದಾಖಲಿಸಿದ್ದಾರೆ. ಒಲವಿನ ಕಥೆಗಳಲ್ಲಿ ಪುಟ್ಟ ಪುಟ್ಟ ಸಂಭಾಷಣ ಪ್ರಸಂಗಗಳನ್ನು ನಿರೂಪಿಸಿದ್ದಾರೆ. ರಮ್ಯ ಸೃಷ್ಟಿ: ಸುನಿಲ್ ಅವರ ಬ್ಲಾಗ್ ಆಗಿದ್ದು 'ಕೋಗಿಲೆ ಧನಿಯು ಕೇಳುತ್ತಿಲ್ಲವೆ' ಎಂಬ ಟ್ಯಾಗ್ ಲೈನ್‌ನೊಂದಿಗೆ ಕವನ, ಚಿತ್ರ ಬರಹ, ಸಣ್ಣ ಕಥೆ ನಾಟಕ, ಪ್ರವಾಸ, ಅಂಕಣ, ಇತ್ಯಾದಿ ವಿಭಾಗಗಳಲ್ಲಿ ಸಾಹಿತ್ಯವನ್ನು ಪೋಷಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಬ್ಲಾಗ್ ಕ್ಷೇತ್ರ ಸಿದ್ದಪಡಿಸಿದ ಆಹಾರ ಅಂತರ್ಜಾಲದಲ್ಲಿ ಗಖಐ ವಿಳಾಸವನ್ನು ನಮೂದಿಸಿದರೆ ನಮಗೆ ಇಷ್ಟವಾದ ಕಥೆ, ಕವಿತೆ, ಅಂಕಣ ಬರಹಗಳು ತೆರೆದುಕೊಳ್ಳುತ್ತವೆ ಎಂಬ ಮಾಹಿತಿಯ್ನನ್ನು ತಿಳಿಸುತ್ತಾ ಜನರು ಬ್ಲಾಗ್ ಸ್ನೇಹಿಗಳಾಗುತ್ತಿರುವುದನ್ನು

ಪ್ರಶಂಸಿಸಿದ್ದಾರೆ. ಮೌಲ್ಯಯುತ ಪ್ರಜ್ಞೆ, ಸಾಮಾಜಿಕ ಕಳಕಳಿಯಿಂದ ಇವರ ಕವಿತೆಗಳು ಮೂಡಿಬಂದಿದೆ. ಅಷ್ಟ ಷಟ್ಪದಿಯ ಕವಿತೆಗಳನ್ನು ಪ್ರಕಟಿಸಿದ್ದಾರೆ.

ಕೋಗಿಲೆ ಧನಿಯು ಕೇಳುತ್ತಿಲ್ಲವೆ ಮಾನವ ನಿನಗೆ
ಪರಿಸರ ಜನನಿಯ ನೋವು ಕೇಳುತ್ತಿಲ್ಲವೆ ನಿನಗೆ

ತರ್ಲೆ ಪದ್ಯ: ರೋಹಿತ್ ಚಕ್ರವರ್ತಿ ಅವರ ಬ್ಲಾಗ್ ಆಗಿದ್ದು ಇವರು ಪ್ರಸಕ್ತ ಬದುಕಿನ ಸಮಾಜದ ಕುರಿತ ವ್ಯಂಗ್ಯ ಪದ್ಯಗಳು, ರಾಜಕೀಯ ಕ್ಷೇತ್ರದ ತರಲೆ ಪದ್ಯಗಳನ್ನು ಪ್ರಕಟಿಸಿದ್ದಾರೆ, ಹಾಸ್ಯ ಸಂಬಂಧಿತ, ಕಚಗುಳಿ ನೀಡುವ ಬರಹಗಳನ್ನು ಹಾಕಿ ಓದುಗರ ಮನಸನ್ನು ತಣಿಸಿದ್ದಾರೆ. ಇವರು ಸಾಹಿತ್ಯ ರಚನೆಗೆ ಗ್ರಂಥಗಳನ್ನು ಓದಲೇಬೇಕಿಲ್ಲ ಎಂಬ ಅಭಿಮತದೊಂದಿಗೆ ತಮ್ಮದೊಂದು ಕವಿತೆಯನ್ನು ಪ್ರಕಟಿಸಿದ್ದಾರೆ.

ಕನ್ನಡ ಜಾನಪದ: ಡಾ. ಅರುಣ್ ಜೋಳದ ಕೂಡ್ಲಿಗಿ ಅವರ ಬ್ಲಾಗ್ ಆಗಿದ್ದು, ಜನಪದ ಕ್ಷೇತ್ರದಲ್ಲಿ ಅಧ್ಯಯನ ನಡೆಸಿ ಕನ್ನಡ ಹಂಪಿ ವಿ.ವಿ. ಯಿಂದ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದಾರೆ. 'ಜಾನಪದ ಜಗತ್ತಿನ ಹೊಸ ಚಲನೆಯ ಹೊರಳು ನೋಟ' ಎಂಬ ಟ್ಯಾಗ್ ಲೈನ್‌ನೊಂದಿಗೆ ಜನಪದ ಕಲೆ, ಲಾವಣಿ, ಜಾತ್ರೆ, ಇತ್ಯಾದಿ ವಿಷಯಗಳ ಬರಹಗಳನ್ನು ಪ್ರಕಟಿಸಿದ್ದಾರೆ. ಜೊತೆಗೆ ಸಾಹಿತ್ಯ ಕ್ಷೇತ್ರದ ವಿಚಾರ ಸಂಕಿರಣದ ಮಾಹಿತಿಗಳು, ಪ್ರಸಿದ್ಧ ಸಾಹಿತಿಗಳ ಬರಹಗಳನ್ನು ವಿಮರ್ಶಾತ್ಮಕವಾಗಿ ವಿವೇಚಿಸಿದ್ದಾರೆ.

ಎ ಸಿಂಹದಂಥಾ ಸಂಗೊಳ್ಳಿ ರಾಯಾ
ಭೂಮಿಗೆ ಬಿದ್ದಂಗ ಸೂರ್ಯನ ಛಾಯ
ನೆತ್ತರ ಕಾವಲಿ ಹರಿಸಿದಾನೊ ಕಿತ್ತೂರ ನಾಡಾಗ
ಭಾಳ ಬಂಟಸ್ತಾನ ಪದವಿ ಇತ್ತ ಅವನ ಹೊಟ್ಟೆಯೊಳಗ
ಸೃಷ್ಟಿಯೊಳಗ ಹುಟ್ಟಿಬಂದ ಶ್ರೇಷ್ಠನಾಗಿ ಹೋಗಿದಾನ
ದುಷ್ಟ ರಾವಣಾಸುರನ ಲಂಕಾ ಸುಟ್ಟಾಂಗ
ಹಿಂಗ ಸಂಪಗಾಂವಿ ಬೀಡಿ ಕಚೇರಿ ಸುಟ್ಟಾನ ಕಲಿಕಿದೊಳಗ

ಮಕ್ಕಳ ಕ್ಷೇತ್ರದ ಬ್ಲಾಗ್‌ಗಳು

ಕನ್ನಡ ಕಹಳೆ: ವಿನಯ್ ಕುಮಾರ್ ಅವರು ತಮ್ಮ ಕನ್ನಡ ಪರ ಕಾಳಜಿ, ಸಾಹಿತ್ಯ ಆಸಕ್ತರಿಗಾಗಿಯೇ ಈ ಬ್ಲಾಗ್ ತೆರೆದಂತಿದೆ. ಇಲ್ಲಿ ಕವನ, ಕಥೆ, ಚುಟುಕ, ಪುಸ್ತಕ ವಿಮರ್ಶೆ, ಹರಟೆ, ಲೇಖನ, ವಿಚಾರ ಸಂಕಿರಣ, ಇದೇ ಮೊದಲಾದ ಬರಹವನ್ನು ದಾಖಲಿಸಿದ್ದಾರೆ. ಮಕ್ಕಳಿಗೂ ಕೂಡ ಕವಿತೆ, ಚಿತ್ತಾರಗಳಿಗೂ ಮುಕ್ತ ಅವಕಾಶವನ್ನು

ಕಲ್ಪಿಸಿಕೊಟ್ಟಿದ್ದಾರೆ. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣದ ಮಕ್ಕಳು ಚಿಣ್ಣರ ಚಕ್ಕುಲಿ ಎಂಬ ವಿಭಾಗದಲ್ಲಿ ಮಕ್ಕಳಿಗೆ ಅವಕಾಶವನ್ನು ಕೊಟ್ಟಿರುವುದು ವಿಶೇಷವಾಗಿ ಕಂಡುಬಂದಿದೆ.

ಮಗು ತನ್ನ ತಾಯಿಯ ಗರ್ಭದಿಂದ ಹಿಡಿದು ತನ್ನ ಹರೆಯದ ವಯಸ್ಸಿನವರೆಗೆ ವಿವಿಧ ಹಂತದಲ್ಲಿ ಪಾಲನೆಗೆ ಒಳಪಡುತ್ತದೆ. ಮಗುವಿನ ಜೈವಿಕ-ಮಾನಸಿಕ ಆರೋಗ್ಯ, ಲಾಲನೆ-ಪಾಲನೆ ಪೋಷಣೆ, ಆರೈಕೆ ಎಂಬ ಜವಬ್ದಾರಿಗಳು ಮುಖ್ಯವಾಗಿ ತಾಯಿಯ ಪರಿಸರದಲ್ಲಿರುವುದರಿಂದ ಅವರಿಗೆ ಹಲವು ತಿಳುವಳಿಕೆಯ ವಿಚಾರಗಳು ಅತ್ಯವಶ್ಯಕ. ತಾಯಿಯಿಲ್ಲದವರು, ದೂರ ವಿದೇಶದಲ್ಲಿರುವವರು, ಉದ್ಯೋಗಸ್ಥ ಮಹಿಳೆಯರು, ಶಿಶು ಪಾಲಕರು ಹೇಗೆ ಸುಲಭ, ಸರಳ ಮಾರ್ಗಗಳ ಮೂಲಕ ಕಾರ್ಯಕ್ಷಮತೆಯ ಜೊತೆಗೆ ಮಗುವಿನ ಪಾಲನೆಯನ್ನು ಸಕ್ರಿಯರಾಗಬಹುದು ಎಂಬುದನ್ನು ತಿಳಿಸಿಕೊಡುವ ಬ್ಲಾಗ್‌ಗಳಿವೆ.

ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಭಾಷಾ ಭೋಧನಾ ಕಲಿಕೆ ಮುಖ್ಯವಾಗಿ ಚುಟುಕ, ನೀತಿ ಕಥೆಗಳು, ಪಂಚತಂತ್ರ ಕಥೆಗಳು ಶಿಶು ಗೀತೆಗಳು, ಹಾಡುಗಳು ಪ್ರಧಾನವಾಗಿ ಮಕ್ಕಳ ಕ್ಷೇತ್ರದ ಬ್ಲಾಗ್‌ಗಳು ಸಹಾಯವಾಣಿಯಾಗಿದೆ. ಮನರಂಜನಾ ಕಲಿಕಾ ಆಟಿಕೆಗಳು, 'ಓದಿ-ಕಲಿ', 'ನೋಡಿ-ಕಲಿ', 'ನಲಿ-ಕಲಿ', 'ಮಾಡಿ-ತಿಳಿ' ಎಂಬ ಪ್ರಯೋಗಾತ್ಮಕ ಮತ್ತು ಕ್ರಿಯಾತ್ಮಕ ಸೃಜನಶೀಲ ಕೌಶಲ್ಯಾಭಿವೃದ್ಧಿಗೆ ಸಹಾಯ ಮಾಡುವ ಬ್ಲಾಗ್‌ಗಳಿವೆ. ಅದರಲ್ಲಿ 'ಪುಟ್ಟಿ ಪ್ರಪಂಚ', 'ಬಾಲವನ', 'ಕಿಂದರಿಜೋಗಿ', 'ಮಹಾಜನ -ಪುಟಾಣಿಗಳ-ಇ ಪತ್ರಿಕೆ', 'ನಿಶುಮನೆ', 'ನಂದಗೋಕುಲ', 'ಬಾಲ್ಯದ ಆಟ' ಮುಂತಾದವು ಬಹಳ ಮುಖ್ಯ ಕನ್ನಡದಲ್ಲಿ ಶಿಶು ಸಾಹಿತ್ಯದ ರಚನೆ ಇತ್ತೀಚೆಗೆ ಬಹಳ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಬ್ಲಾಗಗಳು ಶಿಶು ಪ್ರಪಂಚವನ್ನು ಅತ್ಯಂತ ವರ್ಣರಂಜಿತವೂ, ಮನರಂಜನಾತ್ಮಕವೈ ಕಲಿಕಾ ಕೌಶಲ್ಯ ಪೂರ್ಣವಾಗಿಯೂ ಇರುವುದನ್ನು ಗಮನಿಸಬಹುದು. ಶಿಶುವಿನ 'ಸಾಮಾಜೀಕರಣ', ಶ್ರವ್ಯ ಮತ್ತು ದೃಶ್ಯರೂಪದ ಬಹುಮಾಧ್ಯಮದ ಶಿಶುಪ್ರಾಸಗಳು, ಕಥನಗಳು ಚಿತ್ರ ಕಥೆಗಳು ಇತ್ಯಾದಿಗಳ ಮೂಲಕ ಯಶಸ್ವಿಯಾಗಿ ನಡೆಯಬಹುದಾಗಿದೆ. ಅಮರ ಚಿತ್ರಕಥೆಗಳು ಚಂದಮಾಮಾ ಕಥೆಗಳ ಕೊರತೆಯನ್ನು ಇಂದು ಇಂತಹ ಮಕ್ಕಳ ಬ್ಲಾಗುಗಳು ಪೋರ್ಪಲ್ಗಳುತುಂಬಿಕೊಡುತ್ತಿವೆ. ಹಾಗಾಗಿ ಇಂತಹ ಬ್ಲಾಗುಗಳನ್ನು ನಾವು ಅಲಕ್ಷ್ಯ ಮಾಡುವಂತಿಲ್ಲ.

ಪುಟ್ಟಿ ಪ್ರಪಂಚ: ರೂಪ ಶ್ರೀ ಅವರ ಬ್ಲಾಗ ಆಗಿದ್ದು, ಶಿಶು, ಮಕ್ಕಳು, ಕರಕುಶಲ, ಬೇಬಿ, ಯು.ಎಸ್.ಎ. ಪೇರೆಂಟಿಂಗ್, ಮದರ್ ಎಂಬ ವಿಭಾಗಗಳಿದ್ದು ಇದರ ಕುರಿತು ಲೇಖನ ಬರಹಗಳನ್ನು ಪ್ರಕಟಿಸುತ್ತಿದ್ದರು ಆದರೆ ಪ್ರಸಕ್ತ ಈ ಬ್ಲಾಗ್ ಚಾಲ್ತಿಯಲ್ಲಿಲ್ಲ.ಬಾಲವನ: ಬಾಲ ಎಂಬುವವರ ' ಬ್ಲಾಗ್ ಆಗಿದ್ದು, ಆಧುನಿಕ ನೀತಿ ಕಥೆಗಳು, ಈಸೋಪನ ಕಥೆಗಳು, ಕನ್ನಡ ಸಾಹಿತ್ಯ, ಕವನ, ಗಾದೆಗಳು, ಚಿತ್ರ

ಗೀತೆಗಳು, ಬಾಲ ಗೀತೆಗಳು, ಮಕ್ಕಳ ಆಟಗಳು, ಹೀಗೆ ವೈವಿಧ್ಯಮಯ ಕನ್ನಡ ಸಾಹಿತ್ಯ ಮತ್ತು ಮಕ್ಕಳಿಗೆ ಸಹಾಯವಾಗುವ ಚಿಕ್ಕ ಚೊಕ್ಕ ಬರಹಗಳಿವೆ. ಮಹಾಭಾರತ, ರಾಮಾಯಣದ ಕಥೆಗಳು, ಶ್ಲೋಕಗಳನ್ನು ಕೂಡ ಪ್ರಕಟಿಸಲಾಗಿದೆ.

ಕನ್ನಡ ರಂಗಭೂಮಿ ಮತ್ತು ಸಿನಿಮಿಯ ಬ್ಲಾಗ್‌ಗಳು: ಯಾವುದೇ ಭಾಷೆಯ ಸಾಹಿತ್ಯ ಸಂಸ್ಕೃತಿಯು ಕಲಾಮಾಧ್ಯಮದಲ್ಲಿ ಅಭಿವ್ಯಕ್ತಗೊಳ್ಳುವುದು ಬಹಳ ಮುಖ್ಯ. ಕನ್ನಡದಲ್ಲಿ ಅಂತಹ ಸಮೃದ್ಧವಾದ ರಂಗಭೂಮಿ, ಚಲನಚಿತ್ರ ಸಂಗೀತ, ನೃತ್ಯ, ಶಿಲ್ಪಕಲೆಗಳ ಮೂಲಕ ಕನ್ನಡ ಸಂಸ್ಕೃತಿ ಅಭಿವ್ಯಕ್ತಗೊಳ್ಳುತ್ತಿದೆ. ಕೆಲವು ಬ್ಲಾಗುಗಳು ಕನ್ನಡ ರಂಗಭೂಮಿಯನ್ನೇ ಉದ್ದೇಶಿಸಿ ರಚನೆಗೊಂಡಿವೆ. ಇವುಗಳಲ್ಲಿ ಬ್ಲಾಗ್‌ಗಳಲ್ಲಿ ರಂಗಭೂಮಿಯ ಉದ್ದೇಶವೇನು? ರಂಗಭೂಮಿಯ ಮುಖ್ಯ ಕಾಳಜಿ, ಉದ್ದೇಶವಿರುವುದು ಯಾವುದರ ಮೇಲೆ ಇತ್ಯಾದಿ ನಾನಾ ರೀತಿಯ ವಿಷಯಗಳನ್ನು ಈ ರಂಗಭೂಮಿಯ ಕುರಿತ ಬ್ಲಾಗುಗಳಲ್ಲಿ ಕಾಣಬಹುದಾಗಿದೆ. ಅಂತಹ ಕೆಲವು ಬ್ಲಾಗ್‌ಗಳು ಗಮನಿಸಬಹುದು.ಸಂಚಾರಿ ಥಿಯೇಟರ್: ಶಶಿಧರ್ ಬಾರಿಘಾಟ್ ಮತ್ತು ಎನ್ ಮಂಗಳಾ ಅವರ ಬ್ಲಾಗ್ ಆಗಿದ್ದು, ಇವತ್ತಿನ ಪೀಳಿಗೆಗೆ ರಂಗಭೂಮಿಯ ಕಲೆ, ಪ್ರದರ್ಶನ, ಬಗ್ಗೆ ತಿಳಿಸುವುದು, ಪ್ರೇಕ್ಷಕರನ್ನು ರಂಗಭೂಮಿಯ ಕಡೆಗೆ ಸೆಳೆಯುವಂತೆ ಮಾಡುವುದು, ಹೀಗೆ ವೈವಿಧ್ಯಮಯ ಬರಹಗಳಿವೆ.

ರಂಗಭೂಮಿ ವಿಶ್ಲೇಷಣೆ: ಶಶಿಕಾಂತ ಯಡಹಳ್ಳಿ ಅವರ ಬ್ಲಾಗ್ ಆಗಿದ್ದು, ವಿಶ್ವದ ರಂಗಭೂಮಿದಿನದ ಇತಿಹಾಸ ಮತ್ತು ಸಂದೇಶವನ್ನು ನೀಡುತ್ತಾ ರಂಗಭೂಮಿಯ ಪ್ರಚಲಿತ ಘಟನೆಗಳು, ಆಕಾಡೆಮಿಯ ವಿಷಯಗಳು, ನಾಟಕದ ವಿವಿಧ ವಸ್ತು ವಿಷಯಗಳ ವಿಶ್ಲೇಷಣೆ, ಪ್ರಸಕ್ತ ರಾಜಕೀಯ ಸನ್ನಿವೇಶದ ಬರಹಗಳು, ಸಮಾಜಿಕ ಚಿತ್ರಣದ ಕೆಲವು ಬರಹಗಳಿವೆ.

ಕನ್ನಡ ರಂಗಭೂಮಿಯ ಚರಿತ್ರೆಯನ್ನು ಅದರ ಸ್ವರೂಪ ಬೆಳವಣಿಗೆಗಳನ್ನು, ಕಾಲದಿಂದ ಕಾಲಕ್ಕೆ ಅದು ಪಡೆದುಕೊಳ್ಳುತ್ತಿರುವ ನವಅವತಾರಗಳ ಸ್ವರೂಪ ಲಕ್ಷಣಗಳನ್ನು ಇಂದು ಅತ್ಯಂತ ಗಂಭೀರವಾಗಿ ಅಧ್ಯಯನ ಮಾಡಬೇಕಾಗಿದೆ. ರಂಗ ಚಟುವಟಿಕೆ ಯಾವತ್ತೂ ಒಂದು ಸಂಸ್ಕೃತಿಯ ರೂಪಣೆಯಲ್ಲಿ, ಸಮುದಾಯದ ಅಭೀಪ್ಸೆ, ಕನಸುಗಳನ್ನು ಗುರಿ- ಗಮ್ಯಗಳನ್ನು ತಿದ್ದಿ ತೀಡಿ ಸದಭಿರುಚಿಯನ್ನು ಜೀವನ್ಮುಖತೆಯನ್ನು ಪಸರಿಸುವಂತದ್ದು, ಅದು ಆಧುನಿಕ ಸಿನಿಮಾ ರಂಗಕ್ಕಿಂತಲೂ ಬದುಕಿಗೆ ಹೆಚ್ಚು ಆತುಕೊಂಡಿರುವುದರಿಂದ ಅಂತಹ ಕ್ಷೇತ್ರಗಳನ್ನು ಹತ್ತಿರದಿಂದ ಕಂಡಂತಹ ಅನುಭವವನ್ನು ಉಂಡಂತಹವರ ತಾಜಾ ಹಾಗೂ ನೈಜ ಅಭಿವ್ಯಕ್ತಿಯಿಂದ ಮಹತ್ವಪೂರ್ಣವಾದ ಚಿಂತನ ಮಂಥನಗಳು ನಡೆದು ಅವು ಆಸಕ್ತ ವಲಯವನ್ನು ತಲುಪಲು ಇಂತಹ ಬ್ಲಾಗುಗಳು ಸೇತುವೆಯಾಗಿವೆ. ಮಹತ್ವ ಪೂರ್ಣವಾದ ವಿಚಾರಗಳಿದ್ದೂ ಅದನ್ನು ಹಂಚಿಕೊಳ್ಳುವ ತುಡಿತವಿದ್ದೂ ಪುಸ್ತಕ

ರೂಪದಲ್ಲಿ ಹೊರತರಲಾಗದ ಸಂಕಷ್ಟದಿಂದ ಈ ಬ್ಲಾಗುಗಳು ನೂರಾರು ಬರಹಗಾರರಿಗೆ ಒಂದು ಅವಕಾಶದ ವೇದಿಕೆಯಾಗಿದೆ, ಪ್ರಯೋಗ ರಂಗವಾಗಿದೆ.

ಸಿನಿಮಾ ಹಾಗೂ ಹಾಡುಗಳ ಬ್ಲಾಗ್

ಕನ್ನಡ ಲಿರಿಕ್ಸ್: ಗಣೇಶ್ ಮತ್ತು ಚರಣ್ ಅವರ ಬ್ಲಾಗ್ ಆಗಿದ್ದು, ಕನ್ನಡ ಸಿನಿಮಾ ಗೀತೆಗಳನ್ನು ಕನ್ನಡ ಲಿಪಿಯಲ್ಲಿ ಬರೆದು ಪಲ್ಲವಿ, ಚರಣದ ಸಾಲುಗಳನ್ನು ಚಿತ್ರಿಸಿದ್ದಾರೆ. ಸಾಹಿತ್ಯ ಸಂಗಮ ಬ್ಲಾಗಿನಲ್ಲೂ ಕನ್ನಡ ಸಿನಿಮಾ ಗೀತೆಗಳನ್ನು ಕನ್ನಡ ಲಿಪಿಯಲ್ಲಿ ಬರೆದು ಪಲ್ಲವಿ, ಚರಣದ ಸಾಲುಗಳನ್ನು ಚಿತ್ತರಿಸಿದ್ದಾರೆ. ಕೆಲವು ಕನ್ನಡದ ಹಾಡುಗಳ ಇಂಗ್ಲೀಷ್ ಲಿಪ್ಯಂತರ ಕಂಡುಬಂದಿದೆ. ಇದು ಕನ್ನಡ ಲಿಪಿ ಅರಿಯದವರಿಗೆ ಬಹಳ ಉಪಯುಕ್ತವಾಗಿದೆ. ಇತ್ತೀಚಿನ ದಿನಮಾನಗಳಲ್ಲಿ ಮಾರುಕಟ್ಟೆಯಲ್ಲಿ ಹಿಂದೆ ದೊರಕುತ್ತಿದ್ದ ೫೦ ಪೈಸೆ, ಒಂದು ರೂಪಾಯಿಯ ಕನ್ನಡ ಚಿತ್ರಗೀತೆಗಳ ಕಿರು ಪುಸ್ತಕಗಳು ಕಾಣೆಯಾಗಿರುವ ಹಿನ್ನೆಲೆಯಲ್ಲಿ. ಮತ್ತು ದೂರದರ್ಶನಗಳಲ್ಲಿ ರಿಯಾಲಿಟಿ ಸಂಗೀತ ಕಾರ್ಯಕ್ರಮಗಳ ಗೀಳು ಆರಂಭವಾದಮೇಲೆ ಚಲನಚಿತ್ರಗೀತೆಗಳ ಸಾಹಿತ್ಯದ ಹುಡುಕಾಟ ಹೆಚ್ಚಾಗುತ್ತಿದೆ. ಇಂತಹವರ ಅಗತ್ಯವನ್ನು ಆಸಕ್ತಿಯನ್ನು ತಣಿಸುವಲ್ಲಿ ಈ ಬ್ಲಾಗುಗಳು ಮುಂಚೂಣಿಯಲ್ಲಿವೆ.ಅನೇಕರು ತಮ್ಮ ವಯಕ್ತಿಕ ಬ್ಲಾಗುಗಳಲ್ಲಿ ತಮಗೆ ಇಷ್ಟವಾದ ಹಾಡುಗಳನ್ನು ಇಂಗ್ಲೀಷಿಗೆ ಅನುವಾದ ಮಾಡಿ ತಮ್ಮ ಸ್ನೇಹಿತರ ವಲಯದಲ್ಲಿ ಅಲ್ಲಿನ ಸಾಹಿತ್ಯ ಸಂಗೀತದ ಸೌಂದರ್ಯವನ್ನು ಕುರಿತು ಚರ್ಚೆಗಳನ್ನೂ ಮಾಡಿಕೊಳ್ಳುತ್ತಾರೆ.

ಸಾಹಿತ್ಯಸುಧೆ: ಸಂದೀಪ್ ಟಿ ಗೌಡ ಅವರು 'ಕನ್ನಡ ಸಾಹಿತ್ಯ- ಕನ್ನಡ ಹಾಡುಗಳ ಲಿರಿಕ್ಸ್' ಎಂಬ ಬ್ಲಾಗ್‌ನಲ್ಲಿ ದೇಶಭಕ್ತಿಗೀತೆ, ಭಕ್ತಿಗೀತೆ, ಚಿತ್ರಗೀತೆಗಳು, ಭಾವಗೀತೆಗಳು, ಜನಪದ ಗೀತೆಗಳು, ವಚನಗಳು, ಎಂಬ ವಿಭಾಗಗಳನ್ನು ಮಾಡಿಕೊಂಡಿದ್ದು ಒಟ್ಟು ೫೦೦ ಕ್ಕೂ ಹೆಚ್ಚು ಗೀತೆಗಳ ಸಂಗ್ರಹವನ್ನು ಮಾಡಿದ್ದಾರೆ. ಅಗತ್ಯವಾದ ಗೀತೆಗಳ ಸಾಹಿತ್ಯಕ್ಕಾಗಿ ಹುಡುಕುವ ಕನ್ನಡ ಗೀತ ಪ್ರೇಮಿಗಳಿಗೆ ಹೆಚ್ಚಿನ ಶ್ರಮ, ಸಮಯ, ಖರ್ಚು ಇಲ್ಲದೇ ಬೆರಳ ತುದಿಯಲ್ಲಿ ಕ್ಷಣಾರ್ಧದಲ್ಲಿ, ಎಲ್ಲೆಂದರಲ್ಲಿ ಈ ಕನ್ನಡ ಸಾಹಿತ್ಯ ಪ್ರಕಾರಗಳು ದೊರಕುತ್ತಿರುವುದು ಕನ್ನಡ ಭಾಷೆ, ಸಾಹಿತ್ಯದ ಪ್ರಚಾರ ಪ್ರಸರಣದಲ್ಲಿ ಬಹಳ ಮುಖ್ಯವಾದ ಅಂಶವಾಗುತ್ತದೆ.

ಸಾಂಗತ್ಯ: ಇದು ಚಿತ್ರರಂಗಕ್ಕೆ ಸಂಬಂಧಿಸಿದ ಬ್ಲಾಗ್ ಆಗಿದ್ದು, ಚಿತ್ರ ಅನಿಸಿಕೆ, ಚಿತ್ರ ವಿಜಾನೆ, ಚಿತ್ರ ಸುದ್ದಿ, ಚಿತ್ರೋತ್ಸವಗಳು, ಚೆಂದದ ಸಿನಿಮಾಗಳು, ಡಾಕ್ಯುಮೆಂಟರಿ, ನಮ್ಮ ಸುದ್ದಿ, ಲೇಖನ, ವಿಡಿಯೋ ದೃಶ್ಯಾವಳಿ, ಸಂದರ್ಶನ-ಸಂವಾದ, ಸಿನಿಮಾ ಸ್ಕೋಪ್ ಎನ್ನುವ ವಿಭಾಗಗಳನ್ನೊಳಗೊಂಡಿದ್ದು, ತಾಜ ಸಿನಿ ಸುದ್ದಿಗಳನ್ನು ಪ್ರಕಟಿಸುತ್ತಾ ಚಿತ್ರ ವಿಮರ್ಶೆಯನ್ನು ಮಾಡುತ್ತದೆ. ಚಲನಚಿತ್ರಗಳ

ಜಹೀರಾತುಗಳು ಇಂದು ರಸ್ತೆಯಂಚಿನ ತೊಟ್ಟಿಯಮೇಲೆ ಗೋಡೆಗಳು, ಮರಗಳು ಕಾಂಪೌಂಡುಗಳ ಮೇಲೆ, ಎಲ್ಲೆಂದರಲ್ಲಿ ನೋಡಲು ದೊರಕುವುದಿಲ್ಲವಾದ್ದರಿಂದ ಈ ಬದಲಾದ ಸಂದರ್ಭದಲ್ಲಿ ಕನ್ನಡ ಚಲನಚಿತ್ರಗಳು ಸಮಾಜಿಕ ಜಾಲತಾಣವನ್ನು ಪತ್ರಿಕೆ, ದೂರದರ್ಶನ, ಬಾನುಲಿಯನ್ನೇ ನೆಚ್ಚಿಕೊಳ್ಳಬೇಕಾಗಿದೆ.ಗ್ರಾಹಕನೇ ದೊರೆಯಾಗುವ ಈ ಕಾಲದಲ್ಲಿ ಎಲ್ಲವನ್ನೂ ಅವನ ಮನೆ ಬಾಗಿಲಿಗೆ, ಅಂಗೈಗೆ ತಲುಪಿಸಬೇಕಾದ ಅನಿವಾರ್ಯತೆ ಇಂದು ಜಗತ್ತಿನ ಎಲ್ಲ ಮಾರುಕಟ್ಟೆಗಿದೆ. ಹಾಗಾಗಿ ಸದಭಿರುಚಿಯ ಇಂಥಹ ಬ್ಲಾಗುಗಳು ಇವೆರಡರ ನಡುವೆ ಕೊಂಡಿಯಾಗಿ ನಿರ್ವಹಿಸುತ್ತಿರುವ ಪಾತ್ರ ಮಹತ್ವ ಪೂರ್ಣವಾದದ್ದು.

ವಿವಿಧ ಜ್ಞಾನ ಶಿಸ್ತುಗಳ ಬ್ಲಾಗ್ಗಳು

ಹಾಸ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಬ್ಲಾಗ್: 'ಬೊಗಳೆ ರಗಳೆ', 'ಮಜಾವಾಣಿ', 'ಪಂಚ್ ಲೈನ್', 'ಅಪಾರ್ಥಕೋಶ' 'ತಲೆಹರಟೆ', 'ನಗೆನಗಾರಿ ಡಾಟ್ ಕಾಮ್' ಇವೆಲ್ಲವೂ ಕೂಡ ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಹಾಗೂ ಸಮಾಜದಲ್ಲಿನ ಘಟನೆಗಳಾಧಾರಿತ ವ್ಯಂಗ್ಯ ಚಿತ್ರಗಳು ಮತ್ತು ಬರಹಗಳನ್ನು ಒಳಗೊಂಡಿದ್ದು ಇವು ಓದುಗರ ಮನಸ್ಸನ್ನು ಮುಟ್ಟಿವೆ.

ಛಾಯಗ್ರಹಣಕ್ಕೆ ಸಂಬಂಧಿಸಿದ ಬ್ಲಾಗ್: ತೇಜಸ್ ಪಿ. ಆಚಾರ್ ಅವರ 'ರಂಗಿತರಂಗ' ಬ್ಲಾಗ್ ನಾಟಕ ಕಲಾವಿದರ ಚಿತ್ರಗಳು, ಹಸಿರು, ಹೂವು, ಬೆಟ್ಟ, ಚಿತ್ರಕಲೆ, ವಿಶೇಷ ಚಿತ್ರಗಳ ಛಾಯಾಗ್ರಹಣ ಫೋಟೋ ಪ್ರತಿಗಳನ್ನು ಒಳಗೊಂಡಿದ್ದು.ಕನ್ನಡ ನಾಡಿನ ಕಲೆ ಚಲುವು, ಪ್ರಾಕೃತಿಕ ಸೌಂದರ್ಯವನ್ನು ಬಿತ್ತರಮಾಡುತ್ತಿದೆ.

ಕುಕ್ಕಿಂಗ್ ಕ್ಷೇತ್ರದ ಬ್ಲಾಗ್‌ಗಳು: 'ಹೋಮ್ ರೆಮಿಡೀಸ್ ಅಂಡ್ ಯೂಸ್‌ಫುಲ್ ಟಿಪ್ಸ್', 'ಕನ್ನಡ ಅಡುಗೆ ರೆಸೀಪೀಸ್', ಮುಖ್ಯವಾಗಿ ಚೆಂದವಾದ ಬೆಳಗಿನ ತಿಂಡಿಗಳು, ವಿಶೇಷ ಹಬ್ಬದ ಅಡುಗೆಗಳು, ದಿನ ಬಳಕೆಯ ಅಡುಗೆ ವಸ್ತುಗಳ ಮೇಲಿನ ಟಿಪ್ಸ್‌ಗಳು ಇತ್ಯಾದಿಗಳ ಕುರಿತು ಚಿತ್ರ ಸಹಿತ ಬರಹಗಳನ್ನು ಪ್ರಕಟಿಸುತ್ತ ಓದುಗರನ್ನು ಆಕರ್ಷಿಸಿದೆ. ಆಶ್ಚರ್ಯವೆಂದರೆ ಕೇವಲ ಅಡುಗೆಯ ಮನೆಗೆ ಸೀಮಿತವಾಗಿದ್ದ ಅನೇಕ ಮಹಿಳೆಯರಿಗೆ ಅವರಲ್ಲಿನ ಕೌಶಲ್ಯಗಳನ್ನು ಪ್ರದರ್ಶಿಸಲು ತಮ್ಮದೇ ಆದೊಂದು ಅಸ್ಮಿತೆಯನ್ನು ಕಟ್ಟಿಕೊಳ್ಳಲು ಇವು ಸಹಾಯಕವಾಗಿವೆ. ಮಕ್ಕಳು ಮೊಮ್ಮಕ್ಕಳ ಸಹಾಯದಿಂದ ಇಂದು ತಾಯಂದಿರು ಅಜ್ಜಿಯರು ತಮ್ಮ ಮಾತೃ ಭಾಷೆಯಲ್ಲಿ ತಮ್ಮ ಹಳ್ಳಿ ಸೊಗಡಿನಲ್ಲಿ ಇಂದು ಬ್ಲಾಗುಗಳಲ್ಲಿ ಆಸಕ್ತ ಅಂತರ್‌ಜಾಲಿಗರನ್ನು ದೂರದೂರದವರೆಗೆ ತಲುಪುತ್ತಿದ್ದಾರೆ. ಕನ್ನಡ ಭಾಷೆಯ ಸಮಾಜೋ ಸಾಂಸ್ಕೃತಿಕ ಅಧ್ಯಯನಕ್ಕೆ ಇಂತಹ ಬ್ಲಾಗುಗಳ ಭಾಷಾ ಅಧ್ಯಯನ ಬಹಳ ಸಹಾಯಕವಾಗುತ್ತದೆ.

ವಿಶೇಷ ಶೀರ್ಷಿಕೆಯ ಬ್ಲಾಗ್‌ಗಳು: ಕನ್ನಡ ಬ್ಲಾಗುಗಳಿಗೆ ಶೀರ್ಷಿಕೆಯ ಹೆಸರನ್ನು ಇಡುವಲ್ಲಿ ಭಾಷಾ ಮಿಶ್ರಣವನ್ನು ಕಾಣಬಹುದು. ಅಂತಹ ಕೆಲವು ಬ್ಲಾಗುಗಳನ್ನು ಈ ಕೆಳಗಿನಂತೆ ಕಾಣಬಹುದು. ಈ ಬ್ಲಾಗುಗಳ ಹೆಸರಿನಿಂದಲೇ ಅವುಗಳ ವೈಶಿಷ್ಟ್ಯವನ್ನು ತಿಳಿಯಬಹುದಾಗಿದೆ. ಬ್ಲಾಗ್‌ನ ಹೆಸರೇ ಯಾವ ಉದ್ದೇಶ, ಯಾವ ಕ್ಷೇತ್ರ, ಯಾವ ವಿಷಯವನ್ನು ಪ್ರಸ್ತುತ ಪಡಿಸುತ್ತದೆ ಎಂಬುದನ್ನು ತಿಳಿಸಿಬಿಡುತ್ತದೆ.. ಸ್ಥಳನಾಮ ಅಧ್ಯಯನ ವ್ಯಕಿ ನಾಮ ಅಧ್ಯಯನದಂತೆ ಇಂತಹ ಶಿರೋನಾಮೆಗಳ ಅಧ್ಯಯನವೂ ನಡೆಯಬೇಕಾಗಿದೆ. ಒಂದು ಸಂಸ್ಕೃತಿಯಲ್ಲಾಗುತ್ತಿರುವ ಪಲ್ಲಟಗಳನ್ನು, ಪರಿಚಲನೆಗಳನ್ನು ಗುರುತಿಸಲು ಇದು ಸಹಾಯಕವಾಗುತ್ತದೆ. ಜೊತೆಗೆ ಓದುಗರನ್ನು ಸೆಳೆಯುವುದು ಕೂಡ ಬ್ಲಾಗ್‌ನ ಹೆಸರಿನಿಂದಲೇ, ಹೆಸರಿನಲ್ಲೇನಿದೆ ಎಂದು ಕೂರುವ ಕಾಲವಿದಲ್ಲ. ಹೆಸರಿನಲ್ಲಿಯೇ ಎಲ್ಲವೂ ಇದೆ. ಯಾವುದೇ ಪತ್ರಿಕೆಯಿರಲಿ ದೂರದರ್ಶನವಿರಲಿ ಶಿರ್ರಿಕೆಗಳನ್ನು ತಮ್ಮ ಘೋಷವಾಕ್ಯಗಳನ್ನು ಹ್ಯಾಶ್ಟ್ಯಾಗಳನ್ನು ಅತ್ಯಂತ ಮುತುವರ್ಜಿಯಿಂದ , ಸಿದ್ದಪಡಿಸುತ್ತಿರುವುದು ಇತ್ತೀಚೆಗೆ ಗಮನಕ್ಕೆ ಬರುತ್ತಿದೆ. ವಿಶೇಷ ಶೀರ್ಷಿಕೆಗಳು ಅಡಿಬರಹಗಳು ಚೆನ್ನ ಎನಿಸಿದರೆ ಸಹೃದಯ ಹೆಚ್ಚು ಉತ್ಸಾದಲ್ಲಿ ಅಂತಹ ಬರಹಗಳನ್ನು ಓದಲು ಮುಂದಾಗುತ್ತಾನೆ. 'ಟೈಮ್ ಪಾಸ್ ಮಾಡಿ', 'ಬ್ಲಾಗುತ್ತಾ ಇರು', 'ಬ್ಲಾಗಾಯಣ', 'ಪಬ್ ರತ್ನ', 'ಮೋಟುಗೋಡೆ', 'ಚಂ-ಬನವಾಸಿ', 'ರವೀಂದ್ರ ಟೈಂಪಾಸ್', 'ನೆಟ್ ಕನ್ನಡ', 'ಶ್ರೀ ಲೇಖಿ ಗೈ', 'ಟೈಂಪಾಸ್ ಕಡ್ಲೆ ಕಾಯಿ!!!', 'ಶ್.. ಸದ್ದು.. ಹೃದಯಗಳು ಮಾತಾಡ್ತಿವೆ..!', 'ಅಹಂ ಬ್ಲಾಗಸ್ಮಿ', 'ಹೊಸ ಸುಳ್ಯ - ಪುಚ್ಚಪ್ಪಾಡಿ', 'ಜಿಂದಗಿ ಕಾಲಿಂಗ್', 'ಹು(ದು)ಡುಗುಮನ, ಇತ್ಯಾದಿಗಳು ಹೆಸರಿನಲ್ಲೇ ವಿಶಿಷ್ಟತೆಯನ್ನು ಸಾಧಿಸುತ್ತಾ ಏನಿರಬಹುದು ಎಂಬ ಉತ್ಸಾಹವನ್ನು ಮೂಡಿಸುತ್ತ ಓದುಗರನ್ನು ಆಕರ್ಷಿಸುತ್ತವೆ.

ಫೇಸ್‌ಬುಕ್ ಬ್ಲಾಗ್‌ಗಳು

'ಕನ್ನಡ ಬ್ಲಾಗ್ - ನ್ಯೂಸ್ ಮತ್ತು ಮಾಧ್ಯಮ': ಫರ್ಹಾನ್ ರಶೀದ್ನ ಅವರ ಬ್ಲಾಗ್ ದಿನಾಂಕ: ೧೧/೦೪/೨೦೧೭ ರಂದು ಪ್ರಾರಂಭಿಸಲಾಗಿದ್ದು, ಪ್ರಸಕ್ತ ಚಾಲ್ತಿಯಲ್ಲಿದೆ.'ಇಂಟರ್ನೆಟ್‌ನಲ್ಲಿ ಇಂಗ್ಲಿಷ್ ಮಾತ್ರ ಯಾಕೆ, ಕನ್ನಡ ಕೂಡಲಭ್ಯ!' ಇದು ಇವರ ಟ್ಯಾಗ್ ಲೈನ್. ಪ್ರಚಲಿತ ರಾಜಕೀಯ ವಿದ್ಯಾಮಾನಗಳು, ಆರ್ಥಿಕ, ಸಾಮಾಜಿಕ, ಕಲಾತ್ಮಕ, ಸಾಂಸ್ಕೃತಿಕ ವಸ್ತು ವಿಷಯಗಳನ್ನು ಒಳಗೊಂಡಿದೆ. ಅಷ್ಟೇ ಅಲ್ಲದೇ ದೃಶ್ಯ ಮತ್ತು ಶ್ರವ್ಯ ಮಾಧ್ಯಮಗಳ ಮೂಲಕ ನ್ಯೂಸ್‌ಗಳನ್ನು ಅಪಲೋಡ್ ಮಾಡುತ್ತದೆ. ಜನರಿಗೆ ಅತಿ ಬೇಗ ಕರ್ನಾಟಕದ ಸ್ಥಿತಿಗತಿಗಳನ್ನು ತಿಳಿಸುವಲ್ಲಿ ಇದು ಹೆಸರುವಾಸಿಯಾಗಿದೆ.

'ಕನ್ನಡ ಬ್ಲಾಗ್-ಕಂಪ್ಯೂಟರ್ & ಇಂಟರ್‌ನೆಟ್ ವೆಬ್‌ಸೈಟ್': techkarnataka.blogspot.com ನ ಆವೃತ್ತಿ ಕಂಪ್ಯೂಟರ್, ಲ್ಯಾಪ್‌ಟಾಪ್,

ಟ್ಯಾಬ್, ಮೊಬೈಲ್, ಹಾಂಡ್‌ಸೆಟ್, ಹಾರ್ಡ್‌ಡಿಸ್ಕ್, ಸಿ.ಡಿ. ಪ್ಲೇಯರ್, ಐಪೋನ್ ಹೆಡ್ ಸೆಟ್, ಮೆಮೊರಿ ಕಾರ್ಡ್, ಮುಂತಾದ ಎಲೆಕ್ಟ್ರಾನಿಕ್ ವಸ್ತುಗಳ ಬೆಲೆ, ರಿಯಾಯಿತಿ, ಜಾಲತಾಣ, ಕುರಿತಂತೆ ಮಾಹಿತಿಯನ್ನು ನೀಡುತ್ತದೆ. ವಿಡಿಯೋಗಳ ಲಿಂಕ್‌ನ್ನು ಕೊಟ್ಟಿದ್ದು ವಸ್ತು ಖರೀದಿಗೆ ದಾರಿಯಾಗಿದೆ. 'ಇ' ಮಾರುಕಟ್ಟೆ ಮತ್ತು ದೇಸೀ ಭಾಷೆಗಳು' ಎಂಬುದನ್ನು ಅಧ್ಯಯನ ಮಾಡವವರಿಗೆ ಇಂತಹ ಬಾಗುಗಳು ಮುಖ್ಯವಾಗುತ್ತವೆ.

ಅಧ್ಯಾತ್ಮಕ ಕ್ಷೇತ್ರದ ಬ್ಲಾಗ್‌ಗಳು

ಪ್ರೀತಿ ಪೇಮ, ಲೌಕಿಕ ವಿಚಾರಗಳಂತೆಯೇ ಮನುಷ್ಯನನ್ನು ಸೆಳೆಯುವ ಮತ್ತೊಂದು ಅಂಶ ಆಧ್ಯಾತ್ಮ. ಅದರಲ್ಲೂ ಭಾರತದಲ್ಲಿ ಆಧ್ಯಾತ್ಮ ಚಿಂತನೆ ಕುರಿತ ಅಪಾರವಾದ ಸಾಹಿತ್ಯವಿದೆ. ಆದರೆ ಅದನ್ನು ಜನ ಸಾಮಾನ್ಯರಿಗೆ ಸರಳವಾಗಿ ತಲುಪಿಸುವ ಅಗತ್ಯವಿದೆ. ಇಂತಹ ಬ್ಲಾಗುಗಳು ಆಸಕ್ತರಿಗೆ ಬಹಳ ಉಪಯುಕ್ತವಾಗಿದೆ. ಆ ಕಾರ್ಯವನ್ನು ಕೆಲವರು ಸ್ವ-ಪ್ರೇರಣೆಯಿಂದ ಮಾಡುತ್ತಿದ್ದಾರೆ.

ದೇವಕುಂಜ: ಇದು ಕೆ. ಎಸ್. ರಾಘವೇಂದ್ರ ನವಾಡ ಮತ್ತು ಶ್ರೀಕಾಂತ್ ಕಲ್‌ಲೋಟಿ ಅವರ ಬ್ಲಾಗ್ ಆಗಿದ್ದು, 'ದೇವರಾಗುವುದು ಬೇಡ.ಇದರಲ್ಲಿ ದೇವಮಾನವರಾಗೋಣ'!!! ಎಂಬ ಅಡಿ ಬರಹದೊಂದಿಗೆ ಅರಣ್ಯಕ, ಋಗ್ವೇದ, ಮಾಯೆ, ಬ್ರಹ್ಮ, ಸಂಸ್ಕಾರ, ಪಾರಾಯಣ, ಭಕ್ತಿಗೀತೆಗಳು, ದೇವರ ಅಷ್ಟೋತ್ತರಗಳು, ಸಹಸ್ರನಾಮ ಹೀಗೆ ಹಲವು ಬಗೆಯ ವಿಷಯಗಳ ಕುರಿತು ಅರ್ಥ ಸಹಿತ ಬರಹಗಳನ್ನು ಪ್ರಕಟಿಸಲಾಗಿದೆ.

ಹೀಗೆ ತಮ್ಮದೇ ಆದ ಸ್ವಂತ ವೆಬ್‌ಸೈಟ್ / ಬ್ಲಾಗ್‌ಗಳಲ್ಲಿ ತೆರೆಯಬೇಕೆಂಬ ಹಂಬಲ ಪ್ರತಿ ಯುವ ಜನಾಂಗದಲ್ಲಿಯೂ ಕಂಡುಬರುತ್ತಿದೆ. ಈ ಹಿನ್ನೆಲೆಯಲ್ಲಿ ಸಮಾಜಲ್ಲಿ ಹೆಸರುವಾಸಿಯಾಗಬೇಕೆಂಬ ಹಂಬಲದಿಂದಲೂ, ತನಗೆ ಅನಿಸಿದ್ದನ್ನು ಹೇಳಲು, ಮನಸ್ಸಿಗೆ ನೆಮ್ಮದಿಯನ್ನು ತರುವ ಮುದವನ್ನು ಹಿತವನ್ನು ಕೊಡುವ ಬರಹಗಳು, ವೈಯಕ್ತಿಕ ವಿಚಾರಗಳ ದಿನಚರಿಗಳು, ಸ್ವ-ಹುಚ್ಚು ಆಕಾಂಷೆಗಳನ್ನು ತೆರೆದಿಡಲು, ಜೊತೆಗಾರರು ಹರಟೆ ಹೊಡೆಯಲು, ಪ್ರತಿಸ್ಪಂದನ ಅಭಿವ್ಯಕ್ತಿಗೆ, ಹವ್ಯಾಸದ ಹುಚ್ಚಿಗೆ, ಸಮಕಾಲೀನ ಕ್ರಿಯೆ ಮತ್ತು ಪ್ರತಿಕ್ರಿಯೆಗೆ, ರಾಜಕೀಯ ವಿಡಂಬನ ಚರ್ಚೆಗೆ, ಸಂವಾದಕ್ಕೆ, ಹೀಗೆ ಇನ್ನೂ ನಾನಾ ವಿಧದಲ್ಲಿ, ಹಲವು ಕಾರಣಗಳಿಗೆ ಎಲ್ಲೋ ಇರುವ ವ್ಯಕ್ತಿಗಳು ಬ್ಲಾಗ್‌ನ್ನು ಸೃಷ್ಟಿಸಿಕೊಂಡು ಪರಸ್ಪರ ಸಂಪರ್ಕದಲ್ಲಿಟ್ಟು ಪ್ರತಿಕ್ರಿಯೆಗಳಿಗೆ ಉತ್ತರಗಳನ್ನು ನೀಡುತ್ತಾ ತನ್ನ ಬ್ಲಾಗ್‌ನ ಪ್ರಚಾರವನ್ನು ಗಿಟ್ಟಿಸಿಕೊಳ್ಳುತ್ತಾರೆ. ಇನ್ನೂ ಯಾವ ಬ್ಲಾಗ್‌ನ್ನು ಒಪ್ಪಿಕೊಳ್ಳುವುದು. ಅಪ್ಪಿಕೊಳ್ಳುವುದು ಎಂಬ ಕೆಲಸ ಸಾಮಾಜಿಕರಿಗೆ, ಓದುಗರಿಗೆ, ಬಿಟ್ಟದ್ದು.

ಹೊಸ ಪೀಳಿಗೆ ವಿವಿಧ ಆಕರ್ಷಣೆಗೆ ಹೋಗದೆ ಜೊಳ್ಳು ಎಂಬ ಸಾಹಿತ್ಯ ಸೃಷ್ಟಿ ಮಾಡದೇ ಸತ್ವಯುತ ಯೋಚನಾ ಕ್ರಮದಿಂದ ಹೊಸ ಸೃಜನ ಕವಿತೆಗಳ ಸೃಷ್ಟಿಗೆ ತಮ್ಮನ್ನು ತಾವು ತರೆದುಕೊಂಡರೆ ಸಾಕು. ಬ್ಲಾಗ್‌ನಲ್ಲಿರುವ ಸಾಹಿತ್ಯ ಒಟ್ಟಾರೆ ಅತ್ಯುತ್ತಮ ಬರಹಗಳಿಂದಲೇ ಕಂಡುಬಂದಿದೆ. ಸಮಾಜ, ರಾಜಕೀಯವನ್ನು ಪ್ರತಿನಿಧಿಸುವ ಎಲ್ಲಾ ಸಾಹಿತ್ಯ ಪ್ರಕಾರಗಳನ್ನು ಬಳಸಿಕೊಂಡಿದೆ. ಅನುವಾದ ಭಾಷಾಂತರ ರೂಪಾಂತರದಲ್ಲಿ ನವ ಪ್ರತಿಭೆಗಳನ್ನು ಹೊರ ಹೊಮ್ಮಿಸಿದೆ. ಕಲೆಯಲ್ಲಿ ತನ್ನ ವೈವಿದ್ಯ ಛಾಪನ್ನು ಮೂಡಿಸಿದೆ. ಪರಿಸರ ಕಾಳಜಿಯನ್ನು ತೋರಿದೆ. ವಿಶಾಲವಾದ ಸಮುದ್ರದೊಳಗೆ ತನ್ನದೊಂದು ಮೀನಿರಲಿ ಎಂಬ ಆಕಾಂಕ್ಷೆಯೊಂದಿಗೆ ಜನ ಬ್ಲಾಗ್ ಲೋಕದಲ್ಲಿ ತಮ್ಮ ಸೃಜನ ಪ್ರತಿಭೆಯನ್ನು ಈಜುಬಿಟ್ಟಿದ್ದಾರೆ. ವಿಷಯ ವೈವಿಧ್ಯತೆಯನ್ನು ಹೆಚ್ಚಿಸಿದ್ದಾರೆ. ಬ್ಲಾಗ್ ಲೋಕವು ಸಮುದ್ರದಲ್ಲಿ ನೀರು ಮೊಗೆದ ಹಾಗೆ ಎಷ್ಟು ಮೊಗೆದರೂ ನೀರು ಖಾಲಿಯಾಗದ ಸ್ಥಿತಿ, 'ದೇಶ ಸುತ್ತಿ ನೋಡು ಕೋಶ ಓದಿ ನೋಡು' ಎಂಬ ಮಾತಿದೆ. ಆಧುನಿಕೋತ್ತರ ಕಾಲದಲ್ಲಿ ತಂತ್ರಜ್ಞಾನದ ಆವಿಷ್ಕಾರದಿಂದಾಗಿ ಸಂಕ್ರಮಣವಾಗಿ ಅಂತರ್ಜಾದಲ್ಲಿ ಬ್ಲಾಗ್‌ಲೋಕದಲ್ಲಿ ದೇಶವನ್ನೂ ನೋಡಬಹುದು ಕೋಶವನ್ನೂ ಓದಬಹುದು. ಒಂದು ಚೆಂದದ ಕತೆ, ಕವನ, ವಿಚಾರ, ಮಾಹಿತಿ, ಲಹರಿ, ಹರಟೆ ಗಂಭೀರ ಸಾಹಿತ್ಯ, ನೆನಹು, ನೇವರಿಕೆ, ಅಡುಗೆ, ವಿಡಂಬನೆ, ಏನುಂಟು? ಏನಿಲ್ಲ?

ಬ್ಲಾಗುಗಳು ಕೇವಲ ಒಬ್ಬ ವ್ಯಕ್ತಿಯ ವೈಯಕ್ತಿಕ ಅಥವಾ ಖಾಸಗಿ ವಿಷಯಗಳನ್ನು ಮಾತ್ರ ಬ್ಲಾಗಿಸದೆ. ಅವು ದಿನ ನಿತ್ಯ ಪ್ರಪಂಚದಾದ್ಯಂತ ಘಟಿಸುವ ಘಟನೆಗಳನ್ನು ದಾಖಲಿಸುತ್ತಾ ಹೋಗುತ್ತವೆ. ರಾಜಕೀಯ ವಿಡಂಬನೆಗಳು, ಧಾರ್ಮಿಕತೆ, ಸಾಮಾಜಿಕ ಧೋರಣೆ ಮತ್ತು ಪ್ರತಿರೋಧ ಮತ್ತು ಪ್ರತಿಸ್ಪಂಧನದ ಅಂಶಗಳಿಂದಾಗಿ ಕನ್ನಡಬ್ಲಾಗುಗಳು ಇಪ್ಪತ್ತೊಂದನೆಯ ಶತಮಾನದ ಭಾಷಾಭಿವ್ಯಕ್ತಿಯ, ಸಂಸ್ಕೃತಿ ಸಂವಹನದ ಹೊಸಪ್ರಕಾರವೆಂಬುದನ್ನು ಒಪ್ಪಬೇಕಾಗುತ್ತದೆ.

◈◈◈◈◈

ಲೇಖಕರ ವಿಳಾಸಗಳು

- ಶ್ರೀಮತಿ ಡಾ॥ ವಿಜಯಾಸುಬ್ಬರಾಜ್, ನಂ. ೫೧, ಹಂಸಿ, ೧ನೇ 'ಎ' ಅಡ್ಡರಸ್ತೆ. ೩೦ನೇ ಮುಖ್ಯರಸ್ತೆ, ಭವಾನಿ ಹೌಸಿಂಗ್ ಲೇಔಟ್, ಬನಗಿರಿನಗರ, ಬನಶಂಕರಿ ೩ನೇ ಹಂತ ಬೆಂಗಳೂರು- ೫೬೦೦೮೫ ಮೊ : ೯೯೮೬೯೨೮೮೭೬

- ಡಾ.ಎನ್. ಎಸ್. ತಾರಾನಾಥ್, ವಿಶ್ರಾಂತ ಕನ್ನಡ ಪ್ರಾಧ್ಯಾಪಕ, ೧೯, ರಾಮಲೀಲಾ, ಮೊದಲನೆಯ ಕ್ರಾಸ್, ಗಂಗೋತ್ರಿ ಬಡಾವಣೆ ೨ನೇಹಂತ ಮೈಸೂರು-೫೭೦೦೦೯

- ಡಾ.ಎನ್.ಆರ್. ಲಲಿತಾಂಬ, ಸಹಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ ಬೆಂಗಳೂರು- ೫೬೦೦೧೦೪.

- ಡಾ. ಎಚ್.ಎಸ್. ಅನಂತನಾರಾಯಣ ಭಾಷಾಶಾಸ್ತ್ರ ಪ್ರಾಧ್ಯಾಪಕ (ನಿವೃತ್ತ) ಬೆಂಗಳೂರು ಮೊ – ೯೯೮೦೬೩೨೮೧೦ ಎಚ್. ಆರ್. ಪಾಂಡುರಂಗ, ಸಹಾಯಕ ಕೃಷಿ ಅಧಿಕಾರಿ, ಮಹಾವೀರ ರಸ್ತೆ, ಕಳಸ-೫೭೭೧೨೪ ಮೊ-೯೪೪೯೫೪೧೧೬೭

- ಹಳೆಮನೆ ರಾಜಶೇಖರ, ಕನ್ನಡ ವಿಭಾಗ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ), ಉಜಿರೆ-೫೭೪೨೪೦ ದಕ್ಷಿಣ ಕನ್ನಡ ಬೆಳ್ತಂಡಿ ತಾಲೂಕು ಮೊ-೯೦೦೮೫೨೮೧೧೨

- ಡಾ ॥ಕೆ. ಆರ್. ಗಣೇಶ, ನಂ, ೨೦/೧ ೪ನೇ ಅಡ್ಡರಸ್ತೆ. ಮಾಗಡಿರಸ್ತೆ. ಬೆಂಗಳೂರು-೫೬೦೦೨೩ , ಮೊ: ೯೮೪೫೮೭೨೪೪೫೩

- ಬಿ.ರಾಜಶೇಖರಪ್ಪ ಕನ್ನಡಪ್ರಾಧ್ಯಾಪಕರು, ಪ್ರಾಂಶುಪಾಲರು(ನಿ) ೨ನೆಯಕ್ರಾಸ್ (ಪಶ್ಚಿಮ), ಜಯಚಾಮರಾಜೇಂದ್ರ ಬಡಾವಣೆ. ಚಿತ್ರದುರ್ಗ-೫೭೭೫೦೧ ಮೊ-೯೪೮೦೨೨೬೦೬೪

- ಡಾ.ಬಿ. ನಂಜುಂಡಸ್ವಾಮಿ, ಪಂಡಿತ ತಾರಾನಾಥ್ ಆಯುರ್ವೇದಿಕ್ ಔಷಧಾಲಯ, ತುಮಕೂರು ಶಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್.ರಸ್ತೆ, ತುಮಕೂರು-೫೭೨೧೦೨ ಮೊ: ೯೮೮೮೯೯೬೯೯೬

- ಕುಸುಮ ಎಂ. ಕನ್ನಡ ಅಧ್ಯಾಪಕಿ, ಪದ್ಮ ಪಿ.ಯು. ಕಾಲೇಜು, ಸುಂಕದಕಟ್ಟೆ, ಬೆಂಗಳೂರು ದೂರವಾಣಿ : ೭೨೦೪೨೯೫೩೬

- ಡಾ. ಮುತ್ತುರಾಜ್, ನಂ. ೩೩೩೩ # ೪೦ಅಡಿ ಮುಖ್ಯರಸ್ತೆ, ಕುಮಾರಸ್ವಾಮಿ ಬಡಾವಣೆ, ೨ನೇ ಹಂತ, ಬೆಂಗಳೂರು-೫೬೦೧೧೧ ಮೊ- ೯೮೪೫೭೭೯೬೫೦

'ಸವತಿಗಂಧವಾರಣ' ಎಂಬುವುದರಲ್ಲಿ ಸವತಿಯರಿಗೆ ಪ್ರೀತಿಯ ಆಸೆ ಎಂಬ ಅರ್ಥವನ್ನು ಹೇಳುವುದು ಸೂಕ್ತ.

– ಡಾ. ಕೆ. ಆರ್. ಗಣೇಶ್

ಪಂಪಕವಿ ತನ್ನ ಕೃತಿಗಳಲ್ಲಿ ನೆಯ್ದು ಹೇಳಿರುವ ಚಾರಿತ್ರಿಕ ಅಂಶಗಳು ಮೂರು ಬಗೆಯಲ್ಲಿವೆ. ಒಂದು ವೇಮಲವಾಡ ಚಾಲುಕ್ಯ ಸಮೇತ ರಾಜಮನೆತನದ ರಾಜಕೀಯ ಚರಿತ್ರೆ; ಇನ್ನೊಂದು ತನ್ನ ಹಾಗೂ ತನ್ನ ಮನೆತನದ ಸ್ವಕೀಯ ಚರಿತ್ರೆ ಮತ್ತೊಂದು ಜೈನ ಮುನಿಪರಂಪರೆಯ ಧಾರ್ಮಿಕ ಚರಿತ್ರೆ.

– ಡಾ. ಬಿ. ರಾಜಶೇಖರಪ್ಪ

ಯಾವ ಲೇಖಕ ತನ್ನ ಸಮುದಾಯಗಳ ಒಳಗಿನ ಅನ್ಯಾಯಗಳಿಗೆ ಧೈರ್ಯದಿಂದ ಮುಖಾ ಮುಖಿಯಾಗುವುದಿಲ್ಲವೋ ಆತ ವಾಸ್ತವವನ್ನು ಸರಿಯಾಗಿ ಗ್ರಹಿಸಲಾರ

– ಹಳೇ ಮನೆ ರಾಜಶೇಖರ್

ಕನ್ನಡ ಬ್ಲಾಗುಗಳು ಇಪ್ಪತ್ತೊಂದನೆಯ ಶತಮಾನದ ಭಾಷಾಭಿವ್ಯಕ್ತಿಯ ಸಂಸ್ಕೃತಿ ಸಂವಹನದ ಹೊಸ ಪ್ರಕಾರವೆಂಬುದನ್ನು ಒಪ್ಪಬೇಕಾಗುತ್ತದೆ.

– ಕುಸುಮಾ. ಎಂ.

ಹರಿಹರನ ರಗಳೆಯಲ್ಲಿ ಉಲ್ಲೇಖಗೊಂಡಿರುವ ಮುದಿಯಪ್ಪನಾಯಕ ಮೊದಲನೇ ಮುದಿಯಪ್ಪ ನಾಯಕನೇ ಇರಬೇಕು

– ಡಾ. ಬಿ. ನಂಜುಂಡಸ್ವಾಮಿ

ಪ್ರಸ್ತುತ ಲೇಖನದಲ್ಲಿ ಮೂರು ವಿಧಾನಗಳನ್ನು (ಆಖ್ಯಾತ, ಅವ್ಯಯ, ನಿಪಾತ) ಕುರಿತು ವಿವರಿಸುವ ಪ್ರಯತ್ನ ಮಾಡಿದೆ.

– ಡಾ. ಎಚ್.ಎಸ್. ಅನಂತನಾರಾಯಣ

ಪ್ರಜಾಪ್ರಭುತ್ವ ಬರುವುದರೊಂದಿಗೆ ನಾನಾ ಬಗೆಯ ಚಳುವಳಿಗಳು ಹೋರಾಟಗಳು ಕೊಟ್ಟ ತಿಳುವಳಿಕೆಯ ಹಿನ್ನಲೆಯಲ್ಲಿ ಈ ಹೊತ್ತು ಅಧಿಕಾರ ಸಂಬಂಧಗಳು ಬದಲಾವಣೆಯಾಗಿವೆ. ಹಾಗಾಗಿ ಇಂದು ನಮ್ಮ ಚಾರಿತ್ರಿಕ ಅಧ್ಯಯನಗಳು 'ಹಲವು ಚರಿತ್ರೆಗಳ' 'ಸಾಂಸ್ಕೃತಿಕ ಬಹುಳತೆ' ಯನ್ನು ಕಟ್ಟಿಕೊಡುವುದಕ್ಕೆ ಪ್ರಯತ್ನಿಸುತ್ತವೆ.

– ಡಾ. ಎನ್.ಆರ್. ಲಲಿತಾಂಬ

ಜೀವದಯಾಷ್ಟಮಿ ನೋಂಪಿ, ಅನಂತನೋಂಪಿ; ಈ ಎರಡೂ ನೋಂಪಿಗಳು ವೈದಿಕ ಮೂಲದ ಆದರೆ ಪರಿಷ್ಕೃತಗೊಂಡ ಜೈನ ಆಚರಣೆಗಳೇ ಆಗಿವೆ.

– ಡಾ. ಎನ್. ಎಸ್. ತಾರಾನಾಥ್

ವಾಲ್ಮೀಕಿಯನ್ನೂ ಬಿಟ್ಟುಕೊಡದೆ ತನ್ನ ಧ್ಯೇಯೋದ್ದೇಶಗಳ ಜೊತೆ ರಾಜಿ ಮಾಡಿಕೊಳ್ಳದೆ ಸುಂದರ, ಸರಳ, ಸುಲಭಗ್ರಾಹ್ಯವಾದ ರಾಮಕಾವ್ಯವನ್ನು ದೇವಪ್ಪ ಕವಿ ಕನ್ನಡ ಕಾವ್ಯ ಪರಂಪರೆಗೆ ಕೊಟ್ಟಿದ್ದಾನೆ.

– ಡಾ. ವಿಜಯಾಸುಬ್ಬರಾಜ್